ಟಿಪ್ಪು ಜನಪದ ಕಥನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ
ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)



ಸಂಶೋಧಕರು

ಉಜಿರಾ ಬಾನು

ಮಾರ್ಗದರ್ಶಕರು

ಡಾ.ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ
ಹಂಪಿ, ವಿದ್ಯಾರಣ್ಯ.

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ ಕನ್ನಡ ವಿಶ್ವವಿದ್ಯಾಲಯ,
ಹಂಪಿ ವಿದ್ಯಾರಣ್ಯ.
೨೦೧೬

ಟಿಪ್ಪು ಜನಪದ ಕಥನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)



ಸಂಶೋಧಕರು

ಉಜಿರಾ ಬಾನು

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು,

ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ,

ಹಂಪಿ, ವಿದ್ಯಾರಣ್ಯ.

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೨೦೧೩

Kannada University Logo

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ಪ್ರಮಾಣ ಪತ್ರ

"ಟಿಪ್ಪು ಜನಪದ ಕಥನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ. ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಶೋಧನ ಮಹಾಪ್ರಬಂಧವನ್ನು ಇಡಿಯಾಗಿ ಇಲ್ಲವೆ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

(ಉಜಿರಾ ಬಾನು)
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-583236

ಸ್ಥಳ : ವಿದ್ಯಾರಣ್ಯ
ದಿನಾಂಕ :

Kannada University Logo

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ದೃಢೀಕರಣ ಪತ್ರ

ಉಜಿರಾ ಬಾನು ಅವರು **"ಟಿಪ್ಪು ಜನಪದ ಕಥನ"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಮಹಾಪ್ರಬಂಧದ ಸಮಗ್ರ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೆ ಉದ್ದೇಶಗಳಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ. ಮಂಜುನಾಥ ಬೇವಿನಕಟ್ಟಿ)
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೫-೯-೧೬

ಕೃತಜ್ಞತೆಗಳು

ಪ್ರಸ್ತುತ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿದ್ದು, ಇದರ ವಸ್ತು ವಿಷಯದ ಆಯ್ಕೆಯಿಂದ ಹಿಡಿದು ಈ ಮಹಾಪ್ರಬಂಧ ರೂಪುಗೊಳ್ಳುವ ಅಂತಿಮ ಹಂತದವರೆಗೂ ತಮ್ಮ ಅತ್ಯಮೂಲ್ಯವಾದ ಸಮಯವನ್ನು ನನಗಾಗಿ ಮುಡುಪಾಗಿಸಿ ತಮ್ಮ ಚಿಂತನಾಶಕ್ತಿಯನ್ನು ಬಳಸಿ ನನಗೆ ಮಾರ್ಗದರ್ಶನ ನೀಡಿ ಸಂಶೋಧನಾ ಕಾರ್ಯ ಪೂರ್ಣಗೊಳ್ಳಲು ಸಹಕರಿಸಿದ ಮಾರ್ಗದರ್ಶಕರಾದ ಡಾ.ಮಂಜುನಾಥ ಬೇವಿನಕಟ್ಟಿ ಅವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಸಂಶೋಧನಾ ಕಾರ್ಯದಲ್ಲಿ ಸೂಕ್ತ ಸಲಹೆಗಳನ್ನು ನೀಡುತ್ತಾ, ನನ್ನ ಸಂಶೋಧನಾ ಕಾರ್ಯವನ್ನು ಪ್ರೋತ್ಸಾಹಿಸಿದ ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಮೊಗಳ್ಳಿ ಗಣೇಶ್, ಡಾ.ಸ.ಚಿ.ರಮೇಶ್, ಡಾ. ಹೆಬ್ಬಾಲೆ ನಾಗೇಶ್, ಸಹ ಪ್ರಾಧ್ಯಾಪಕರಾದ ಡಾ.ಗುರುಪ್ರಸಾದ್, ಹಿರಿಯ ಹಾಗೂ ಕಿರಿಯ ಸಂಶೋಧನಾರ್ಥಿಗಳಗೂ ಹಾಗೂ ಜಾನಪದ ವಿಭಾಗದ ಎಲ್ಲಾ ಸಿಬ್ಬಂದಿಯವರಿಗೂ ನನ್ನ ಕೃತಜ್ಞತೆಗಳು.

ನನ್ನ ಸಂಶೋಧನಾ ಕಾರ್ಯಕ್ಕೆ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ನೀಡಿ, ನನ್ನ ಮಹಾಪ್ರಬಂಧ ಆದಿಯಿಂದ–ಅಂತ್ಯದವರೆಗೂ ಸಂಪೂರ್ಣವಾಗಿ ಪೂರ್ಣಗೊಳ್ಳಲು ಸಹಕರಿಸಿದ ಆತ್ಮೀಯ ಸ್ನೇಹತರಾದ ಮೈಸೂರಿನ ಡಾ.ಸಿ.ಸುರೇಶ್ ಅಂಬೈರವರಿಗೂ ಅನಂತ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ.

ನನ್ನ ಸಂಶೋಧನಾ ಕಾರ್ಯಕ್ಕೆ ಸಹಾಯ, ಸಹಕಾರ ನೀಡಿದ ಗುರುಗಳಾದ ಜಿ.ಕೃಷ್ಣಮೂರ್ತಿ ಹಾಗೂ ಸ.ಪ.ಪೂ.ಕಾಲೇಜು ಗೌರಿಬಿದನೂರಿನ ಪ್ರಾಂಶುಪಾಲರಾದ ಬ್ರಹ್ಮರಾಯಪ್ಪ ಮತ್ತು ಉಪನ್ಯಾಸಕರಾದ ಜಿ.ವಿ.ಶ್ರೀನಿವಾಸ್, ಆದಿಶೇಷರಾವ್, ಯಲ್ಲಪ್ಪ, ಡಾ.ಎನ್.ಬಸಪ್ಪ, ಎ.ರವೀಂದ್ರ, ಸುಮರವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ.

ನನ್ನ ಸಂಶೋಧನಾ ಕಾರ್ಯವನ್ನು ಪ್ರೋತ್ಸಾಹಿಸಿದ ಸ.ಪ.ಪೂ.ಕಾಲೇಜು ಚಿಕ್ಕಬಳ್ಳಾಪುರದ ಪ್ರಾಂಶುಪಾಲರಾದ ಡಾ.ವಿಜಯಲಕ್ಷ್ಮಿ, ಉಪನ್ಯಾಸಕರಾದ ಡಾ.ಪೈರಾಜ್, ಜಿ.ವಿ.ಮೋಹನ್‌ಕುಮಾರ್, ಹನುಮಂತರಾವ್, ಲತಾಕುಮಾರಿ, ಕಲ್ಪನ, ರಾಮಚಂದ್ರಪ್ಪ, ಚಂದ್ರಶೇಖರ್, ಬಸವರಾಜ್, ಕಲಾವತಿ, ಕಲ್ಯಾಣಿ, ಸತೀಶ್‌ರವರಿಗೂ ವಂದನೆಗಳನ್ನು ಅರ್ಪಿಸುತ್ತೇನೆ.

ನನ್ನ ಸಂಶೋಧನಾ ಕಾರ್ಯವನ್ನು ಪ್ರೋತ್ಸಾಹಿಸಿದ ಸರ್ಕಾರಿ ಬಿ.ಎಡ್ ಕಾಲೇಜು, ಚಿಕ್ಕಬಳ್ಳಾಪುರದ ಪ್ರಭಾರ ಪ್ರಾಂಶುಪಾಲರಾದ ಡಾ.ಕೋಡಿರಂಗಪ್ಪ, ಸಹ ಪ್ರಾಧ್ಯಾಪಕರಾದ ಡಾ.ಎನ್.ಶಿವರಾಮರೆಡ್ಡಿ, ಲೀಲಾವತಿ, ಲೋಕನಾಥ್, ನಾರಾಯಣಸ್ವಾಮಿ, ಬಾಹುಬಲಿಯವರಿಗೂ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ಆಕರ ಗ್ರಂಥಗಳನ್ನು ಒದಗಿಸಿರುವ ಗ್ರಂಥಾಲಯಗಳಾದ ಹಂಪಿ ವಿಶ್ವವಿದ್ಯಾಲಯ ಗ್ರಂಥಾಲಯ, ಮಿಥಿಕ್ ಸೊಸೈಟಿ, ಸೆಂಟ್ರಲ್ ಲೈಬ್ರರಿ ಕಬ್ಬನ್‌ಪಾರ್ಕ್, ಕರ್ನಾಟಕ ಸರ್ಕಾರ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯಗಳ ಆಡಳಿತ ಸಿಬ್ಬಂದಿವರ್ಗಕ್ಕೆ ನಾನು ಅಭಾರಿಯಾಗಿರುತ್ತೇನೆ.

ನನ್ನ ಸಂಶೋಧನಾ ಕಾರ್ಯವನ್ನು ಪ್ರೋತ್ಸಾಹಿಸಿದ ನನ್ನ ಆತ್ಮೀಯ ಸ್ನೇಹಿತೆಯಾದ ಕುಮಾರಿ ಮಮತ ಅವರಿಗೆ ಕೃತಜ್ಞತೆಗಳು.

ನನ್ನ ಆಶಯಗಳಿಗೆಲ್ಲ ಬಲ ನೀಡಿ, ಪೋಷಿಸಿ ಸದಾ ನನ್ನ ಶ್ರೇಯಸ್ಸನ್ನು ಬಯಸಿದ ತಾಯಿ ಷಾಕೀರಬೇಗಂ, ಸಹೋದರರಾದ ರಫೀ ಅಹಮದ್, ಷಫೀ ಅಹಮದ್, ಅಕ್ಕ ಸೊಹರಾಬಾನು, ಅತ್ತಿಗೆಯರಾದ ಸಮೀನಾ ಫರ್ವಿನ್ ತಾಜ್ ಇವರ ಅಣ್ಣನಾದ ಮುನ್ನಾ, ರುಕ್ಸಾನರಿಗೂ ನನ್ನ ಕೃತಜ್ಞತೆಗಳು.

ಈ ಮಹಾಪ್ರಬಂಧಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಬಂಧು-ಭಾಂದವರು ಮತ್ತು ಸ್ನೇಹಿತವೃಂದಕ್ಕೆ ಕೃತಜ್ಞತೆಗಳು.

ಈ ಮಹಾಪ್ರಬಂಧವನ್ನು ಅಂದವಾಗಿ ಡಿ.ಟಿ.ಪಿ ಮಾಡಿಕೊಟ್ಟ ಡಾ.ಹೆಚ್.ಎಂ. ಮಲ್ಲಿಕಾರ್ಜುನಸ್ವಾಮಿ ರವರಿಗೂ ನನ್ನ ಕೃತಜ್ಞತೆಗಳು.

ಸ್ಥಳ : ಹಂಪಿ

ದಿನಾಂಕ :

(ಉಜಿರಾ ಬಾನು)
ಸಂಶೋಧಕರು

ಟಿಪ್ಪು ಜನಪದ ಕಥನ

ಪರಿವಿಡಿ

- ಪರಾಮರ್ಶನ ಗ್ರಂಥಗಳು
- ವಕ್ತೃಗಳ ವಿವರ
- ವಂಶವೃಕ್ಷ
- ಪಾರಿಭಾಷಿಕ ಪದಕೋಶ
- ಛಾಯಾಚಿತ್ರಗಳು

ಅಧ್ಯಾಯ-೧

ಪೀಠಿಕೆ, ಅಧ್ಯಯನದ ಉದ್ದೇಶಗಳು, ವ್ಯಾಪ್ತಿ, ವಿಧಾನ ಸ್ವರೂಪ ಮತ್ತು ಮಹತ್ವ

ಅಧ್ಯಾಯ-೧

ಪೀಠಿಕೆ, ಅಧ್ಯಯನದ ಉದ್ದೇಶಗಳು, ವ್ಯಾಪ್ತಿ, ವಿಧಾನ ಸ್ವರೂಪ ಮತ್ತು ಮಹತ್ವ

೧.೧ ಪೀಠಿಕೆ

ಮೈಸೂರಿನ ಇತಿಹಾಸದಲ್ಲಿ ಹೈದರ್ ಮತ್ತು ಟಿಪ್ಪು ಅವರದೇ ಪ್ರತ್ಯೇಕ ಅಧ್ಯಾಯ. ಸಾಮ್ರಾಜ್ಯಶಾಹೀ ಶಕ್ತಿಗಳ ವಿರುದ್ಧ ಅವರ ಹೋರಾಟ ಅವರನ್ನು ಬೇರೆ ರಾಜರುಗಳಗಿಂತ ಭಿನ್ನವಾಗಿ ನಿಲ್ಲಿಸಿದೆ. ಟಿಪ್ಪು ಬಗ್ಗೆ ಅನೇಕ ಜನಪದ ಕಥೆಗಳು, ಲಾವಣಿಗಳು ಪ್ರಚಲಿತದಲ್ಲಿವೆ. ಆದರೆ ಅವುಗಳು ಒಂದು ಕಡೆ ದಾಖಲಾಗದೇ ಇದ್ದುದರಿಂದ ಅವರಿವರು ಹೇಳಿದ್ದಷ್ಟನ್ನೇ ಕೇಳಲಾಗುತ್ತದೆ.

ವಾಸ್ತವ ಪ್ರಪಂಚಕ್ಕಿಂತ ಭಿನ್ನವಾದ ವಿಶೇಷ ನಂಬಿಕೆಗಳನ್ನು ಆಶಯಗಳೆನ್ನುತ್ತಾರೆ. ಜನಪದ ಕಥೆಗಳು, ಐತಿಹ್ಯಗಳು, ಕಥಾ ಲಾವಣಿಗಳು ಮತ್ತು ಪುರಾಣಗಳು ಕುರಿತಂತೆ ಆಶಯಗಳನ್ನು ವಿಶ್ಲೇಷಿಸಿ ಅಧ್ಯಯನ ಮಾಡಿದ್ದಾರೆ. ಜಾನಪದಕ್ಕೆ ಸಂಬಂಧಿಸಿದ ಆಶಯಗಳು (ಫೋಕ್ ಮೋಟಿಫ್ಸ್) ಕೆಲವು ಸಾರಿ ತೀರ ಸರಳ ನಂಬಿಕೆಗಳಾಗಿದ್ದು, ಸಾಂಪ್ರದಾಯಿಕ ಕಥೆಗಳ ಉದ್ದಕ್ಕೂ ಕಂಡುಬರುವುದುಂಟು. ಸಾಮಾನ್ಯವಾಗಿ ಇಂಥ ಆಶಯಗಳು ಅಸಾಮಾನ್ಯ ಜೀವಿಗಳಾದ ಕಿನ್ನರಿಯರು, ಮಾಟಗಾತಿಯರು, ಮನುಷ್ಯರನ್ನು ತಿನ್ನುವ ರಾಕ್ಷಸರು, ಕ್ರೂರ ಮಲತಾಯಂದಿರು, ಮಾತಾಡುವ ಪ್ರಾಣಿಗಳು ಮುಂತಾದವುಗಳಿಂದ ನೆರವೇರುತ್ತವೆ. ಅಸಾಮಾನ್ಯ ಭೌತಿಕ ಪರಿಸರದಿಂದ ಕೂಡಿದ ಅದ್ಭುತ ಪ್ರಪಂಚ, ಮಾಟಗಾರರ ಪ್ರಪಂಚ ಮೊದಲಾದವು ಈ ಆಶಯಗಳ ಕೇಂದ್ರ ಬಿಂದುಗಳಾಗಿರುತ್ತವೆ.

ಇತಿಹಾಸದ ಇನ್ನೊಂದು ಮುಖವು ವಾಕ್ ಪರಂಪರೆಗೆ ಸೇರಿದ ಜನಪದ ನಿರೂಪಣೆಯಲ್ಲಿದೆ. ಈ ನಿರೂಪಣೆ ಇಂದು ನಮ್ಮ ಇತಿಹಾಸ, ಸಂಸ್ಕೃತಿಗಳ ಮೂಲವನ್ನು ಅನ್ವೇಷಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಇಂತಹ ಜನಪದ ನಿರೂಪಣೆ ಟಿಪ್ಪುವನ್ನು ಕಂಡ ರೀತಿ ಹೇಗಿದೆ ಎಂಬುದನ್ನು ಕೆಲವು ಆಧಾರ ಗ್ರಂಥಗಳಿಂದ ಮತ್ತು ಕ್ಷೇತ್ರಕಾರ್ಯದಿಂದ ಸಂಶೋಧನೆ ಮಾಡುವುದೇ ಈ ಅಧ್ಯಯನದ ಉದ್ದೇಶ.

ಮೈಸೂರು ಹುಲಿ ಎಂದೇ ತನ್ನ ಕಾರ್ಯ ಸಾಹಸಗಳಿಂದ ಹೆಸರು ಪಡೆದ ಮೈಸೂರಿನ ಅರಸ ಟಿಪ್ಪು ಸುಲ್ತಾನ್ ಬ್ರಿಟೀಷ್ ಪ್ರಭುತ್ವದ ವಿರುದ್ಧ ಹೋರಾಡಿ ರಣರಂಗದಲ್ಲಿ ವಿರೋಚಿತ ಮರಣವನ್ನು ಕಂಡ ಮಹಾನ್ ದೇಶ ಭಕ್ತ. ಟಿಪ್ಪುವನ್ನು ಜಾತಿ, ಮತಗಳ ಎಲ್ಲೆ ಮೀರಿ ಗೌರವದಿಂದ ಸ್ಮರಿಸಬೇಕಾದುದ್ದು ಭಾರತೀಯರೆಲ್ಲರ ಕರ್ತವ್ಯವಾಗಿದೆ.[೧]

"ಸರಳವಾದ ವೇಷದಲ್ಲಿಯೇ ಟಿಪ್ಪು ಘನತೆ-ಗಾಂಭೀರ್ಯಗಳುಳ್ಳ ವ್ಯಕ್ತಿಯಾಗಿ ಕಾಣಿಸುತ್ತಿದ್ದನು. ಅವನು ಧರ್ಮನಿಷ್ಠ ಮುಸಲ್ಮಾನನಾಗಿದ್ದ ಹಾಗೂ ಪ್ರತಿದಿನವೂ ಕುರಾನ್ ಪಠಣ ಮಾಡುತ್ತಿದ್ದನು. ಶ್ರೀರಂಗಪಟ್ಟಣದಲ್ಲಿದ್ದಾಗ ಅನೇಕ ವೇಳೆ ಶುಕ್ರವಾರಗಳಂದು ತನ್ನ ಅರಮನೆಗೆ ಹತ್ತಿರದಲ್ಲಿಯೇ ಇದ್ದ ಮಸೀದಿಗೆ ಬಂದು ಅಲ್ಲಿಯ ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸುತ್ತಿದ್ದನು."[೨]

೧.೨ ಅಧ್ಯಯನದ ಉದ್ದೇಶಗಳು

ಟಿಪ್ಪು ಕುರಿತು ಇದುವರೆಗೆ ರಚನೆಯಾದ ಶಿಷ್ಟ ಸಾಹಿತ್ಯ ಮತ್ತು ಬರವಣಿಗೆಗಳನ್ನು ಟಿಪ್ಪುವಿನ ಮೌಖಿಕ ವಿಚಾರಗಳನ್ನು ಮತ್ತು ಟಿಪ್ಪು ಬರೆದಿರುವ ಕೆಲವು ಪತ್ರಗಳ ಬಗ್ಗೆ ಸಂಶೋಧನಾತ್ಮಕವಾಗಿ ಅಧ್ಯಯನ ಮಾಡುವುದು ನನ್ನ ಅಧ್ಯಯನದ ಉದ್ದೇಶವಾಗಿದೆ.ಟಿಪ್ಪು ಕುರಿತು ಇರುವ ಕಥನಗಳ ಬಗ್ಗೆ ಅರಿಯಲು ಕ್ಷೇತ್ರಕಾರ್ಯ ಕೈಗೊಂಡು ಕಥನಗಳನ್ನು ಸಂಗ್ರಹಿಸುವುದು. ಟಿಪ್ಪು ಬಗೆಗಿನ ಲಾವಣಿಗಳು ಮತ್ತು ಐಹಿಹ್ಯಗಳ ಬಗ್ಗೆ ಹಾಗೂ ಟಿಪ್ಪು ಕಥನಗಳ ಬಗ್ಗೆ ವಿಮರ್ಶಾತ್ಮಕ, ಜಾನಪದೀಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಪ್ರಸ್ತುತ ಸಮಾಜದಲ್ಲಿ ಜನಪದರು ಟಿಪ್ಪು ಬಗ್ಗೆ ಹೊಂದಿರುವ ಅಭಿಪ್ರಾಯಗಳನ್ನು ಸಂಗ್ರಹಿಸುವುದು, ಟಿಪ್ಪು ಕುರಿತು ಜನಪದರು ಮೌಖಿಕವಾಗಿ ರಚಿಸಿರುವ ಹಾಡುಗಳನ್ನು ಸಂಗ್ರಹಿಸುವುದು, ಜನಪದರು ಟಿಪ್ಪು ಕುರಿತು ಆಚರಿಸುತ್ತಿರುವ ಜಯಂತಿ, ಉತ್ಸವ, ಸಭೆ, ಸಮಾರಂಭಗಳ ಬಗ್ಗೆ ಅರಿಯುವುದು, ಟಿಪ್ಪು ಕುರಿತು ಇದುವರೆಗೂ ಅನೇಕ ಐತಿಹಾಸಿಕ ಕೃತಿಗಳು ರಚನೆಗೊಂಡಿವೆ. ಹಾಗೆಯೇ ಟಿಪ್ಪು ಕುರಿತಂತೆ ಕೆಲವು ಟೀಕೆ-ಟಿಪ್ಪಣಿಗಳು ಕೂಡ ನಡೆದಿವೆ. ಆದರೆ ಟಿಪ್ಪು ಕುರಿತಂತೆ ಇದುವರೆಗೂ ಜನಪದ ಕಥನಗಳ ಬಗ್ಗೆ ಅಧ್ಯಯನ ನಡೆದಿಲ್ಲ. ಹಾಗಾಗಿ ಪ್ರಸ್ತುತ ನನ್ನ ಸಂಶೋಧನೆಯ ಮುಖ್ಯ ಉದ್ದೇಶವು ಟಿಪ್ಪುವಿನ ಜನಪದ ಕಥನಗಳ ಅಧ್ಯಯನವಾಗಿದೆ.

ಒಟ್ಟಾರೆ ಟಿಪ್ಪು ಜನಪದ ಕಥನಕ್ಕೆ ಸಂಬಂಧಿಸಿದಂತೆ ವಿವಿಧ ಆಯಾಮಗಳಲ್ಲಿ ಅರ್ಥೈಸುವುದು, ಆ ಮೂಲಕ ಟಿಪ್ಪು ಬಗ್ಗೆ ಸಮಗ್ರ ಮಾಹಿತಿಯನ್ನು ತಿಳಯುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಸಂಶೋಧಿಸಬೇಕಾದ ಸಮಸ್ಯೆಗಳು

೧) ಟಿಪ್ಪು ವ್ಯಕ್ತಿತ್ವದ ಬಗ್ಗೆ ತಿಳಯುವುದು

೨) ಟಿಪ್ಪುವಿನ ಬಗ್ಗೆ ಜನಪದರ ಅಭಿಪ್ರಾಯಗಳನ್ನು ತಿಳಯುವುದು

೩) ಪ್ರಸ್ತುತ ಸಮಾಜದಲ್ಲಿ ಟಿಪ್ಪು

೪) ಟಿಪ್ಪುವಿನ ಕಥನಗಳನ್ನು ತಿಳಿಯುವುದು

೫) ಟಿಪ್ಪುವಿನ ಬಗೆಗಿನ ಲಾವಣಿಗಳನ್ನು ತಿಳಿಯುವುದು

೬) ಟಿಪ್ಪು ಮತಾಂಧನೆ/ಮತಾಂಧನಲ್ಲ ಎಂಬುದನ್ನು ತಿಳಿಯುವುದು

೭) ಟಿಪ್ಪು ಕುರಿತು ಆಚರಿಸುತ್ತಿರುವ ಜಯಂತಿಗಳ ಬಗ್ಗೆ ತಿಳಿಯುವುದು.

೮) ಟಿಪ್ಪು ವಂಶಸ್ಥರ ಬಗ್ಗೆ ತಿಳಿಯುವುದು

೯) ಟಿಪ್ಪು ದೇಶಭಕ್ತನೇ ಎಂಬುದನ್ನು ಅರಿಯುವುದು.

ಅಧ್ಯಯನದ ಪ್ರಮೇಯಗಳು

೧) ಪ್ರಸ್ತುತದಲ್ಲಿ ಟಿಪ್ಪುವಿನ ಬಗ್ಗೆ ಟೀಕೆಗಳು

೨) ಟಿಪ್ಪು ಕುರಿತು ಜಯಂತಿ-ಉತ್ಸವಗಳು ಸಾರ್ವಜನಿಕ ಮಹತ್ವ ಪಡೆಯುತ್ತಿಲ್ಲ.

೩) ಟಿಪ್ಪು ಕೇವಲ ಐತಿಹಾಸಿಕ ವ್ಯಕ್ತಿಯಾಗಿರುವುದು.

೪) ಟಿಪ್ಪು ಸಂಬಂಧಿಕರ ವಿವರಣೆಗಳು ದೊರೆಯದಿರುವುದು

೫) ಟಿಪ್ಪುವನ್ನು ಕೇವಲ ಒಂದೇ ಧರ್ಮಕ್ಕೆ ಸೀಮಿತಗೊಳಿಸಿರುವುದು

೬) ಟಿಪ್ಪು ಕಥನಗಳು ಬೆಳಕಿಗೆ ಬಾರದಿರುವುದು

೭) ಟಿಪ್ಪು ಕುರಿತು ಕೆಲವೇ ಕೆಲವು ಲಾವಣಿಗಳು ಶಿಷ್ಟ ರೂಪದಲ್ಲಿರುವುದು

೧.೩ ಅಧ್ಯಯನದ ವಿಧಾನಗಳು

ಟಿಪ್ಪು ಕುರಿತು ಸಂಶೋಧನೆಗಳು ಕೇವಲ ಐತಿಹಾಸಿಕ ದೃಷ್ಟಿಕೋನವನ್ನು ಮಾತ್ರ ಪ್ರತಿಬಿಂಬಿಸುತ್ತವೆ. ಆದರೆ ಪ್ರಸ್ತುತ ಅಧ್ಯಯನದ ದೃಷ್ಟಿಕೋನ ವಿಭಿನ್ನವಾಗಿದೆ. ಅಂದರೆ ಟಿಪ್ಪುವಿನ ಬಗ್ಗೆ ಜನಪದರ ಭಾವನೆಗಳು, ಆಚರಣೆಗಳು, ಕಥನಗಳು, ಲಾವಣಿಗಳು, ಹಾಡುಗಳು ಮತ್ತು ವಂಶಸ್ಥರ ಮಾಹಿತಿ ಹಾಗೂ ಸಂಬಂಧಿಕರ ಕಥನಗಳು ಮುಂತಾದ ಜಾನಪದ ಕಾರ್ಯಚಟುವಟಿಕೆಗಳ ಮಹತ್ವ ತಿಳಿಯುವುದೇ ಅಧ್ಯಯನದ ವಿಧಾನವಾಗಿದೆ.

ಪ್ರಶ್ನಾವಳಿ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸೂಕ್ತ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡು, ಆ ಮೂಲಕ ಜನಪದರನ್ನು ನೇರವಾಗಿ ಭೇಟಿ ಮಾಡಿ ಮಾಹಿತಿ ಸಂಗ್ರಹಣೆ ಮಾಡಲಾಗಿದೆ. ಟಿಪ್ಪುವಿನ ಬಗ್ಗೆ ಇರುವ ಲಾವಣಿಗಳು, ಕಥನಗಳ ಬಗ್ಗೆ ತಿಳಿಯಲು ನೇರ ಅವಲೋಕನದ

ಮುಖಾಂತರ ಜನಪದರನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಇದರಿಂದ ಪ್ರಸ್ತುತ ಅಧ್ಯಯನಕ್ಕೆ ನೈಜ ಚಿತ್ರಣ ದೊರೆಯುತ್ತದೆ.

ದತ್ತಾಂಶ ಸಂಗ್ರಹಣೆ

ಈ ಹಿಂದೆ ನಡೆದ ಅಧ್ಯಯನಗಳು ಯಾವ ದೃಷ್ಟಿಕೋನದಡಿ ಅಧ್ಯಯನ ನಡೆದಿವೆ ಎಂಬುದನ್ನು ಲೇಖನಗಳು, ಗ್ರಂಥಗಳು, ನಿಯತಕಾಲಿಕೆಗಳು, ಪತ್ರಿಕೆಗಳು, ಉಪನ್ಯಾಸ ಕಾರ್ಯಕ್ರಮಗಳು ಹಾಗೂ ವಿಚಾರ ಸಂಕಿರಣಗಳು ಮುಂತಾದವುಗಳಿಂದ ತಿಳಿಯಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ದತ್ತಾಂಶಗಳ ಸಂಗ್ರಹಣೆ ಮಾಡಿ ಸೂಕ್ಷ್ಮ ವಿಶ್ಲೇಷಣೆಯ ಮೂಲಕ ಪ್ರಬಂಧ ಸಿದ್ಧಪಡಿಸಲಾಗಿದೆ.

ಸಂದರ್ಶನ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಟಿಪ್ಪುವನ್ನು ಕುರಿತು ಜನಪದರು ಕಟ್ಟಿರುವ ಹಾಡುಗಳು, ಕಥನಗಳು, ಲಾವಣಿಗಳು ಮತ್ತು ಟಿಪ್ಪು ಕುರಿತ ಆಚರಣಾ ಲೋಕ ಮತ್ತು ಪ್ರಸ್ತುತ ಸಮಾಜದಲ್ಲಿ ಟಿಪ್ಪು ಬಗ್ಗೆ ಇರುವ ಅಂಶಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದು.

ಅಧ್ಯಯನದ ಸಾಧನಗಳು

ಟಿಪ್ಪು ಜನಪದ ಕಥನ ಎಂಬ ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಸಮಯದಲ್ಲಿ ಮೂಲಭೂತ ಸಾಧನಗಳಾದ ಕ್ಯಾಮರಾ, ಟೇಪ್ ರೆಕಾರ್ಡ್‌ರ್, ಲೇಖನ ಸಾಮಗ್ರಿಗಳು ಹಾಗೂ ಇತರ ಸಾಧನಗಳನ್ನು ಉಪಯೋಗಿಸಿಕೊಂಡು ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲಾಗಿದೆ.

೧.೪ ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಟಿಪ್ಪು ಜನಪದ ಕಥನ ಎಂಬ ಪ್ರಬಂಧಕ್ಕೆ ಸಂಬಂಧಿಸಿದಂತೆ ಅಧ್ಯಯನದ ಸ್ಪಷ್ಟತೆಗಾಗಿ ಅಧ್ಯಯನದ ವ್ಯಾಪ್ತಿಯನ್ನು ಟಿಪ್ಪು ಜನ್ಮಸ್ಥಳ ದೇವನಹಳ್ಳಿ, ಬೆಂಗಳೂರು, ಮೈಸೂರು, ಶ್ರೀರಂಗಪಟ್ಟಣ, ನಂದಿಬೆಟ್ಟ, ಶೃಂಗೇರಿ, ಮಡಿಕೇರಿ, ಚಿತ್ರದುರ್ಗ, ಕೊಡಗು ಮತ್ತು ನಂಜನಗೂಡು ಸ್ಥಳಗಳನ್ನು ಕ್ಷೇತ್ರಾಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವು ಈಗಾಗಲೇ ಟಿಪ್ಪು ಬಗ್ಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಗಳ ಮುಖಾಂತರ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೧.೫ ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧವು ಒಟ್ಟಾರೆ ಎಂಟು ಅಧ್ಯಾಯಗಳನ್ನು ಒಳಗೊಂಡಿದೆ.

ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶಗಳು ಮತ್ತು ವ್ಯಾಪ್ತಿ ಹಾಗೂ ವಿಧಾನಗಳ ಬಗ್ಗೆ ತಿಳಿಯಲಾಗಿದೆ.

ಅಧ್ಯಾಯ ಎರಡರಲ್ಲಿ ಜನಪದರು ಚಾರಿತ್ರಿಕವಾಗಿ ಟಿಪ್ಪುವನ್ನು ಗುರುತಿಸುವುದರ ಬಗ್ಗೆ ತಿಳಿಯುವುದು.

ಅಧ್ಯಾಯ ಮೂರರಲ್ಲಿ ಟಿಪ್ಪುವಿನ ಬಗ್ಗೆ ಗ್ರಾಮೀಣ ಜನಪದರು, ಸಾಮಾನ್ಯರು, ಬಡವರು ಹೊಂದಿರುವ ಅಭಿಪ್ರಾಯಗಳ ಬಗ್ಗೆ ತಿಳಿಯಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಟಿಪ್ಪು ಕುರಿತು ಈಗಾಗಲೇ ರಚನೆಯಾಗಿರುವ ಗ್ರಂಥಗಳು, ಲೇಖನಗಳು, ಟಿಪ್ಪಣಿಗಳು, ವರದಿಗಳು, ವಿಚಾರ-ಸಂಕಿರಣಗಳ ಬಗ್ಗೆ ವಿವರ ಸಂಗ್ರಹಿಸಿ, ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ಟಿಪ್ಪು ಕುರಿತು ಜನಪದರು ಹೇಳುವ ಹಾಡುಗಳು, ಕಥನಗಳು, ಲಾವಣಿಗಳು, ಐತಿಹ್ಯಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ. ಹಾಗೆಯೇ ಟಿಪ್ಪು ಕುರಿತು ಇರುವ ಆಚರಣೆಗಳ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ಪ್ರಸ್ತುತದಲ್ಲಿ ಟಿಪ್ಪುವಿನ ಬಗ್ಗೆ ಜನಪದರು ಹೊಂದಿರುವ ಭಾವನೆಯನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳರಲ್ಲಿ ಟಿಪ್ಪುವಿಗೆ ಸಂಬಂಧಿಸಿದಂತೆ ವಿದ್ವಾಂಸರ ದೃಷ್ಟಿಕೋನ ಹಾಗೂ ಜನಪದರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಎಂಟಕ್ಕೆ ಸಂಬಂಧಿಸಿದಂತೆ ಸಂಶೋಧನೆಯಿಂದ ಕಂಡುಕೊಂಡ ಫಲಿತಗಳನ್ನು ಮತ್ತು ಅಧ್ಯಯನದ ಸಾಧ್ಯತೆಗಳನ್ನು ಕ್ರೋಢೀಕರಿಸಿ ಸಮಾರೋಪದಲ್ಲಿ ತಿಳಿಸಲಾಗಿದೆ.

೧.೬ ಅಧ್ಯಯನದ ಮಹತ್ವ

ಈ ಅಧ್ಯಯನದ ಮಹತ್ವವು ಐತಿಹಾಸಿಕ ವ್ಯಕ್ತಿಯಾಗಿ ರೂಪುಗೊಂಡಿರುವ ಟಿಪ್ಪುವನ್ನು ಜಾನಪದ ದೃಷ್ಟಿಕೋನದಲ್ಲಿ ಅಭ್ಯಾಸಿಸಿ, ಹೇಗಿರುವೆಂಬುದನ್ನು ಅಧ್ಯಯನ ಮಾಡುವುದರಿಂದ

ಇದೊಂದು ವಿಭಿನ್ನ ಹಾಗೂ ವಿಶಿಷ್ಟ ಅಧ್ಯಯನವಾಗಿದೆ. ಆತನ ಬಗ್ಗೆ ಜನಪದರಿಂದ ಮಾಹಿತಿಯನ್ನು ಸಂಗ್ರಹಿಸಿ ಕಥನಗಳು, ಲಾವಣಿಗಳು ಮತ್ತು ಐತಿಹ್ಯಗಳನ್ನು ಬೆಳಕಿಗೆ ತಂದು ಮುಂದಿನ ತಲೆಮಾರುಗಳ ಅರಿವಿಗಾಗಿ ಕಾಯ್ದಿರಿಸಬೇಕು ಮತ್ತು ಸಂರಕ್ಷಿಸಬೇಕು ಎಂಬ ಉದ್ದೇಶದಿಂದ ಪ್ರಸ್ತುತ ಅಧ್ಯಯನವು ಅಧಿಕೃತ ಮಾಹಿತಿ ಒದಗಿಸಬಲ್ಲದು, ಇಲ್ಲಿ ಸಂಗ್ರಹಣೆಯಾಗುವ ಪ್ರತಿ ಮಾಹಿತಿಯು ಜಾನಪದ ಅಧ್ಯಯನದ ದೃಷ್ಟಿಯಿಂದ ಬಹಳ ಮುಖ್ಯವಾದುದು.

ಅಡಿ ಟಿಪ್ಪಣಿ :

೧) ಟಿ.ಪಿ.ಅಂಗಪ್ಪ, ಟಿಪ್ಪು ಸುಲ್ತಾನ್-ಸ್ಟುಡೆಂಟ್ ಬುಕ್ ಹೌಸ್, ಮಂಗಳೂರು-೨೦೦೮, ಪು.ಸಂ.೫.

೨) ಹೆಚ್.ಡಿ.ಶರ್ಮ, ಟಿಪ್ಪು ನಿಜ ಸ್ವರೂಪ-ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು-೨೦೧೨, ಪು.ಸಂ.೧೩೫.

ಅಧ್ಯಾಯ –೨

ಜನಪದರ ಚಾರಿತ್ರಿಕ ಪ್ರಜ್ಞೆ ಮತ್ತು ಟಿಪ್ಪು

೨.೧ ಪೀಠಿಕೆ

೨.೨ ಟಿಪ್ಪುವಿನ ಬಾಲ್ಯ

೨.೩ ಬ್ರಿಟೀಷರೊಡನೆ ಟಿಪ್ಪುವಿನ ಸಂಬಂಧಗಳು

೨.೪ ಕೊಡಗಿನ ರಾಜರು–ಮಲಬಾರ್ ಮತ್ತು ದಕ್ಷಿಣ ಕನ್ನಡದೊಂದಿಗೆ ಟಿಪ್ಪುವಿನ ಸಂಬಂಧಗಳು

೨.೫ ಮೂರನೇ ಆಂಗ್ಲೊ ಮೈಸೂರು ಯುದ್ಧ

೨.೬ ನಾಲ್ಕನೇ ಆಂಗ್ಲೊ ಮೈಸೂರು ಯುದ್ಧ

೨.೭ ಟಿಪ್ಪುವಿನ ಆರ್ಥಿಕ ಸುಧಾರಣೆಗಳು

೨.೮ ಟಿಪ್ಪುವಿನ ಸಾಮಾಜಿಕ ಸುಧಾರಣೆಗಳು

೨.೯ ಕಲೆ ಮತ್ತು ವಾಸ್ತುಶಿಲ್ಪ

ಅಧ್ಯಾಯ -೨

ಜನಪದರ ಚಾರಿತ್ರಿಕ ಪ್ರಜ್ಞೆ ಮತ್ತು ಟಿಪ್ಪು

೨.೧ ಪೀಠಿಕೆ

ತಾಯಿ ನಾಡಿನ ರಕ್ಷಕ, ನೂರು ಹುಲಿಗಳ ಬಲಿಷ್ಠತೆ ಪಡೆದ ಪೌರುಷವಂತ, ಚಿರತೆಯ ವೇಗದ ನಿರ್ಭಯಗಾರ, ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದವನು. "ದೇಶದ ಸ್ವಾತಂತ್ರ್ಯಕ್ಕಾಗಿ ಕಹಳೆ ಊದಿದ ಪ್ರಥಮ ಧ್ವನಿಕ" ಪ್ರವಾದಿ. ವೀರಾವೇಶದ ಹೋರಾಟದಿಂದ ದೇಶದ ಜನತೆಗೆ ಎಚ್ಚರಿಸಿದ ನಕ್ಷತ್ರ, ಮೈಸೂರಿನ ಹುಲಿ ಎಂದೇ ಖ್ಯಾತಿ ಪಡೆದ ಟಿಪ್ಪು ಸುಲ್ತಾನನ ಹೆಸರು ಕೇಳುತ್ತಿದ್ದಂತೆ ಬ್ರಿಟೀಷರ ಮೈತುಂಬ ಬೆವರಾಡುತ್ತಿತ್ತು. ನಾಲಿಗೆಯ ಮೇಲಿನ ದ್ರವ ಆರಿಹೋಗುತ್ತಿತ್ತು. ತನಗೆ ಎದುರಾಗಿ ಬಂದ ಹುಲಿಗಳಿಗೂ ತನ್ನ ಪ್ರಾಣವನ್ನು ನೀಡಲು ಹಿಂಜರಿಯದೆ ವೈರಿಗಳ ವಿರುದ್ಧ ಸದಾ ಹೋರಾಡಲು ಸನ್ನದ್ಧರಾಗಿಯೇ ಇರುತ್ತಿದ್ದ ಭಾರತದ ಅಪ್ರತಿಮ ವ್ಯಕ್ತಿ.

"ದಾಸ್ಯದಲ್ಲಿ ನೂರು ವರ್ಷ ನಾಯಿಯಂತೆ ಬಾಳುವುದಕ್ಕಿಂತಲೂ ಸ್ವಾತಂತ್ರ್ಯದಲ್ಲಿ ಒಂದು ದಿನ ಹುಲಿಯಂತೆ ಬಾಳುವುದು ಲೇಸು" ಎಂದು ಒರೆಯಿಂದ ಕತ್ತಿ ಎಳೆದು, ರಣರಂಗಕ್ಕೆ ನುಗ್ಗಿ, ಶತ್ರುಗಳೊಡನೆ ಹೋರಾಡುತ್ತಾ ಪ್ರಾಣ ಬಿಟ್ಟ ವೀರ ಟಿಪ್ಪು ಸುಲ್ತಾನ್‌ನ ಹೆಸರು ಚರಿತ್ರೆಯಲ್ಲಿ ಅಮರವಾಗಿದೆ. ಕರ್ನಾಟಕದಲ್ಲಿ ಅವನ ನೆನಪು ಅಚ್ಚಳಿಯದೇ ನಿಂತಿದೆ. ಇಂಥ ಅಪ್ರತಿಮ ಟಿಪ್ಪು ವ್ಯಕ್ತಿತ್ವವನ್ನು ಜನಪದರು ಚಾರಿತ್ರಿಕವಾಗಿ ಕೆಳಕಂಡಂತೆ ವರ್ಣಿಸಿದ್ದಾರೆ.

೨.೨ ಟಿಪ್ಪುವಿನ ಬಾಲ್ಯ

ಹೈದರನ ಮಗನಾದ ಟಿಪ್ಪು ಸುಲ್ತಾನ್ ೧೭೫೦ ನವೆಂಬರ್ ೨೦ರಂದು ದೇವನಹಳ್ಳಿಯಲ್ಲಿ ಜನಿಸಿದರು. (ತಾಯಿಯ ಹೆಸರು ಫಕ್ರುನ್ನಿಸಾ, ಹೈದರನ ಎರಡನೆಯ ಹೆಂಡತಿ). ಈತನು ಅರ್ಕಾಟನ ಸಂತನಾದ ಟಿಪ್ಪು ಮಸ್ತಾನ್ ಔಲಿಯಾರ ವರಪ್ರಸಾದದಿಂದ ಹುಟ್ಟಿದ ಕಾರಣ, ಹೈದರನು ತನ್ನ ಮಗನಿಗೆ ಟಿಪ್ಪು ಎಂಬ ಹೆಸರನ್ನು ಇಟ್ಟನು. ಹೈದರನು. ಅವನಿಗೆ ಉತ್ತಮ ಶಿಕ್ಷಣವನ್ನು ಕೊಡಿಸಿದನು. ಕತ್ತಿವರಸೆ, ಕುದುರೆ ಸವಾರಿ, ಅಸ್ತ್ರಗಳ ಪ್ರಯೋಗ ಬಂದೂಕಿನ ಉಪಯೋಗ ಮುಂತಾದವುಗಳಲ್ಲಿ ಶಿಕ್ಷಣವನ್ನು ಕೊಡಿಸಿದನು. ಟಿಪ್ಪು ಒಮ್ಮೆ ಬೇಟೆಗೆ ಹೋದಾಗ, ಆತನು ಹುಲಿಯನ್ನು ಕೊಂದನು ಮಾತ್ರವಲ್ಲದೆ ಹುಲಿ ಎಂಬ ಶಬ್ದವು ಆತನ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದರಿಂದ ಆತನು ಹುಲಿಯನ್ನು ತನ್ನ ಸಂಕೇತವಾಗಿ ಇಟ್ಟುಕೊಂಡುದುದರಿಂದ ಆತನನ್ನು ಮೈಸೂರಿನ ಹುಲಿ ಎಂದು

ಕರೆಯತೊಡಗಿದರು. ಆತನು ತನ್ನ ಶತ್ರುಗಳಿಗೆ ರಣರಂಗದಲ್ಲಿ ಹುಲಿಯಾಗಿಯೇ ಕಂಡನು. "ಹುಟ್ಟು ಕನ್ನಡಿಗನಾದ ಟಿಪ್ಪುಸುಲ್ತಾನ್ ಕನ್ನಡ ಮತ್ತು ಪರ್ಷಿಯನ್ ಭಾಷೆಗಳನ್ನು ಕಲಿತು, ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡನು. ಒಂದನೆಯ ಮೈಸೂರು ಯುದ್ಧಕ್ಕೆ ಮುನ್ನ ಹೈದರಾಬಾದ್ ನಿಜಾಮನೊಂದಿಗೆ ಚನ್ನಪಟ್ಟಣದಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡು, ತನ್ನ ಶಕ್ತಿಸಾಮರ್ಥ್ಯಗಳನ್ನು ತೋರಿಸಿದನು. ಒಂದನೆಯ ಮೈಸೂರು ಯುದ್ಧ, ಮೈಸೂರು-ಮರಾಠ ಯುದ್ಧ ಮತ್ತು ಎರಡನೆಯ ಮೈಸೂರು ಯುದ್ಧಗಳಲ್ಲಿ ಭಾಗವಹಿಸಿದ್ದನು. ಕರ್ನಲ್ ಬೈಲಿಯನ್ನು ಸದೆಬಡಿದನು. ವಾಂಡಿವಾಷ್ ಬಳಿ ನಡೆದ ಕಾರ್ಯಾಚರಣೆಯಲ್ಲಿ ತನ್ನ ಶಕ್ತಿ ಪ್ರದರ್ಶಿಸಿ ೧೭೮೨ರಲ್ಲಿ ಬ್ರೈತ್‌ವೇಟನನ್ನು ಸೋಲಿಸಿ ಬ್ರಿಟೀಷರ ಗರ್ವಭಂಗ ಮಾಡಿದನು. ೧೭೮೨ರ ಮೈಸೂರು ಯುದ್ಧದಲ್ಲಿ ಎಲ್ಲಾ ಅಧಿಕಾರಗಳನ್ನು ವಹಿಸಿಕೊಂಡು ಡಿಸೆಂಬರ್ ೨೬, ೧೭೮೨ರ ಮೇ ತಿಂಗಳಲ್ಲಿ ಸಿಂಹಾಸನವನ್ನೇರಿ 'ನವಾಬ್ ಟಿಪ್ಪು ಸುಲ್ತಾನ್ ಬಹದ್ದೂರ್' ಎಂಬ ಬಿರುದನ್ನು ಗಳಿಸಿಕೊಂಡನು".[೧]

ಮಗ ಟಿಪ್ಪುವಿಗಾಗಿ ತುಂಬಾ ಮುತುವರ್ಜಿ ವಹಿಸಿದ್ದ ಹೈದರ್ ತಾನು ಸಾಯುವುದಕ್ಕೆ ಎರಡು ವರ್ಷ ಮುಂಚೆಯಷ್ಟೆ ಈ ರೀತಿ ಹೇಳಿ ಬರೆಸಿದ್ದ.

"ಮಗನೇ, ನಾನು ನನ್ನ ಪೂರ್ವಿಕರಿಂದ ಪಡೆಯದ ಒಂದು ಸಾಮ್ರಾಜ್ಯವನ್ನು ನಿನಗೆ ಬಿಡುತ್ತಿದ್ದೇನೆ. ಹಿಂದೆಯಿಂದ ಗಳಿಸಿದ ರಾಜದಂಡವು ಯಾವಾಗಲೂ ನಶ್ವರವಾದುದು. ನೀನು ನಿನ್ನ ರಾಜ್ಯದ ಆಂತರಿಕ ವ್ಯವಹಾರದಲ್ಲಿ ಎಳ್ಳಷ್ಟೂ ಹೆದರಬೇಕಾಗಿಲ್ಲ. ಆದರೆ ನಿನ್ನ ದೃಷ್ಟಿಯನ್ನು ಬಹುದೂರದವರೆಗೆ ಒಯ್ಯುವುದು ಅತ್ಯಾವಶ್ಯಕ. ಔರಂಗಜೇಬನ ಮರಣದಿಂದ ಭಾರತವು ಏಷ್ಯಾದ ಸಾಮ್ರಾಜ್ಯಗಳಲ್ಲಿ ತನ್ನ ಸ್ಥಾನಮಾನವನ್ನು ಕಳೆದುಕೊಂಡಿದೆ. ಈ ಸುಂದರ ನಾಡು ಅಂತಃಕಲಹದಿಂದ ಹರಿದು ಹಂಚಿ ಹೋಗಿದೆ. ಜನರು ನಾನಾ ಮತಗಳಿಗೆ ಹಂಚಿಹೋಗಿದ್ದಾರೆ. ಹೀಗಾಗಿ ದೇಶಪ್ರೇಮವನ್ನು ಕಳೆದುಕೊಂಡಿದ್ದಾರೆ. ಹಿಂದೂಗಳು ಶಾಸ್ತ್ರಾನುಭವದಿಂದ ಪಡೆದ ಶಾಂತಿಸೂತ್ರದಿಂದ ಮೃದುವಾಗಿ ತಮ್ಮ ನಾಡನ್ನು ರಕ್ಷಿಸಿಕೊಳ್ಳಲು ಅಸಮರ್ಥವಾಗಿದ್ದಾರೆ. ಆದ್ದರಿಂದ ನಾಡು ಪರಕೀಯರಿಗೆ ತುತ್ತಾಗಿದೆ. ದುರ್ಬಲ ಹಿಂದೂಗಳಿಗಿಂತ ಮಹಮ್ಮದೀಯರು ಹೆಚ್ಚು ಒಗ್ಗಟ್ಟಾಗಿ ಸಾಹಸಿಗರೂ, ಉದ್ಯಮಶೀಲರೂ ಆಗಿದ್ದಾರೆ. ಆದ್ದರಿಂದ ಅವರಿಗೆ ಹಿಂದೂ ದೇಶದ ರಕ್ಷಣೆಯ ಕೀರ್ತಿ ಸಲ್ಲಬೇಕಾಗಿದೆ. ಮಗನೇ ನಿನ್ನ ಪ್ರಯತ್ನವನ್ನೆಲ್ಲ ಒಟ್ಟುಗೂಡಿಸಿ ಕುರಾನನನ್ನು ವಿಜಯಗೊಳಿಸು ಯುರೋಪಿಯನ್ನರ ಅಸೂಯೆಎಂಬ ದೊಡ್ಡ ಅಚರಣೆಯನ್ನು ನೀನು ಗೆಲ್ಲಬೇಕಾಗಿದೆ. ಇಂಗ್ಲೀಷರು ಭಾರತದಲ್ಲಿ ಸರ್ವಶಕ್ತರಾಗಿದ್ದಾರೆ. ಅವರನ್ನು ಯುದ್ಧದ ಮೂಲಕ ದುರ್ಬಲಗೊಳಿಸುವುದು ಅತ್ಯವಶ್ಯಕ. ಅವರು ಸ್ವಾದೀನಪಡಿಸಿಕೊಂಡಿರುವ ಭೂ

ಭಾಗದಿಂದ ಅವರನ್ನು ಕಾಲ್ತೆಗೆಸಲು ಹಿಂದೂಸ್ಥಾನದ ಸಾಧನ ಸಂಪತ್ತು ಸಾಲದು. ಯುರೋಪ್ ರಾಷ್ಟ್ರಗಳು ಒಂದರ ಮೇಲೊಂದು ಬೀಳುವಂತೆ ಮಾಡು. ಭಾರತೀಯ ಸೈನ್ಯಕ್ಕಿಂತಲೂ ಉತ್ತಮ ತರಬೇತಿಯಿಂದ ಕೂಡಿದ ಬ್ರಿಟೀಷ್ ಸೈನ್ಯವನ್ನು ಫ್ರೆಂಚರ ಸಹಾಯದಿಂದ ಮಾತ್ರ ಗೆಲ್ಲಬಲ್ಲೆ. ಯುರೋಪಿಯನ್ನರಿಗೆ ನಿಖರವಾದ ಚಾತುರ್ಯವಿದೆ, ಅವರ ಮೇಲೆ ಯಾವಾಗಲೂ ಅವರ ಅಸ್ತ್ರವನ್ನೇ ಪ್ರಯೋಗಿಸು... ಪರಾಕ್ರಮವು ನಮ್ಮನ್ನು ಸಿಂಹಾಸನಕ್ಕೆ ಏರಿಸಬಲ್ಲದು. ಆದರೆ ಚಕ್ರಾಧಿಪತ್ಯವನ್ನು ಕಾದು ಕೊಳ್ಳಲು ಅದು ಸಾಲದು ಎಂಬುದನ್ನು ಎಲ್ಲಕ್ಕಿಂತಲೂ ಮುಖ್ಯವಾಗಿ ನೆನಪಿಡು. ಜನರ ಪುಕ್ಕಲುತನದಿಂದ ನಾವು ಸಿಂಹಾನವನ್ನು ಗೆಲ್ಲಬಹುದು. ಆದರೆ ಶೀಘ್ರವಾಗಿ ಅದನ್ನು ಅವರ ಪ್ರೀತಿಗೆ ಒಪ್ಪಿಸದೇ ಹೋದಲ್ಲಿ ಆ ರಾಜ್ಯವು ನಮ್ಮ ಕೈಬಿಟ್ಟು ಹೋಗಬಹುದು."[೨]

೨.೩ ಬ್ರಿಟೀಷರೊಡನೆ ಟಿಪ್ಪುವಿನ ಸಂಬಂಧಗಳು

ಟಿಪ್ಪುವಿನ ರಾಜ್ಯಭಾರದ ಆರಂಭವು ಬ್ರಿಟೀಷರೊಡನೆ ಆತನ ತಂದೆಯ ಸಂಘರ್ಷದೊಂದಿಗೆ ಉಂಟಾಗುವುದನ್ನು ನಾವು ಕಾಣುತ್ತೇವೆ. ಬ್ರಿಟೀಷರು ಇಡೀ ವಿಶ್ವದ ಮೇಲೆ ತಮ್ಮ ವ್ಯಾಪಾರಿ ಏಕಸ್ವಾಮ್ಯವನ್ನು ಸಂಸ್ಥಾಪಿಸಲು ಭಾರತದೊಡನೆ ತಮ್ಮ ವ್ಯಾಪಾರದ ನಿರಂತರತೆ ಅನಿವಾರ್ಯ ಎಂದು ತಿಳಿದುಕೊಂಡಿದ್ದರು. ಈ ವ್ಯಾಪಾರಿ ಏಕಸ್ವಾಮ್ಯಕ್ಕೆ ಭಾರತದ ಮೇಲೆ ರಾಜಕೀಯ ನಿಯಂತ್ರಣ ಮತ್ತು ಆಡಳಿತಾತ್ಮಕ ಸ್ವಾಮಿತ್ವ ತೀರಾ ಅಗತ್ಯ ಎನ್ನುವುದು ಅವರ ಆಲೋಚನೆಯಾಗಿತ್ತು. ಆದುದರಿಂದ ತಮ್ಮ ಸಾಮ್ರಾಜ್ಯಶಾಹಿತ್ವಕ್ಕೆ ಅಡ್ಡಿಯಾಗಿ ನಿಂತ ಮೈಸೂರು ವೀರರಾದ ಹೈದರನನ್ನು ಮತ್ತು ಟಿಪ್ಪುವನ್ನು ಮೂಲೋಚ್ಛಾಟನೆ ಮಾಡುವುದು ತಮ್ಮ ಪ್ರಪ್ರಥಮ ಆದ್ಯತೆ ಅಂದುಕೊಂಡ ಬ್ರಿಟೀಷರು ಆ ಪ್ರಕಾರ ಕ್ರಮವಹಿಸಿದರು.

ಹೈದರ್ ಆಲಿಯು ಬ್ರಿಟೀಷರ ಕಪಟ ರಾಜನೀತಿ ವ್ಯಾಪಾರಿ ದುರುದ್ದೇಶಗಳನ್ನು ಸರಿಯಾಗಿ ತಿಳಿದಿದ್ದನು. ಬ್ರಿಟೀಷರು ಅಪಾರ ಬಲಶಾಲಿ ನೌಕಪಡೆ ಹೊಂದಿರುವ ಕಾರಣದಿಂದ ಅವರನ್ನು ಸದೆಬಡಿಯಲು ಸಾಧ್ಯವಿಲ್ಲ. ಎನ್ನುವ ಅಭಿಪ್ರಾಯವನ್ನೂ ಅವನು ಹೊಂದಿದ್ದನು. ಆದರೂ ಮೈಸೂರು ರಾಜ್ಯದ ಸ್ವಾತಂತ್ರ್ಯ ಕಾಯುವುದಕ್ಕಾಗಿ ಆತನು ಬ್ರಿಟೀಷರ ವಿರುದ್ಧ ನಿರಂತರ ಹೋರಾಟದಲ್ಲಿ ತೊಡಗಿದನು.

ಹೈದರ್ ಆಲಿಯ ಮಗನಾದ ಟಿಪ್ಪುಸುಲ್ತಾನ್ ಮಹಾನ್ ಸ್ವಾತಂತ್ರ್ಯಪ್ರಿಯನಾಗಿದ್ದು, ಮೈಸೂರು ಬ್ರಿಟೀಷರ ಕಪಿಮುಷ್ಟಿಯಿಂದ ಸ್ವತಂತ್ರವಾಗಿರಬೇಕೆಂದು ನಿರಂತರ ಶ್ರಮಿಸಿದನು. ಬ್ರಿಟೀಷರು ಟಿಪ್ಪುವಿನ ಬದ್ಧದ್ವೇಷ ಮನೋಸ್ಥಿತಿ ಮತ್ತು ಹೋರಾಟಗಾರ ಪ್ರವೃತ್ತಿಯನ್ನು ತಿಳಿದಿದ್ದರು. ಅವನನ್ನು ಮೈಸೂರಿನ ಹುಲಿ ಎಂದೇ ಅವರು ಕರೆದರು. ಅಂತಹ ಟಿಪ್ಪು ಸುಲ್ತಾನನ್ನು ಸದೆಬಡಿಯದೆ ತಮ್ಮ ರಾಜ್ಯವು ನಿರಾಂತಕವಾಗದು ಎಂದು ಅವರು ತಿಳಿದಿದ್ದರು

ಟಿಪ್ಪುವನ್ನು ಸೋಲಿಸಿ ಹಣಿಯುವುದಕ್ಕಾಗಿ ತಮ್ಮ ಎಲ್ಲಾ ಸಾಮರ್ಥ್ಯಗಳನ್ನು ಒಟ್ಟುಗೂಡಿಸಿ ಅವರು ಶ್ರಮಿಸಿದರು. "ಟಿಪ್ಪು ಸುಲ್ತಾನನಾದರೂ ಬ್ರಿಟೀಷರನ್ನು ಮೈಸೂರಿನಿಂದ ಓಡಿಸುವುದಕ್ಕಾಗಿ ತನ್ನ ಎಲ್ಲಾ ಗಮನವನ್ನು ಕೇಂದ್ರೀಕರಿಸಿದನು. ಶಸ್ತ್ರ ಸುವ್ಯವಸ್ಥೆ, ಸೇನೆಗಳ ಆಧುನಿಕ ವ್ಯವಸ್ಥೆ, ವಿದೇಶಿ ಶಕ್ತಿಗಳ ಸಂಬಂಧದ ಮೂಲಕ ಬ್ರಿಟೀಷರನ್ನ ದಮನ ಮಾಡಲು ಟಿಪ್ಪು ಸುಲ್ತಾನನು ಕ್ರಮ ಕೈಗೊಂಡನು".[೩]

೨.೪ ಕೊಡಗಿನ ರಾಜರು-ಮಲಬಾರ್ ಮತ್ತು ದಕ್ಷಿಣ ಕನ್ನಡದೊಂದಿಗೆ ಟಿಪ್ಪುವಿನ ಸಂಬಂಧಗಳು

ಕೊಡಗಿನ ಲಿಂಗಾಯಿತ ರಾಜರು ಆರಂಭದಿಂದಲೂ ಮೈಸೂರಿನ ವೈಷ್ಣವ ರಾಜರೊಡನೆ ಯಾವುದೇ ಸಂಬಂಧ ಹೊಂದಿರಲು ಆಶಿಸಿರಲಿಲ್ಲ. ಹೈದರ್ ಆಲಿಯ ಕಾಲದಲ್ಲಿಯೂ ಮೈಸೂರಿನ ರಾಜರ ವಿರುದ್ಧ ಮತ್ತು ಮೈಸೂರಿನ ಆಡಳಿತದ ವಿರುದ್ಧ ಕೊಡವರು ತೀವ್ರ ಪ್ರತಿರೋಧ ತೋರಿಸಿದ್ದರು. ಕ್ರಿ.ಶ.೧೭೮೫ರಲ್ಲಿ ಮೈಸೂರು ಅರಸರ ಸೇನಾ ದಬ್ಬಾಳಿಕೆಯ ವಿರುದ್ಧ ಕೊಡವರು ಪ್ರತಿಭಟನೆ ತೋರಿದ್ದರು. ಟಿಪ್ಪುವು ವಿಶಾಲ ಸೇನೆಯನ್ನು ತೆಗೆದುಕೊಂಡು ಬಂದು ಕೊಡವರನ್ನು ಸದೆಬಡಿದು ಮಡಿಕೇರಿಯನ್ನು ವಶಪಡಿಸಿಕೊಂಡನು. ಕೊಡವರಿಗೂ-ಮೈಸೂರಿನ ಹುಲಿಗೂ ಉಂಟಾಗಿದ್ದ ದ್ವೇಷವು ಬ್ರಿಟೀಷರಿಗೆ ತುಂಬಾ ಉಪಯುಕ್ತವಾಯಿತು. ಟಿಪ್ಪುವನ್ನು ಮುಗಿಸುವ ಕಾರ್ಯಯೋಜನೆಯಲ್ಲಿ ಕೊಡವರು ಬ್ರಿಟೀಷರಿಗೆ ಉಪಯುಕ್ತರಾದರು.

ಮಲಬಾರ್ ಮಾಪಿಳ್ಳೆಗಳನ್ನು ತನ್ನ ರಾಜ್ಯದಲ್ಲಿ ಸೇರಿಸುವ ಮೂಲಕ ವಿಶಾಲ ವ್ಯಾಪಾರಿ ಸಾಮ್ರಾಜ್ಯ ಕಟ್ಟಲು ಟಿಪ್ಪುಸುಲ್ತಾನನು ಆಶಿಸಿದನು. ವಯ್ಯನಾಡ್, ಮಾನಂದವಾಡಿ, ಕಲ್ಲಿಕೋಟೆ, ಕಾಸರಗೋಡು, ಕಣ್ಣೂರನ್ನು ತನ್ನ ತೀರ ನಿಯಂತ್ರಣಕ್ಕೆ ಒಟ್ಟುಗೊಳ್ಳಲು ಸುಲ್ತಾನ್ ಬತ್ತೇರಿ, ಬೇಕಲದ ಕೋಟೆಗಳನ್ನು ಕಟ್ಟಿಕೊಂಡರು. ಆದರೆ ಸ್ವಾತಂತ್ರ್ಯ ಪ್ರಿಯರಾದ ಗುರ್ಜಾಲನು ರವಿವರ್ಮನ ನಾಯಕತ್ವದಡಿಯಲ್ಲಿ ನಾಯಕರು ಟಿಪ್ಪುವಿನ ವಿರುದ್ಧ ನೇರ ಹೋರಾಟಕ್ಕೆ ಇಳಿದರು. ಕ್ರಿ.ಶ.೧೭೮೮ರಲ್ಲಿ ನಾಯಕರ ನಾಯಕ ರಾಜ ರವಿವರ್ಮನು ಮೊಪ್ಲಾರ ರಾಜ ಮತ್ತು ಕೊಡಗಿನ ರಾಜರೊಂದಿಗೆ ಸೇರಿ ಟಿಪ್ಪುವಿನ ವಿರುದ್ಧ ನೇರ ದಂಗೆ ಹೂಡಿದನು. ಕೊಚ್ಚಿನ್ನಿನ ರಾಜನು ಟಿಪ್ಪು ಸುಲ್ತಾನನಿಗೆ ಬೆಂಗಾವಲಾಗಿಲ್ಲದ ಕಾರಣ ದಂಗೆಕೋರರನ್ನು ಸೋಲಿಸುವುದು ಟಿಪ್ಪು ಸುಲ್ತಾನನಿಗೆ ಸುಲಭ ಸಾಧ್ಯವಾಯ್ತು. ಕ್ರಿ.ಶ.೧೮೭೯ರಲ್ಲಿ ಮಲಬಾರಿ ರಾಜರು ರಾಜರೊಂದಿಗೆ ಶತ್ರುತ್ವ ಹೊಂದಿರುವುದು ತಿಳಿದು ಸಂತೋಷವಾಯಿತು. ಅವರು ಮುಂದೆ ಇತರ ದೇಶಿರಾಜರನ್ನು ತಮ್ಮೊಂದಿಗೆ ಕಟ್ಟಿಕೊಂಡು ಟಿಪ್ಪುಸುಲ್ತಾನನ್ನು ಹಣಿಯಲು ಕಾರ್ಯಯೋಜನೆ ರೂಪಿಸಿದರು.

ದಕ್ಷಿಣ-ಉತ್ತರ ಕನ್ನಡ ಜಿಲ್ಲೆಗಳು ಕರಾವಳಿಯ ಕರ್ನಾಟಕದ ಭಾಗಗಳಾಗಿದ್ದವು. ಕ್ರಿ.ಶ.೧೭೬೩ರಲ್ಲಿ ಕೆಳದಿ-ಇಕ್ಕೇರಿ-ಬಿದನೂರು ರಾಜ್ಯವನ್ನು ವಶಪಡಿಸಿಕೊಂಡ ಹೈದರನ ಸಾಮ್ರಾಜ್ಯಕ್ಕೆ ಈ ಕರಾವಳಿಯ ಜಿಲ್ಲೆಗಳು ಸೇರಿದ್ದವು. ಬ್ರಿಟೀಷರಿಗೆ ತಮ್ಮ ವ್ಯಾಪಾರಿ ಲಾಭಕ್ಕಾಗಿ ಈ ಎರಡು ಜಿಲ್ಲೆಗಳನ್ನು ವಶಪಡಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಎರಡನೇ ಮತ್ತು ಮೂರನೇ ಆಂಗ್ಲೋ ಮೈಸೂರು ಕದನಗಳಲ್ಲಿ ಕರಾವಳಿಯ ಜಿಲ್ಲೆಗಳ ಜನರು ಬ್ರಿಟೀಷರಿಗೆ ಬೆಂಬಲ ನೀಡಿದ್ದರೆಂಬ ಸುದ್ದಿ ಟಿಪ್ಪುವಿಗೆ ತಿಳಿದಿತ್ತು. ಆದುದರಿಂದ ಕನ್ನಡ ಕರಾವಳಿಯ ಜನರನ್ನು ವಿಶೇಷ ಶಿಕ್ಷೆಗೆ ಒಳಪಡಿಸಲು ಟಿಪ್ಪುಸುಲ್ತಾನ್ ನಿರ್ಧರಿಸಿದ್ದನು. ಇದರ ಪರಿಣಾಮವಾಗಿ ಕೆನರಾದ ಜನರೊಂದಿಗೆ ಆತನು ಸಂಬಂಧ ಕೆಡಿಸಿಕೊಂಡನು. ಇದನ್ನು ತಿಳಿದುಕೊಂಡ ಬ್ರಿಟೀಷರು ಟಿಪ್ಪುವಿನ ವಿರುದ್ಧ ಅವರನ್ನು ಬಳಸಿಕೊಳ್ಳಲು ನಿರ್ಧರಿಸಿದರು.

೨.೫ ಮೂರನೇ ಆಂಗ್ಲೋ ಮೈಸೂರು ಯುದ್ಧ

ಟಿಪ್ಪು ಸುಲ್ತಾನನು ಬ್ರಿಟೀಷರನ್ನು ಭಾರತದಿಂದ ಓಡಿಸಲು ಟರ್ಕಿ, ರಷ್ಯಾ, ಫ್ರಾನ್ಸಿನ ಬೆಂಬಲ ಕೇಳಿದನು. ಆದರೆ ಈ ದೇಶಗಳಿಂದ ಸೇನಾ ಸಹಾಯ ಸುಲಭವಾಗಿ ಟಿಪ್ಪುವಿಗೆ ದೊರೆಯಲಿಲ್ಲ. ಇದೇ ಸಂದರ್ಭದಲ್ಲಿ ಬ್ರಿಟೀಷರು ಟಿಪ್ಪುವಿನ ವಿರುದ್ಧ ನಿಖರ ಜಯ ಸಾಧಿಸಬೇಕೆಂಬ ನಿರ್ದೇಶನದೊಂದಿಗೆ ಲಾರ್ಡ್ ಕಾರ್ನ್‌ವಾಲೀಸನನ್ನು ಭಾರತದ ಗವರ್ನರ್ ಜನರಲ್ ಆಗಿ ಕಳುಹಿಸಿದನು.

"ಟಿಪ್ಪುಸುಲ್ತಾನನು ಕ್ರಿ.ಶ.೧೭೯೦ರಲ್ಲಿ ತಿರುವಾಂಕೂರಿನ ರಾಜ ರಾಮವರ್ಮನ ಮೇಲೆ ದಾಳಿ ಮಾಡಿದನು. ತಿರುವಾಂಕೂರಿನ ರಾಜನು ಬ್ರಿಟೀಷರು ಅನುವರ್ತಿಯಾಗಿದ್ದು, ಅವರ ರಕ್ಷಣೆಯಲ್ಲಿದ್ದನು. ಆತನು ಟಿಪ್ಪುವಿನ ವಿರುದ್ಧ ಸೇನೆಯನ್ನು ಸಂಘಟಿಸಿ ರವಾನಿಸಿದನು. ಟಿಪ್ಪು ಸುಲ್ತಾನನ ವಿರುದ್ಧ ಬರೇ ದಂಡನಾಯಕರ ಸೈನ್ಯ ಸಾಕಾಗಲಿಲ್ಲವೆಂದು ಮನಗಂಡ ಗವರ್ನರ್ ಜನರಲ್ ಲಾರ್ಡ್ ಕರ್ನ್‌ವಾಲೀಸನು ಸ್ವತಃ ತಾನೇ ವಿಶಾಲ ಸೇನೆಯ ನಾಯಕತ್ವ ವಹಿಸಿ ಕಲ್ಕತ್ತಾದಿಂದ ಶ್ರೀರಂಗಪಟ್ಟಣಕ್ಕೆ ಹೊರಟು ಬಂದನು".[೮] ಶ್ರೀರಂಗಪಟ್ಟಣದ ಪ್ರಥಮ ದಾಳಿಯಲ್ಲಿ ಸಿಂಹಾವೇಶದಿಂದ ಹೋರಾಡಿದ ಟಿಪ್ಪುಸುಲ್ತಾನನು ಕಾರ್ನ್‌ವಾಲೀಸ್ ಹಿಮ್ಮೆಟ್ಟುವಂತೆ ಮಾಡಿದನು. ಆದರೆ ಬ್ರಿಟೀಷರು ತಕ್ಷಣ ಕಪಟನಾಟಕ ಆಡಿ ಮರಾಠರು ಮತ್ತು ನಿಜಾಮನ ಸೈನ್ಯವು ತಮ್ಮ ಜತೆ ಸೇರುವಂತೆ ನೋಡಿಕೊಂಡರು. ಇದರಿಂದ ಟಿಪ್ಪುಸುಲ್ತಾನನು ಏಕಾಂಗಿ ವೀರನಾದನು. ಮಾತ್ರವಲ್ಲ ಬ್ರಿಟೀಷರ ಬಲ ಹೆಚ್ಚಿತು. ಈಗ ತಮ್ಮ ಬಲವನ್ನು ಅಪಾರವಾಗಿ ಹೆಚ್ಚಿಸಿಕೊಂಡ ಬ್ರಿಟೀಷರು ಶ್ರೀರಂಗಪಟ್ಟಣದ ಎರಡನೇ ದಾಳಿಯಲ್ಲಿ ಟಿಪ್ಪುವನ್ನು ಭೀಕರವಾಗಿ

ಸೋಲಿಸಿದರು. "ಮೈಸೂರಿನ ಹುಲಿಯು ಅವಮಾನಿತನಾಗಿ ಬ್ರಿಟೀಷರೊಡನೆ ಶ್ರೀರಂಗಪಟ್ಟಣ ಒಪ್ಪಂದ (೨೨-೦೩-೧೭೯೨) ಮಾಡಿಕೊಳ್ಳಬೇಕಾಯ್ತು".[3]

ಶ್ರೀರಂಗಪಟ್ಟಣ ಒಪ್ಪಂದವು ನಿಜವಾಗಿಯೂ ತೀರಾ ಅವಮಾನಕಾರಿ ಒಪ್ಪಂದವಾಗಿತ್ತು. ಇಂಗ್ಲೀಷರು ಟಿಪ್ಪುಸುಲ್ತಾನನಿಂದ ಮಲಬಾರ್, ದಿಂಡಿಗಲ್ಲು, ಬಾರಾಮಹಲ್ ಜಿಲ್ಲೆಗಳನ್ನು ಕಿತ್ತುಕೊಂಡರು. ಮರಾಠರಿಗೆ ಕೃಷ್ಣಾ, ತುಂಗಭದ್ರಾ ನದಿಗಳ ಭಾಗವನ್ನು ಒಪ್ಪಿಸಲಾಗಿತ್ತು. ಬಳ್ಳಾರಿ ಮತ್ತು ಕಡಪ ಜಿಲ್ಲೆಗಳನ್ನು ಟಿಪ್ಪುವಿನಿಂದ ಕಿತ್ತುಕೊಂಡು ನಿಜಾಮನಿಗೆ ನೀಡಿದರು. ಟಿಪ್ಪುವು ಬ್ರಿಟೀಷರಿಗೆ ಮೂರು ಕೋಟಿ ರೂಪಾಯಿಗಳ ಯುದ್ಧನಷ್ಟ ನೀಡಬೇಕಾಯಿತು. ಈ ಯುದ್ಧನಷ್ಟವನ್ನು ಪಾವತಿಸುವ ತನಕ ಬ್ರಿಟೀಷರು ಟಿಪ್ಪುವಿನ ಇಬ್ಬರು ಮಕ್ಕಳನ್ನು ತಮ್ಮ ನಿಯಂತ್ರಣದಲ್ಲಿ ಒತ್ತೆಯಾಳುಗಳನ್ನಾಗಿ ಇರಿಸುವಂತೆ ಮಾಡಿದರು. ಈ ರೀತಿಯ ಅವಮಾನಕಾರಿ ಒಪ್ಪಂದವು ಟಿಪ್ಪುವಿನ ಹೃದಯದಲ್ಲಿ ಕ್ರೋಧದ ಬೆಂಕಿ ಉರಿಯುವಂತೆ ಮಾಡಿತು.

೨.೬ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧ – ೧೭೯೯

ನಾಲ್ಕನೇ ಆಂಗ್ಲೋ ಮೈಸೂರು ಯುದ್ಧವು ಮೈಸೂರಿನ ಮತ್ತು ಬ್ರಿಟೀಷರ ಸಂಬಂಧಗಳಲ್ಲಿ ಪ್ರಮುಖ ಘಟ್ಟವಾಗಿದೆ. ಒಂದು ಕಡೆಯಿಂದ ಬ್ರಿಟೀಷರು ಟಿಪ್ಪುವನ್ನು ಭಾರತದ ಭೂಪಟದಿಂದಲೇ ದೂರ ಮಾಡಿ ತಮ್ಮ ಸ್ವಾಮಿತ್ವ ಸ್ಥಾಪಿಸಬೇಕೆಂದು ಆಶಿಸಿ ವಿಶಾಲ ಸೇನೆಯನ್ನು ಸಜ್ಜುಮಾಡಿ ಮುಂದುವರೆಯುತ್ತಿದ್ದರು. ಟಿಪ್ಪುವು ಬ್ರಿಟೀಷರನ್ನು ಈ ದೇಶದಿಂದಲೇ ಮೂಲೋಚ್ಛಾಟನೆ ಮಾಡಬೇಕೆಂದು ಇಚ್ಛಿಸಿ ಅದಕ್ಕಾಗಿ ಎಲ್ಲಾ ಕ್ರಮ ಕೈಗೊಂಡು ಇತರೆ ವಿದೇಶಿ ಶಕ್ತಿಗಳ ಬೆಂಬಲದಿಂದ ಸೇನಾಸಿದ್ಧತೆ ಮಾಡಿ ತಯಾರಾಗುತ್ತಿದ್ದನು.

ಕ್ರಿ.ಶ.೧೭೯೮ರಲ್ಲಿ ಲಾರ್ಡ್ ವೆಲ್ಲೆಸ್ಲಿಯು ಭಾರತದ ಗವರ್ನರ್ ಜನರಲ್ ಆಗಿ ಬಂದನು. ಈತನ ಮುಖ್ಯ ಉದ್ದೇಶ ಟಿಪ್ಪುಸುಲ್ತಾನನ ಮೂಲೋಚ್ಛಾಟನೆಯೇ ಆಗಿತ್ತು. ಅದಕ್ಕೋಸ್ಕರ ಯಾವ ಪಂಥಾಹ್ವಾನಕ್ಕೂ ಆತನು ಸಿದ್ಧನಾಗಿದ್ದನು. ಮೊಟ್ಟ ಮೊದಲಿಗೆ ಕುದಿತ ಸ್ವಾಭಿಮಾನಿ ಹುಲಿಯಾದ ಟಿಪ್ಪು ಅವನ ಸಹಾಯಕ ಸೈನ್ಯ ಪದ್ಧತಿ (ubsidiary Allianc)ಗೆ ಸೇರಿ ಬ್ರಿಟೀಷರ ಅನುವರ್ತಿ ಆಗಲಾರನೆಂದು ಘೋಷಿಸಿದನು. ಲಾರ್ಡ್‌ವೆಲ್ಲೆಸ್ಲಿಯು ೨೧,೦೦೦ ಸೈನಿಕ ಸೇನೆಯನ್ನು ಜನರಲ್ ಹ್ಯಾರಿಸನ್ ನಾಯಕತ್ವದಲ್ಲಿ ಮೈಸೂರಿನತ್ತ ಕಳುಹಿಸಿದನು. ಮರಾಠರ ಮತ್ತು ನಿಜಾಮನ ಬೆಂಬಲವನ್ನ ಸಂಪಾದಿಸಿಕೊಂಡಿದ್ದ ಬ್ರಿಟೀಷರು ಅರ್ಥರ್ ವೆಲ್ಲೆಸ್ಲಿಯ ನಾಕಯತ್ವದಲ್ಲಿ ಇನ್ನೊಂದು ಸೈನ್ಯವನ್ನು ಕಲ್ಕತ್ತಾದ ಕಡೆಯಿಂದ ರವಾನಿಸಿದರು. ಆತನು

ಶ್ರೀರಂಗಪಟ್ಟಣದ ರಕ್ಷಣೆಗಾಗಿ ಹಿಂದಿರುಗಿ ಬಂದನು. ಆದರೆ ಹಿತಶತ್ರುಗಳು ಆತನು ಬ್ರಿಟೀಷರ ಮೋಸದ ಬಲೆಗೆ ಬೀಳುವಂತೆ ಮಾಡಿದರು. ೦೪-೦೫-೧೭೯೯ರಂದು ಟಿಪ್ಪುವು ಇಂಗ್ಲೀಷರ ಗುಂಡಿಗೆ ಬಲಿಯಾಗಿ ಬಿದ್ದನು.

ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಉಪಾಯದಿಂದ ಟಿಪ್ಪು ಸುಲ್ತಾನನನ್ನು ಕೊಂದ ಬ್ರಿಟೀಷರು ರಾಜಮನೆತನದೊಡನೆ ಮೈಸೂರು ಒಪ್ಪಂದ ಮಾಡಿಕೊಂಡರು. ಆ ಒಪ್ಪಂದದ ಪ್ರಕಾರ ಸಮ್ಮಿ ಮೂಲದ ಕಾಲಭಾಗ ಮೈಸೂರು ರಾಜ್ಯವನ್ನು ಒಡೆಯರಿಗೆ ಒಪ್ಪಿಸಿದರು. ಉಳಿದ ಭಾಗಗಳನ್ನು ತಮಗೂ ತಮ್ಮ ಮಿತ್ರರಾದ ಮರಾಠ-ನಿಜಾಮರಿಗೂ ಹಂಚಿಕೊಂಡರು.

೨.೭ ಟಿಪ್ಪುವಿನ ಆರ್ಥಿಕ ಸುಧಾರಣೆಗಳು

ಟಿಪ್ಪು ಸುಲ್ತಾನನು ವ್ಯಾಪಾರ, ವಾಣಿಜ್ಯ ಹಾಗೂ ಕೈಗಾರಿಕೆಗಳನ್ನು ವಿಸ್ತರಿಸುವುದರಲ್ಲಿ ಹಾಗೂ ಅದರ ಅಭಿವೃದ್ಧಿಗಾಗಿ ಬಹಳವಾಗಿ ಶ್ರಮಿಸಿದನು. ಈತನು ವ್ಯಾಪಾರಸ್ಥನಾಗಿ, ವರ್ತಕನಾಗಿ, ಕುಶಲ ಕೈಗಾರಿಕನಾಗಿ, ಬ್ಯಾಂಕರನಾಗಿ ಹಾಗೂ ಹಣಕಾಸಿನ ಮೇಲ್ವಿಚಾರಕನಾಗಿ ತನ್ನ ಪಾತ್ರವನ್ನು ದಕ್ಷತೆಯಿಂದ ನಿರ್ವಹಿಸಿದನು. ಹಣಕಾಸಿನ ಲೆಕ್ಕಚಾರವನ್ನು ನೋಡಿಕೊಳ್ಳಲು ಶಿರಸ್ತೆದಾರ್ ಎಂಬ ಅಧಿಕಾರಿಗಳಿದ್ದರು. ಮುತಸದ್ದೀಸ್ ಎಂದು ಕರೆಯಲ್ಪಡುವ ಕರಣಿಕರು ಹಾಗು ಕಂದಾಯ ವ್ಯವಹಾರದ ಮುಖ್ಯಸ್ಥರಾದ ಮಿರ್ ಅಸಫ್ ಎಂಬುವರೂ ಇದ್ದರು. ಮೀರ್ ಅಸಫ್‌ರ ಕೈ ಕೆಳಗೆ ಶಿರಸ್ತೇದಾರರು, ಅವರ ಕೈಕೆಳಗೆ ಮುತಸದ್ದೀಸ್‌ಗಳಿದ್ದು ಅವರೆಲ್ಲರೂ ಕಂದಾಯ, ಹಣಕಾಸು, ಲೆಕ್ಕಪತ್ರ ಮುಂತಾದವುಗಳನ್ನು ನೋಡಿಕೊಳ್ಳುತ್ತಿದ್ದರು. ಮಿರ್ ಸಾಧಿಕನು ಟಿಪ್ಪುವಿನ ದಿವಾನನಾಗಿದ್ದು ಆತನು ಕಂದಾಯ ಹಾಗೂ ಹಣಕಾಸು ಕಛೇರಿಯ ಅಧ್ಯಕ್ಷನೂ ಆಗಿದ್ದನು. ಮಾಲಿಕ್-ಉಲ್-ತುಜ್ಜರ್ ಕಛೇರಿಯು ವ್ಯಾಪಾರ ಹಾಗೂ ವಾಣಿಜ್ಯದ ಮುಖ್ಯ ಕಛೇರಿಯಾಗಿತ್ತು. ವಾಣಿಜ್ಯ ಮಂಡಳಿಯನ್ನು ನೋಡಿಕೊಳ್ಳಲು ಎಂಟು ಮಂದಿಯ ಹಿರಿಯರ ಅಧಿಕಾರ ವರ್ಗವಿತ್ತು. ಟಂಕಸಾಲೆಯನ್ನು ನೋಡಿಕೊಳ್ಳಲು ಮಿರ್ ಖಾಜ್ವಾನ್ ಕಛೇರಿಯಿದ್ದಿತು. ಇದರ ಮುಖ್ಯಸ್ಥ ಸಯ್ಯಿದ್ ಅಮೀನನು ಆಗಿದ್ದನು. ತೋಶಖಾನಾ ಎಂಬುದು ಒಂದು ಬೊಕ್ಕಸವಾಗಿದ್ದು, ಕಛೇರಿಯ ಮುದ್ರೆಯನ್ನು ಹೊಂದಿ, ಅದರಲ್ಲಿ ಬೆಲೆಬಾಳುವ ಅಗತ್ಯವಿರುವ ದಾಖಲೆಗಳನ್ನು ಸಂಗ್ರಹಿಸಿ ಇಡಲಾಗುತ್ತಿತ್ತು. ಟಿಪ್ಪುಸುಲ್ತಾನನು ಆರಂಭಿಸಿದ ಈ ತೋಶ ಖಾನವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ೧) ನಖ್ದಿ ೨) ಜನ್ಸಿ. ನಖ್ದಿ ತೋಶಖಾನದಲ್ಲಿ ಹಣವನ್ನು ಮತ್ತು ಜನ್ಸಿ ತೋಶಖಾನದಲ್ಲಿ ಅತ್ಯಮೂಲ್ಯವಾದ ದಾಖಲೆಗಳನ್ನು ಸಂಗ್ರಹಿಸಿಡಲಾಗುತ್ತಿತ್ತು.

ಟಿಪ್ಪುವಿನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದೊಳಗೆ ಐದು ಟಂಕಸಾಲೆಗಳು ಸ್ಥಾಪಿತವಾಗಿದ್ದವು. ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣ ಕೋಟೆಯೊಳಗೆ ಬಂಗಾರ ಹಾಗೂ ಬೆಳ್ಳಿಯ ನಾಣ್ಯಗಳನ್ನು ಮುದ್ರಿಸುವ ಟಂಕಸಾಲೆ, ನಂತರ ಕೋಟೆಯ ಹೊರಗಡೆ ತಾಮ್ರದ ನಾಣ್ಯಗಳನ್ನು ಮುದ್ರಿಸುವ ಇತರೆ ನಾಲ್ಕು ಟಂಕಸಾಲೆಗಳಿದ್ದವು. ಈ ಟಂಕಸಾಲೆಗಳಿಗೆ ಬೇಕಾಗಿರುವ ಬಂಗಾರ, ಬೆಳ್ಳಿ ಹಾಗೂ ತಾಮ್ರಗಳನ್ನು ಸರಬರಾಜು ಮಾಡಲು ದರೋಗ ಎಂಬ ಅಧಿಕಾರಿಯಿದ್ದನು. ಈ ಟಂಕಸಾಲೆಗಳಲ್ಲಿ ನಾಣ್ಯಗಳು ಮುದ್ರಿತಗೊಂಡ ಬಳಿಕ ದರೋಗನು ಈ ನಾಣ್ಯಗಳನ್ನು ಬೊಕ್ಕಸದಲ್ಲಿ ಶೇಖರಿಸಿ ಇಡುತ್ತಿದ್ದನು. ಇತರ ಕಛೇರಿಗೆ ಸಂಬಂಧಿಸಿದ ನಾಣ್ಯ ವ್ಯವಹಾರವನ್ನು ಈತನೇ ನೋಡಿಕೊಳ್ಳುತ್ತಿದ್ದನು. ಈ ಮೇಲಿನ ಕಛೇರಿಗಳನ್ನು ಹೊರತುಪಡಿಸಿ, ಟಪ್ಪಾಲು ಹಾಗೂ ಗುಪ್ತಚರ ಕಛೇರಿಗಳು ಸಹ ಇದ್ದವು. ಇದನ್ನು ದರೋಗ ಎಂಬ ಇನ್ನೊಬ್ಬ ಅಧಿಕಾರಿಯು ನೋಡಿಕೊಳ್ಳುತ್ತಿದ್ದನು. ಈ ರೀತಿಯ ಕಛೇರಿಗಳು ರಾಜಧಾನಿ ಹಾಗೂ ಅತಿ ಪ್ರಮುಖ ಪಟ್ಟಣದಲ್ಲಿ ಸ್ಥಳಾಕರ್ಷಿಸಲ್ಪಟ್ಟಿದ್ದವು. ಕಾರ್ಯೋಪಯೋಗಿ ಇಲಾಖೆ ಹೊಸ ಕಟ್ಟಡಗಳನ್ನು ಕಟ್ಟಿಸುವ, ದುರಸ್ಥಿ ಮಾಡಿಸುವ, ಧಾರ್ಮಿಕ ಕಟ್ಟಡಗಳ ಮೇಲ್ವಿಚಾರಣೆ ಮುಂತಾದವುಗಳನ್ನು ನೋಡಿಕೊಳ್ಳುತ್ತಿತ್ತು. ಕಿರನ್ ಬಿರಿಕ್ ಎಂದು ಕರೆಯಲ್ಪಡುವ ಗೋ ಇಲಾಖೆಯು ಚಿಕ್ಕದೇವರಾಯನಿಂದ ಆರಂಭಿಸಲ್ಪಟ್ಟು, ಅದನ್ನು ಟಿಪ್ಪು ಸುಲ್ತಾನನು ಮುಂದುವರೆಸಿದನು. ಈ ಇಲಾಖೆಯನ್ನು ಬೆಣ್ಣೆಯ ಕಛೇರಿ ಎಂತಲೂ ಕರೆಯಲಾಗಿದೆ. ಆರಂಭದಲ್ಲಿ ಇದನ್ನು ಅಮೃತ ಮಹಲ್ ಎಂದು ಕರೆಯಲಾಗಿದ್ದು, ನಂತರ ಇದನ್ನು ಕಿರನ್ ಬಿರಿಕ್ ಎಂದು ಕರೆಯಲಾಯಿತು. ಕುರಿಮಂದೆ, ಆಕಳುಗಳು, ಕೋಣ ಹಾಗೂ ಎಮ್ಮೆಗಳ ಸಂತಾನ ಅಭಿವೃದ್ಧಿ ಹಾಗೂ ಆಸ್ಥಾನಕ್ಕೆ ಬೇಕಾಗುವ ಹಾಲು, ಬೆಣ್ಣೆ, ತುಪ್ಪ ಮುಂತಾದವುಗಳನ್ನು ಸರಬರಾಜು ಮಾಡುವುದು ಈ ಕಛೇರಿಗಳ ಇದರ ಮುಖ್ಯ ಕರ್ತವ್ಯಗಳಾಗಿದ್ದವು.

ಕಛೇರಿಗಳ ಮೇಲ್ವಿಚಾರಣೆಗೆಂದು ನೇಮಕ ಮಾಡುವ ಅಧಿಕಾರಗಳ ಬಗ್ಗೆ ಟಿಪ್ಪು ಸುಲ್ತಾನನು ಬಹುಕಾಳಜಿ ವಹಿಸಿ, ಕೇವಲ ದಕ್ಷ ಅಧಿಕಾರಿಗಳನ್ನು ಮಾತ್ರ ನೇಮಿಸುತ್ತಿದ್ದನು. ಮೀರ್ ಸಾಧಿಕನು ಟಿಪ್ಪುವಿನ ಪ್ರಧಾನ ದಿವಾನನಾಗಿದ್ದನು. ನಂತರದ ಸ್ಥಾನವು ಪೂರ್ಣಯ್ಯರಿಗೆ ದೊರಕಿ ಅವರು ಮೀರ್ ಅಸಫ್ ಹಾಗೂ ಮಿರ್ ಮಿರಾನ್ ಕಛೇರಿಗಳನ್ನು ನೋಡಿಕೊಳ್ಳಬೇಕಾಗಿತ್ತು. ಪ್ರಾಂತ್ಯಗಳಲ್ಲಿ ಕಂದಾಯವನ್ನು ನೋಡಿಕೊಳ್ಳಲು ಅಫಫ್ ಗಳೆಂಬ ಅಧಿಕಾರಿಗಳಿದ್ದರು. ಇವರು ಹಣಕಾಸು ಹಾಗೂ ಕಂದಾಯದ ಬಗ್ಗೆ ನೋಡಿಕೊಳ್ಳಬೇಕಾಗಿತ್ತು. ಕೆಲವು ಸಲ ಹಿರಿಯ ಹಾಗೂ ಕಿರಿಯರೆಂಬ ಇಬ್ಬರು ಅಸಫ್‌ಗಳಿದ್ದರು. ಅಸಫ್‌ದಾರನಿಗೆ ಸಹಾಯಕನಿಗೆ ಶಿರಸ್ತೇದಾರ, ಕರಣಿಕ ಹಾಗೂ ಗುಮಾಸ್ತರಿರುತ್ತಿದ್ದರು. ವರ್ಷಕ್ಕೊಂದು ಬಾರಿ ಅಸಫ್‌ದಾರರು ಸುಲ್ತಾನನಿಗೆ ಲೆಕ್ಕಪತ್ರವನ್ನು ತೋರಿಸಲು ರಾಜಧಾನಿಗೆ ಬರಬೇಕಾಗಿತ್ತು.

ಲೆಕ್ಕಪತ್ರಗಳನ್ನು ಕನ್ನಡದಲ್ಲಿ ತರಫ್‌ದಾರರು ಸುಲ್ತಾನನಿಗೆ ಸಲ್ಲಿಸುತ್ತಿದ್ದರು. ತರಫ್‌ದಾರರು ಜಿಲ್ಲೆಗಳಲ್ಲಿ ಅಮಿಲ್‌ದಾರರ ಕೈಕೆಳಗೆ ಉಸ್ತುವಾರಿ ಕಾರ್ಯಗಳನ್ನು ನೋಡಿಕೊಳ್ಳುವವರಾಗಿದ್ದರು. ಈತನು ಲೆಕ್ಕಪತ್ರಗಳನ್ನು ಅಮಿರ್‌ದಾರನಿಗೆ ಕಳುಹಿಸಲು, ಆತನು ಈ ಲೆಕ್ಕಪತ್ರಗಳನ್ನು ಮರಾಠಿ ಹಾಗೂ ಪರ್ಷಿಯನ್ ಭಾಷೆಗಳಿಗೆ ಭಾಷಾಂತರಿಸುತ್ತಿದ್ದನು. ಶಿರಸ್ತೇದಾರನು ಈ ಎಲ್ಲಾ ಲೆಕ್ಕಪತ್ರಗಳ ಒಂದು ಪ್ರತಿಯನ್ನು ಅಸಫ್‌ದಾರನಿಗೆ ಕಳುಹಿಸಿ ಕೊಡಬೇಕಾಗಿತ್ತು.

ಟಿಪ್ಪುವಿನ ಕಂದಾಯ ವ್ಯವಸ್ಥೆಯನ್ನು ಸ್ವತಃ ಬ್ರಿಟೀಷರೇ ಹೊಗಳಿದ್ದಾರೆ. ಚಾಣಾಕ್ಷತನದಿಂದ ಆತನು ಕಂದಾಯ ಸುಧಾರಣೆಯನ್ನು ಮಾಡಿದನು. ಬಾಡಿಗೆದಾರರು ಹಾಗೂ ಅದರ ಉತ್ತರಾಧಿಕಾರಿಗಳು ರಾಜ್ಯಕ್ಕೆ ಬಾಡಿಗೆ ಕೊಡುವವರಿಗೆ ಟಿಪ್ಪು ಅವರ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಒಂದು ವೇಳೆ ಅವರು ಬಾಡಿಗೆಯನ್ನು ಕೊಡಲು ತಪ್ಪಿದರೆ ಅವರ ಭೂಮಿಯನ್ನು ವಶಪಡಿಸಿ ಇತರ ಬಾಡಿಗೆದಾರರಿಗೆ ಕೊಡಲಾಗುತ್ತಿತ್ತು. ರೈತರು ಒಂದು ವೇಳೆ ತಮ್ಮ ಭೂಮಿಯು ಒಣಭೂಮಿಯಾದರೆ ಅದರಿಂದ ಬರುವ ಆದಾಯದ ೧/೨ ಭಾಗವನ್ನು, ಫಲವತ್ತಾದ ಭೂಮಿಗೆ ರೈತರು ೧/೩ ಭಾಗವನ್ನು ರಾಜ್ಯಕ್ಕೆ ಧಾನ್ಯ ರೂಪದಲ್ಲಿ ಕೊಡಬೇಕಾಗಿತ್ತು. ಭೂಮಿಯ ಫಲವತ್ತತೆಗೆ ಅನುಗುಣವಾಗಿ ಭೂಮಿಯನ್ನು ವಿಂಗಡಿಸಿ, ಅದರ ಪ್ರಕಾರ ಕಂದಾಯವನ್ನು ನಿಗದಿಗೊಳಿಸಲಾಗುತ್ತಿತ್ತು. ಈತನು ವಾಣಿಜ್ಯ ಬೆಳೆಗಳಾದ ಭತ್ತ ಹಾಗೂ ಕಬ್ಬಿನ ಬೆಳೆಗಳಿಗೆ ಹೆಚ್ಚಿನ ಲಕ್ಷ್ಯವನ್ನು ಕೊಟ್ಟನು. ರೈತರು ರಾಜ್ಯಕ್ಕೆ ಕೊಡಮಾಡಿದ ದವಸ-ಧಾನ್ಯಗಳನ್ನು ರಾಜಧಾನಿಯ ಉಗ್ರಾಣದಲ್ಲಿ ಶೇಖರಿಸಿ ಇಡುತ್ತಿದ್ದರು. ಒಣಭೂಮಿಯ ಬಾಡಿಗೆಯು ಅರ್ಧರೂಪಾಯಿಗಿಂತ ಕಡಿಮೆ ಇದ್ದರೆ ಅಥವಾ ಒಂದು ಪಗೋಡ ಅಥವಾ ಮೂರು ರೂಪಾಯಿ ಮೀರದಂತೆ ಪ್ರತಿ ಎಕರೆಗೆ ನಿಗದಿಪಡಿಸಲಾಗಿತ್ತು. ಫಲವತ್ತಾದ ಭೂಮಿಯಾದರೆ ಅದರ ಬಾಡಿಗೆಯು ಒಣಭೂಮಿಯ ಬಾಡಿಗೆಗಿಂತ ನಾಲ್ಕು ಪಟ್ಟು ಅಧಿಕವಾಗಿತ್ತು. ಟಿಪ್ಪು ಸುಲ್ತಾನನು ರೈತರಿಗೆ ಹೆಚ್ಚೆಚ್ಚಾಗಿ ಒಣಭೂಮಿಯನ್ನು ಉಳಲು ಪ್ರೇರೇಪಿಸುತ್ತಿದ್ದನು. ಮಾತ್ರವಲ್ಲದೆ ವರ್ಷಕ್ಕೆ ಒಂದು ಸಲ ಭೂಮಿಯನ್ನು ಉಳಬೇಕೆಂದು ಕಟ್ಟಪ್ಪಣೆ ಮಾಡಿದನು.ಬಹುತೇಕ ರೈತರು ಆದಾಯವನ್ನು ಧಾನ್ಯರೂಪದಲ್ಲಿ ಕೊಟ್ಟರೆ, ಕೆನರಾದ ರೈತರು ಮಾತ್ರ ನಗದು ರೂಪದಲ್ಲಿ ಆದಾಯವನ್ನು ಸಲ್ಲಿಸಬೇಕಾಗಿತ್ತು. ಈ ಪದ್ಧತಿಯನ್ನು ಪ್ರತಿಯೊಬ್ಬರು ಹೊಗಳಿದ್ದು, ನಂತರ ಇದೇ ಪದ್ಧತಿಯನ್ನು ಬ್ರಿಟೀಷರು ಮುಂದುವರೆಸಿಕೊಂಡು ಹೋದರು. "ಟಿಪ್ಪುವಿನ ಕಂದಾಯ ಪದ್ಧತಿಯು ಅತೀ ಶ್ರೇಷ್ಠಮಟ್ಟದ್ದು" ಎಂದು ಸರ್ ಥಾಮಸ್ ಮನ್ರೋ ಮನಸಾರೆ ಹೊಗಳಿದ್ದನು. ಟಿಪ್ಪು ಸುಲ್ತಾನನು ರೈತರಿಗೆ ಬಂಜರು ಭೂಮಿಯನ್ನು ಧರ್ಮಾರ್ಥವಾಗಿ ಕೊಟ್ಟು, ಅವರು ಅದನ್ನು ಹದಮಾಡಿ ಬೆಳೆಯನ್ನು ಬೆಳೆಯಲು ಅನುಕೂಲ ಮಾಡಲು ಅವರನ್ನು ಹುರಿದುಂಬಿಸಿದನು. ಆರಂಭದಲ್ಲಿ ಅದು ಧರ್ಮಾರ್ಥವಾಗಿದ್ದು, ಕ್ರಮೇಣ

ನಿಗದಿಪಡಿಸಿದ ಬಾಡಿಗೆಯನ್ನು ರಾಜ್ಯಕ್ಕೆ ಸಲ್ಲಿಸಬೇಕಾಗಿತ್ತು. ಹತ್ತು ವರ್ಷಗಳಿಂದ ಬಂಜರಾಗಿ ಬಿದ್ದಿದ್ದ ಭೂಮಿಯನ್ನು ಸಹ ಇದೇ ಪದ್ಧತಿಗೆ ಧರ್ಮಾರ್ಥವಾಗಿ ಕೊಟ್ಟು, ನಂತರ ಬಾಡಿಗೆಯನ್ನು ನಿಗದಿಪಡಿಸಲಾಯಿತು. ಕೆರೆ, ಕಾಲುವೆ, ಬಾವಿಗಳನ್ನು ತೋಡಿ ರೈತರಿಗೆ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಡಲಾಯಿತು. ಕಬ್ಬು, ಭತ್ತ, ಗೋಧಿ, ಬಾರ್ಲಿ, ವಿಳ್ಯದೆಲೆ ಸಾಗುವಾನಿ, ಮಾವು, ಅಡಿಕೆ, ಗಂಧ ಮುಂತಾದವುಗಳನ್ನು ಬೆಳೆಸಲು ಹೆಚ್ಚಿನ ಆಸಕ್ತಿಯನ್ನು ವಹಿಸಲಾಯಿತು. ಯಾವ ರೈತರು ವೀಳ್ಯದೆಲೆ ಹಾಗೂ ಅಡಿಕೆಗಳನ್ನು ಬೆಳೆಯುತ್ತಾರೋ ಅವರಿಗೆ ರಾಜ್ಯ ಬೊಕ್ಕಸಕ್ಕೆ ಕಂದಾಯವನ್ನು ಸಲ್ಲಿಸುವಾಗ ಅನೇಕ ಸವಲತ್ತುಗಳನ್ನು ಕೊಡಲಾಗುತ್ತಿತ್ತು. ರೇಷ್ಮೆ ಕೈಗಾರಿಕೆ ಬೆಳೆಯಿತು. ಈತನು ಉದ್ಯಾನವನ ಪ್ರಿಯನಾಗಿದ್ದು ಶ್ರೀರಂಗಪಟ್ಟಣ ಹಾಗೂ ಬೆಂಗಳೂರಿನ ಉದ್ಯಾನವನಗಳು ಇದಕ್ಕೆ ಪ್ರಧಾನ ಸಾಕ್ಷಿಗಳಾಗಿವೆ. ಈತನು ಹತ್ತಿ, ನೀಲಿ, ಮಲ್ಬರಿ, ಮಾವು, ಕಿತ್ತಳೆ, ಸೇಬು ಮುಂತಾದವುಗಳನ್ನು ನೆಟ್ಟು ಅಭಿವೃದ್ಧಿಪಡಿಸಿದನು. ಕನ್ಯಾಕುಮಾರಿಯಿಂದ ಫೈನ್ ಹಾಗೂ ಓಕ್ ಗಿಡಗಳನ್ನು ತರಿಸಿ ಅದನ್ನು ತನ್ನ ಉದ್ಯಾನವನದಲ್ಲಿ ನೆಡಿಸಿದನು.

ಯಾವ ರೀತಿಯಲ್ಲೂ ರೈತರಿಗೆ ಕಷ್ಟಕೊಡಬಾರದು, ಅವರನ್ನು ಹಿಂಸಿಸಬಾರದು ಹಾಗೂ ಶೋಷಿಸಬಾರದೆಂದು ಅಮಿಲ್‌ದಾರರಿಗೆ ಕಟ್ಟಪ್ಪಣೆ ಕೊಟ್ಟನು. ಒಂದು ವೇಳೆ ಯಾರಾದರೂ ಈ ವಿಷಯದಲ್ಲಿ ತನ್ನ ಆಜ್ಞೆಯನ್ನು ಮೀರಿದರೆ, ಅಂಥವರನ್ನು ಕಠಿಣ ಶಿಕ್ಷೆಗೆ ಗುರಿಪಡಿಲಾಗುವುದು ಎಂದು ತಿಳಿಸಿದನು. ಇದು ರೈತರ ಮೇಲಿರುವ ಆತನ ಕಾಳಜಿಯನ್ನು ತಿಳಿಸುತ್ತದೆ. ಬಡ ರೈತರು ನೊಗ, ನೇಗಿಲು, ಎತ್ತುಗಳನ್ನು ಖರೀದಿಸಲು ಅವರಿಗೆ ತಕ್ಕವಿ ಸಾಲಗಳನ್ನು ಮಂಜೂರು ಮಾಡಿದನು. ಯಾವ ಸರಕಾರಿ ನೌಕರನು ಬಡ ರೈತರನ್ನು ಅಥವಾ ಬಾಡಿಗೆದಾರರನ್ನು ಅವರಿಗೆ ಸಂಬಳವನ್ನು ಕೊಡದೆ ತಮ್ಮ ಭೂಮಿಯಲ್ಲಿ ಧರ್ಮಾರ್ಥವಾಗಿ ದುಡಿಸಬಾರದೆಂಬ ಮುನ್ಸೂಚನೆಯನ್ನು ಕೊಟ್ಟನು. ರೈತರ ಹಕ್ಕುಗಳನ್ನು ರಕ್ಷಿಸಲಾಯಿತು. ಅಧಿಕಾರಿಗಳು ಕಂದಾಯವನ್ನು ವಸೂಲಿ ಮಾಡುವಾಗ ಯಾವ ಕಾರಣಕ್ಕಾಗಲಿ ರೈತರನ್ನು ಹಿಂಸಿಸುವಂತಿರಲಿಲ್ಲ. ಅವರು ತಮ್ಮ ಕಂದಾಯವನ್ನು ರಾಜ್ಯಕ್ಕೆ ಮೂರು ಕಂತುಗಳಲ್ಲಿ ಸಲ್ಲಿಸಬಹುದಾಗಿತ್ತು. ಯಾವನೇ ಅಧಿಕಾರಿಯಾಗಲೀ ರೈತರಿಂದ ತೆರಿಗೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಗದನ್ನು ಸ್ವೀಕರಿಸುವಂತಿರಲಿಲ್ಲ. ಒಂದು ವೇಳೆ ರೈತರು ಇದರ ಬಗ್ಗೆ ಅಧಿಕಾರಿಗಳಲ್ಲಿ ದೂರನ್ನು ಸಲ್ಲಿಸಿದರೆ ಅದರ ಬಗ್ಗೆ ಕೂಲಂಕಷವಾಗಿ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಕಠಿಣ ದಂಡನೆಗೆ ಗುರಿಪಡಿಸಲಾಗುತ್ತಿತ್ತು. ಟಿಪ್ಪು ಮಧ್ಯವರ್ತಿಗಳನ್ನು ವಜಾಗೊಳಿಸಿದನು. ಮಧ್ಯವರ್ತಿಗಳು ಜನರಿಂದ ಶುಲ್ಕ (ಕಮಿಷನ್) ಪಡೆದು ರಾಜ್ಯ ಬೊಕ್ಕಸಕ್ಕೆ ಸಲ್ಲಿಸುತ್ತಿದ್ದರು. ಅಧಿಕಾರಿಗಳಿಗೆ ಕೊಡಮಾಡಿದ್ದ ಜಾಗೀರುಗಳನ್ನು ನಿರ್ಮೂಲನೆಗೊಳಿಸಿ ನಗದು

ಸಂಬಳ ರೂಪದಲ್ಲಿ ಕೊಡಲಾಗುತ್ತಿತ್ತು. ಕ್ರಿ.ಶ.೧೭೭೩ರಲ್ಲಿ ಹೈದರನು ಮಲಬಾರನ್ನು ವಶಪಡಿಸಿ ಅಲ್ಲಿ ಕಂದಾಯ ವಸೂಲಿ ಪದ್ಧತಿಯನ್ನು ಮಹತ್ತರವಾದ ಬದಲಾವಣೆಗಳನ್ನು ಮಾಡಲು ಇಚ್ಛಿಸದರೂ, ಇದರಿಂದ ಆತನಿಗೆ ಯಶಸ್ಸು ದೊರಕಲಿಲ್ಲ. ಆದುದರಿಂದ ಟಿಪ್ಪು ಕಂದಾಯ ಪದ್ಧತಿಯ ಕೊರತೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅದನ್ನು ಸುಧಾರಿಸಲು ಮುಂದಾದನು. ರೈತರಿಗೆ ಇಲ್ಲಿನ ಭೂಮಿಯನ್ನು ಹಂಚಿ ಸಮನಾಗಿ ೨೦% ತೆರಿಗೆಯನ್ನು ನಿಗದಿಪಡಿಸಿನು. ಹರ್ಷದ್ ಬೇಗ್‌ಖಾನ್‌ನನ್ನು ಮಲಬಾರಿನ ಗವರ್ನರ್‌ನ್ನಾಗಿ ನೇಮಿಸಿ ಆತ ಟಿಪ್ಪುವಿನ ಸಲಹೆಯಂತೆ ಕಂದಾಯ ಪರಿಸ್ಥಿತಿಯನ್ನು ಸುಧಾರಿಸಿದನು. ಭೂಮಿಯನ್ನು ಅಳತೆ ಮಾಡಿ ಅದನ್ನು ರೈತರಿಗೆ ಸಮನಾಗಿ ಹಂಚಿ, ಫಲವತ್ತತೆಗೆ ತಕ್ಕಂತೆ ಕಂದಾಯವನ್ನು ನಿಗದಿಪಡಿಸಿದನು. ಒಣಭೂಮಿಯ ಮೇಲೆ ೧೦% ತೆರಿಗೆಯೆಂದೂ, ಫಲವತ್ತಾದ ನೀರಿನ ಪಸೆಯಿರುವ ಭೂಮಿಯ ಮೇಲೆ ೨೦% ತೆರಿಗೆಯೆಂದು ನಿಗದಿಪಡಿಸಲಾಯಿತು. ವಾಣಿಜ್ಯ ಬೆಳೆಗಳಾದ ಗೇರು, ಏಲಕ್ಕಿ, ಲವಂಗ ಹಾಗೂ ತರಕಾರಿಗಳ ಮೇಲಿನ ತೆರಿಗೆಯನ್ನು ಮನ್ನಾ ಮಾಡಲಾಯಿತು. ಈ ಎಲ್ಲಾ ಸುಧಾರಣೆಗಳಿಂದ ಟಿಪ್ಪು ತನ್ನ ರಾಜ್ಯದ ಆದಾಯವನ್ನು ಹೆಚ್ಚಿಸಿದನು.

ರಾಜ್ಯ ಸಮೃದ್ಧಿಗೋಸ್ಕರ ವ್ಯಾಪಾರ ಹಾಗೂ ಕೈಗಾರಿಕೆಗಳು ಅತಿ ಅವಶ್ಯಕ ಎಂದು ಆತನು ಮನಗಂಡನು. ಈತನು ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿ, ಇದರ ಮುಖಾಂತರ ವ್ಯಾಪಾರವನ್ನು ಅಭಿವೃದ್ಧಿಗೊಳಿಸಿದನು. ಕ್ರಿ.ಶ.೧೭೮೯ರಲ್ಲಿ ಮಂದಿ ಹಾಗೂ ಮುಂಡ್ರಾದಲ್ಲಿ ಕಾರ್ಖಾನೆ (ಫ್ಯಾಕ್ಟರಿ) ಗಳನ್ನು ಆರಂಭಿಸಿ ಕಛ್ ಹಾಗೂ ಮೈಸೂರಿನೊಂದಿಗೆ ನಿಕಟವಾದ ವ್ಯಾಪಾರ ಸಂಪರ್ಕವನ್ನು ಅಭಿವೃದ್ಧಿಗೊಳಿಸಿದನು. ಅವುಗಳ ಸುರಕ್ಷತೆಗೋಸ್ಕರ ವಿಶೇಷ ಅಧಿಕಾರಿಗಳನ್ನು ಸಹ ನೇಮಿಸಿದನು. ಕ್ರಿ.ಶ.೧೭೮೫ರಲ್ಲಿ ಜೆಡ್ಡಾ, ಓರ್ಮುಜ್ ಹಾಗೂ ಮಸ್ಕಟ್‌ನಲ್ಲಿ ಸಹ ಮೂರು ಕಾರ್ಖಾನೆಗಳನ್ನು ಸ್ಥಾಪಿಸಿದನು. ಇದರಿಂದ ಪರ್ಷಿಯನ್ ಕೊಲ್ಲಿಯೊಡನೆ ನಿಕಟವಾದ ವ್ಯಾಪಾರವನ್ನು ಹೊಂದಲು ಸಾಧ್ಯವಾಯಿತು. ಅರಶಿನ ಬೀಜಗಳು, ರೇಷ್ಮೆ ಹುಳುಗಳು, ಅಶ್ವಗಳು, ಹವಳಗಳು, ರಂಜಕ, ತಾಮ್ರ, ಖರ್ಜೂರ, ಚೈನಾ ಪಿಂಗಾಣಿಗಳು, ಹರಳುಪ್ಪು ಮುಂತಾದವುಗಳನ್ನು ಆಮದುಮಾಡಿಕೊಂಡರೆ, ಕಟ್ಟಿಗೆ, ಗಂಧ, ರೇಷ್ಮೆ, ಏಲಕ್ಕಿ, ಕಾಳುಮೆಣಸು, ಅಕ್ಕಿ, ಹಸ್ತಿದಂತ, ಬಟ್ಟೆಗಳನ್ನು ಪರ್ಷಿಯನ್ ಕೊಲ್ಲಿ ರಾಷ್ಟ್ರಗಳಿಗೆ ರಫ್ತು ಮಾಡಲಾಯಿತು. ರೇಷ್ಮೆ ಹುಳುಗಳನ್ನು ರಾಜ್ಯಕ್ಕೆ ತರಿಸಿದ್ದರಿಂದ ರೇಷ್ಮೆ ಕೈಗಾರಿಕೆಯು ಬೆಳೆಯಲು ಸಾಧ್ಯವಾಯಿತು. ಮದ್ದುಗುಂಡು ತಯಾರಿಸಲು ರಂಜಕವು ಉಪಯುಕ್ತವಾಯಿತು. ಪರ್ಷಿಯಾದಲ್ಲಿ ಹಡಗು ಕಟ್ಟಲು ಅಧಿಕ ಪ್ರಮಾಣದ ಉತ್ತಮ ಮರ ಬೇಕಾಗಿದ್ದರಿಂದ ಸಾಗುವಾನಿಗೆ ಅಲ್ಲಿ ಬೇಡಿಕೆ ಹೆಚ್ಚಿ ಅದರ ವ್ಯಾಪಾರ ಬೆಳೆಯಿತು. ಪರ್ಷಿಯಾದಲ್ಲಿ ರೇಷ್ಮೆ ಬಟ್ಟೆಗೆ

ಸಹ ಅಧಿಕವಾದ ಬೇಡಿಕೆಯಿತ್ತು. ಮಸ್ಕಟ್‌ನ್ನು ಟಿಪ್ಪು ಮಹತ್ವದ ವ್ಯಾಪಾರ ಕೇಂದ್ರವನ್ನಾಗಿ ಮಾಡಿ ಇದನ್ನು ನೋಡಿಕೊಳ್ಳಲು ವಕೀಲ್ ಎಂಬ ವಿಶೇಷ ಅಧಿಕಾರಿಯನ್ನು ನೇಮಿಸಿದನು. ಟರ್ಕಿ ಹಾಗೂ ಇರಾನಿನಲ್ಲಿ ವ್ಯಾಪಾರವು ಅಭಿವೃದ್ಧಿ ಹೊಂದಲು ಬಸ್ರಾದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿದನು. ಚೀನಾ ಹಾಗೂ ಫ್ರಾನ್ಸಿನೊಂದಿಗೆ ಸಹ ಬಿರುಸಿನಿಂದ ವ್ಯಾಪಾರ ಬೆಳೆಯಿತು. ಪೆರು ದೇಶದೊಂದಿಗೆ ವ್ಯಾಪಾರ ಸಂಪರ್ಕವನ್ನು ಇಟ್ಟುಕೊಳ್ಳಲಾಯಿತು. ಮೈಸೂರು ರಾಜ್ಯದ ಮುಖ್ಯ ಬಂದರುಗಳಾದ ಕಲ್ಲಿಕೋಟೆ ಹಾಗೂ ಮಂಗಳೂರಿಗೆ ಅರ್ಮೇನಿಯಾದ ವ್ಯಾಪಾರಸ್ಥರು ಹಡಗುಗಳಲ್ಲಿ ಬರಲು ಪರವಾನಿಗೆಯನ್ನು ಕೊಡಲಾಯಿತು. ಖಾಸಗಿ ವ್ಯಾಪಾರಸ್ಥರು ಸಹ ಹಡಗುಗಳಲ್ಲಿ ಬರಲು ಅವರಿಗೆ ಪರವಾನಿಗೆಯನ್ನು ಕೊಡಲಾಯಿತು. ಖಾಸಗಿ ವ್ಯಾಪಾರಸ್ಥರು ರಾಜ್ಯಕ್ಕೆ ಬಂದು ನೆಲೆಸಿ ವ್ಯಾಪಾರ ಮಾಡಲು ಅವರನ್ನು ಹುರಿದುಂಬಿಸಲಾಯಿತು. ಫ್ರಾನ್ಸ್, ಟರ್ಕಿ, ಇರಾನ್, ಪೆರು ದೇಶಗಳಲ್ಲಿ ವಾಣಿಜ್ಯ ವ್ಯಾಪಾರವನ್ನು ಅಭಿವೃದ್ಧಿಗೊಳಸಲಾಯಿತು.

ಟಿಪ್ಪು ಒಂದು ಕಡೆ ಖಾಸಗಿ ವ್ಯಾಪಾರಕ್ಕೆ ಪ್ರೋತ್ಸಾಹ ಕೊಟ್ಟರೆ, ಇನ್ನೊಂದು ಕಡೆಯಲ್ಲಿ ವ್ಯಾಪಾರವನ್ನು ಸಂಪೂರ್ಣ ರಾಜ್ಯದ ಸ್ವಾಮ್ಯಕ್ಕೆ ಒಳಪಡಿಸಲಾಯಿತು ಮುಖ್ಯವಾಗಿ ಬಂಗಾರದ ಹಟ್ಟಿಗಳು ಮತ್ತು ಇತರ ಬೆಲೆಬಾಳುವ ಖನಿಜಗಳು, ತಂಬಾಕು, ಶ್ರೀಗಂಧ, ಆನೆಗಳು, ತೇಗದಮರ, ತೆಂಗಿನಕಾಯಿ ಹಾಗೂ ಕರಿಮೆಣಸು ಸಂಪೂರ್ಣವಾಗಿ ಸರಕಾರದ ಹತೋಟಿಯಲ್ಲಿತ್ತು. ಈತನು ಪ್ರತಿಯೊಂದು ತಾಲೂಕಿನಲ್ಲಿ ಬಂಗಾರ ಮತ್ತು ಬೆಳ್ಳಿಯ ವ್ಯಾಪಾರಕ್ಕೋಸ್ಕರ ಅಂಗಡಿಗಳನ್ನು ತೆರೆದು, ಅದನ್ನು ನೋಡಿಕೊಳ್ಳಲು ಶ್ರೋಫ್ ಮತ್ತು ಲೆಕ್ಕಿಗನನ್ನು ನೇಮಿಸಿದ್ದನು. ಇವುಗಳನ್ನು ಮಾತ್ರವಲ್ಲದೆ ಬ್ಯಾಂಕಿಂಗ್ ಹಾಗೂ ಹಣಕಾಸಿನ ವ್ಯವಹಾರಕ್ಕೆ ದುಖಾನ್ ಅಥವಾ ಅಂಗಡಿಗಳನ್ನು ತೆರದು ಇಲ್ಲಿ ಯಾರೂ ಬೇಕಾದರೂ ತಮ್ಮ ಹಣವನ್ನು ಅದಲು ಬದಲು (Exchange) ಮಾಡಿಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಡಲಾಯಿತು. ಬಂಗಾರ ಮತ್ತು ಬೆಳ್ಳಿಗಳನ್ನು ಖರೀದಿಸಿಕೊಳ್ಳಲು ಅವಕಾಶವಿತ್ತು. ಟಿಪ್ಪು ತನ್ನ ರಾಜ್ಯದಲ್ಲಿ ಜನತೆಯಿಂದ ಬಡ್ಡಿ ರೂಪದಲ್ಲಿ ಹಣವನ್ನು ತೆಗೆದುಕೊಂಡರೆ ಅಂಥವರನ್ನು ಕಠಿಣ ಶಿಕ್ಷೆಗೆ ಒಳಪಡಿಸುತ್ತಿದ್ದನು. ಟಿಪ್ಪುವಿನ ಪ್ರಮುಖವಾದ ಆರ್ಥಿಕ ಸುಧಾರಣೆಯೆಂದರೆ ಬಡವರ ಉದ್ಧಾರ. ತಾನು ಹೊರಡಿಸಿದ ನಗರಿಹಣವು ಜನಪ್ರಿಯತೆಯನ್ನು ಕಳೆದುಕೊಳ್ಳಲು ಟಿಪ್ಪು ಅದನ್ನು ರದ್ದುಗೊಳಿಸಿ ಆ ಸ್ಥಳದಲ್ಲಿ ಪಗೋಡಗಳನ್ನು ಚಲಾವಣೆಗೆ ತಂದನು. ಸರಕಾರದಿಂದ ಆದಷ್ಟು ಸರಂಜಾಮುಗಳನ್ನು ಪಡೆದುಕೊಳ್ಳಲು ಜನರಿಗೆ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟನು. ತನ್ನ ಪ್ರಜೆಗಳು ರೂಪಾಯಿ ೫೦ರಿಂದ ೫೦೦೦ರವರೆಗೆ ಷೇರುಗಳನ್ನು ಖರೀದಿಸಿ, ಹಣ ಉಳಿತಾಯ ಮಾಡಲು ಆಕರ್ಷಕ ಯೋಜನೆಯೊಂದನ್ನು ರೂಪಿಸಿದನು. ಯಾರು ರೂಪಾಯಿ ೫ ರಿಂದ ೫೦೦೦ರವರೆಗೆ ಷೇರುಗಳನ್ನು ಖರೀದಿಸಿ

ಹಣವನ್ನು ಜಮಾ ಮಾಡುತ್ತಾರೋ ಅಂಥವರಿಗೆ ವರ್ಷದ ಕೊನೆಯಲ್ಲಿ ಶೇಕಡ ೫೦ರಷ್ಟು ಲಾಭದ ಹಣವನ್ನು ಕೊಡಲಾಗುತ್ತಿತ್ತು. ಯಾವಾಗ ಬೇಕಾದರೂ ವರ್ಷ ಆರಂಭಕ್ಕೆ, ಮಧ್ಯಭಾಗದಲ್ಲಿ ತಾವು ಖರೀದಿಸಿದ ಷೇರುಗಳನ್ನು ಮಾರಬಹುದಾಗಿತ್ತು. ಮಾತ್ರವಲ್ಲದೆ ಅಲ್ಲಿಯವರೆಗೆ ಎಷ್ಟು ಲಾಭ ದೊರಕುತ್ತಿತ್ತೋ ಅದನ್ನು ಕೊಡಲಾಗುತ್ತಿತ್ತು.

ಟಿಪ್ಪು ಮುಖ್ಯವಾಗಿ ಬಟ್ಟೆಗಳು, ಶಾಲುಗಳು ಮತ್ತು ಬಂಗಾರದ ಕುಸುರಿ ಕೆಲಸ ಮಾಡಿದ ಬಟ್ಟೆಗಳನ್ನು ಸರಕಾರದ ಏಕಸ್ವಾಮ್ಯಕ್ಕೆ ಒಳಪಡಿಸಿದ್ದನು. ಈತನು ತನ್ನ ರಾಜ್ಯದಿಂದ ಯಾವುದೇ ರೀತಿಯ ನೂಲಾಗಲೀ ಅಥವಾ ಬಟ್ಟೆ-ಬರೆಯಾಗಲೀ ಇತರೆ ರಾಜ್ಯಗಳಿಗೆ ಹೋಗದಂತೆ ಎಚ್ಚರ ವಹಿಸಿದ್ದನು. ಈತನು ಹದಿನೇಳು ವಿದೇಶಿ ರಾಷ್ಟ್ರಗಳಲ್ಲಿ ಮತ್ತು ಮೈಸೂರು ರಾಜ್ಯದ ಮೂವತ್ತು ಸ್ಥಳಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಇದನ್ನು ರೋಯಲ್ ಬೋರ್ಡ್ ಆಫ್ ನೈನ್ ಕಮೀಷನ್ನರ್ಸ್ ಆಫ್ ಟ್ರೇಡ್ ಎಂಬ ಸರಕಾರ ಸಂಘವನ್ನು ರಚಿಸಿ, ಅದರ ಮೂಲಕ ಆಮದುಗಳನ್ನು ನಿಯಂತ್ರಿಸುತ್ತಿದ್ದನು. ಈತನು ಸರಕಾರದ ಎಲ್ಲಾ ಸರಂಜಾಮುಗಳನ್ನು ಸರಕಾರದ ಮುದ್ರೆಯಿರುವ ಎತ್ತುಗಳ ಮೂಲಕ ಮಾತ್ರ ಸಾಗಿಸುವಂತೆ ಕಟ್ಟಾಜ್ಞೆ ಮಾಡಿದ್ದನು.

ಟಿಪ್ಪು ಸರಕಾರದ ಏಕಸ್ವಾಮ್ಯಕ್ಕೆ ಬೃಹತ್ ಕಾರ್ಖಾನೆಗಳನ್ನು ಒಳಪಡಿಸಿದನು. ಈತನು ಟರ್ಕಿ ಮತ್ತು ಫ್ರಾನ್ಸ್ ದೇಶದಿಂದ ಕುಶಲ ಕಸುಬುದಾರರನ್ನು ಆಮಂತ್ರಿಸಿ ಶ್ರೀರಂಗಪಟ್ಟಣ, ಚಿತ್ರದುರ್ಗ, ಬೆಂಗಳೂರು ಮತ್ತು ಬಿದನೂರುಗಳಲ್ಲಿ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಿ, ಇವರನ್ನು ಅಲ್ಲಿ ನೇಮಿಸಿದನು. ಕತ್ತರಿ, ಚೂರಿ, ಕೋವಿ, ತುಪಾಕಿ, ಕಾಗದ, ಕೈಗಡಿಯಾರ ಮುಂತಾದವುಗಳನ್ನು ಈ ಕಾರ್ಖಾನೆಯಲ್ಲಿ ಉತ್ಪಾದಿಸುವಂತೆ ನೋಡಿಕೊಂಡನು. ಮೈಸೂರು ರಾಜ್ಯದಲ್ಲಿ ಕೋವಿ ಮದ್ದು ತಯಾರಿಸುವ ಕಾರ್ಖಾನೆಯು ಆರಂಭಿಸಲ್ಪಟ್ಟಿತು. ಚನ್ನಪಟ್ಟಣ, ಚಿಕ್ಕಬಳ್ಳಾಪುರ ಮತ್ತು ದೇವನಹಳ್ಳಿಗಳಲ್ಲಿ ಸಕ್ಕರೆ ಹಾಗೂ ಸಕ್ಕರೆ ಕ್ಯಾಂಡಿಗಳು ತಯಾರಾದವು.

ಟಿಪ್ಪುವು ಕೃಷಿಕರಿಂದ ಕಂದಾಯ ವಸೂಲಿ ಮಾಡುವ ಮಧ್ಯವರ್ತಿಗಳಾದ 'ಸಾಹುಕಾರ' ಪದ್ಧತಿಯನ್ನು ರದ್ದುಗೊಳಿಸಿದನು. ರೈತನೆ ಖುದ್ದಾಗಿ ಬಂದು ಕಂದಾಯವನ್ನು ರಾಜ್ಯದ ಬೊಕ್ಕಸಕ್ಕೆ ತಲುಪಿಸುವಂತೆ ಮಾಡಿದನು. ವಾರ್ಷಿಕ ಸರ್ವೇ ಮಾಡುವ ಪದ್ಧತಿ ಜಾರಿಗೆ ಬಂದಿತು. ಅಮಲ್‌ದಾರರು ಮಾತ್ರ ರೈತರಿಂದ ಕಂದಾಯವನ್ನು ವಸೂಲಿ ಮಾಡಬಹುದಾಗಿತ್ತು. ಇವರು ರೈತರಿಂದ ಯಾವುದೇ ಹೆಚ್ಚುವರಿ ಕಂದಾಯವನ್ನು ವಸೂಲಿ ಮಾಡಿ ಜನರನ್ನು ಹಿಂಸಿಸುತ್ತಾರೋ ಅಂಥವರಿಗೆ ಕಠಿಣ ಶಿಕ್ಷೆಯನ್ನು ಕೊಡಲಾಗುತ್ತಿತ್ತು. ಸರಕಾರದ ಅಧಿಕಾರಿಗಳು ಖಾಸಗಿ ವ್ಯಾಪಾರ ಮಾಡುವುದನ್ನು ನಿಷೇಧಿಸಿದನು. ಕಂದಾಯವನ್ನು ವಸೂಲಿ ಮಾಡುವ ಅಧಿಕಾರಿಗಳಿಗೆ ತಾವು ವಸೂಲಿ ಮಾಡಿದ ಕಂದಾಯದ ಶೇ.೨.೫ ಹಣವನ್ನು ಕಮೀಷನ್ನಿನ

ರೂಪದಲ್ಲಿ ಕೊಡಲಾಗುತ್ತಿತ್ತು. ಟಿಪ್ಪುವಿನ ಕಂದಾಯ ಪದ್ಧತಿಯು ಎಷ್ಟು ಉತ್ತಮವಾಗಿತ್ತೆಂದರೆ ಇದನ್ನು ಬ್ರಿಟೀಷರು ಸಹ ಹೊಗಳಿದ್ದಾರೆ.

ಈ ರೀತಿ ತನ್ನ ರಾಜ್ಯದಲ್ಲಿ ಟಿಪ್ಪು ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟನು. ಈತನ ಆಡಳಿತವನ್ನು ಬ್ರಿಟಿಷ್ ಅಧಿಕಾರಿಗಳಾದ ಮನ್ರೋ ಮತ್ತು ಎಲ್ಫಿನ್‌ಸ್ಟನ್‌ರು ಹೊಗಳಿದ್ದಾರೆ. ಈತನ ಆಳ್ವಿಕೆಯಲ್ಲಿ ಪ್ರಜೆಗಳು ಕ್ಷೇಮ ಮತ್ತು ಸಂತೋಷದಿಂದ ಇದ್ದರು. ಲಾರ್ಡ್ ಕಾರ್ನ್‌ವಾಲೀಸನ ನಂತರ ಬಂದ ಗವರ್ನರ್ ಜನರಲ್‌ನಾದ ಸರ್ ಜೋನ್ ಷೋರ್‌ರ ಪ್ರಕಾರ "ಟಿಪ್ಪುವಿನ ರಾಜ್ಯದಲ್ಲಿ ರೈತರು ಸಂತೋಷದಿಂದ ಇದ್ದರು. ಅವರ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸಲಾಗುತ್ತಿತ್ತು. ಅವರ ಕಷ್ಟದ ದುಡಿಮೆಗೆ ಸರಿಯಾದ ಪರಿಹಾರವು ಧನರೂಪದಲ್ಲಿ, ಬಹುಮಾನ ರೂಪದಲ್ಲಿ ದೊರಕುತ್ತಿತ್ತು. ಟಿಪ್ಪು ವ್ಯಾಪಾರ, ವಾಣಿಜ್ಯ ಕೈಗಾರಿಕೆಗಳಿಗೆ ಕೊಟ್ಟ ಸಹಕಾರ, ಪ್ರೋತ್ಸಾಹವನ್ನು ಭಾರತದ ಯಾವುದೇ ಒಬ್ಬ ಅರಸನು ಕೊಟ್ಟಿಲ್ಲ" ಎಂದು ಹೇಳಿದ್ದಾನೆ.

ಟಿಪ್ಪುವನ್ನು ಈಗಲೂ ಭಾರತದ ಇತಿಹಾಸದಲ್ಲಿ ಪ್ರಸಿದ್ಧ ಸೇನಾನಿ ಎಂದು ಕೊಂಡಾಡುತ್ತಾರೆ. ಆತನ ಸೈನ್ಯವು ನಿಜಾಮ ಹಾಗೂ ಮರಾಠರ ಸೈನ್ಯಗಳಿಗಿಂತ ಎಷ್ಟೋ ಉತ್ತಮವಾಗಿತ್ತು. ಸೈನ್ಯವು ಬಲಿಷ್ಠವಾಗಿದ್ದು, ಶಿಸ್ತಿಗೆ ಹೆಸರಾಗಿದ್ದು ಅಚ್ಚುಕಟ್ಟಾಗಿದ್ದು, ಉತ್ತಮ ಸಂಘಟನೆಯಿಂದ ಕೂಡಿತ್ತು. ಸೈನ್ಯವನ್ನು ಕಂಡು ಸ್ವತಃ ಕ್ಯಾಂಪ್‌ಬೆಲ್ ಹಾಗೂ ಮ್ಯಾಕ್ ಆಯೋಡ್‌ರವರು ಹೊಗಳಿದ್ದಾರೆ. ಮದ್ದುಗುಂಡಿನ ಸೈನಿಕ ಶಾಖೆಯನ್ನು ಫ್ರೆಂಚರು ಬಹುವಾಗಿ ಪ್ರಶಂಸಿಸಿದ್ದಾರೆ. ಸೈನ್ಯವು ಎಷ್ಟು ಪರಿಣಿತಿಯನ್ನು ಶಿಸ್ತನ್ನು ಹೊಂದಿತ್ತೆಂದರೆ ನಿಜಾಮನು ಹಾಗೂ ಮರಾಠರು ಸ್ವತಃ ಇದನ್ನು ಕಂಡು ಮೆಚ್ಚಿದ್ದಾರೆ.

ಟಿಪ್ಪುವಿನ ಸೈನ್ಯದಲ್ಲಿ ಎರಡು ವಿಧಗಳಿದ್ದವು. ೧) ಖಾಯಂ ಸೈನ್ಯ ೨) ಅವಶ್ಯಕತೆಯಿದ್ದಾಗ ಬೇಕಾಗುವ ಸಹಾಯ ಸೈನ್ಯ. ಸಹಾಯ ಸೈನ್ಯ ಈತನಿಗೆ ಖಾಯಂ ಸೈನ್ಯಕ್ಕಿಂತ ಹೆಚ್ಚಿನ ಉಪಯೋಗವಾಗುತ್ತಿತ್ತು. ಇದರಲ್ಲಿನ ಸೈನಿಕರು ಹೆಚ್ಚಿನ ತರಬೇತಿಯನ್ನು ಪಡೆದವರಾಗಿದ್ದು, ಹೆಚ್ಚಿನ ಮಾಹಿತಿಯುಳ್ಳವರಾಗಿದ್ದು, ಯಾವ ಸಂದರ್ಭದಲ್ಲೂ, ಯಾವ ಅಪಾಯದಲ್ಲೂ ಹೆದರದೆ ಎಲ್ಲಿಗೆ ಬೇಕಾದರೂ ಹೋಗಲು ತಯಾರಿದ್ದರು. ತಮ್ಮ ಶತ್ರುಗಳನ್ನು ಎದುರಿಸುವಲ್ಲಿ ಹೆಚ್ಚಿನ ಧೈರ್ಯಶಾಲಿಗಳೂ, ಬಲವಂತರೂ ಆಗಿದ್ದರು. ಖಾಯಂ ಸೈನಿಕರು ಖಡ್ಗ ಹಾಗೂ ಗುರಾಣಿಗಳನ್ನು ಹಿಡಿದುಕೊಂಡು ಹೋರಾಡುತ್ತಿದ್ದರೆ, ಸಹಾಯಕ ಸೈನಿಕರು ಪರಾಕ್ರಮಶಾಲಿಗಳೂ, ಕೆಚ್ಚೆದೆಯ ವೀರರೂ ಆಗಿದ್ದರು. ಕಾಲಾಳುಗಳು ಈಟಿ, ಗುರಾಣಿ, ಖಡ್ಗ ಕೋವಿಗಳನ್ನು ಯುರೋಪಿಯನ್ ಮಾದರಿಯಲ್ಲಿ ಉಪಯೋಗಿಸಲು ಸಮರ್ಥರಿದ್ದರು. ಈತನ

ಕಾಲಾಳು ಸೈನ್ಯವು ಅಚ್ಚುಕಟ್ಟಾಗಿದ್ದು ವಿಶೇಷವಾದ ತರಬೇತಿಯನ್ನು ಪಡೆದು ಶಿಸ್ತಿಗೆ ಹೆಸರುವಾಸಿಯಾಗಿತ್ತು. ಈತನು ಶಿಸ್ತಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದನು. ಯುದ್ಧ ಮಾಡುವಾಗ ಯಾವ ಸೈನಿಕನು ರಣರಂಗದಿಂದ ಓಡುವಂತಿಲ್ಲ ಹಾಗೂ ತನ್ನಸೈನ್ಯಕ್ಕೆ ಮೋಸ ಮಾಡುವಂತಿಲ್ಲ. ಅಂಥವರು ಕಂಡುಬಂದರೆ ಕಠಿಣ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಈತನು ತನ್ನ ರಾಜಧಾನಿಯ ಸುರಕ್ಷತೆಗೋಸ್ಕರ ಸದಾ ಒಂದು ಸೈನ್ಯವನ್ನು ಅಲ್ಲಿಯೇ ಖಾಯಂ ಆಗಿ ಇಟ್ಟುಕೊಂಡಿದ್ದನು. ದಕ್ಷರಾದವರನ್ನ ಮಾತ್ರ ಸೈನ್ಯಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು.

ಟಿಪ್ಪುವಿನ ಸೈನಿಕ ವ್ಯವಸ್ಥೆಯು ಅಚ್ಚುಕಟ್ಟಾಗಿತ್ತು. ಕುಶಾನ್ ವಿಭಾಗದ ಮುಖ್ಯಸ್ಥನಾದ ಸಿಫಾದಾರನು ಸೈನ್ಯದ ಅಧಿಕಾರಿಗಳ ಗುಣ, ನಡತೆ, ಅವರ ಸ್ವಭಾವ ಹಾಗೂ ಸೈನಿಕರ ಚಲನವಲನ ಮುಂತಾದವುಗಳ ಬಗ್ಗೆ ನಿಗಾ ವಹಿಸಬೇಕಾಗಿತ್ತು. ಸೈನಿಕರನ್ನು ಶಿಕ್ಷಿಸುವ ಅಥವಾ ಅವರಿಗೆ ಬಡ್ತಿಕೊಡುವ ಸಂಪೂರ್ಣ ಸ್ವಾತಂತ್ರ್ಯವನ್ನು ಆತನು ಹೊಂದಿದ್ದನು. ಒಂದು ವೇಳೆ ಆತನು ತಪ್ಪು ಮಾಡಿದರೆ ಕೋರ್ಟ್ ಮಾರ್ಷಲ್‌ನಲ್ಲಿ ಕೂಲಂಕಷವಾಗಿ ತನಿಖೆಯನ್ನು ಮಾಡಲಾಗುತ್ತಿತ್ತು. ಆದರೆ ಈ ವಿಷಯವನ್ನು ಮಾತ್ರ ಸುಲ್ತಾನನಿಗೆ ತಿಳಿಸಬೇಕಾಗಿತ್ತು. ಸೈನಿಕರ ಸ್ಥಿತಿ-ಗತಿಗಳನ್ನು ಆಗಾಗ್ಗೆ ಹೋಗಿ ನೋಡಿ ವಿಚಾರಿಸುವುದು, ಅವರ ಹಾಜರಿಯನ್ನು ಪರಿಶೀಲಿಸುವುದು, ಅದರ ಬಗ್ಗೆ ವರದಿಯನ್ನು ತಯಾರಿಸಿ ಸುಲ್ತಾನನಿಗೆ ಕಳುಹಿಸಬೇಕಾಗಿತ್ತು. ಸಿಫಾದರ್ ಹಾಗೂ ಭಕ್ಷಿಯರು ಮುಖ್ಯವಾಗಿ ಸೈನಿಕರಿಗೆ ಕೊಡಲಾಗುತ್ತಿದ್ದ ಆಯುಧಗಳು ಅವುಗಳು ಸರಿಯಾದ ರೀತಿಯಲ್ಲಿ ಇವೆಯೇ ಎಂಬುದನ್ನು ಸಹ ತಿಳಿದುಕೊಳ್ಳಬೇಕಾಗಿತ್ತು. ಭಕ್ಷಿಯು ಸೈನಿಕರ ಸಂಬಳದ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿತ್ತು. ಸೈನಿಕರ ತರಬೇತಿ, ವ್ಯಾಯಾಮ ಮುಂತಾದವುಗಳ ಉಸ್ತುವಾರಿಕೆಯನ್ನು ಸಿಫಾದಾರರು ನೋಡಿಕೊಳ್ಳಬೇಕಾಗಿತ್ತು. ಸೈನಿಕರಿಗೆ ವಾರದಲ್ಲಿ ಗುರುವಾರ ರಜಾದಿನವೆಂದು ನಿಗದಿಪಡಿಸಲಾಗಿತ್ತು. ಸಹಾಯಕ ಅಶ್ವಪಡೆಯನ್ನು ಸಿಲಾದರ್ ಎಂದು ಕರೆಯಲಾಗುತ್ತಿತ್ತು. ಇದನ್ನು ಯಾವುದೇ ರೀತಿಯಲ್ಲಿ ವರ್ಗ ಮಾಡುತ್ತಿರಲಿಲ್ಲ. ಈ ಪಡೆಗೆ ಸ್ವತಃ ಸುಲ್ತಾನನೇ ತಿಂಗಳು-ತಿಂಗಳಿಗೆ ಚಾಚು ತಪ್ಪದೇ ಸಂಬಳವನ್ನು ಕೊಡುತ್ತಿದ್ದನು. ಇದರಲ್ಲಿದ್ದ ಅಶ್ವಗಳು ಯುದ್ಧದಲ್ಲಿ ಅಸುನೀಗಿದರೆ ಸರಕಾರದ ಬೊಕ್ಕಸದಿಂದ ಹಣವನ್ನು ಕೊಡಲಾಗುತ್ತಿತ್ತು. ಖಾಯಂ ಪಡೆಯ ಬಟ್ಟೆ ಹಾಗೂ ಇತರ ಅವಶ್ಯಕತೆಗಳಿಗೆ ಸರಕಾರವು ಹಣವನ್ನು ಒದಗಿಸಿದರೆ. ಸಿಲ್‌ದಾರ್ ಪಡೆಗೆ ಅವಶ್ಯಕತೆಯಿದ್ದ ವಸ್ತುಗಳನ್ನು ಅವರೇ ಕೊಂಡುಕೊಳ್ಳಬೇಕಾಗಿತ್ತು. ಕಾಲಾಳು ಪಡೆಯನ್ನು ನಾಲ್ಕು ಪಂಗಡಗಳನ್ನಾಗಿ ವಿಂಗಡಿಸಲಾಗಿತ್ತು. ಪ್ರತಿ ಪಂಗಡವನ್ನು ಪುನಃ ಆರು ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಅಶ್ವಪಡೆಯ ಪದ್ಧತಿಯನ್ನೇ ಇಲ್ಲಿಯೂ ಸಹ ಅನುಸರಿಸಲಾಗುತ್ತಿತ್ತು. ಸುಬೇದಾರ್ ಎಂಬ ಅಧಿಕಾರಿಯು ಕೋವಿ ಹಾಗೂ ತುಪಾಕಿಗಳ ಮೇಲ್ವಿಚಾರಕನಾಗಿದ್ದನು.

ಈತ ಸೈನಿಕರಿಗೆ ಶತ್ರುಗಳೊಡನೆ ಹೋರಾಡಲು ಕೋವಿಗಳನ್ನು ಕೊಡುತ್ತಿದ್ದ. ಸಾಮಾನ್ಯವಾಗಿ ಸೈನಿಕರು ಉದ್ದನೆಯ ಮೊನಚಾದ ಕೋವಿಗಳನ್ನು ಬಳಸುವಲ್ಲಿ ಉತ್ಸುಕರಾಗಿದ್ದರು.

ಸಮಗ್ರ ಸೈನ್ಯದ ವಿಭಾಗವನ್ನು ನೋಡಿಕೊಳ್ಳುವ ಹಿರಿಯ ಅಧಿಕಾರಿಗೆ ಮಿರ್ ಮಿರಾನ್ ಎಂದು ಹೆಸರು. ಕ್ರಿ.ಶ.೧೭೯೨ರಲ್ಲಿ ಮೈಸೂರು ರಾಜ್ಯದಿಂದ ಆರಿಸಲ್ಪಟ್ಟ ಸೈನಿಕರನ್ನು ನೋಡಿಕೊಳ್ಳಲು ಒಂದು ಪ್ರತ್ಯೇಕವಾದ ವಿಭಾಗವನ್ನು ಸ್ಥಾಪಿಸಲಾಯಿತು. ಇದಕ್ಕೆ ಜುಮ್ರಾ ಎಂದು ಹೆಸರು. ಹೊರ ರಾಜ್ಯಗಳಿಂದ ಬಂದು ಸೇರಿಸಲಾದ ಸೈನ್ಯಕ್ಕೆ ಘೈರ್ ಜುಮ್ರಾ ಎಂದು ಹೆಸರು. ಮಿರ್ ಸಾದರ್ ಎಂಬ ವಿಭಾಗವು ಕೋಟೆ ಕೊತ್ತಲಗಳ ಪರಿಶೀಲನೆ, ಅದರ ಸುರಕ್ಷತೆ, ಕೋಟೆಗೆ ದಿನಂಪ್ರತಿ ಸರಬರಾಜಾಗುವ ಆಹಾರ ಪದಾರ್ಥಗಳು, ನೀರಿನ ಸರಬರಾಜು ಮುಂತಾದವುಗಳನ್ನು ನೋಡಿಕೊಳ್ಳಬೇಕಾಗಿತ್ತು. ಶತ್ರುಗಳು ನುಗ್ಗಿ ಬಂದಾಗ ಪ್ರಜೆಗಳಿಗೆ ಮುನ್ನೆಚ್ಚರಿಕೆಯನ್ನು ಕೊಡಲು, ಅವರಿಗೆ ಸುರಕ್ಷಿತವಾದ ಸ್ಥಳವನ್ನು ಒದಗಿಸಲು, ಶತ್ರುಗಳೊಂದಿಗೆ ಕಾದಾಡಲು ಅವರ ರಕ್ಷಣೆಗೋಸ್ಕರ ಇವುಗಳನ್ನು ಕಟ್ಟಲಾಗಿತ್ತು.

ಟಿಪ್ಪುವಿನ ಸೈನ್ಯದ ಗಾತ್ರವು ತನಗೆ ಅವಶ್ಯಕತೆಯಿದೆ ಎಂದು ಕಂಡುಬಂದಾಗ ಏರುಪೇರಾಗುತ್ತಿತ್ತು. ಟಿಪ್ಪುವಿನ ಸೈನ್ಯವು ಬೃಹತ್ ಪ್ರಮಾಣದಾಗಿತ್ತು. ಅವನ ಸೈನ್ಯದಲ್ಲಿ ೩೦೦೦ ಖಾಯಂ ಅಶ್ವಪಡೆ, ೫೦೦೦ ಅನಿಯಮಿತ ಅಶ್ವಪಡೆ, ೪೮೦೦೦ ಖಾಯಂ ಕಾಲ್ದಳಗಳಿದ್ದವು ಎಂದು ಅಲೆಕ್ಸಾಂಡರ್ ರೀಡನು ತಿಳಿಸುತ್ತಾನೆ. ಕ್ರಿ.ಶ.೧೭೯೨ರಲ್ಲಾದ ಶ್ರೀರಂಗಪಟ್ಟಣದ ಒಪ್ಪಂದದ ನಂತರ ಸೈನ್ಯದ ಸಂಖ್ಯೆಯು ಇಳಿಯುಖವಾಯಿತು. ಆದರೆ ಕ್ರಿ.ಶ.೧೭೯೯ರ ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದ ಸಮಯದಲ್ಲಿ ಆ ಸಂಖ್ಯೆಯು ಪುನಃ ಒಂದೇ ಸಮನೆ ಏರಿತು. ೬೦೦೦ ಖಾಯಂ ಅಶ್ವದಳ, ೨೦೦೦ ಸಹಾಯಕ ಅಶ್ವದಳ, ೩೦೦೦೦ ಖಾಯಂ ಕಾಲ್ದಳ, ೮೦೦೦ ಪೇದೆಗಳು, ೬೦೦೦ ಇತರ ಸೈನಿಕರು ಇದ್ದರೆಂದು ತಿಳಿದುಬಂದಿದೆ. ಕೋವಿ, ತುಫಾಕಿ, ಫಿರಂಗಿಗಳಿಂದ ಸಜ್ಜಾಗಿತ್ತು ಎಂದು ಹೇಳಲಾಗಿದೆ. ಈತನ ಸೈನಿಕ ವ್ಯವಸ್ಥೆಯನ್ನು ಪಂಜಾಬಿನ ಸಿಂಹ ಎಂದು ಸುಪ್ರಸಿದ್ಧನಾದ ರಾಜ ರಣಜಿತ್ ಸಿಂಗ್‌ನ ಸೈನಿಕ ವ್ಯವಸ್ಥೆಗೆ ಹೋಲಿಸಲಾಗಿದೆ.

ಮೈಸೂರು ರಾಜ್ಯದ ಪಶ್ಚಿಮಕ್ಕೆ ವಿಸ್ತಾರವಾದ ಸಮುದ್ರ ತೀರವಿದ್ದುದರಿಂದ ಹೈದರಾಲಿಯು ನೌಕಾಪಡೆಯ ಅವಶ್ಯಕತೆಯನ್ನು ಮನಗಂಡಿದ್ದನು. ಹೀಗಾಗಿ ಬಲಿಷ್ಠವಾದ ಎರಡು ನೌಕೆಗಳನ್ನು ಕಟ್ಟಿಸಿದನು. ಆತನ ನೌಕೆಗಳನ್ನು ಬ್ರಿಟೀಷರ ನೌಕೆಗಳಿಗೆ ಹೋಲಿಸಿದರೆ ಅವುಗಳು ತೀರಾ ಕೆಳಮಟ್ಟದಾಗಿದ್ದವು. ಕ್ರಿ.ಶ.೧೭೮೦ರಲ್ಲಿ ಜರುಗಿದ ದ್ವಿತೀಯ ಆಂಗ್ಲೋ-ಮೈಸೂರು ಯುದ್ಧದಲ್ಲಿ ಎರಡನೆಯ ನೌಕೆಯನ್ನು ಬ್ರಿಟೀಷ್ ನೌಕಾಧಿಕಾರಿಯಾಗಿದ್ದ ಸರ್ ಎಡ್ವರ್ಡ್ ಹ್ಯೂಗನು ಧ್ವಂಸಗೊಳಿಸಿದರೆ, ಪ್ರಥಮ ನೌಕೆಯನ್ನು ಅದರ ನೌಕಾಧಿಕಾರಿಯಾಗಿದ್ದ

ಸ್ವನೆಟ್ ಎಂಬಾತನು ನಾಶಗೊಳಿಸಿದನು ಟಿಪ್ಪುವು ಬಲಿಷ್ಠವಾದ ನೌಕೆಯ ಮಹತ್ವವನ್ನು ಅರಿತಿರಲಿಲ್ಲ. ರಾಜ್ಯದ ಸಮುದ್ರ ವ್ಯಾಪಾರಿಗಳನ್ನು ಕಡಲ್ಗಳ್ಳರಿಂದ ರಕ್ಷಿಸಲು ಹಡಗುಗಳನ್ನು ಮಾತ್ರ ಇಟ್ಟುಕೊಂಡಿದ್ದನು. ಟಿಪ್ಪುವಿನಲ್ಲಿ ಬಲಿಷ್ಠವಾದ ನೌಕೆಗಳಿರದ ಕಾರಣ ಸುಲಭವಾಗಿ ಬ್ರಿಟೀಷರು ಟಿಪ್ಪುವಿನಿಂದ ಮಲಬಾರ್ ತೀರದ ಪ್ರದೇಶಗಳನ್ನು ಹಾಗೂ ಮರಾಠರು ಉತ್ತರ ಕರ್ನಾಟಕದ ಮೈಸೂರು ರಾಜ್ಯದ ರೇವುಗಳನ್ನು ಅದರಲ್ಲೂ ಮುಖ್ಯವಾಗಿ ಕಾರವಾರ ಬಂದರನ್ನು ವಶಪಡಿಸಿಕೊಂಡರು. ಹೀಗಾಗಿ ಟಿಪ್ಪು ಬ್ರಿಟೀಷರ ಪ್ರಬಲತೆಗಳನ್ನು ಕಣ್ಣಾರೆ ನೋಡಿ ತಿಳಿದುಕೊಂಡನು. ಕ್ರಿ.ಶ.೧೭೮೬ರಲ್ಲಿ ತನಗೂ ಒಂದು ಬಲಿಷ್ಠ ನೌಕಾಪಡೆಬೇಕೆಂದು ತೀರ್ಮಾನಿಸಿ ನೌಕಾಪಡೆಯನ್ನು ಕಟ್ಟುವಲ್ಲಿ ಸಫಲನಾದನು. ನೌಕಾಪಡೆಯನ್ನು ನೋಡಿಕೊಳ್ಳುವ ಅಧಿಕಾರಿಗೆ ಮಿರ್ ಯಾಮ್ ಎಂದು ಕರೆಯುತ್ತಿದ್ದರು. ಈತನಿಗೆ ಸಹಾಯಕರಾಗಿ ಮಿರ್‌ಜ್ಞಾದಫ್‌ದಾರ್ ಹಾಗೂ ಮುತ್ಸದ್ಧಿಯವರು ಇರುತ್ತಿದ್ದರು. ನೌಕಾಧಿಕಾರಿಗಳನ್ನು ಸಮುದ್ರ ತೀರದ ಕಡೆಗೆ ಅದರ ಸುರಕ್ಷತೆಗಾಗಿ ಕಳುಹಿಸಿ, ರೇವುಗಳ ಹಾಗೂ ತೀರದ ಸಂಪೂರ್ಣ ಜವಾಬ್ದಾರಿಯನ್ನು ಅವರಿಗೆ ಕೊಡಲಾಗಿತ್ತು. ಇವರ ನೌಕಾಪಡೆಯಲ್ಲಿ ೨೨ ಯುದ್ಧನೌಕೆಗಳು ಹಾಗೂ ೨೦ ಬೃಹತ್ತಾದವೂ (Frigates) ಗಳಿದ್ದವು. ಯುದ್ಧ ನೌಕೆಗಳನ್ನು ಎರಡು ವಿಧವಾಗಿ ವಿಂಗಡಿಸಿ ಪ್ರಥಮ ದರ್ಜೆಯ ನೌಕೆಗಳು ೭೨ ಯುದ್ಧ ತೋಪುಗಳನ್ನು ಹೊಂದಿದ್ದರೆ, ದ್ವಿತೀಯ ದರ್ಜೆಯ ನೌಕೆಗಳು ೬೨ ಯುದ್ಧ ತೋಪುಗಳನ್ನು ಹೊಂದಿದ್ದವು. ಇವು ಬೃಹತ್ತಾದ ೪೬ ಯುದ್ಧ ತೋಪುಗಳನ್ನು ಹೊರುವಷ್ಟು ಬಲಿಷ್ಠವಾಗಿದ್ದವು. ಮಂಗಳೂರು, ಮಿರ್ಜಾನ್ ವಜೀದಾಬಾದ್ ಮತ್ತು ಮೊದಲಿಬಾದ್ ಎಂಬ ಮೂರು ಸ್ಥಳಗಳು ನೌಕೆಗಳನ್ನು ತಯಾರಿಸುವ ಮುಖ್ಯ ಕೇಂದ್ರಗಳಾಗಿದ್ದವು. ಸಾಗುವಾನಿ ಮರಗಳನ್ನು ಕಲ್ಲಿಕೋಟೆ ಬಂದರಿನ ಮೂಲಕ ಈ ಸ್ಥಳಗಳಿಗೆ ನೌಕೆಗಳನ್ನು ಕಟ್ಟಲು ಸರಬರಾಜು ಮಾಡುತ್ತಿದ್ದರು. ಮಂಗಳೂರಿನಲ್ಲಿ ನಾಲ್ಕು ನೌಕೆಗಳಿದ್ದು ಅವುಗಳ ಉದ್ದಗಲಗಳು ೧೦೪ ಅಡಿಯಿಂದ ೨೭ ಅಡಿಗಳವರೆಗೆ, ೧೧೨ ಅಡಿಯಿಂದ ೩೨ ಅಡಿಗಳವರೆಗೆ ಇದ್ದಿತು. ಕುಂದಾಪುರದಲ್ಲಿ ಎಂಟು ನೌಕೆಗಳಿದ್ದು ಅವುಗಳು ಸಾಧಾರಣವಾಗಿ ೬೦ ಅಡಿಯಿಂದ ೨೦ ಅಡಿ, ತದ್ರಿಯಲ್ಲಿ ೧೫ ನೌಕೆಗಳಿದ್ದು ಅವುಗಳು ೧೧೦ ಅಡಿ ಉದ್ದವಾಗಿದ್ದವು.. ಟಿಪ್ಪು ಬಲಿಷ್ಠ ನೌಕಾಪಡೆಯ ಮಹತ್ವವನ್ನು ಅರಿತುಕೊಂಡು ಕ್ರಿ.ಶ.೧೭೮೬ರಲ್ಲಿ ಅವುಗಳ ತಯಾರಿಕೆಗೆ ತೊಡಗಿದನು.

ಟಿಪ್ಪು ಅಪ್ರತಿಮ ವೀರನಾಗಿದ್ದುದರಿಂದ ಸೈನ್ಯದ ಮಹತ್ವವನ್ನು ಅರಿತಿದ್ದನು. ಆತನ ಸೈನಿಕ ವ್ಯವಸ್ಥೆಯನ್ನು ಯುರೋಪಿಯನ್ನರು ಮುಕ್ತಕಂಠದಿಂದ ಹೊಗಳುತ್ತಾರೆ. ಸೈನಿಕರ ಶಿಸ್ತು, ತರಬೇತಿ, ಉಸ್ತುವಾರಿ ಮುಂತಾದವುಗಳನ್ನು ಬ್ರಿಟೀಷರು ಹೊಗಳಿದ್ದಾರೆ. ಸೈನಿಕರು ತನ್ನ ಒಡೆಯನಿಗೋಸ್ಕರ ಯಾವ ರೀತಿಯ ಕಷ್ಟವನ್ನು ಲೆಕ್ಕಿಸದೆ ಕೆಚ್ಚೆದೆಯಿಂದ ಕಾದಾಡುತ್ತಿದ್ದರು.

ಈತನ ಸೈನಿಕ ವ್ಯವಸ್ಥೆಯನ್ನು ರಾಜ ರಣಜಿತ್ ಸಿಂಗ್‌ನಿಗೆ ಹೋಲಿಸಿ, ಮೈಸೂರು ಹುಲಿ ಎಂದು ಕರೆದಿರುವುದು ಸಮಂಜಸವಾಗಿದೆ. "೨೦ನೇ ಶತಮಾನದಲ್ಲಿ ಮೈಸೂರು ಸಂಸ್ಥಾನ ಆಧುನಿಕ ರಾಜ್ಯವೆಂದು ಸಾಧ್ಯವಾಗಿದ್ದು ಟಿಪ್ಪುವಿನ ಸುಧಾರಣೆಗಳ ಮೂಲಕ".[೬]

೨.೮ ಸಾಮಾಜಿಕ ಸುಧಾರಣೆಗಳು

ಸಾಮಾಜಿಕ ಕಳಕಳಿ ಹೊಂದಿದ್ದ ಟಿಪ್ಪು ಮಲಬಾರಿನಲ್ಲಿದ್ದ ಕಂದಾಚಾರವನ್ನು ತಿದ್ದಿದನು. ಮಲಬಾರಿನಲ್ಲಿ ಮಹಿಳೆಯರು ಎದೆಯ ಮೇಲೆ ಬಟ್ಟೆ ಹಾಕಬಾರದೆಂಬ ಸಂಪ್ರದಾಯವಿತ್ತು. ಟಿಪ್ಪು ಇದನ್ನು ತಿದ್ದಿ ಕಡ್ಡಾಯವಾಗಿ ಎದೆ ಮೇಲೆ ಬಟ್ಟೆ ಹಾಕಿಕೊಳ್ಳಲು ಕ್ರಮಕೈಗೊಂಡನು. ಯುವ ಜನರ ಆರೋಗ್ಯ ಮತ್ತು ನೈತಿಕತೆಯನ್ನು ಹಾಳು ಮಾಡುತ್ತಿದ್ದ ಮಧ್ಯಪಾನವನ್ನು ನಿಷೇಧಿಸಿದನು. ಕ್ರಿ.ಶ.೧೭೮೭ರಲ್ಲಿ ಮೀರ್ ಸಾಧಿಕ್‌ಗೆ ಟಿಪ್ಪು ಬರೆದ ಪತ್ರ ಮಧ್ಯ ನಿಷೇಧ ವಿಷಯವನ್ನು ಸಾರುತ್ತದೆ. ಟಿಪ್ಪು ಸುಲ್ತಾನನು ಪತ್ರದಲ್ಲಿ ಹೀಗೆ ಬರೆದಿದ್ದನು "ಈ ವಿಷಯದಲ್ಲಿ (ಮಧ್ಯ ನಿಷೇಧ) ನಾವು ಯಾವುದೇ ಹಣಕಾಸಿನ ವಿಷಯವನ್ನು ಪ್ರಧಾನಗೊಳಿಸಿ ನೋಡಬಾರದು. ಏನೇ ಆದರೂ ಸಂಪೂರ್ಣ ಮಧ್ಯಪಾನ ನಿಷೇಧ ಮಾತ್ರ ಜಾರಿಗೆ ಬರಬೇಕು. ಇದು ಕೇವಲ ಧಾರ್ಮಿಕ ವಿಷಯವಲ್ಲ ನಾವು ನಮ್ಮ ಜನರ ಆರ್ಥಿಕ ಸದೃಢತೆ, ನೈತಿಕ ಔನ್ನತ್ಯಗಳನ್ನು ಪ್ರಧಾನವಾಗಿ ಪರಿಗಣಿಸಬೇಕು. ನಮ್ಮ ಯುವಕರಲ್ಲಿ ಸರಿಯಾದ ನಡತೆಯನ್ನು ಕಲಿಸಬೇಕು."[೭]

ಮೈಸೂರಿನ ಇತಿಹಾಸದಲ್ಲಿ ಮರೆಯಲಾಗದ ಮಾಣಿಕ್ಯ, ಜನಪದರ ಹೃದಯಾಂತರಾಳದಲ್ಲಿ ಟಿಪ್ಪುಸುಲ್ತಾನ್ ಇಂದಿಗೂ ಇತಿಹಾಸದ ಪುಟಗಳಲ್ಲಿ, ಜನಮನಗಳಲ್ಲಿ ಜೀವಂತವಾಗಿ ಉಳಿದಿದ್ದಾನೆ.

ಮೈಸೂರು ಹುಲಿ ಎಂದೇ ತನ್ನ ಶೌರ್ಯ ಸಾಹಸಗಳಿಂದ ಹೆಸರು ಪಡೆದ ಮೈಸೂರಿನ ಅರಸ ಟಿಪ್ಪು ಸುಲ್ತಾನ್ ಬ್ರಿಟೀಷ್ ಪ್ರಭುತ್ವದ ವಿರುದ್ಧ ಹೋರಾಡಿ ರಣರಂಗದಲ್ಲಿ ವಿರೋಚಿತ ಮರಣವನ್ನು ಕಂಡ ಮಹಾನ್ ದೇಶಭಕ್ತ.

ಟಿಪ್ಪುವಿನ ಹೆಸರನ್ನು ಕೇಳಿದರೆ ಗಡಗಡ ನಡುಗುವ ಜನ ಬಹಳ ಹಿಂದೆ ಇದ್ದರು. ಈಗಲೂ ಅಂಥವರನ್ನು ಕಾಣಬಹುದು. ಅದಕ್ಕೆ ಕಾರಣ ಆತನಲ್ಲಿದ್ದ ಈ ನೆಲದ ಮೇಲಿನ ರಾಷ್ಟ್ರಪ್ರೇಮ. ಬ್ರಿಟೀಷರಿಗೆ ಟಿಪ್ಪು ಆಜನ್ಮ ವೈರಿ. ಬ್ರಿಟೀಷ್ ಸಾಮ್ರಾಜ್ಯಶಾಹಿಯನ್ನು ಭಾರತದಿಂದಲೇ ಕಿತ್ತೊಗೆಯಬೇಕೆಂದಿದ್ದ ಟಿಪ್ಪು ಒಬ್ಬ ಮುಸ್ಲಿಂ ರಾಜ. ಅವನು ಹಿಂದೂ ವಿರೋಧಿಯಾಗಿದ್ದ ಮತ್ತು ಹಿಂದೂಗಳನ್ನು ಬಲತ್ಕಾರವಾಗಿ ಮತಾಂತರ ಮಾಡಿಸಿದ ಎಂಬ

ಚಾರಿತ್ರಿಕ ಅಂಶಗಳು ಸತ್ಯವನ್ನು ಮರೆಮಾಚಿ. ಪ್ರಸ್ತುತದಲ್ಲಿ ಹಿಂದೂ-ಮುಸ್ಲಿಂ ಬಾಂಧವ್ಯವನ್ನು ಕೆಡಿಸುವುದಕ್ಕೆ ಕಾರಣವಾಗಿವೆ.

ಇಂತಹ ಒಬ್ಬ ಮಹಾನ್ ವ್ಯಕ್ತಿಯನ್ನು ಕುರಿತು ಹಿಂದೂ-ಮುಸ್ಲಿಂ ಜನಪದರಲ್ಲಿ ಸಾಕಷ್ಟು ಅಭಿಮಾನ ಗೌರವಗಳಿರುವುದು ಕಂಡುಬರುತ್ತದೆ. ಜನಪದರಲ್ಲಿ ಮೌಖಿಕವಾಗಿ ಉಳಿದು ಬಂದಿರುವ ಲಾವಣಿ, ಕಥನ ಗೀತೆಗಳು ಆತನ ದೇಶಭಕ್ತಿಯನ್ನು ಅನಾವರಣಗೊಳಸುತ್ತವೆ. ಆದರೆ ಇಂತಹ ವ್ಯಕ್ತಿಯನ್ನು ಕುರಿತು ದಕ್ಷಿಣ ಕರ್ನಾಟಕದಲ್ಲಿ ಜನಪದ ಸಾಹಿತ್ಯದಲ್ಲಾಗಲಿ, ಶಿಷ್ಟ ಸಾಹಿತ್ಯದಲ್ಲಾಗಲಿ ಸಾಕಷ್ಟು ಸಾಹಿತ್ಯ ಕೃಷಿ ನಡೆಯದೇ ಇರುವುದು ಆಶ್ಚರ್ಯಕರ ಸಂಗತಿಯಾಗಿದೆ. ಹಾಗಾಗಿ ಟಿಪ್ಪು ಕುರಿತ ಅಧ್ಯಯನ ಹೊಸತೆನಿಸಿ 'ಟಿಪ್ಪು ಜನಪದ ಕಥನ' ಎಂಬ ಶೀರ್ಷಿಕೆಯಡಿಯಲ್ಲಿ ಜಾನಪದ ಅಧ್ಯಯನದ ಅನಾವರಣ ಪ್ರಸ್ತುತ ಮಹಾಪ್ರಬಂಧದಲ್ಲಿದೆ.

ದಕ್ಷಿಣ ಭಾರತದ ಇತಿಹಾಸದಲ್ಲಿ ದಕ್ಷ ಆಡಳಿತಗಾರನೆಂದು ಉಜ್ವಲವಾಗಿ ಬೆಳೆದ ಹೆಸರು ಟಿಪ್ಪು ಸುಲ್ತಾನ್ ಜಗತ್ತಿನಲ್ಲೆಲ್ಲಾ ಸಾಮ್ರಾಜ್ಯಕಟ್ಟಿ ಸೂರ್ಯನನ್ನು ಮುಳುಗಲು ಬಿಡದ ಬ್ರಿಟೀಷರನ್ನು ದಕ್ಷಿಣ ಭಾರತಕ್ಕೆ ಕಾಲಿಡಲು ಬಿಡದ ಛಲದಂಕ ಮಲ್ಲ, ಅಪ್ರತಿಮ ದೇಶಭಕ್ತ ಈತ. ಪರಮತ ಸಹಿಷ್ಣು, ಅನೇಕ ಹಿಂದೂ ದೇವಾಲಯಗಳಿಗೆ ಉದಾರ ದಾನ-ದತ್ತಿಗಳನ್ನು ನೀಡಿದ್ದ. ಆಡಳಿತದಲ್ಲಿ ನಿಷ್ಠುರನಾಗಿದ್ದ ಟಿಪ್ಪು ಯಾರೇ ತಪ್ಪು ಮಾಡಿದರೂ ಶಿಕ್ಷಿಸುತ್ತಿದ್ದ. "ನರಿಯಂತೆ ನೂರು ವರ್ಷ ಬದುಕುವುದಕ್ಕಿಂತ ಹುಲಿಯಂತೆ ಒಂದು ದಿನ ಬದುಕುವುದು ಮೇಲು" ಎಂದು. ಬ್ರಿಟೀಷರ ಮೋಸದ ಯುದ್ಧದಲ್ಲಿ, ವೀರ ಸೈನಿಕನಾಗಿ ಪರಾಕ್ರಮ ಮೆರೆದು, ಬ್ರಿಟೀಷರ ಬಂದೂಕಿಗೆ ಸುಲಭವಾಗಿ ಬಲಿಯಾದ. ಟಿಪ್ಪು ಹೆಸರು ಇತಿಹಾಸದ ಪುಟಗಳಲ್ಲಿ ಅಜರಾಮರ.

೨.೯ ಕಲೆ ಮತ್ತು ವಾಸ್ತುಶಿಲ್ಪ

ಹೈದರಾಲಿ ಮತ್ತು ಟಿಪ್ಪು ಕೋಟೆಗಳನ್ನು, ಅರಮನೆಗಳನ್ನು ಮತ್ತು ಮಸೀದಿಗಳನ್ನು ರಾಜ್ಯದ ಉದ್ದಕ್ಕೂ ನಿರ್ಮಿಸಿದ್ದಾರೆ.

- **ಜುಮ್ಮಾ ಮಸೀದಿ**

"ಶ್ರೀರಂಗಪಟ್ಟಣದಲ್ಲಿರುವ ಜುಮ್ಮಾ ಮಸೀದಿ ಒಂದು ಬೃಹತ್ ಸ್ಮಾರಕವಾಗಿದೆ. ಟಿಪ್ಪು ಸುಲ್ತಾನನು ಈ ಮಸೀದಿಯನ್ನು ಕ್ರಿ.ಶ.೧೭೮೭ರಲ್ಲಿ ಕಟ್ಟಿಸಿದನು. ಮಸೀದಿ ನಿರ್ಮಾಣ ಕಾಲವನ್ನು ಸೂಚಿಸುವ ಶಾಸನವೂ ಸೇರಿದಂತೆ, ಒಟ್ಟು ಐದು ಶಾಸನಗಳು ಈ ಮಸೀದಿಯ ಗೋಡೆಗಳಲ್ಲಿವೆ. ಒಂದು ಶಾಸನವು ಅಲ್ಲಾನ ೯೯ ಹೆಸರುಗಳನ್ನು ಒಳಗೊಂಡಿದೆ. ಜುಮ್ಮಾ

ಮಸೀದಿಯನ್ನು ಮಸೀದಿ–ಇ–ಅಲಾಎಂದು ಕರೆಯುವುದುಂಟು. ಎರಡು ಅಂತಸ್ತಿನ ಅಷ್ಟ ಕೋನಾಕೃತಿಯ ಬಹು ಉದ್ದದ ಎರಡು ಗೋಪುರ(ಮಿನರೇಟ್)ಗಳಿವೆ. ಈ ಗೋಪುರಗಳ ಶಿಖರ ಭಾಗಕ್ಕೆ ಹೋಗಲು ಸುಮಾರು ೨೦೦ ಮೆಟ್ಟಿಲುಗಳಿವೆ. ಅಲ್ಲಿಂದ ಶ್ರೀರಂಗಪಟ್ಟಣದ ವಿಸ್ತೃತ ದರ್ಶನ ಪಡೆಯಬಹುದು. ಈ ಎರಡು ಬೃಹದಾಕಾರದ ಗೋಪುರಗಳು ಈ ಮಸೀದಿಯ ಮೌಲ್ಯವನ್ನು ಹೆಚ್ಚಿಸಿವೆ".[೮]

▪ ದರಿಯಾ ದೌಲತ್ ಬಾಗ್

"ಶ್ರೀರಂಗಪಟ್ಟಣ ಕೋಟೆಯ ಹೊರಭಾಗದಲ್ಲಿ ದರಿಯಾ ದೌಲತ್ ಎಂಬ ಸುಂದರ ಅರಮನೆಯಿದೆ. ದರಿಯಾ ಬಾಗ್ ಎಂದರೆ ಸಮುದ್ರ ಸಂಪತ್ತಿನ ಉದ್ಯಾನ ಎಂದರ್ಥ. ಟಿಪ್ಪು ತನ್ನ ರಾಜ್ಯ ಸಮುದ್ರದವರೆಗೂ ಹಬ್ಬಿದ ಸವಿನೆನಪಿಗಾಗಿ ಈ ಅರಮನೆಯನ್ನು ಕ್ರಿ.ಶ.೧೭೮೪ರಲ್ಲಿ ನಿರ್ಮಿಸಿದನು".[೯].

ದರಿಯಾ–ದೌಲತ್ ಅರಮನೆ ಇಂದು ವಿಶಾಲ ವನದ ನಡುವೆ ಇದೆ. ಎತ್ತರದ ಜಗಲಿ ಮೇಲೆ ನಿಂತಿರುವ ಈ ಅರಮನೆ ಇಂಡೋ–ಇಸ್ಲಾಮಿಕ್ ಶೈಲಿಯಲ್ಲಿದೆ. ಈ ಅರಮನೆಯನ್ನು, ಬಹುತೇಕ ತೇಗದ ಮರದಿಂದ ಕಟ್ಟಿದ್ದು ಸುಂದರ ಚಿತ್ತಾರ ರಚನೆಗಳಿಂದ ಅಲಂಕರಿಸಲಾಗಿದೆ. ಅರಮನೆಯ ಗೋಡೆಗಳ ಒಂದು ಇಂಚು ಜಾಗವನ್ನು ಬಿಡದೆ ಬಣ್ಣದ ಕಲಾತ್ಮಕ ಚಿತ್ರಗಳಿಂದ ತುಂಬಿಸಲಾಗಿದೆ. ಅರಮನೆಯ ಹೊರಗಿನ ಗೋಡೆಗಳ ಯುದ್ಧ ದೃಶ್ಯಗಳಿಗೆ ಮತ್ತು ವ್ಯಕ್ತಿ ಚಿತ್ರಗಳಿಗೆ ಸೀಮಿತವಾಗಿದ್ದರೆ, ಒಳಗಿನ ಗೋಡೆಗಳ ಮೇಲೆ ಎಲೆಗಳ ಗೊಂಚಲು ಮತ್ತು ಹೂವಿನ ಚಿತ್ರಗಳನ್ನು ಬಿಡಿಸಲಾಗಿದೆ. ದಂಡನಾಯಕ ಬೈಲಿ ನೇತೃತ್ವದ ಬ್ರಿಟೀಷ್ ಸೈನ್ಯದ ಮೇಲೆ ಪೊಲಿಲೂರು ಕದನದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನ ಸಾಧಿಸಿದ ಗೆಲುವಿನ ದೃಶ್ಯವನ್ನು ಪಶ್ಚಿಮದ ಹೊರಗೋಡೆಯ ಮೇಲೆ ಸೊಗಸಾಗಿ ಬಿಡಿಸಲಾಗಿದೆ. ಫ್ರೆಂಚ್ ಮತ್ತು ಹೈದರಾಬಾದಿನ ನಿಜಾಮನ ಸೈನ್ಯವನ್ನು ಸಹ ಚಿತ್ರಿಸಲಾಗಿದೆ. ಪೂರ್ವ ಗೋಡೆಯ ಮೇಲೆ ಟಿಪ್ಪು ಸುಲ್ತಾನನ ಸಮಕಾಲೀನ ಅರಸರ ದರ್ಬಾರಿನ ಚಿತ್ರಗಳಿವೆ. ತಂಜಾವೂರಿನ ರಾಜ, ಬನಾರಸ್ಸಿನ ರಾಜ, ಪೇಶ್ವೆ ಎರಡನೇ ಬಾಲಾಜಿರಾವ್, ಮಾಗಡಿ ಕೆಂಪೇಗೌಡ, ಚಿತ್ರದುರ್ಗದ ಮದಕರಿ ನಾಯಕ ಮುಂತಾದವರ ದರ್ಬಾರು ಚಿತ್ರಗಳಿವೆ. ಟಿಪ್ಪು ಸುಲ್ತಾನನು ಸತ್ತ ನಂತರ ಅರ್ಥರ್ ವೆಲ್ಲೆಸ್ಲಿ ಈ ಅರಮನೆಯಲ್ಲಿ ಕ್ರಿ.ಶ.೧೭೯೯ರಿಂದ ೧೮೦೪ರ ವರೆಗೆ ವಾಸಿಸಿದ್ದನು. ಇಲ್ಲಿ ಟಿಪ್ಪು ಸುಲ್ತಾನ್ ವಸ್ತು ಸಂಗ್ರಹಾಲಯವಿದ್ದು, ಟಿಪ್ಪುವಿನ ಧೈರ್ಯ ಮತ್ತು ಸಾಹಸವನ್ನು ಸಾರುವ ಅನೇಕ ಐತಿಹಾಸಿಕ ಮಹತ್ವವುಳ್ಳ ವರ್ಣಚಿತ್ರಗಳು, ಪೆನ್ಸಿಲ್‌ನಿಂದ ರಚನೆಯಾದ ವ್ಯಕ್ತಿಚಿತ್ರಗಳು,

ನಾಣ್ಯಗಳು, ಖಡ್ಗಗಳು, ಉಡುಪುಗಳು, ಸೈನಿಕ ಸಂಘಟನೆ ಕುರಿತು ಹೇಳುವ ಒಂದು ಕೃತಿಯ ಹಸ್ತಪ್ರತಿ, ಪೀಠೋಪಕರಣಗಳು, ಬಂದೂಕುಗಳು ಮತ್ತು ಬೃಹತ್ ಗಾತ್ರದ ಫಿರಂಗಿಗಳು ಇವೆ.

- **ಲಾಲ್‌ಮಹಲ್ ಅರಮನೆ**

ಶ್ರೀರಂಗಪಟ್ಟಣದಲ್ಲಿ ಟಿಪ್ಪು ಸುಲ್ತಾನನು ವಾಸವಾಗಿದ್ದ ಲಾಲ್ ಮಹಲ್ ಅರಮನೆಯ ಅವಶೇಷಗಳಿವೆ. ಟಿಪ್ಪು ಸುಲ್ತಾನನನ್ನು ಕೊಂದು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಬ್ರಿಟೀಷರು ಈ ಅರಮನೆಯನ್ನು ನಾಶಪಡಿಸಿದರು. ಒಂದು ಕಾಲದಲ್ಲಿ ಅದ್ಧೂರಿಯಾಗಿದ್ದ ಅಂದದ ಈ ಅರಮನೆ ಈಗ ಪಾಳುಬಿದ್ದಿದೆ. ಅರಮನೆಯ ಹಳೆಯ ಕಥೆಯನ್ನು ಹೇಳುವ ಮುರಿದು ಬಿದ್ದ ಗೋಡೆಗಳು ಮಾತ್ರ ಉಳಿದಿವೆ. ಇಲ್ಲಿ ನಡೆದ ಭೂ ಉತ್ಖನನದಿಂದ ೪೦ರಿಂದ ೨೦ಮೀ ವಿಸ್ತೀರ್ಣದ ಸಭಾಮಂಟಪ ಇದ್ದಿದ್ದು ಪತ್ತೆಯಾಗಿದೆ. ಮಹಡಿಗೆ ಹೋಗಲು ಮೆಟ್ಟಿಲುಗಳು ಇದ್ದುದ್ದು ಕೂಡ ಪತ್ತೆಯಾಗಿದೆ. ಯುದ್ಧದ ಆಯುಧಗಳು ಮತ್ತು ಫಿರಂಗಿ ಗುಂಡುಗಳು ಉತ್ಖನನದ ವೇಳೆ ಸಿಕ್ಕಿವೆ. ಈ ಅರಮನೆಯನ್ನು ನೋಡಿದ್ದ ಬ್ರಿಟೀಷ್ ಇತಿಹಾಸಕಾರರು ತುಂಬು ಹೃದಯದಿಂದ ಹೊಗಳಿದ್ದಾರೆ.

- **ಗುಂಬಜ್**

ಶ್ರೀರಂಗಪಟ್ಟಣ ಕೋಟೆಯಿಂದ ಮೂರು ಕಿ.ಮೀ. ದೂರದಲ್ಲಿ (ಪೂರ್ವದ ದಿಕ್ಕಿನಲ್ಲಿ) ಗುಂಬಜ್ ಅಥವಾ ಸಮಾಧಿ ಭವನ ಇದೆ. ಹೈದರಾಲಿ ಸಮಾಧಿ ಮೇಲೆ ಕಟ್ಟಲಾಗಿರುವ ಈ ಸುಂದರವಾದ ಭವನ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಇದು ಸುಂದರ ಉದ್ಯಾನವನದ ಮಧ್ಯದಲ್ಲಿದೆ. ಈ ಭವನವನ್ನು ಕಪ್ಪು ಬಣ್ಣದ ಆಧಾರಸ್ತಂಭಗಳು ಮೇಲೆತ್ತಿದಂತೆ ತೋರುತ್ತದೆ. ಟಿಪ್ಪು ಸುಲ್ತಾನನು ೪ನೇ ಮೇ ೧೭೯೯ರಂದು ಮೃತನಾದ ಮೇಲೆ, ಇದೇ ಭವನದಲ್ಲಿ ತಂದೆ-ತಾಯಿ ಸಮಾಧಿ ಪಕ್ಕದಲ್ಲಿ ಸಮಾಧಿ ಮಾಡಲಾಗಿದೆ. ಟಿಪ್ಪುವಿಗೆ ಪ್ರಿಯವಾದ ಹುಲಿ ಬಣ್ಣದ ಹೊದಿಕೆಯಿಂದ ಸಮಾಧಿಯನ್ನು ಶೃಂಗರಿಸಲಾಗಿದೆ. ಈ ಭವನದ ಒಂದು ದ್ವಾರದ ಮೇಲೆ ಇರುವ ಪರ್ಷಿಯನ್ ಭಾಷೆಯ ಕವಿತೆ ಹೀಗಿದೆ. "ಟಿಪ್ಪು ಸುಲ್ತಾನನು ಹುತಾತ್ಮನಾದನು. ದೇವರನ್ನು ತಲುಪಲು ತನ್ನ ಜೀವನವನ್ನು ಬಲಿಕೊಟ್ಟನು". ಸಮಾಧಿ ಭವನದ ಆಚೆ ಟಿಪ್ಪು ಸುಲ್ತಾನನ ಸಂಬಂಧಿಕರ ಮತ್ತು ದಂಡನಾಯಕರ ಸಮಾಧಿಗಳಿವೆ. ಮಸೀದಿ-ಇ-ಅಕ್ಸಾ ಎಂಬ ಮಸೀದಿಯು ಸಹ ಈ ಭವನದ ಪಕ್ಕದಲ್ಲೇ ಇದೆ.

ಅಡಿಟಿಪ್ಪಣಿ

೧. ಸ್ಟೀವನ್ ಕ್ವಾಡ್ರಸ್, ಮೈಸೂರಿನ ಇತಿಹಾಸ, ಚೇತನ ಬುಕ್ ಹೌಸ್, ಮೈಸೂರು - ೨೦೧೨, ಪು ಸಂ ೪೬.

೨. ಫಾಲಕ್ಷ, ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ಶಶಿ ಪ್ರಕಾಶನ, ತಿಪಟೂರು, ಪು ಸಂ.೩೪೩

೩. ಸ್ಟೀವನ್ ಕ್ವಾಡ್ರಸ್, ಪೂರ್ವೋಕ್ತ ಪು ಸಂ.೫೯

೪. ಅದೇ, ಪು ಸಂ.೫೯

೫. ಅದೇ, ಪು ಸಂ.೫೯

೬. ರಾಮರತನ್ ಜಿ, ಕನ್ನಡ ನಾಡಿನ ಅರಸು ಮನೆತನಗಳು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕ.ರಾ.ಮು.ವಿ.ವಿ ಮೈಸೂರು, ಪು ಸಂ.೭೪

೭. ಶಿವಪ್ಪ ಅರಿವು. ಜಿ. ಸಮಗ್ರ ಕರ್ನಾಟಕ ಇತಿಹಾಸ, ಸಪ್ನ ಬುಕ್‌ಹೌಸ್, ಬೆಂಗಳೂರು-೨೦೧೪ ಪು ಸಂ.೪೦೫

೮. ಅದೇ, ಪು ಸಂ.೩೯೬

೯. ಅದೇ, ಪು ಸಂ.೩೯೬

ಅಧ್ಯಾಯ-೩

ಟಿಪ್ಪು ಬಗೆಗಿನ ಜನಪದ ಸಮಾಜದ ಭಾವನೆಗಳು

೩.೧ ಪೀಠಿಕೆ

೩.೨ ಟಿಪ್ಪು ಸುಲ್ತಾನನ ಬಿರುದು ಬಾವಲಿಗಳು

೩.೩ ಟಿಪ್ಪುವಿನ ಕನ್ನಡ ಪ್ರೇಮ

೩.೪ ಬ್ರಿಟೀಷ್‌ರಲ್ಲಿ ತನ್ನ ಮಕ್ಕಳನ್ನು ಅಡವಿಟ್ಟ ಟಿಪ್ಪು

೩.೫ ಅಪ್ಪಟ ಸೇನಾ ತುಕಡಿ 'ಜುಮ್ರ'

೩.೬ ಟಿಪ್ಪು ಸುಲ್ತಾನ್ ಕಾಲದ ಶಿಕ್ಷೆಗಳು

೩.೭ ಕಳ್ಳ ಸ್ವಾಮಿಗಳನ್ನು ಬಂಧಿಸಿದ ಟಿಪ್ಪು

೩.೮ ಟಿಪ್ಪುವಿನಿಂದ ಹಳ್ಳಿಕಾರ್ ತಳಿಗಳ ಪರಿಚಯ

೩.೯ ಮೇಲುಕೋಟೆ ದೇವರಿಗೆ ಟಿಪ್ಪುವಿನಿಂದ ಎರಡು ನಾಮ

೩.೧೦ ವಿದೇಶದಲ್ಲಿ ಮೊಟ್ಟಮೊದಲಿಗೆ ಮಗನಿಗೆ ವಿದ್ಯಾಭ್ಯಾಸ ಕೊಡಿಸಲು ಮುಂದಾದ ಟಿಪ್ಪು

೩.೧೧ ಶ್ರೀಗಂಧದ ಕೋಟೆ ಕಟ್ಟಿಸಿದ ಟಿಪ್ಪು

೩.೧೨ ಟಿಪ್ಪುವಿನ ಗ್ರಂಥಾಲಯ

೩.೧೩ ಟಿಪ್ಪುವಿನ ಮರಣ ನಂತರ ವಶಪಡಿಸಿಕೊಂಡ ವಸ್ತುಗಳು

ಅಧ್ಯಾಯ-೩

ಟಿಪ್ಪು ಬಗೆಗಿನ ಜನಪದ ಸಮಾಜದ ಭಾವನೆಗಳು

೩.೧ ಪೀಠಿಕೆ

ಟಿಪ್ಪು ಸುಲ್ತಾನ್ ೧೮ನೇ ಶತಮಾನದ ಚಿತ್ತಾಕರ್ಷಕ ವ್ಯಕ್ತಿ. ಸ್ವತಂತ್ರ ಭಾರತದ ಇತಿಹಾಸವನ್ನು ರಚಿಸಲು ಬೇಕಾದ ರಕ್ತವನ್ನು ನೀಡಲು ಮುಂದೆ ಬಂದ ವ್ಯಕ್ತಿ, ತಾಯ್ನೆಲದ ಬಿಡುಗಡೆಗಾಗಿ ತನ್ನ ಇಬ್ಬರು ಮಕ್ಕಳನ್ನೇ ಒತ್ತೆ ಇಟ್ಟ ವ್ಯಕ್ತಿ ಮತ್ತು ಈ ದೇಶಕ್ಕಾಗಿ ತನ್ನ ಜೀವನವನ್ನೂ ಲೆಕ್ಕಿಸದೇ ತನ್ನ ಸಂಪನ್ಮೂಲ ಮತ್ತು ಶಕ್ತಿಯನ್ನು ನೀಡಿದ ವ್ಯಕ್ತಿ. ಇವನು ಇಂಗ್ಲೀಷರ ಜೊತೆ ಒಂದಲ್ಲ ನಾಲ್ಕು ಯುದ್ಧಗಳನ್ನು ಮಾಡಿ, ಎರಡರಲ್ಲಿ ಜಯವನ್ನು ಸಾಧಿಸುವ ಮೂಲಕ ಅಜೇಯ ಶಕ್ತಿಯನ್ನು ನಾಶಗೊಳಿಸಿದ ವ್ಯಕ್ತಿ. ಬ್ರಿಟೀಷರು ಟಿಪ್ಪು ಸುಲ್ತಾನ್‌ಗಿಂತ ದಿಗಿಲು ಹುಟ್ಟಿಸುವ ಶತ್ರುವನ್ನು ಈ ಹಿಂದೆ ಎಂದೂ ಎದುರಿಸಿರಲೇ ಇಲ್ಲ. ಹೀಗಾಗಿ ಟಿಪ್ಪು ಸುಲ್ತಾನ್ ಯುದ್ಧ ಭೂಮಿಯಲ್ಲಿ ಮಡಿದ ಕೂಡಲೇ, ಅವನ ಶವದ ಎದುರೇ ಇಂದಿನಿಂದ ಭಾರತ ದೇಶ ನಮ್ಮದು ಎಂದು ಘೋಷಣೆ ಮಾಡಿದರು.

ಟಿಪ್ಪು ಸುಲ್ತಾನನ ಜೀವನದ ಮುಖ್ಯವಾದ ಎರಡು ಗುರಿಗಳೆಂದರೆ ಈ ನೆಲದಿಂದ ವಸಾಹತುಶಾಹಿಗಳನ್ನು ನಿರ್ಮೂಲನ ಮಾಡುವುದು ಹಾಗೂ ತನ್ನ ರಾಜ್ಯವನ್ನು ಆಧುನೀಕರಣಗೊಳಿಸುವುದು. ಟಿಪ್ಪು ಮೊದಲ ಗುರಿಯನ್ನು ಮುಟ್ಟಲು ವಿಫಲರಾದರೂ ಕೂಡ ರಾಜ್ಯವನ್ನು ಅತ್ಯಂತ ಉನ್ನತ ಮಟ್ಟದ ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುವ ಮೂಲಕ ಎರಡನೆಯ ಗುರಿಯನ್ನು ಬಹಳ ಯಶಸ್ವಿಯಾಗಿ ಮುಟ್ಟಿದನು. ಇವನ ಜೀವನದ ಮಹತ್ವದ ಉದ್ದೇಶವೇನೆಂದರೆ, ದೇವರ ಮೇಲಿನ ಪ್ರೀತಿ, ಮನುಷ್ಯರ ಮೇಲಿನ ಪ್ರೀತಿ, ಸ್ವಾತಂತ್ರ್ಯ ಹಾಗೂ ತಾಯ್ನೆಲದ ಮೇಲಿನ ಪ್ರೀತಿ.

ಟಿಪ್ಪುವಿನ ಸುಧಾರಣೆಗಳು ಬಹಳ ಕ್ರಾಂತಿಕಾರಿಯಾಗಿದ್ದವು. ಟಿಪ್ಪುವಿನ ರಾಷ್ಟ್ರ-ರಾಜ್ಯದ ಕಲ್ಪನೆ, ರಾಜ್ಯ – ಬಂಡವಾಳದ ಕಲ್ಪನೆ, ಜಹಗೀರ್‌ದಾರಿಕೆಯ ನಿರ್ಮೂಲನಾ ಕಾರ್ಯ, ನಿರ್ದಿಷ್ಟ ಪ್ರಮಾಣದ ಕಾನೂನು- ಕಟ್ಟಲೆಗಳ ಜಾರಿ, ನೌಕಾದಳದ ರಚನೆ, ರಾಕೆಟ್ ತಂತ್ರಜ್ಞಾನದ ಆಲೋಚನೆ, ಕಾವೇರಿ ನದಿಗೆ ಅಣೆಕಟ್ಟೆಯೊಂದನ್ನು ಕಟ್ಟಬೇಕೆಂಬ ಮನೋ ಉದ್ದೇಶವನ್ನು ಅರ್ಥೈಸಿಕೊಂಡ ರೀತಿ ಮತ್ತು ರಾಜ್ಯದಲ್ಲಿ ರೇಷ್ಮೆ ಕೈಗಾರಿಕೆಯನ್ನು ಪ್ರಾರಂಭಿಸಲು ತೋರಿದ ಆಸಕ್ತಿ ಮುಂತಾದವುಗಳು ಮೆಚ್ಚುವಂತಹ ಕಾರ್ಯಗಳಾಗಿವೆ.

ನಾಣ್ಯ ಮತ್ತು ಕ್ಯಾಲೆಂಡರ್, ತೂಕ ಮತ್ತು ಅಳತೆ, ಕಂದಾಯ ಮತ್ತು ನ್ಯಾಯಾಂಗ, ಸೈನ್ಯ ಮತ್ತು ನೌಕಾದಳ, ಕಲೆ ಮತ್ತು ಕರಕುಶಲ, ವ್ಯಾಪಾರ ಮತ್ತು ವಾಣಿಜ್ಯ, ಕೃಷಿ ಮತ್ತು ಕೈಗಾರಿಕಾ ನೀತಿ ಮುಂತಾದ ಕ್ಷೇತ್ರಗಳಲ್ಲಿ ಟಿಪ್ಪು ತಂದ ಬದಲಾವಣೆಗಳಿಂದಾಗಿ ರಾಜ್ಯದ ಸಾಮಾಜಿಕ ಕ್ಷೇತ್ರದಲ್ಲಿ ಭಾರಿ ಬದಲಾವಣೆಯಾಯಿತು. ಟಿಪ್ಪು ವಸಾಹತುಶಾಹಿಗಳ ಜೊತೆ ನಿರಂತರವಾದ ಯುದ್ಧಗಳಲ್ಲಿ ತೊಡಗದೆ ಇದ್ದಿದ್ದರೆ ದೇಶವನ್ನೆ ಪುನರುಜ್ಜೀವನ ಗೊಳಿಸುತ್ತಿದ್ದನೇನೊ?

ಬಹು ಹಿಂದಿನಿಂದಲೂ ಇತಿಹಾಸ ಪುಟಗಳಲ್ಲಿ ಟಿಪ್ಪು ಸುಲ್ತಾನಿಗೆ ನ್ಯಾಯಯುತವಾಗಿ ಸಿಗಬೇಕಾದ ಸ್ಥಾನವನ್ನು ನೀಡಲಾಗಿಲ್ಲ. ಇತ್ತೀಚಿನವರೆಗೂ ಟಿಪ್ಪುವನ್ನು ಖಳನಾಯಕನಂತೆ ಚಿತ್ರಿಸಲಾಗಿದೆ. ಸಾಮ್ರಾಜ್ಯಶಾಹಿ ಬ್ರಿಟೀಷರು ಟಿಪ್ಪುವನ್ನು ತಮ್ಮದೇ ಕಾರಣಗಳಿಗಾಗಿ ಅಸಹಿಷ್ಣು, ವಿಲಕ್ಷಣ ವ್ಯಕ್ತಿತ್ವ ಹಾಗೂ ಅನ್ಯಾಯದ ಆಡಳಿತಗಾರ ಎಂದು ಚಿತ್ರಿಸಿದ್ದರು.

ಒಂದು ನಿರ್ದಿಷ್ಟವಾದ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯು ಯಾವ ರೀತಿ ಸ್ಪಂದಿಸುತ್ತಾನೆ ಎಂಬುದನ್ನು ಅಧ್ಯಯನ ಮಾಡಲು ಜನಪದರ ಹೇಳಿಕೆಗಳೇ ಸಾಕ್ಷಿ. ಟಿಪ್ಪು ಕ್ರಿ.ಶ.೧೭೬೦ ರಿಂದ ೧೭೯೯ ರವರೆಗಿನ ಅವಧಿಯಲ್ಲಿ ಮಹತ್ವದ ವ್ಯಕ್ತಿಯಾಗಿದ್ದಾನೆ.

ಹೈದಾರಲಿಯು ಉಳಿಯುವ ಸಲುವಾಗಿ ಸಂಧಾನಕ್ಕೆ ಸಿದ್ಧನಾಗಿದ್ದ ವ್ಯಕ್ತಿತ್ವದವನು. ಇದಕ್ಕಾಗಿ ಮೊದಲ ಮೈಸೂರು ಯುದ್ಧದಲ್ಲಿ ಬ್ರಿಟೀಷರೊಂದಿಗೆ ಶಾಂತಿಯ ಒಪ್ಪಂದವನ್ನು ಮಾಡಿಕೊಂಡು, ಮರಾಠರ ವಿರುದ್ಧದ ಯುದ್ಧಕ್ಕೆ ಅವರ ಸಹಾಯವನ್ನು ಪಡೆದುಕೊಂಡ. ಆದರೆ ಟಿಪ್ಪು ಸುಲ್ತಾನ್ ಎಂದಿಗೂ ಆ ರೀತಿ ಮಾಡಿದವನಲ್ಲ. "ನೂರು ವರುಷ ನರಿಯಂತೆ ಬಾಳುವುದಕ್ಕಿಂತ ಒಂದೇ ಒಂದು ದಿನ ಹುಲಿಯಂತೆ ಬಾಳುವದೇ ಲೇಸೆಂದು" ಭಾವಿಸಿದ್ದ ವ್ಯಕ್ತಿ. ಹೀಗಾಗಿ ತನಗೆ ಸಾವು ಶತಸಿದ್ಧವೆಂದ ಮೇಲೆ ಧೈರ್ಯದಿಂದ ಸ್ವೀಕರಿಸಬೇಕು. ಸ್ವಾತಂತ್ರ್ಯ ಹೋದ ಮೇಲೆ ಜೀವನವೂ ಹೋದಂತೆ ಎಂದು ಭಾವಿಸಿದ್ದ. ಇತಿಹಾಸವನ್ನು ಸೃಷ್ಟಿಸಿದ ವ್ಯಕ್ತಿಗಳು ಆ ಕಾಲದ ಮೌಲ್ಯ ಹಾಗೂ ಪ್ರವೃತ್ತಿಗಳ ಮೇಲೆ ಚೆಲ್ಲಿದ ಬೆಳಕಿನ ಆಧಾರದ ಮೇಲೆ ನಾವು ಅನುಭವವನ್ನು ಗಳಿಸಿಕೊಳ್ಳಬೇಕು.

೩.೨ ಟಿಪ್ಪು ಸುಲ್ತಾನನ ಬಿರುದು ಬಾವಲಿಗಳು

ಮೈಸೂರು ಹುಲಿ ಟಿಪ್ಪು ಸುಲ್ತಾನನ ಹೆಸರು ಫತೇ ಅಲಿಖಾನ್ ಟಿಪ್ಪು ಎಂದು. ಆದರೆ ತಂದೆ-ತಾಯಿಗಳು ಈತನನ್ನು ಪ್ರೀತಿಯಿಂದ ಫತೇ ಅಲಿ ಎಂದು ಕರೆಯುತ್ತಿದ್ದರು.

ತದನಂತರ ಫತೇ ಅಲಿ ಟಿಪ್ಪು ಎಂದಾದನು. ಹೈದರಾಲಿಯು ಕ್ರಿ.ಶ. ೧೭೬೧ರಲ್ಲಿ ಮೈಸೂರಿನ ನವಾಬನಾದ ನಂತರ ಫತೇ ಅಲಿ ಟಿಪ್ಪುವು ಟಿಪ್ಪು ಸುಲ್ತಾನ್ ಆದ.

ವೀರನೂ - ಧೀರನೂ ಆದ ಟಿಪ್ಪು ಸುಲ್ತಾನನು ಕೇವಲ ತನ್ನ ೧೭ನೇ ವಯಸ್ಸಿನಲ್ಲಿ ಮದ್ರಾಸಿನಲ್ಲಿದ್ದ ಬ್ರಿಟೀಷರನ್ನು ಯದ್ಧದಲ್ಲಿ ಸೋಲಿಸಿ ಪರಾಕ್ರಮವನ್ನು ಮೆರೆದಿದ್ದನು. ಇದರಿಂದ ಸಂತೋಷಗೊಂಡ ಹೈದಾರಾಬಾದಿನ ನಿಜಾಮ ಟಿಪ್ಪು ಸುಲ್ತಾನನಿಗೆ 'ನಸೀಬ್-ಉದ್-ದೌಲ' ಬಿರುದನ್ನೂ ಕೊಟ್ಟ. ಕ್ರಿ.ಶ.೧೭೮೦ರ ಸೆಪ್ಟಂಬರ್ ತಿಂಗಳಲ್ಲಿ ಕಾಂಚಿಪುರದ ಪೊಲ್ಲಿಲೂರಿನಲ್ಲಿ ಟಿಪ್ಪು ಸುಲ್ತಾನನು ಬ್ರಿಟೀಷರ ಯುವ ವೀರಾನಾಗಿದ್ದ ಕರ್ನಲ್ ಬೈಲಿಯನ್ನು ವೀರಾವೇಶದಿಂದ ಮುತ್ತಿ, ಆತನ ಸೈನ್ಯವನ್ನು ಸದೆ ಬಡಿದು ಬೈಲಿಯನ್ನು, ಸೈನ್ಯದ ಸೈನಿಕರನ್ನು ಜೀವಂತವಾಗಿ ಸೆರೆ ಹಿಡಿದಿದ್ದ.

ಟಿಪ್ಪು ಸುಲ್ತಾನನ ಈ ಪರಾಕ್ರಮವನ್ನು ಕೇಳಿ ದಂಗಾಗಿ ಹೋಗಿದ್ದ ಬ್ರಿಟೀಷರ ಸರ್ ಥಾಮಸ್ ಮುನ್ರೊ ತನ್ನ ಎಲ್ಲ ಶಸ್ತ್ರಾಸ್ತ್ರಗಳನ್ನು ಕಾಂಚಿಪುರದ ಕೆರೆಗೆ ಎಸೆದು "ಯುದ್ಧ ಭೂಮಿಯಲ್ಲಿ ಗರ್ಜಿಸುತ್ತಿದ್ದ ಮೈಸೂರಿನ ರಾಜಕುಮಾರ ಟಿಪ್ಪು ಸುಲ್ತಾನನು ಬರಿಯ ಮನುಷ್ಯನಷ್ಟೇ ಅಲ್ಲ; ಇವನೊಬ್ಬ ಹುಲಿ. ಇವನ ಜೊತೆ ನಾನು ಯುದ್ಧವನ್ನು ಮಾಡಿದರೆ ಅದರಲ್ಲಿ ಸೋತು, ಆತನ ಕೈಸೆರೆ ಸಿಕ್ಕಿದರೆ, ನನಗೆ ಜೀಸಸ್ ಕ್ರೈಸ್ತನ ಕೊನೆಯ ದಿನವನ್ನು ಕಾಣಿಸುತ್ತಾನೆ" ಎಂದು ಹೇಳಿ ಅಲ್ಲಿಂದ ಮದ್ರಾಸಿನ ಕಡೆ ಪೇರಿಯನ್ನು ಕಿತ್ತ. ಅಂದಿನಿಂದ ಬ್ರಿಟೀಷ್ ಸೈನಿಕರು ಟಿಪ್ಪು ಸುಲ್ತಾನನನ್ನು ಕೇವಲ ಟಿಪ್ಪು ಸುಲ್ತಾನ್ ಎಂದು ಕರೆಯದೆ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಎಂದು ಕರೆಯತೊಡಗಿದರು.

ಕ್ರಿ.ಶ.೧೭೮೨ ರಲ್ಲಿ ಹೈದರಾಲಿಯ ನಿಧನವಾದ ನಂತರ ಮೈಸೂರಿನ ಮುಖಂಡನಾಗಿ ಹೊರಹೊಮ್ಮಿದ ಟಿಪ್ಪು ಸುಲ್ತಾನನು ಬಾದ್ ಷಾ ಟಿಪ್ಪು ಸುಲ್ತಾನ್ ಎಂದು ಬಿರುದಾಂಕಿತನಾದನು. ಕ್ರಿ.ಶ.೧೭೮೭ರಲ್ಲಿ ಮರಾಠರು ಟಿಪ್ಪು ಸುಲ್ತಾನನ ಸೈನ್ಯದಿಂದ ಸೋತ ಬಳಿಕ ಈತನೊಂದಿಗೆ ಶಾಂತಿಯ ಒಪ್ಪಂದವೊಂದನ್ನು ಮಾಡಿಕೊಂಡರು. ಆ ಒಪ್ಪಂದದಲ್ಲಿ ಟಿಪ್ಪು ಸುಲ್ತಾನನನ್ನು ನವಾಬ್ ಟಿಪ್ಪು ಸುಲ್ತಾನ್ ಅಲಿಖಾನ್ ಎಂದು ಸಂಬೋಧಿಸಿದರು.

ಕ್ರಿ.ಶ.೧೭೮೭ರಲ್ಲಿ ಟಿಪ್ಪು ಸುಲ್ತಾನನು ಟರ್ಕಿಯ ಖಲೀಫನಾಗಿದ್ದ ಸಲೀಮನ ಬಳಿಗೆ ರಾಯಭಾರಿಗಳ ನಿಯೋಗವೊಂದನ್ನು ಮೀರ್ ಗುಲಾಮ್ ಅಲಿ ಲಂಗ್ಡಾ ಎಂಬುವವನ ಮುಖಂಡತ್ವದಲ್ಲಿ ಕಳಹಿಸಿದ್ದನು. ಬ್ರಿಟೀಷರ ವಿರುದ್ದದ ತನ್ನ ಹೋರಾಟಕ್ಕೆ ಟರ್ಕಿಯ ಖಲೀಫನಾದ ಸಲೀಮನು ಬೆಂಬಲಿಸಬೇಕೆಂದು ಟಿಪ್ಪು ಸುಲ್ತಾನನು ಮನವಿಯನ್ನು ಮಾಡಿಕೊಂಡಿದ್ದ. ಇದೇ ಸಂದರ್ಭದಲ್ಲಿ ಟರ್ಕಿ ದೇಶವನ್ನು ರಷ್ಯಾದ ಸೇನಾಪಡೆಗಳು ಮುತ್ತಿಗೆ

ಹಾಕಲು ನಿರ್ಧರಿಸಿದ್ದವು. ಹೀಗಾಗಿ ಟರ್ಕಿಯ ಖಲೀಫ ಸಲೀಮನು ಟಿಪ್ಪು ಸುಲ್ತಾನನಿಗೆ ಮರು ಪತ್ರವನ್ನು ಬರೆದು "ಈಗ ನಾವೇ ಕಷ್ಟದಲ್ಲಿದ್ದೇವೆ" ರಷ್ಯಾದ ವಿರುದ್ಧ ಈಗಲೇ ನಾವು ಹೋರಾಡಬೇಕಿದೆ. ಆದ್ದರಿಂದ ನಾವು ನಿಮಗೆ ಈಗ ಬೆಂಬಲವನ್ನು ಕೊಡಲು ಸಾಧ್ಯವಿಲ್ಲ. ನೀವು ಅನ್ಯಥಾ ಭಾವಿಸಬೇಡಿ. ನೀವು ನಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ನಾವು ತುಂಬ ಸಂತೋಷ ಪಡುತ್ತೇವೆ. ಒಬ್ಬ ಮುಸ್ಲಿಂ ದೊರೆಯಾಗಿ ಬ್ರಿಟೀಷರ ವಿರುದ್ಧ ಕೆಚ್ಚದೆಯಿಂದ ಹೋರಾಡುತ್ತಿರುವ ನಿಮ್ಮ ಧೈರ್ಯ ಸಾಹಸವನ್ನು ಮೆಚ್ಚಿ ನಾವು ನಿಮಗೆ ನಾಸಿರುಲ್ ಇಸ್ಲಾಮ್ ವಲ್ ಮುಸ್ಲಿಮೀನ್ ಅಂದರೆ ಇಸ್ಲಾಮ್ ಮತ್ತು ಮುಸ್ಲಿಮರ ಸಹಾಯಕ ಎಂಬ ಬಿರುದನ್ನು ನೀಡುತ್ತಿದ್ದೇವೆ" ಎಂದು ತಿಳಿಸಿದನು. ಈ ಪತ್ರವು ಟಿಪ್ಪು ಸುಲ್ತಾನನಿಗೆ ಅಧಿಕೃತವಾಗಿ ತಲುಪಿದ ನಂತರ ಟಿಪ್ಪು ನಾಸಿರುಲ್ ಇಸ್ಲಾಮ್ ವಲ್ ಮುಸ್ಲಿಮೀನ್ ಟಿಪ್ಪು ಸುಲ್ತಾನ್ ಎಂದು ಬಿರುದಾಂಕಿನಾದ.

೩.೩ ಟಿಪ್ಪುವಿನ ಕನ್ನಡ ಪ್ರೇಮ

ಹೈದರಾಲಿಯು ಹುಟ್ಟಿದ್ದು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆ ಎಂಬ ಗ್ರಾಮದಲ್ಲಿ. ಈ ಗ್ರಾಮವು ಆ ಕಾಲದಿಂದ-ಈ ಕಾಲದವರೆಗೂ ಕನ್ನಡನಾಡಿನ ಒಂದು ಭಾಗವೇ ಆಗಿದೆ. ಟಿಪ್ಪು ಸುಲ್ತಾನ್ ಹುಟ್ಟಿದ್ದು ದೇವನಹಳ್ಳಿಯಲ್ಲಿ. ಬೆಳೆದಿದ್ದು ಮೈಸೂರು ಬಳಿಯ ಶ್ರೀರಂಗಪಟ್ಟಣದಲ್ಲಿ. ಮುಂದೆ ರಾಜನಾಗಿ ಆಡಳಿತ ಮಾಡಿದ್ದು ಇಲ್ಲಿಯೇ. ಈತನ ಬಾಲ್ಯದ ಸಹಪಾಠಿಗಳು ಶ್ರೀರಂಗಪಟ್ಟಣದ ಒಕ್ಕಲಿಗರು ಮತ್ತು ದಲಿತರು. ಈತನು ಮೈಸೂರಿನ ರಾಜನಾಗಿ ಅಧಿಕಾರವನ್ನು ವಹಿಸಿಕೊಂಡಾಗ ಮೈಸೂರು ರಾಜ್ಯದ ಪ್ರಜೆಗಳಲ್ಲಿ ಶೇ.೯೦ ಭಾಗ ಕನ್ನಡಿಗರೇ ಇದ್ದರು.

ಹೈದರಾಲಿಯು ಮೈಸೂರು ರಾಜಕೀಯ ರಂಗದಲ್ಲಿ ದಿನೇ ದಿನೇ ಮೇಲೆ ಬರುತ್ತಿದ್ದುದ್ದನ್ನು ಸಹಿಸದ ಮೈಸೂರು ಮಹಾರಾಣಿಯ ಬಲಗೈ ಬಂಟನಾಗಿದ್ದ ಖಂಡೇರಾಯನು ಕ್ರಿ.ಶ.೧೭೬೦ರಲ್ಲಿ ಹೈದರಾಲಿಯನ್ನು ಹಿಡಿದು ಕೊಲ್ಲಲು ಯತ್ನಿಸಿದನು. ಇದನ್ನು ಮುಂಚಿತವಾಗಿಯೇ ತಿಳಿದ ಹೈದರಾಲಿ, ಪತ್ನಿ ಮತ್ತು ಪುತ್ರರಾದ ಹತ್ತು ವರ್ಷದ ಟಿಪ್ಪು ಸುಲ್ತಾನ್‌ನನ್ನು, ೧೨ ವರ್ಷದ ಕರೀಮ್‌ನನ್ನು ಬಂಧಿಸಿ ಶ್ರೀರಂಗಪಟ್ಟಣದ ಕೋಟೆಯೊಳಗಿನ ಗೌಡರೊಬ್ಬರ ಹಟ್ಟಿಯಲ್ಲಿ ಕೂಡಿ ಹಾಕಿದ್ದ. ಆಗ ಹೈದರಾಲಿಯ ಕುಟುಂಬಕ್ಕೆ ಗೌಡರ ಮನೆಯವರೆಲ್ಲರು ಊಟ ತಿಂಡಿಯನ್ನು ನೀಡುತ್ತಿದ್ದರು. ಇಂತಹ ಪರಿಸರದಲ್ಲಿ ಬೆಳೆದ ಟಿಪ್ಪು ಸುಲ್ತಾನನು ಸಹಜವಾಗಿಯೇ ಆ ಪರಿಸರದ ಭಾಷೆಯಾದ ಕನ್ನಡದಲ್ಲಿ ಮಾತನಾಡುತ್ತಿದ್ದ. ಬರೆಯುತ್ತಿದ್ದ ಹಾಗೂ ಓದುತ್ತಿದ್ದ. ಟಿಪ್ಪು ಸುಲ್ತಾನ್ ಬಾಲ್ಯದ ಗೆಳೆಯರಲ್ಲಿ ಬಹುತೇಕರು ಗೌಡರು ಹಾಗೂ ಹಿಂದುಳಿದ ಮತ್ತು ದಲಿತ ಜನಾಂಗದ ಹುಡುಗರು ಇದ್ದರು. ಈ ಹುಡುಗರ ಜೊತೆ

ಬಾಲಕ ಟಿಪ್ಪುಸುಲ್ತಾನ್ ಗೋಲಿಯಾಟ, ಮರಕೋತಿ, ಚಿನ್ನಿದಾಂಡು, ಹೊಳೆಯಲ್ಲಿ ಈಜಾಡುವುದು ಬಾಲ್ಯದ ಆಟ -ಪಾಠಗಳನ್ನೆಲ್ಲ ಆಡಿದ್ದಾನೆ.

ಬಹು ಮಹತ್ವಾಕಾಂಕ್ಷಿಯಾಗಿದ್ದ ಹೈದರಾಲಿಯು ಮುಂದೊಂದು ದಿನ ತಾನು ಈ ರಾಜ್ಯದ ರಾಜನಾಗುತ್ತೇನೆಂದು ಊಹಿಸಿದ್ದ. ತನ್ನ ನಂತರ ತನ್ನ ಮಗನು ಈ ರಾಜ್ಯದ ಉತ್ತರಾಧಿಕಾರಿಯಾಗುತ್ತಾನೆಂದು ಸರಿಯಾಗಿಯೇ ತರ್ಕಿಸಿದ್ದ. ಹೀಗಾಗಿ ಟಿಪ್ಪು ಸುಲ್ತಾನನಿಗೆ ಬಾಲ್ಯದಲ್ಲಿಯೇ ಕನ್ನಡ, ಉರ್ದು, ಪರ್ಷಿಯನ್, ಅರೇಬಿಕ್ ಮುಂತಾದ ಭಾಷೆಗಳನ್ನು ಕಲಿಸಿದ್ದ. ಟಿಪ್ಪು ಸುಲ್ತಾನ್ ದೊಡ್ಡವನಾದ ಮೇಲೆ ಬಹುಶ: ಮಲೆಯಾಳ, ತಮಿಳು, ಇಂಗ್ಲೀಷ್, ಫ್ರೆಂಚ್ ಭಾಷೆಗಳನ್ನೂ ಕಲಿತಿರಬಹುದು. ಟಿಪ್ಪು ಸುಲ್ತಾನನ ವಿದ್ಯಾ ಗುರುಗಳಲ್ಲಿ ಕನ್ನಡ ಭಾಷೆಯನ್ನು ಕಲಿಸಿದ ಗೋವರ್ಧನ ಪಂಡಿತ, ಉರ್ದು – ಪರ್ಷಿಯನ್ ಭಾಷೆಗಳನ್ನು ಕಲಿಸಿದ ಅಲಿ ಹುಸೇನ್ ಫಕ್ರುದ್ದೀನ್ ಪ್ರಮುಖರು.

ಹೈದರಾಲಿ – ಟಿಪ್ಪುಸುಲ್ತಾನರ ಕಾಲದಲ್ಲಿ ಆಡಳಿತ ಭಾಷೆಯು ಕನ್ನಡವೇ ಆಗಿತ್ತಾದರೂ ಇವರ ರಾಜ್ಯವು ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದವರೆಗೂ ಹಬ್ಬಿದ್ದರಿಂದ ಸಹಜವಾಗಿಯೇ ಆ ಪ್ರದೇಶದ ಭಾಷೆಗಳು ಆಯಾ ಪ್ರಾಂತ್ಯದ ಆಡಳಿತ ಭಾಷೆಯಾಗಿದ್ದವು. ಅಂದಿನ ಕಾಲದಲ್ಲಿ ಇಡೀ ಭಾರತದಾದ್ಯಂತ ಚಲಾವಣೆಯಲ್ಲಿದ್ದ ಪರ್ಷಿಯನ್ ಭಾಷೆಯು ಟಿಪ್ಪು ಸುಲ್ತಾನನ ರಾಜ್ಯದಲ್ಲಿಯೂ ಸಂಪರ್ಕ ಭಾಷೆಯಾಗಿ ಬೆಳೆದಿತ್ತು. ಆದರೆ ಕನ್ನಡನಾಡಿನ ಪ್ರದೇಶಗಳಲ್ಲೆಲ್ಲ ಕನ್ನಡವೇ ಆಡಳಿತ ಭಾಷೆಯಾಗಿತ್ತು. ತಂದೆ-ಮಕ್ಕಳಿಬ್ಬರೂ ತಮ್ಮ ರಾಜ್ಯದಲ್ಲೆಲ್ಲ ಆಡಳಿತ ಕ್ರಮದಲ್ಲಿ ಬಹು ಹಿಂದಿನಿಂದಲೂ ಆಚರಣೆಯಲ್ಲಿದ್ದಂತಹ ಕ್ರಮವನ್ನೇ ಅನುಸರಿಸಿದ್ದರು. ಹೀಗಾಗಿ ಆಡಳಿತ ಭಾಷೆ ಕನ್ನಡವೇ ಆಗಿತ್ತು. ಅದನ್ನೆ ಇವರು ಮುಂದುವರಿಸಿದ್ದರು. ಇವರ ಕಾಲದ ಸರ್ಕಾರದ ನೌಕರರಾದ ತರಫ್‌ದಾರರು ಕನ್ನಡ ಭಾಷೆಯಲ್ಲಿಯೇ ಕಂದಾಯದ ಲೆಕ್ಕ ಪತ್ರಗಳನ್ನು ಇಡುತ್ತಿದ್ದರು. ಇವುಗಳಲ್ಲಿ ಅವಶ್ಯಕವಾದವುಗಳನ್ನು ಮಾತ್ರ ಮರಾಠಿ-ಪರ್ಷಿಯನ್ ಭಾಷೆಗೆ ಭಾಷಾಂತರಿಸುತ್ತಿದ್ದರು.

ಹಿಂದೂ ಮಠಮಾನ್ಯ ದೇವಾಲಯಗಳಿಗೆ ರಾಜಧಾನಿ ಶ್ರೀರಂಗಪಟ್ಟಣದಿಂದ ಹೈದರಾಲಿ ಟಿಪ್ಪು ಸುಲ್ತಾನರಿಂದ ಹೋಗುತ್ತಿದ್ದ ಪತ್ರಗಳೆಲ್ಲವು ಕನ್ನಡದಲ್ಲಿಯೇ ಇರುತ್ತಿದ್ದವು. ಜೊತೆಗೆ ಈ ದೇವಾಲಯಗಳಿಗೆ ನೀಡುತ್ತಿದ್ದ ಪೂಜಾ ಸಾಮಾಗ್ರಿಗಳಾದ ಬೆಳ್ಳಿಪಾತ್ರೆ, ಬೆಳ್ಳಿ ಪಲ್ಲಕ್ಕಿ, ಚಿನ್ನದ ಕಿರೀಟ ಇತ್ಯಾದಿಗಳೆಲ್ಲದರ ಮೇಲೂ ಟಿಪ್ಪು ಸುಲ್ತಾನರ ಕಾಣಿಕೆ, ಟಿಪ್ಪು ಸುಲ್ತಾನರ ಸೇವೆ,

ಹೈದರಾಲಿಯ ಕಾಣಿಕೆ, ಟಿಪ್ಪು ಸುಲ್ತಾನ್ ಕಾ ಅಮೀಲು ಜಾಫರ್‌ಕಾನ ಬೋಂಮಣಿಯವರ ಸೇವೆ ಇತ್ಯಾದಿಯಾಗಿ ಕನ್ನಡದಲ್ಲಿಯೇ ಬರೆಸುತ್ತಿದ್ದರು.

ಇವುಗಳಲ್ಲದೆ ಟಿಪ್ಪು ಸುಲ್ತಾನ್‌ರಿಂದ ಕಿಲ್ಲೆದಾರ, ಪಾರುತ್ಯೆದಾರ, ಅಮಿಲ್ಲ, ಅಸಫ್ ಮುಂತಾದರವರಿಗೆ ಬರೆಯುವ ಪತ್ರಗಳೂ ಕೂಡ ಕನ್ನಡದಲ್ಲಿಯೇ ಇರುತ್ತಿದ್ದವು. ಇಷ್ಟೇ ಯಾಕೆ ಕ್ರಿ.ಶ.೧೭೯೯ರಂದು ಶ್ರೀರಂಗಪಟ್ಟಣದ ಕದನದಲ್ಲಿ ಟಿಪ್ಪು ಸುಲ್ತಾನ್ ಮಡಿದ ಕೂಡಲೇ ಬ್ರಿಟೀಷರು ಆತನ ರಾಜ್ಯವನ್ನು ಮೂರು ಭಾಗಗಳನ್ನಾಗಿ ಮಾಡಿ ಒಂದನ್ನು ಮರಾಠಿಗರಿಗೆ, ಒಂದು ಭಾಗವನ್ನು ನಿಜಾಮರಿಗೆ, ಉಳಿದ ಭಾಗವನ್ನು ಮೈಸೂರಿನ ರಾಜವಂಶಸ್ಥರಿಗೆ ನೀಡಿದರು. ಈ ರೀತಿ ನೀಡುವಾಗ ಕಂಪನಿಯ ಸರ್ಕಾರ ಮತ್ತು ಮೈಸೂರು ರಾಜನ ನಡುವೆ ನಡೆದ ಒಪ್ಪಂದದ ಕರಾರು ಪತ್ರವು ಪರ್ಷಿಯನ್, ಆಂಗ್ಲ ಮತ್ತು ಅಚ್ಚ ಕನ್ನಡದ ಭಾಷೆಗಳಲ್ಲಿಯೇ ಬರೆಯಲ್ಪಟ್ಟಿದೆ. ಅಂದರೆ ಯುದ್ಧವು ಮುಗಿದ ಕೆಲವೇ ದಿನಗಳಲ್ಲಿ ಶುದ್ಧ ಕನ್ನಡದಲ್ಲಿ ಒಪ್ಪಂದದ ಕರಾರು ಪತ್ರಗಳನ್ನು ಬರೆಯುವವರು ಶ್ರೀರಂಗಪಟ್ಟಣದಲ್ಲಿ ಇದ್ದರೆಂದರೆ ಆಗ ಅವರು ಕನ್ನಡ ಭಾಷೆಯನ್ನು ಯಾವಾಗಲೂ ಉಪಯೋಗಿಸುತ್ತಿದ್ದರೆಂದೇ ಅರ್ಥ, ಹೀಗಾಗಿ ಹೈದರಾಲಿ–ಟಿಪ್ಪು ಸುಲ್ತಾನರ ಕಾಲದಲ್ಲಿ ಕನ್ನಡ ಭಾಷೆಯು ಆಡಳಿತ ಭಾಷೆಯಾಗಿಯೇ ಇತ್ತು.

ಟಿಪ್ಪು ಸುಲ್ತಾನನು ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟೊಂದನ್ನು ಕಟ್ಟಿಸಲು ನಿರ್ಧರಿಸಿ ಅದಕ್ಕೆ ಶಂಕುಸ್ಥಾಪನೆಯನ್ನು ಮಾಡಿದ್ದ. ಆ ಶಂಕುಸ್ಥಾಪನೆಯ ಶಿಲಾಶಾಸನವು ಪರ್ಷಿಯನ್ ಲಿಪಿಯಲ್ಲಿದ್ದರೂ ಒಳಗಿನ ತಿರುಳು ಮಾತ್ರ ಕನ್ನಡ ಭಾಷೆಯದ್ದು, ಟಿಪ್ಪು ಸುಲ್ತಾನ್ ಶ್ರೀರಂಗಪಟ್ಟಣದ ಗಂಜಾಮ್ ಬಳಿ, ಬೆಂಗಳೂರಿನ ಕೆಂಪೇಗೌಡರ ಕೋಟೆಯ ಬಳಿ, ತಾನು ಇಷ್ಟಪಟ್ಟು ಕಟ್ಟಿಸಿದ ಅರಮನೆಗಳಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ನೀಡಿರುವ ಎದೆಬಿಲ್ಲೆಗಳಲ್ಲಿ ಕನ್ನಡದ ಬರಹಗಳು ಇವೆ.

ಮೇಲುಕೋಟೆಯ ಶ್ರೀ ನರಸಿಂಹಸ್ವಾಮಿ ದೇವಾಲಯಕ್ಕೆ ನೀಡಿದ ದತ್ತಿಯ ವಿಷಯವನ್ನು ಬೃಹತ್ ಬಂಡೆಯ ಮೇಲೆ ಕನ್ನಡ ಭಾಷೆಯಲ್ಲಿ ಕೆತ್ತಿಸಿರುವುದು ಮತ್ತೊಂದು ಉದಾಹರಣೆ.

ಇದೆಲ್ಲಕ್ಕಿಂತಲೂ ಹೆಚ್ಚಾಗಿ ಇನ್ನೊಂದು ಗಮನಾರ್ಹವಾದ ವಿಷಯವನ್ನು ತಿಳಿಯಬೇಕು. ಅದೇನೆಂದರೆ ಟಿಪ್ಪು ಸುಲ್ತಾನನ ಸೈನ್ಯದ ಧ್ವಜಗಳು ಕೆಂಪು–ಹಳದಿ ಬಣ್ಣದಲ್ಲಿದ್ದು, ಮಧ್ಯದಲ್ಲಿ ಸೂರ್ಯನ ಚಿತ್ರವನ್ನು ಹೊಂದಿವೆ ಇದನ್ನು ರೂಪಿಸಿದ್ದು ಕ್ರಿ.ಶ.೧೭೮೨ರಲ್ಲಿ. ಬಹುಶಃ ಇದರಿಂದ ಸ್ಫೂರ್ತಿಯನ್ನು ಪಡೆದ ನಮ್ಮ ಕನ್ನಡದ ಚಳವಳಿಗಾರರು ಇಂದಿನ ನಮ್ಮ ರಾಜ್ಯದ ಧ್ವಜವನ್ನು ಕೆಂಪು ಹಳದಿಯ ಕನ್ನಡ ಬಾವುಟವೆಂದು ರೂಪಿಸಿಕೊಂಡಿದ್ದಾರೆ. ಅದೇ ತರಹ ಟಿಪ್ಪು

ಸುಲ್ತಾನನ ಇನ್ನೊಂದು ಪದಾತಿ ದಳದ ಬಾವುಟವು ಹಳದಿ ಬಣ್ಣದ್ದು, ಅಂದರೆ ಕೆಂಪು-ಹಳದಿ ಅಥವಾ ಹಳದಿ ಬಣ್ಣವು ಕನ್ನಡಿಗರ ಮೆಚ್ಚಿನ ಬಣ್ಣವಾಗಿದೆ. ಹೀಗಾಗಿ ಟಿಪ್ಪು ಸುಲ್ತಾನನ ಕಾಲದಿಂದ ನಮ್ಮ ಬಾವುಟಗಳು ಈ ಬಣ್ಣವನ್ನೇ ಹೊಂದಿವೆ.

ಟಿಪ್ಪು ಹೆಸರೇ ಕನ್ನಡ

ಟಿಪ್ಪು ಸುಲ್ತಾನನ ಅಧಿಕೃತವಾದ ಹೆಸರು ಫತೇ ಮಹಮದ್ ಟಿಪ್ಪು ಎಂದು. ಆದರೆ ಈತನನ್ನು ಟಿಪ್ಪು ಸುಲ್ತಾನ್ ಎಂದೇ ಪ್ರಪಂಚದಾದ್ಯಂತ ಕರೆಯಲಾಗುತ್ತದೆ. ಅಂದರೆ ಟಿಪ್ಪು ಎಂಬ ಶಬ್ದವು ಪರ್ಷಿಯನ್ ಭಾಷೆಯಲ್ಲಾಗಲಿ, ಅರೇಬಿಯನ್ ಭಾಷೆಯಲ್ಲಾಗಲಿ ಅಥವಾ ಇಸ್ಲಾಂ ಧರ್ಮದಲ್ಲಾಗಲಿ ಇಲ್ಲ.

“ಒಂದು ಕಥೆಯ ಪ್ರಕಾರ, ಹೈದರಾಲಿಯು ಆಂಧ್ರಪ್ರದೇಶದ ಕಡಪದ ಕೋಟೆಯ ರಕ್ಷಕನಾದ ಮೀರ್ ಮುಯಿನ್-ಉನ್-ದಿನ್ ಎಂಬುವವನ ಮಗಳಾದ ಫಾತಿಮಾ ಉರೂಫ್ ಫಕ್ರುನ್ನಿಸ ಬೇಗಂಳನ್ನು ಮದುವೆಯಾದ. ಹಲವು ವರ್ಷಗಳ ಕಾಲ ಇವರಿಗೆ ಮಕ್ಕಳೇ ಆಗಲಿಲ್ಲ. ಆಗ ಒಬ್ಬ ಮುಸ್ಲಿಂ ಮೌಲ್ವಿಯ ಆದೇಶದಂತೆ ಫಾತಿಮಾಳು ತನ್ನ ಪತಿ ಹೈದರಾಲಿಯೊಂದಿಗೆ ಆರ್ಕಾಟಿನ ಟಿಪ್ಪು ಮಸ್ತಾನ್ ಔಲಿಯಾ ಎಂಬವವರ ಗೋರಿಗೆ ಹೋಗಿ, ಪ್ರಾರ್ಥಿಸಿಕೊಂಡಾಗ ಆಕೆಗೆ ಗಂಡು ಮಗುವೊಂದು ಜನಿಸಿತಂತೆ. ಆ ಕಾರಣ ಆ ಮಗುವಿಗೆ ಅದೇ ಸಂತನ ಹೆಸರಿನಲ್ಲಿ ಟಿಪ್ಪು ಸುಲ್ತಾನ್‌ನೆಂದು ನಾಮಕರಣ ಮಾಡಿದರಂತೆ”.[೧]

೩.೪ ಬ್ರಿಟೀಷರಲ್ಲಿ ತನ್ನ ಮಕ್ಕಳನ್ನು ಅಡವಿಟ್ಟ ಟಿಪ್ಪು ಸುಲ್ತಾನ್

ತನ್ನ ಪ್ರೀತಿಯ ಪತ್ನಿಯ ಅಕಾಲಿಕ ಸಾವಿನಿಂದ ಜರ್ಜರಿತನಾಗಿದ್ದ ಟಿಪ್ಪು ಸುಲ್ತಾನನು ದಿನೇ ದಿನೇ ಎಲ್ಲದರಲ್ಲೂ ಆಸಕ್ತಿ ಕಳೆದುಕೊಳ್ಳತೊಡಗಿದ. ಇದರಿಂದಾಗಿ ಆಡಳಿತದಲ್ಲಿ ಹದವು ತಪ್ಪಿತು. ಸೈನ್ಯದಲ್ಲಿ ಶಿಸ್ತು ಕುಸಿಯಿತು. ಇದೇ ಸುಸಂದರ್ಭ ಎಂದು ತಿಳಿದ ಟಿಪ್ಪು ಸುಲ್ತಾನನ ಕೆಲವಾರು ಆಪ್ತರು ಹೆಚ್ಚು ಹೆಚ್ಚು ಸಂಪತ್ತನ್ನು ದೋಚಿದರು. ಇದರಿಂದ ಸದಾ ಕಾಲ ತುಂಬಿ ತುಳುಕುತ್ತಿದ್ದ ರಾಜ್ಯದ ಬೊಕ್ಕಸವು ಬರಿದಾಗುತ್ತಾ ಬಂದಿತು. ಬೊಕ್ಕಸಕ್ಕೆ ಹರಿದು ಬರುವ ಆದಾಯವು ಕಡಿಮೆಯಾಗತೊಡಗಿತು. ಇದೇ ಸಂದರ್ಭಕ್ಕಾಗಿ ಕಾಯುತ್ತಿದ್ದ ಬ್ರಿಟೀಷರು ಟಿಪ್ಪು ಸುಲ್ತಾನನ ಮೇಲೆ ಯದ್ಧವನ್ನು ಘೋಷಿಸಿ ಅದನ್ನು ಹೇಗೋ ಗೆದ್ದು ಬಿಟ್ಟರು. ಬ್ರಿಟೀಷರ ಮುಂದೆ ಸೋತ ಟಿಪ್ಪು ಸುಲ್ತಾನನು ವಿಧಿಯಿಲ್ಲದೆ ಅವರ ಜೊತೆ ಶಾಂತಿಯ ಒಪ್ಪಂದವೊಂದನ್ನು ಮಾಡಿಕೊಂಡನು. ಆ ಒಪ್ಪಂದದಂತೆ ಆತನು ಬ್ರಿಟೀಷರಿಗೆ ಮೂರು ಕೋಟಿ ನಲವತ್ತು ಲಕ್ಷ ಪಗೋಡ (ರೂಪಾಯಿ)ಗಳನ್ನು ನೀಡಬೇಕಾಯಿತು.

ಬೊಕ್ಕಸದಲ್ಲಿ ಇಷ್ಟು ಹಣವು ಇದೆ ಅದನ್ನು ಬ್ರಿಟೀಷರಿಗೆ ಕೊಡತ್ತೇನೆ ಎಂದು ತಿಳಿದಿದ್ದ ಟಿಪ್ಪು ಸುಲ್ತಾನನು ಒಪ್ಪಂದವನ್ನು ಒಪ್ಪಿಯೇ ಬಿಟ್ಟ. ಆದರೆ ಬೊಕ್ಕಸದಲ್ಲಿ ಅಷ್ಟು ಹಣವೇ ಇರಲಿಲ್ಲ! ಆದಾಯವೂ ಹರಿದು ಬರುತ್ತಿಲ್ಲ! ಬರುತ್ತಿದ್ದ ಅಲ್ಪ ಪ್ರಮಾಣದ ಆದಾಯವು ಸರ್ಕಾರದಲ್ಲಿರುವ ಭ್ರಷ್ಟ ಅಧಿಕಾರಿಗಳ ಪಾಲಾಗುತ್ತಿತ್ತು. ವಾಸ್ತವ ಸ್ಥಿತಿ ಏನೆಂಬುದು ಟಿಪ್ಪು ಸುಲ್ತಾನನಿಗೆ ಆಗ ಅರಿವಾಯಿತು. ಬ್ರಿಟೀಷರು ಮಾತ್ರ ಒಪ್ಪಂದದಂತೆ ನಮ್ಮ ಹಣವನ್ನು ನಮಗೆ ನೀಡಿ, ಇಲ್ಲದಿದ್ದರೆ ನಿಮ್ಮ ಇಡೀ ರಾಜ್ಯವನ್ನು ಅಥವಾ ಅರ್ಧ ರಾಜ್ಯವನ್ನು ನಮಗೆ ಒಪ್ಪಿಸಿ ಬಿಡಿ ಎಂದು ಹಠ ಹಿಡಿದರು.

ಇದನ್ನು ಕೇಳುತ್ತಿದ್ದಂತೆಯೇ ಟಿಪ್ಪು ಸುಲ್ತಾನನು ಹುಲಿಯಂತೆ ಘರ್ಜಿಸಿ "ನಿಮ್ಮ ಹಣವನ್ನು ನಿಮ್ಮ ಮುಖದ ಮೇಲೆ ಬಿಸಾಕುತ್ತೇನೆ. ಅದುವರೆವಿಗೂ ಬೇಕಾದರೆ ನನ್ನ ಇಬ್ಬರು ಗಂಡು ಮಕ್ಕಳನ್ನು ನಿಮ್ಮ ಬಳಿ ಒತ್ತೆಯಾಳಾಗಿ ಇಟ್ಟುಕೊಳ್ಳಿ. ಆದರೆ, ಯಾವುದೇ ಕಾರಣಕ್ಕೂ ನೀವು ನನ್ನ ಈ ರಾಜ್ಯದೊಳಗೆ ಕಾಲಿಡಬಾರದು. ಯಾಕೆಂದರೆ ಇದು ವೀರಾದಿ-ವೀರರು ಹುಟ್ಟಿ ಬೆಳೆದು ಆಳಿದ ಮಣ್ಣು. ಇಲ್ಲಿಯ ಜನರು ಶಾಂತಿ ಪ್ರಿಯರು, ಹಾಗೆಯೇ ಸ್ವಾಭಿಮಾನಿಗಳು. ಇಲ್ಲಿ ಬಹುಸಂಖ್ಯಾತ ಹಿಂದೂಗಳಿದ್ದರೂ ಕೂಡ ಮುಸ್ಲಿಮನಾದ ನನಗೆ ಪ್ರಾಣವನ್ನು ಕೊಡುತ್ತಾರೆ. ಪ್ರೀತಿಸುತ್ತಾರೆ. ಇಂತಹ ಜನರನ್ನು ನಾನು ನಿಮ್ಮ ಗುಲಾಮರನ್ನಾಗಿ ಮಾಡಲು ಖಂಡಿತ ಒಪ್ಪುವುದಿಲ್ಲ. ಹುಲಿಯು ಉಪವಾಸವಿರುತ್ತದೆಯೇ ವಿನಾ ಹುಲ್ಲನ್ನು ತಿನ್ನುವುದಿಲ್ಲ. ಅದೇ ತರಹ ಮೈಸೂರಿನವರಾದ ನಾವು ಕೊಟ್ಟ ಮಾತಿಗೆ ಬದ್ಧರೇ ವಿನಾ ತಪ್ಪುವವರಲ್ಲ. ಸ್ವಲ್ಪ ಕಾಲಾವಕಾಶವನ್ನು ನೀಡಿ ನಿಮ್ಮ ದುಡ್ಡನ್ನು ನಿಮ್ಮ ಮುಖದ ಮೇಲೆ ಬಿಸಾಡುತ್ತೇನೆ" ಎಂದು ಘರ್ಜಿಸಿದ.

ಟಿಪ್ಪು ಸುಲ್ತಾನನ ರೋಷಾವೇಶದ ಈ ಮಾತುಗಳನ್ನು ಕೇಳಿ ಒಳಗೊಳಗೆ ನಡುಗಿದ ಬ್ರಿಟೀಷರು ಅದನ್ನು ತೋರ್ಪಡಿಸಿಕೊಳ್ಳದೆ "ಆಯಿತು ಹಾಗೆಯೇ ಮಾಡಿ, ಈಗ ನಿಮ್ಮ ಇಬ್ಬರು ಗಂಡು ಮಕ್ಕಳನ್ನು ನಮ್ಮಲ್ಲಿ ಒತ್ತೆ ಇಡಿ" ಎಂದರು. ಬ್ರಿಟೀಷರ ಈ ಮಾತಿಗೆ ಒಪ್ಪಿದ ಟಿಪ್ಪು ಸುಲ್ತಾನನು ತನ್ನ ಇಬ್ಬರು ಪುಟ್ಟ-ಪುಟ್ಟ ಮಕ್ಕಳಾದ ಅಬ್ದುಲ್ ಖಾಲಿಕ್ ಸುಲ್ತಾನ್ ಮತ್ತು ಮುಯಿಜ್-ಉದ್-ದಿನ್-ಸುಲ್ತಾನ್ ಎಂಬುವವರನ್ನು ಅವರ ಬಳಿ ಒತ್ತೆಯಾಳಾಗಿ ಇಟ್ಟ ನಂತರ ರಾಜ್ಯದ ಅಭಿವೃದ್ಧಿಯತ್ತ ತನ್ನ ಗಮನವನ್ನು ಹರಿಸಿದ. ಟಿಪ್ಪು ಸುಲ್ತಾನನ ಈ ಕಷ್ಟದ ದಿನಗಳನ್ನು ಅರಿತ ಆತನ ಪ್ರಜೆಗಳು ಆತನ ಮಕ್ಕಳನ್ನು ಬ್ರಿಟೀಷರಿಂದ ಬಿಡಿಸಿಕೊಂಡು ಬರಲು ಬೇಕಾದ ಮೂರು ಕೋಟಿ ನಲವತ್ತು ಲಕ್ಷ ಹಣಕ್ಕೆ ಬದಲಾಗಿ ಹತ್ತು ಕೋಟಿ ಹಣವನ್ನು ಸಂಗ್ರಹಿಸಿ ನೀಡಿದರು. ಈ ಹಣದಲ್ಲಿ ಬ್ರಿಟೀಷರಿಗೆ ತಲುಪಿಸಬೇಕಾದ ಭಾಗವನ್ನು ಅವರಿಗೆ

ತಲುಪಿಸಿ, ಅವರಿಂದ ತನ್ನ ಮಕ್ಕಳನ್ನು ಬಿಡಿಸಿಕೊಂಡು ಬಂದ ಟಿಪ್ಪು ಸುಲ್ತಾನನು ಉಳಿದ ಹಣವನ್ನು ಪ್ರಜೆಗಳ ಏಳ್ಗೆಗಾಗಿಯೇ ಬಳಸಿದ.

೩.೫ ಅಪ್ಪಟ ಕನ್ನಡಿಗರ ಸೇನಾ ತುಕಡಿ 'ಜುಮ್ರ'

ತನ್ನ ಪ್ರೀತಿಯ ಪತ್ನಿ ಸುಲ್ತಾನ ರುಕಯ್ಯ ಬಾನು ಶತ್ರು ಪಡೆಗಳ ದಾಳಿಗೆ ತುತ್ತಾಗಿ ಅಸು ನೀಗಿದ್ದನ್ನು ಅರಗಿಸಿಕೊಳ್ಳಲು ಟಿಪ್ಪು ಸುಲ್ತಾನನಿಗೆ ಸಾಧ್ಯವಾಗಲೇ ಇಲ್ಲ. ಈತನ ತಾಯಿ ಅಂತೂ ತನ್ನ ಪ್ರೀತಿಯ ಮುದ್ದಿನ ಸೊಸೆಯು ತಮ್ಮೆಲ್ಲರನ್ನು ರಕ್ಷಿಸಿ, ತಾನು ಶತ್ರುಗಳ ದಾಳಿಗೆ ಬಲಿಯಾಗಿದ್ದನ್ನು ನೆನೆಸಿಕೊಂಡು ಹಾಸಿಗೆ ಹಿಡಿದಳು. ತಾಯಿಯ ಈ ರೋಧನೆಯನ್ನು ನೋಡಿದ ಟಿಪ್ಪು ಸುಲ್ತಾನನು ಇನ್ನೂ ಕುಗ್ಗಿ ಹೋದ. ಟಿಪ್ಪು ಸುಲ್ತಾನನ ಇಡೀ ಅರಮನೆಯಲ್ಲಿ ಸ್ಮಶಾನ ಮೌನ ಆವರಿಸಿತು. ಯಾರ ಮುಖದಲ್ಲೂ ನಗುವಿಲ್ಲ, ಕಳೆಇಲ್ಲ, ಮಾತಿಲ್ಲ, ಕಥೆ ಇಲ್ಲ, ಬೇಸರದ ಮುಖದಿಂದಲೇ ಮೌನವಾಗಿ ತಮ್ಮ-ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ತೊಡಗಿದರೆ ವಿನಾ ಅದರಲ್ಲಿ ಯಾವುದೇ ಸತ್ವವು ಅಡಗಿರಲಿಲ್ಲ.

ಶತ್ರು ಪಡೆಗಳು ಶ್ರೀರಂಗಪಟ್ಟಣವನ್ನು ಮುತ್ತಿದಾಗ ತಾನು ಏಕೆ ಅರಮನೆಯ ರಕ್ಷಣೆಗೆ ಗಮನವನ್ನು ಕೊಡಲಿಲ್ಲ? ತಾನು ಎಡವಿದ್ದೆಲ್ಲಿ? ಇದೆಲ್ಲ ಹೇಗಾಯಿತು? ಇದೇ ತರಹ ಮುಂದೆಯೂ ಆದರೆ ಗತಿ ಏನು? ಇಡೀ ರಾಜ್ಯವನ್ನೇ ರಕ್ಷಿಸುವ ತಾನು ತನ್ನ ಕುಟುಂಬದ ಸದಸ್ಯರ ರಕ್ಷಣೆ ಮಾಡಲಾರದೇ ಹೋದನೆ? ಇಲ್ಲ ಇದರ ಬಗ್ಗೆ ಗಮನ ಹರಿಸಲೇಬೇಕು. ಆಗಿರುವ ಲೋಪವನ್ನು ಹುಡುಕಿ ಅದನ್ನು ಕೂಡಲೇ ಸರಿಪಡಿಸಬೇಕು. ಇದಕ್ಕಾಗಿ ಸಭೆಯನ್ನು ಕರೆಯೋಣವೆಂದು ತೀರ್ಮಾನಿಸಿದ ಟಿಪ್ಪು ಸುಲ್ತಾನ್ ಅದರಂತೆ ತನ್ನ ಮಂತ್ರಿಗಳಾದ ಮೀರ್ ಸಾದಿಕ್, ಪೂರ್ಣಯ್ಯ, ಮಹಮದ್ ರಜಾ, ಗುಲಾಂ ಅಲಿಖಾನ್ ಲಂಗ್ಡಾ, ಅಹಮದ್ ಖಾನ್, ಸೈಯದ್ ಅಮೀನ ಮತ್ತು ಹಿರಿಯನಾದ ಸೈಯದ್ ಮಹಮ್ಮದ್ ಇವರೆಲ್ಲರನ್ನು ಕರೆದು ಸಭೆ ಸೇರಿಸಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿದನು.

ಈ ಚರ್ಚೆಯಲ್ಲಿ ಹೊರಹೊಮ್ಮಿದ ಒಂದು ಮುಖ್ಯ ವಿಷಯವೇನೆಂದರೆ ಇಡೀ ಶ್ರೀರಂಗಪಟ್ಟಣದ ಕೋಟೆಯಲ್ಲೆಲ್ಲ ಎಲ್ಲಿ ಬೇಕೆಂದರೆ ಅಲ್ಲಿ ಮುಕ್ತವಾಗಿ ಓಡಾಡಿಕೊಂಡಿದ್ದ ಇಬ್ಬರು ಫ್ರೆಂಚ್ ಅಧಿಕಾರಿಗಳು. ಮರಾಠಿಗರು ಮತ್ತು ಬ್ರಿಟೀಷರು ಕ್ರಿ.ಶ.೧೭೯೨ರ ಫೆಬ್ರವರಿಯಲ್ಲಿ ಶ್ರೀರಂಗಪಟ್ಟಣವನ್ನು ಮುತ್ತುವ ಮುನ್ನ ಈ ಇಬ್ಬರು ಫ್ರೆಂಚ್ ಅಧಿಕಾರಿಗಳನ್ನು ಬಂಧಿಸಿ ತಮ್ಮ ವಶದಲ್ಲಿಟ್ಟು ನಕ್ಷೆಯನ್ನು ಬರೆಸಿಕೊಂಡರು. ಅದರಲ್ಲಿ ಅರಮನೆ ಎಲ್ಲಿದೆ? ಟಿಪ್ಪು ಸುಲ್ತಾನನ ಕುಟುಂಬದ ಸದಸ್ಯರು ಎಲ್ಲಿ ವಾಸಿಸುತ್ತಾರೆ? ಇತ್ಯಾದಿ ಗುಪ್ತ ವಿಷಯಗಳನ್ನೆಲ್ಲ ತಿಳಿದುಕೊಂಡು ಅದರಂತೆ ತಮ್ಮ ಸೈನಿಕ ಕಾರ್ಯಾಚರಣೆಯನ್ನು ನಡೆಸಿದರು. ಅವರು ಅರಮನೆಗೆ ಸರಿಯಾಗಿ

ಗುರಿ ಇಟ್ಟು ಫಿರಂಗಿಯಿಂದ ದಾಳಿ ಮಾಡಿ, ಟಿಪ್ಪು ಸುಲ್ತಾನನ ಇಡೀ ಕುಟುಂಬವನ್ನು ಮುಗಿಸಿ ಬಿಡುವ ಉದ್ದೇಶವನ್ನು ಹೊಂದಿದ್ದರು. ಹೊರಗಿನ ದೇಶದ ವ್ಯಕ್ತಿಗಳು ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಮುಕ್ತವಾಗಿ ಓಡಾಡಿದ್ದರ ಫಲಿತಾಂಶ ಈ ದುರ್ಘಟನೆ. ಆದ್ದರಿಂದ ಶ್ರೀರಂಗಪಟ್ಟಣದಲ್ಲಿ ಹೊರಗಿನ ವ್ಯಕ್ತಿಗಳು ಮುಕ್ತವಾಗಿ ಸಂಚರಿಸುವುದನ್ನು ನಿಷೇಧಿಸಬೇಕು ಎಂಬ ನಿರ್ಣಯಕ್ಕೆ ಸಭೆಯು ಬಂದಿತು. ಜೊತೆಗೆ ಅರಮನೆಯಲ್ಲಿ ಇರುವ ಕುಟುಂಬದ ಸದಸ್ಯರ ರಕ್ಷಣೆಯನ್ನು ಸೈನ್ಯದ ಪ್ರತ್ಯೇಕ ತುಕಡಿಯಿಂದ ಮಾಡಿಸಬೇಕೆಂದೂ ತೀರ್ಮಾನಿಸಲಾಯಿತು.

ಸಭೆಯ ಈ ನಿರ್ಣಯವನ್ನು ಒಪ್ಪಿದ ಟಿಪ್ಪು ಸುಲ್ತಾನನು ಕೂಡಲೇ ಒಂದು ವಿಶೇಷ ಸೈನಿಕ ತುಕಡಿಯ ರಚನೆಗೆ ಆದೇಶವಿಟ್ಟನು. ಆ ತುಕಡಿಯಲ್ಲಿ ಯಾವುದೇ ಕಾರಣಕ್ಕೂ ಹೊರಗಿನವರನ್ನು ಸೇರಿಸಿಕೊಳ್ಳಬಾರದು. ಏನಿದ್ದರೂ ಅವರು ಮೈಸೂರಿನಲ್ಲಿಯೇ ಜನಿಸಿರಬೇಕು. ಅವರಿಗೆ ಕನ್ನಡ-ಪರ್ಷಿಯನ್-ಉರ್ದು ಭಾಷೆಗಳು ಗೊತ್ತಿರಬೇಕು, ಜೊತೆಗೆ ಅವರನ್ನು ಕೂಡಲೇ ಗುರುತು ಹಿಡಿಯಲು ಅವರಿಗಾಗಿ ವಿಶೇಷವಾದ ಸಮವಸ್ತ್ರ ಅಂದರೆ ಹಸಿರು ಪೇಟ ಅದರೊಳಗೆ ಕೆಂಪು ಪಟ್ಟಿ ಇರುವ ಧಿರಿಸನ್ನು ನೀಡಬೇಕು. ಇದಲ್ಲದೇ ಈ ಎಲ್ಲ ಸೈನಿಕರಿಗೂ ಪ್ರತ್ಯೇಕವಾದ ಎದೆಬಿಲ್ಲೆ (Badge) ಗಳನ್ನು ನೀಡಬೇಕು. ಈ ಎದೆಬಿಲ್ಲೆಗಳ ಮೇಲೆ ಅವರು ಕೆಲಸ ಮಾಡುವ ಸ್ಥಳ ಅಂದರೆ, ಸುಲ್ತಾನನ ಖಾಸಗಿ ಸ್ಥಳಗಳಾದ ಅರಮನೆ, ಲಾಲ್ ಬಾಗ್ ತೋಟ, ಗುಂಬಜ್, ಬೇಸಿಗೆ ಅರಮನೆ ಇತ್ಯಾದಿ ಸ್ಥಳಗಳ ಹೆಸರುಗಳನ್ನು ಕನ್ನಡ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಕೆತ್ತಿಸಿ ಅವರಿಗೆ ನೀಡಬೇಕು.

ಈ ಸೈನಿಕರು ಸದಾ ಕಾಲವೂ ಜಾಗೃತರಾಗಿ ಟಿಪ್ಪು ಸುಲ್ತಾನನ ಕುಟುಂಬವನ್ನು ಅತಿ ಜಾಗ್ರತೆಯಿಂದ ಕಾಯಬೇಕು. ಇವರ ಮುಖ್ಯಸ್ಥನನ್ನಾಗಿ ಮೈಸೂರಿನಲ್ಲೆಯೇ ಹುಟ್ಟಿ ಬೆಳೆದ ಮಹಮ್ಮದ್ ರಾಜಾನನ್ನು ನೇಮಿಸಲಾಯಿತು. ಮಹಮ್ಮದ್ ರಜಾನು ಹೈದರಾಲಿಯ ಸೋದರ ಮಾವನಾದ ಇಬ್ರಾಹಿಮ್ ಸಾಹೇಬನ ಮಗ. ಹೀಗಾಗಿ ಈತನು ಟಿಪ್ಪು ಸುಲ್ತಾನನಿಗೆ ತೀರ ಹತ್ತಿರದ ಸಂಬಂಧಿ. ಈತನು ಎತ್ತರದ, ಬಲಿಷ್ಠವಾದ ಕಟ್ಟುಮಸ್ತಿನ ಆಳಾಗಿದ್ದನು. ಈತ ಒಂದೇ ಬಾರಿಗೆ ಹಲವರನ್ನು ಎದುರಿಸಬಲ್ಲವನಾಗಿದ್ದನು. ಮಲಬಾರಿನ 'ನಾಯರ್' ಜನಾಂಗದವರು ಟಿಪ್ಪು ಸುಲ್ತಾನ್‌ನ ವಿರುದ್ಧ ದಂಗೆ ಎದ್ದಿದ್ದಾಗ ಆ ದಂಗೆಯನ್ನು ಅಡಗಿಸಲು ಇವನನ್ನು ಅಲ್ಲಿಗೆ ಕಳುಹಿಸಲಾಗಿತ್ತು. ಈ ದಂಗೆಯನ್ನು ಇವನು ಯಾವ ರೀತಿ ಅಡಗಿಸಿದ್ದನೆಂದರೆ, "ಊದು ಬತ್ತಿ ಹಚ್ಚಿ ಬಾ ಎಂದರೆ ಇಡೀ ಊರನ್ನೆ ಹಚ್ಚಿ ಬಂದನಂತೆ." ಇಡೀ ಮಲಬಾರಿಗೆ ಬೆಂಕಿಯನ್ನು ಹಚ್ಚಿ,

ಜನರನ್ನು ಸುಟ್ಟು ಹಾಕಿ ಬಂದಿದ್ದ ಭೂಪ. ಇದರಿಂದಾಗಿ ಈತನನ್ನು ಜನರು 'ಬೆಂಕಿ ನವಾಬ' ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು.

"ಈತನ ನೇತೃತ್ವದ ಮೈಸೂರು ಮೂಲ ನಿವಾಸಿಗಳಿಂದ ಕೂಡಿದ್ದ ಈ ಸೈನಿಕ ತುಕಡಿಗೆ ಜುಮ್ರ ಎಂದು ಹೆಸರಿಡಲಾಗಿತ್ತು. ಪರ್ಷಿಯನ್ ಭಾಷೆಯಲ್ಲಿ ಜುಮ್ರ ಎಂದರೇ ತೀರಾ ಖಾಸಗಿ ಪಡೆ ಎಂದರ್ಥ". [೨]

೩.೩ ಟಿಪ್ಪು ಸುಲ್ತಾನ್ ಕಾಲದ ಶಿಕ್ಷೆಗಳು

ಮೈಸೂರು ಹುಲಿ ಟಿಪ್ಪು ಸುಲ್ತಾನನು ಮಹಾ ಕ್ರೂರಿ, ಕಟುಕ, ನಿರ್ದಯಿ ಎಂದೆಲ್ಲ ಸಾಕಷ್ಟು ಜನರು ಹೇಳುತ್ತಾರೆ. ಇದಕ್ಕೆ ಅವರು ಕೊಡುವ ಕಾರಣಗಳು ಆತನು ತನ್ನ ಕಾಲದಲ್ಲಿ ತುಂಬ ಕ್ರೂರವಾದ ಶಿಕ್ಷೆಗಳನ್ನು ನೀಡುತ್ತಿದ್ದ ಎಂದು. ಇದು ನಿಜವೇ? ಒಂದು ವೇಳೆ ಇದು ನಿಜವಾಗಿದ್ದರೆ ಆತನು ಯಾವ ರೀತಿಯ ಶಿಕ್ಷೆಗಳನ್ನು ನೀಡುತ್ತಿದ್ದ? ಹೇಗೆ ನೀಡುತ್ತಿದ್ದ? ಯಾರಿಗೆ ನೀಡುತ್ತಿದ್ದ? ಯಾವ ಕಾರಣಕ್ಕಾಗಿ ನೀಡುತ್ತಿದ್ದ? ಒಂದು ವೇಳೆ ಈ ರೀತಿಯ ಶಿಕ್ಷೆಯನ್ನು ನೀಡದೇ ಬೇರೆ ಯಾವ ರೀತಿಯ ಶಿಕ್ಷೆಯನ್ನು ನೀಡಬಹುದಿತ್ತು? ಇತ್ಯಾದಿಗಳ ಬಗ್ಗೆ ಚಿಂತಿಸಿದಾಗ ಈತನ ಬಗ್ಗೆ ಹೇಳಿರುವಂತಹ ಈ ಎಲ್ಲವೂ ಬಹುತೇಕ ಕಟ್ಟುಕತೆಗಳಂತೆ ಕಾಣುತ್ತವೆ.

ಮೈಸೂರು ಹುಲಿ ಟಿಪ್ಪು ಸುಲ್ತಾನನನ್ನು ಇಡೀ ಪ್ರಪಂಚದಲ್ಲಿ ಹೆಚ್ಚು ದ್ವೇಷಿಸುತ್ತಿದ್ದವರೆಂದರೆ ಇಬ್ಬರು ಮಾತ್ರ. ಒಬ್ಬರು ವಿದೇಶದಿಂದ ಬಂದಿದ್ದ ಬ್ರಿಟೀಷರು, ಇನ್ನೊಬ್ಬರು ನಮ್ಮದೇ ದೇಶದ ಒಂದು ಸಮುದಾಯಕ್ಕೆ ಸೇರಿದ ವರ್ಗದವರು. ಮಿಕ್ಕಂತೆ ಎಲ್ಲ ದೇಶದವರು, ನಮ್ಮ ದೇಶದ ಇತರೆ ಎಲ್ಲ ಸಮುದಾಯದವರೂ ಟಿಪ್ಪು ಸುಲ್ತಾನನ್ನು ಪ್ರೀತಿಸುತ್ತಾರೆ. ಇಷ್ಟ ಪಡುತ್ತಾರೆ ಮತ್ತು ಒಪ್ಪುತ್ತಾರೆ. ಬ್ರಿಟೀಷರು ಟಿಪ್ಪು ಸುಲ್ತಾನನನ್ನು ದ್ವೇಷಿಸುವುದರಲ್ಲಿ ಅರ್ಥವಿದೆ. ಯಾಕೆಂದರೆ ಅವರು ವಿದೇಶವೊಂದರಲ್ಲಿ ಮೊಟ್ಟ ಮೊದಲಿಗೆ ಸೋಲಿನ ರುಚಿಯನ್ನು ಕಂಡದ್ದೇ ಈತನ ಕೈಯಿಂದ. ಕ್ರಿ.ಶ.೧೭೮೦ರಲ್ಲಿ ಕಾಂಚಿಪುರದ ಬಳಿಯ ಪೊಲ್ಲಿಲೂರಿನ ಯುದ್ಧದಲ್ಲಿ. ಬ್ರಿಟೀಷರು ಸೋತು ಶರಣಾಗಿ ಈತನ ಕಬ್ಬಿಣದ ಪಂಜರದಲ್ಲಿ ಸೆರೆ ಸಿಕ್ಕಿ, ಅದರಲ್ಲಿಯೇ ಮಡಿದರು. ನಂತರದ ಹಲವು ಯುದ್ಧಗಳಲ್ಲಿ ಇವರು ಸೋತರು, ಹಲವು ಯುದ್ಧಗಳಲ್ಲಿ ಗೆದ್ದರು. ಒಟ್ಟಿನಲ್ಲಿ ಭಾರತದ ಸುಮಾರು ೫೫೦ಕ್ಕೂ ಮಿಗಿಲಾದ ದೇಶೀಯ ರಾಜರೆಲ್ಲ ಇವರ ಅಡಿ ಆಳುಗಳಾಗಿ ಬದುಕಲು ಒಪ್ಪಿಕೊಂಡು, ಅದಕ್ಕೆ ಬೇಕಾದ ಕಪ್ಪವನ್ನು ಅರ್ಪಿಸಿ, ಗುಲಾಮರಂತೆ ಬಾಳ್ವೆ ಮಾಡಲು ತೊಡಗಿದರು.

ಆದರೆ ಇವರಲ್ಲಿ ಟಿಪ್ಪು ಸುಲ್ತಾನ್ ಒಬ್ಬನು ಮಾತ್ರ ತಾನು ಬದುಕಿರುವವರೆವಿಗೂ ಬ್ರಿಟೀಷರಿಗೆ ತಲೆ ಬಾಗಲಿಲ್ಲ. "ಇಲಿಯಂತೆ ನೂರು ವರುಷ ಬಾಳುವ ಬದಲು ಹುಲಿಯಂತೆ ಮೂರೇ ಮೂರು ದಿನ ಘರ್ಜಿಸಿದರೆ ಸಾಕು"ಎಂಬಂತೆ ಸ್ವತಂತ್ರವಾಗಿಯೇ ಬಾಳಲು ನಿರ್ಧರಿಸಿದ. ಹೀಗಾಗಿ ಬ್ರಿಟೀಷರಿಗೆ ಟಿಪ್ಪು ಸುಲ್ತಾನನು ದು:ಸ್ವಪ್ನನಾಗಿದ್ದ. ಭಾರತದಲ್ಲಿ ಅವರು ಪ್ರಭುತ್ವವನ್ನು ಸಾಧಿಸಲು ಅಡ್ಡಿಯಾದ. ಈ ಕಾರಣಕ್ಕಾಗಿ ಬ್ರಿಟೀಷರು ಟಿಪ್ಪು ಸುಲ್ತಾನನನ್ನು ದ್ವೇಷಿಸತೊಡಗಿದರು. ಅವರ ಈ ದ್ವೇಷವು ಆತನ ಮೇಲೆ ಎಷ್ಟಿತ್ತೆಂದರೆ, ಈತನನ್ನು ಕಂಡರೆ ಎಷ್ಟು ಹೆದರುತ್ತಿದ್ದರೆಂದರೆ "ಇಂಗ್ಲೆಂಡಿನಲ್ಲಿ ಮಕ್ಕಳು ರಚ್ಚೆ ಹಿಡಿದು ಅಳಲು ಶುರು ಮಾಡಿದಾಗ ಆ ಅಳುವನ್ನು ನಿಲ್ಲಿಸಲು ಆ ಮಗುವಿಗೆ ಟಿಪ್ಪು ಬಂದ ಟಿಪ್ಪು" ಎಂದು ಹೇಳಿ ಮಕ್ಕಳನ್ನು ಹೆದರಿಸುತ್ತಿದ್ದರು. ಟಿಪ್ಪು ಹೆಸರನ್ನು ಕೇಳಿದ ಕೂಡಲೆ ಅಳುತ್ತಿದ್ದ ಮಗು ತನ್ನ ಅಳುವನ್ನು ನಿಲ್ಲಿಸಿ ಬಿಡುತ್ತಿತ್ತಂತೆ.

ಹೈದರಾಲಿಯನ್ನು ಕುರಿತು ತಮಿಳುನಾಡಿನಲ್ಲಿ ಗಾದೆ ಮಾತೊಂದಿದೆ.

ಹೈದರಾಲಿಯು ಕ್ರಿ.ಶ.೧೭೬೧ರಲ್ಲಿ ಮೈಸೂರಿನ ಮುಖಂಡನಾಗುತ್ತಿದ್ದಂತೆಯೇ ರಾಜ್ಯವನ್ನು ವಿಸ್ತಾರ ಮಾಡುವ ಹಂಬಲದಿಂದ ಮೊದಲು ದಂಡೆತ್ತಿ ಹೋಗಿದ್ದು ತಮಿಳುನಾಡಿನ ಕರ್ನಾಟಕ ಎಂಬ ಪ್ರದೇಶದ ಮೇಲೆ, ಈ ಪ್ರದೇಶವು ಅರ್ಕಾಟಿನ ಸುತ್ತಮುತ್ತಲ ಪ್ರದೇಶಗಳನ್ನೆಲ್ಲ ಆವರಿಸಿದೆ. ಇಲ್ಲಿ ಹೈದರಾಲಿಯ ಅರ್ಭಟವು ಎಷ್ಟಿತ್ತೆಂದರೆ ಈ ಎಲ್ಲ ಪ್ರದೇಶಗಳನ್ನು ಗೆದ್ದ ಈತನು ಕೊನೆಗೆ ಇಂಗ್ಲೀಷರ ವಶದಲ್ಲಿದ್ದ ಮದ್ರಾಸ್‌ನನ್ನು ಗೆಲ್ಲಲು ದಾಳಿಯನ್ನು ಮಾಡಿದ್ದ, ಕಾಂಚಿಪುರ, ತಂಜಾವೂರು, ತಿರುಚನಾಪಳ್ಳಿ, ದಿಂಡಿಗಲ್ಲು, ಅರ್ಕಾಟ್, ಕೃಷ್ಣಗಿರಿ, ಸೇಲಂ, ಕೊಯಮತ್ತೂರು ಮುಂತಾದ ಪ್ರದೇಶಗಳೆಲ್ಲವೂ ಹೈದರಾಲಿಯ ದಾಳಿಯಿಂದ ತತ್ತರಿಸಿ ಹೋಗಿದ್ದವು. ಈತನನ್ನು ಎದುರಿಸುವ ಶಕ್ತಿಯು ತಮಿಳುನಾಡಿನಲ್ಲಿ ಯಾರಿಗೂ ಇರಲಿಲ್ಲ. ಅಂಥಹ ಶಕ್ತಿ ಶಾಲಿ ವ್ಯಕ್ತಿಯಾಗಿದ್ದ ಹೈದರಾಲಿ. ವ್ಯಕ್ತಿತ್ವವನ್ನು ಕಂಡು ದಂಗಾಗಿ ಹೋದ ತಮಿಳು ಜನರು ಈತನ ಕುರಿತು ತಮ್ಮ ರಾಜ್ಯದಲ್ಲಿ ಒಂದು ಗಾದೆಯನ್ನೇ ಹುಟ್ಟು ಹಾಕಿದ್ದಾರೆ.

"ಹೈದರಾಲಿ ಎನ್ರಾಲ್ ಅಳುವ ಪಿಳ್ಳೆಯುಂ ವಾಯ್ ಮೂಡುಮ್" ಅಂದರೆ ಹೈದರಾಲಿ ಎಂದರೆ ಸಾಕು, ಅಳುವ ಕೂಸೂ ಕೂಡ ಬಾಯಿ ಮುಚ್ಚುತ್ತದೆ. ಆಗ ತಾನೇ ಹುಟ್ಟಿದ ಮಗುವಿಗೂ ಹೈದರಾಲಿ ಹೆಸರು ಕೇಳಿದರೆ ಭಯ. ಯಾಕೆಂದರೆ ಅದರ ಅಪ್ಪನೂ ಬಹುಶ: ಹೈದರಾಲಿಯ ಕೈಗೆ ಸಿಲುಕಿ ತತ್ತರಿಸಿರಬೇಕು. ಹೀಗಾಗಿ ಈ ಗಾದೆ ಈಗಲೂ ಚಾಲ್ತಿಯಲ್ಲಿದೆ.

ನಮ್ಮದೇ ರಾಜ್ಯದ ಒಂದು ವರ್ಗದವರು ಟಿಪ್ಪು ಸುಲ್ತಾನನನ್ನು ದ್ವೇಷಿಸಲು ಕೊಡುವ ಕಾರಣಗಳು ಈ ಕೆಳಕಂಡಂತೆ ಇವೆ.

೧. ಶ್ರೀರಂಗಪಟ್ಟಣದ ಬಂದೀಖಾನೆಯಲ್ಲಿ ಬ್ರಿಟೀಷ್ ರಾಜಕೀಯ ಖೈದಿಗಳ ಎರಡೂ ಕೈಗಳನ್ನು ಕಬ್ಬಿಣದ ಸರಪಳಿಯ ಮೂಲಕ ಮೇಲಕ್ಕೆ ಕಟ್ಟಿ, ಅವರ ಎದೆಯ ಮಟ್ಟ ನೀರನ್ನು ನಿಲ್ಲಿಸುವ ಮೂಲಕ ಅವರಿಗೆ ನರಕ ಯಾತನೆಯನ್ನು ಉಂಟುಮಾಡುತ್ತಿದ್ದನು.
೨. ತಪ್ಪು ಮಾಡಿದ ಸಾಮಾನ್ಯ ಅಪರಾಧಿಗಳನ್ನು ನಂದಿ ಬೆಟ್ಟದ ತುದಿಯಿಂದ ತಳ್ಳಿಸಿ ಸಾಯಿಸುತ್ತಿದ್ದ.
೩. ಶ್ರೀರಂಗಪಟ್ಟಣದ ಬ್ರಾಹ್ಮಣರನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಲು ಪ್ರಯತ್ನಿಸಿದ್ದು.

ಹೀಗೆ ನಾನಾ ತರಹದ ಶಿಕ್ಷೆಗಳನ್ನು ಟಿಪ್ಪು ಸುಲ್ತಾನನು ನೀಡುತ್ತಿದ್ದ ಎಂದು ಆತನ ಮೇಲೆ ಸಾಕಷ್ಟು ಆಪಾದನೆಗಳ ಸರಮಾಲೆಯನ್ನೇ ಹೊರಿಸುತ್ತಾರೆ.

೩.೭ ಕಳ್ಳ ಸ್ವಾಮಿಗಳನ್ನು ಬಂಧಿಸಿದ ಟಿಪ್ಪು

ಶೃಂಗೇರಿ ಮಠಕ್ಕೆ ಮೈಸೂರು ಹುಲಿ ಟಿಪ್ಪು ಸುಲ್ತಾನ್ ನೀಡಿದ ಪ್ರಾಶಸ್ತ್ಯ ಅಪಾರ. ಈ ಮಠಕ್ಕೆ ವಿಜಯನಗರ ಕಾಲಕ್ಕಿಂತಲೂ ಹೆಚ್ಚಿನ ವ್ಯಾಪ್ತಿಯ ಪ್ರದೇಶಗಳನ್ನು ಸೇರ್ಪಡೆಗೊಳಿಸಿ ಆ ಪ್ರದೇಶದ ಭಕ್ತಾದಿಗಳೆಲ್ಲರೂ ಶ್ರೀ ಮಠಕ್ಕೆ ಕಾಣಿಕೆ ನೀಡುವಂತೆಯೂ ಮಾಡಿದ್ದ. ಹೀಗಾಗಿ ಶೃಂಗೇರಿ ಮಠಕ್ಕೆ ರಾಜ್ಯದ ಮೂಲೆ-ಮೂಲೆಗಳ ಭಕ್ತಾದಿಗಳಿಂದ ಅಪಾರ ಪ್ರಮಾಣದ ಕಾಣಿಕೆಯು ಹರಿದು ಬರಲಾರಂಭಿಸಿತು.

ಇದನ್ನು ನೋಡಿ ದಂಗಾಗಿ ಹೋದ ಇನ್ನಿತರೆ ಮಠ ಮಾನ್ಯಗಳ ಉಡಿ-ಪುಡಿ ಗುರುಗಳೂ, ಜಗದ್ಗುರುಗಳು, ದಂಡಪಿಂಡ ಬ್ರಹ್ಮಾಂಡದ ಭಂಡ ಗುರುಗಳು ತಮ್ಮ-ತಮ್ಮ ಮೂಲ ಮಠದ ಹೆಸರುಗಳನ್ನು ಮೂಲೆಗೆ ತುರುಕಿ, ತಾವು ಕೂಡ ಶೃಂಗೇರಿ ಮಠದ ಮರಿ ಗುರುಗಳು ಎಂದು ಹೇಳಿಕೊಳ್ಳತೊಡಗಿದರು. ಇದರ ಜೊತೆಗೆ ಅಗ್ರಹಾರಗಳಲ್ಲಿ ಕೆಲಸ ಕಾರ್ಯಗಳಿಲ್ಲದೆ ಅಲೆಯುತ್ತಿದ್ದ ಕೆಲವು ಪುಂಡ, ಪೋಕರಿಗಳನ್ನು ಸೆಳೆದು ಅಮಿಷ ಒಡ್ಡಿ ಅವರನ್ನು ಊರೂರಿಗೆ ಕಳುಹಿಸಿ ಶೃಂಗೇರಿ ಮಠದ ಹೆಸರಿನಲ್ಲಿ ಭಕ್ತಾಧಿಗಳಿಂದ ಕಾಣಿಕೆಯ ರೂಪದಲ್ಲಿ ಹಣವನ್ನು ವಸೂಲಿ ಮಾಡತೊಡಗಿದರು. ಒಂದು ಕಾಲಘಟ್ಟದಲ್ಲಿ ಮೂಲ ಶೃಂಗೇರಿ ಮಠಕ್ಕೆ ಭಕ್ತಾದಿಗಳಿಂದ ಕಾಣಿಕೆಯೇ ಬರದೆ ಮಠವು ದಿನದ ಪೂಜೆಗೂ ಹಣಕಾಸಿನ ತೊಂದರೆಯನ್ನು ಎದುರಿಸುವಂತಾಯಿತು. ಆದರೆ ಸಂಸ್ಥಾನದಲ್ಲಿ ಮಾತ್ರ ಯಾವುದೇ ಭಕ್ತರನ್ನು

ಕೇಳದರು ಶೃಂಗೇರಿ ಮಠಕ್ಕೆ ಅಷ್ಟು ಕಾಣಿಕೆ ಕೊಟ್ಟೆ, ಇಷ್ಟು ಕಾಣಿಕೆ ಕೊಟ್ಟೆ ಎಂದೇ ಹೇಳುತ್ತಿದ್ದರು. ಆದರೆ ಮಠದ ಖಜಾನೆ ಮಾತ್ರ ಸದಾ ಕಾಲವು ಖಾಲಿಖಾಲಿಯಾಗಿಯೇ ಇರುತ್ತಿತ್ತು. ಇದು ಒಂದು ರೀತಿಯಲ್ಲಿ "ಊರೆಲ್ಲ ಸಸ್ಯಹಾರಿಗಳೆ ಆದರೆ ತಿಪ್ಪೆಯಲ್ಲಿ ಮಾತ್ರ ರಾಶಿ ರಾಶಿ ಕೋಳಿ ಪುಕ್ಕ' ಎಂಬಂತೆ ಆಯಿತು.

ಕೊನೆಗೆ ಮಠದ ಶ್ರೀಗಳಿಗೆ ತಿಳಿದು ಬಂದ ವಿಷಯವೆಂದರೆ ಭಕ್ತಾಧಿಗಳ ಕಾಣಿಕೆ ಎಲ್ಲವೂ ಈ ಪುಂಡ -ಪೋಕರಿಗಳ ಮೂಲಕ ದಂಡ-ಪಿಂಡ-ಬ್ರಂಹ್ಮಾಂಡದ ಭಂಡ ಗುರುಗಳ ಕೈವಶವಾಗುತ್ತಿದ್ದುದು ಶ್ರೀಗಳಿಗೆ ತಿಳಿಯಿತು. ಕೂಡಲೇ ಜಾಗೃತರಾದ ಶೃಂಗೇರಿ ಶ್ರೀಗಳು ಮೈಸೂರು ಹುಲಿ ಟಿಪ್ಪು ಸುಲ್ತಾನರಿಗೆ ಈ ವಿಷಯವನ್ನು ತಿಳಿಸಿದರು. ಇದನ್ನು ಕೇಳುತ್ತಿದಂತೆಯೇ ಕ್ರೋಧಗೊಂಡ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಈ ದಂಡ-ಪಿಂಡ-ಬ್ರಹ್ಮಾಂಡದ ಭಂಡ ಗುರುಗಳನ್ನು ಕೂಡಲೇ ಬಂಧಿಸಿ, ಅವರನ್ನು ಒದ್ದು ಊರಿನಿಂದ ಓಡಿಸಬೇಕೆಂದು ತೀರ್ಮಾನಿಸಿದ. ಶೃಂಗೇರಿಯ ಮೂಲ ಮಠದವರು ತಮ್ಮ ಭಕ್ತಾದಿಗಳಿಂದ ಕಾಣಿಕೆ ವಸೂಲಿ ಮಾಡಿಕೊಳ್ಳಬಹುದೆಂದು ತನ್ನ ಅಧಿಕಾರಿಗಳಿಗೆ ಆದೇಶವನ್ನು ಹೊರಡಿಸಿದ.

೩.೮ ಟಿಪ್ಪುವಿನಿಂದ ಹಳ್ಳಿಕಾರ್ ತಳಿಗಳ ಪರಿಚಯ

೨೦೦೧ರ ಕರ್ನಾಟಕ ಗೆಜೆಟಿಯರ್‌ನಲ್ಲಿ, ಕರ್ನಾಟಕದ ಅಮೃತಮಹಲ್ ಗೋ-ತಳಿಯ ಬಗ್ಗೆ ಉಲ್ಲೇಖಿಸುತ್ತಾ, ಕರ್ನಾಟಕದಲ್ಲಿ ವಿಶೇಷ ತಳಿಯ ಕಸಿ ಮಾಡಿಸಿದ ಎತ್ತುಗಳನ್ನು ಟಿಪ್ಪು ರೂಪಿಸಿದನು" ಎಂದು ತಿಳಿಸಿದೆ. ಇದೇ ತಳಿಗಳನ್ನು ೧೬ನೇ ಶತಮಾನದಲ್ಲಿದ್ದ ವಿಜಯನಗರದ ಶ್ರೀರಂಗಪಟ್ಟಣದ ರಾಜ್ಯ ಪ್ರತಿನಿಧಿ, ಹಂಪಿ ಬಳಿಯ ಕರುಹಟ್ಟಿಯಿಂದ ಉತ್ತಮ ದನಗಳ ಹಿಂಡನ್ನು ತರಿಸಿ ಮೈಸೂರಿನಲ್ಲಿದ್ದ ಸ್ಥಳೀಯ ದನಗಳೊಂದಿಗೆ ಬೆರೆಸಿ ಅವುಗಳನ್ನು ಇನ್ನು ಸದೃಢ ಮಾಡಿದನು. ಇವರ ನಂತರ ಆಡಳಿತಕ್ಕೆ ಬಂದ ಚಾಮರಾಜ ಒಡೆಯರ್ (೧೬೧೭-೧೬೩೭) ಕಂಠೀರವ ನರಸರಾಜ ಒಡೆಯರ್ (೧೬೩೮-೫೮) ಹಾಗೂ ಚಿಕ್ಕದೇವರಾಜ ಒಡೆಯರ್ (೧೬೭೩-೧೭೦೪) ಈ ದನಗಳ ತಳಿಯಲ್ಲಿ ಸುಧಾರಣೆ ತಂದು ಈ ಹಿಂಡುಗಳಿಗೆ ಬೆಣ್ಣೆ ಚಾವಡಿ ಎಂದು ನಾಮಕರಣ ಮಾಡಿ, ಅವುಗಳಿಗಾಗಿ ತಮ್ಮ ಸಂಸ್ಥಾನಾದ್ಯಂತ ವಿಸ್ತಾರವಾದ ಹುಲ್ಲುಗಾವಲುಗಳನ್ನು ಮೀಸಲಿಟ್ಟರು. ಮೈಸೂರಿನಲ್ಲಿ ನಡೆದ ರಾಜಕೀಯ ವಿಪ್ಲವದಿಂದ ಅಧಿಕಾರವು ಒಡೆಯರ ಹಸ್ತದಿಂದ ಹೈದರಾಲಿಗೆ ವರ್ಗಾವಣೆಯಾದಾಗ ಮಹತ್ವಾಕಾಂಕ್ಷಿಯಾಗಿದ್ದ ಹೈದರನು ತಾನು ಅಧಿಕಾರಕ್ಕೆ ಬರುತ್ತಿದ್ದಂತೆಯೇ ಬಲಿಷ್ಠವಾದ ಸೈನ್ಯವನ್ನು ಕಟ್ಟಲು ಮುಂದಾದನು. ಅದಕ್ಕೆ ಪೂರಕವಾಗಿ ದನಗಳ ಹಿಂಡನ್ನು ರೂಪಿಸಿದನು. ಇದಕ್ಕಾಗಿ ತಮಿಳುನಾಡಿನ ತಿರುಚಿನಾಪಳ್ಳಿಯಿಂದ ಅತ್ಯುತ್ತಮ ಹಾಗೂ ಬಲಿಷ್ಟವಾದ ಎತ್ತಿನ

ತಳಿಯನ್ನು ಮೈಸೂರಿಗೆ ತಂದು, ಅವುಗಳನ್ನು ಸ್ಥಳೀಯ ಹಸುಗಳೊಂದಿಗೆ ಸಮ್ಮಿಲನಗೊಳಿಸಿ ಹಳ್ಳಿಕಾರ್ ಎತ್ತುಗಳೆಂಬ ನವ ತಳಿಗೆ ಕಾರಣಕರ್ತನಾದನು.

ಇವು ಚೂಪಾದ ಕೊಂಬನ್ನು ಹೊಂದಿ, ಉದ್ದವಾದ ಕಾಲುಗಳನ್ನು ಉಳ್ಳವಾಗಿ, ಹೆಚ್ಚು ಭಾರವನ್ನು ಎಳೆಯಬಲ್ಲ ಬಲಿಷ್ಠ ಎತ್ತುಗಳಾಗಿದ್ದವು. ಮೈಕಟ್ಟಿನ ಆಕಾರದಲ್ಲಿ ಮತ್ತು ಗಾತ್ರದಲ್ಲಿ ಹೆಚ್ಚು ದಪ್ಪ ಅಥವಾ ತೆಳುವು ಇಲ್ಲದೆ ಸಮತೋಲನವಾಗಿದ್ದವು. ಹೆಚ್ಚು-ಕಡಿಮೆ ಜೂಜಿನ ಕುದುರೆಗಳನ್ನು ಹೋಲುತ್ತಿದ್ದವು. ಇವು ಬಿಳಿಯ ಬಣ್ಣದಿಂದ ಕಪ್ಪು ಮಿಶ್ರಿತ ಬಣ್ಣವನ್ನು ಹೊಂದಿದ್ದವು.. ಹೋರಿಗಳ ಮಧ್ಯ ಭಾಗವು ತಿಳಿಯಾಗಿದ್ದು, ಕುತ್ತಿಗೆ ಹೆಗಲಿನ ಭಾಗ ಮತ್ತು ರೆಪ್ಪೆಯು ಕಪ್ಪು ಬಣ್ಣವನ್ನು ಹೊಂದಿದ್ದವು. ಇವುಗಳ ಮೈಚರ್ಮ ಮೃದುವಾಗಿ ಕೂದಲು ನಯವಾಗಿ ನುಣುಪಾಗಿರುತ್ತದೆ. ತಲೆಯ ಮೇಲ್ಭಾಗದಲ್ಲಿ ಸ್ವಲ್ಪ ದಪ್ಪವಾಗಿ ಹೆಚ್ಚು ಅಗಲವಲ್ಲದ, ಮುಖದ ಕಡೆಗೆ ಬರುಬರುತ್ತಾ ನೀಳವಾಗಿ, ಎಳಸಾಗಿ ಸರಳವಾದ್ದವು.ಈ ಎತ್ತುಗಳ ಎತ್ತರ ಸುಮಾರು ೧೨೫ ರಿಂದ ೧೫೦ ಸೆಂ.ಮೀ. ಇದ್ದು, ಎದೆ ೨೦೦ ಸೆಂ.ಮೀ ಸುತ್ತಳತೆ ಹೊಂದಿದ್ದವು.

೩.೯ ಮೇಲುಕೋಟೆ ದೇವರಿಗೆ ಟಿಪ್ಪುವಿನಿಂದ ಎರಡು ನಾಮ

ಟಿಪ್ಪು ಸುಲ್ತಾನ್ ಕಾಲದಲ್ಲಿ ತೆಂಕಲೈ ಪಂಗಡವು ಮೇಲುಕೋಟೆ ದೇವರಿಗೆ ಆರಾಧನೆ ಮತ್ತು ಮಂತ್ರೋಚ್ಚಾರಣೆ ತಮಿಳಿನಲ್ಲಿ ಆಗಬೇಕೆಂದು, ಬಡಗಲೈ ಪಂಗಡವು ಸಂಸ್ಕೃತದಲ್ಲಿ ಆಗಬೇಕೆಂದು ಪಣ ತೊಟ್ಟು, ಈ ವಿಚಾರವನ್ನು ಸುಲ್ತಾನನಾದ ಟಿಪ್ಪುವಿನ ಬಳಿಗೆ ತೆಗೆದುಕೊಂಡು ಹೋದಾಗ, ಟಿಪ್ಪುವು ಎರಡೂ ಪಂಗಡವರಿಗೂ ನೋವಾಗದಂತೆ ಮೇಲುಕೋಟೆ ದೇವರಿಗೆ ಎರಡು ನಾಮಗಳನ್ನು ಹಾಕಿ, ಎರಡು ಪಂಗಡದವರಿಗೂ ಸಂತೋಷ ಪಡಿಸಿದನು.

೩.೧೦ ವಿದೇಶದಲ್ಲಿ ಮೊಟ್ಟಮೊದಲಿಗೆ ಮಗನಿಗೆ ವಿದ್ಯಾಭ್ಯಾಸ ಕೊಡಿಸಲು ಮುಂದಾದ ಟಿಪ್ಪು

ಟಿಪ್ಪು ಸುಲ್ತಾನನು ಸದಾ ಕಾಲವು ಯುದ್ಧರಂಗದಲ್ಲೇ ಇದ್ದರೂ ಕೂಡಾ ತನ್ನ ಕುಟುಂಬದ ಬಗ್ಗೆಯೂ ನಿಗಾ ಇಟ್ಟಿದ್ದ. ತನಗೆ ಬಿಡುವು ಸಿಕ್ಕಾಗಲೆಲ್ಲ ರಾತ್ರಿಯ ಊಟವನ್ನು ಮಕ್ಕಳ ಜೊತೆಯಲ್ಲಿ ಮಾಡುತ್ತಿದ್ದ. ಇಂತಹ ಸಂದರ್ಭದಲ್ಲಿ ಮಧ್ಯೆ ಮಧ್ಯೆ ಮಕ್ಕಳ ವಿದ್ಯಾಭ್ಯಾಸದ ಬಗ್ಗೆಯೂ ವಿಚಾರಿಸುತ್ತಿದ್ದ. ಧಾರ್ಮಿಕವಾಗಿ ಮಕ್ಕಳಿಗೆ ಹಲವಾರು ವಿಷಯಗಳನ್ನು ತಿಳಿಸುತ್ತಿದ್ದ. ತನ್ನ ಗ್ರಂಥ ಭಂಡಾರದಲ್ಲಿರುವ ಅಪಾರ ಪ್ರಮಾಣದ ಪುಸ್ತಕಗಳನ್ನು ಓದುವಂತೆ ಮಕ್ಕಳಿಗೆ ಹೇಳುತ್ತಿದ್ದ.

ರಾಜಕೀಯ ಕಾರಣಗಳಿಗಾಗಿ ಟಿಪ್ಪು ಸುಲ್ತಾನ್ ಬ್ರಿಟೀಷರನ್ನು ವಿರೋಧಿಸುತ್ತ ಫ್ರೆಂಚರ ಬಳಿ ಹೆಚ್ಚು ಸ್ನೇಹದ ಹಸ್ತವನ್ನು ಚಾಚುತ್ತ ಆಪ್ತ ಗೆಳೆಯನೂ ಆದ. ಫ್ರೆಂಚರ ಜೊತೆ ಸಂಬಂಧ

ಹೆಚ್ಚಾದಂತೆ ಅವರ ದೇಶದಲ್ಲಿ ತನ್ನ ಒಬ್ಬ ಮಗನಿಗೆ ಉನ್ನತ ಮಟ್ಟದ ವಿದ್ಯಾಭ್ಯಾಸ ಕೊಡಿಸಲು ನಿರ್ಧರಿಸಿದ. ಈ ಬಗ್ಗೆ ಫ್ರೆಂಚ್ ದೊರೆಯ ಬಳಿ ಚರ್ಚಿಸಲು ತನ್ನ ರಾಯಭಾರಿಯಾದ ಮಹಮದ್ ಉಸ್ಮಾನ್ ಖಾನನನ್ನು ಕ್ರಿ.ಶ.೧೭೮೮ರಲ್ಲಿ ಪ್ಯಾರಿಸ್ಸಿಗೆ ಕಳುಹಿಸಿದ್ದ.

ಪ್ಯಾರಿಸ್ಸಿಗೆ ಹೋದ ಟಿಪ್ಪು ಸುಲ್ತಾನನ ರಾಯಭಾರಿ ಮಹಮ್ಮದ್ ಉಸ್ಮಾನ್ ಖಾನನು ತನ್ನ ಸುಲ್ತಾನನ ಮಗನಿಗೆ ಪ್ಯಾರಿಸ್ಸಿನಲ್ಲಿ ಉನ್ನತ ವಿದ್ಯಾಭ್ಯಾಸ ನೀಡಬೇಕೆಂಬ ಕೋರಿಕೆಯನ್ನು ಫ್ರೆಂಚ್ ದೊರೆ ೧೬ನೇ ಲೂಯಿಯ ಮುಂದೆ ಮಂಡಿಸಿದ. ಇದನ್ನು ಕೇಳುತ್ತಿದ್ದಂತೆಯೇ ಫ್ರೆಂಚ್ ದೊರೆ ೧೬ನೇ ಲೂಯಿಯು ತುಂಬಾ ಸಂತೋಷ ಪಟ್ಟು, ಇಂತಹ ಒಂದು ಅವಕಾಶ ತಮ್ಮ ದೇಶಕ್ಕೆ ಸಿಕ್ಕಿದ್ದು ಒಳ್ಳೆಯದೇ ಆಯಿತು. ಯಾಕೆಂದರೆ ಭಾರತ ದೇಶದ ಬಲಿಷ್ಠ ದೊರೆಗಳಲ್ಲಿ ಒಬ್ಬನಾದ ಟಿಪ್ಪು ಸುಲ್ತಾನನ ಮಗನಿಗೆ ನಾವು ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ನೀಡಿದರೆ ನಾವು ಟಿಪ್ಪು ಸುಲ್ತಾನನ ನಿಷ್ಠಾವಂತ ಸ್ನೇಹಿತರಾಗುವುದರ ಜೊತೆಗೆ ಮೈಸೂರು ದೇಶ ಮತ್ತು ಫ್ರೆಂಚ್ ದೇಶಗಳ ನಡುವೆ ನಿರಂತರ ಸ್ನೇಹ ಮುಂದುವರಿಯುತ್ತದೆಂದು ಹೇಳಿದ. ಜೊತೆಗೆ ಭಾರತದಲ್ಲಿರುವ ತಮ್ಮ ದೇಶದ ಸೈನ್ಯದ ಕಮಾಂಡರ್ ಆಗಿರುವ ' ಡಿ ಕಾನ್ವೆಗೆ ಈ ಕೂಡಲೇ ಪತ್ರ ಬರೆದು ಆತನು ಟಿಪ್ಪು ಸುಲ್ತಾನನ್ನು ಭೇಟಿ ಮಾಡಿ ಅವರ ಪುತ್ರನಿಗೆ ಪ್ಯಾರಿಸ್ಸಿನಲ್ಲಿ ಉನ್ನತ ವಿದ್ಯಾಭ್ಯಾಸ ನೀಡಲು ದೊರೆ ಒಪ್ಪಿದ್ದಾರೆಂದು ತಿಳಿಸಬೇಕೆಂದು ತನ್ನ ಕಾರ್ಯದರ್ಶಿ ಮತ್ತು ಭಾಷಾಂತರಕಾರನಾದ ರುಫಿನ್ ಗೆ ತಕ್ಷಣ ಆದೇಶಿಸಿದ.

ಫ್ರೆಂಚ್ ದೊರೆಯು ಟಿಪ್ಪು ಸುಲ್ತಾನನ ಪುತ್ರನ ವಿದ್ಯಾಭ್ಯಾಸದ ಬಗ್ಗೆ ಕಳಕಳಿ ವ್ಯಕ್ತಪಡಿಸಿದ್ದನ್ನು ಕಂಡು ಆಶ್ಚರ್ಯಚಕಿತರಾದ ಆತನ ಕಾರ್ಯದರ್ಶಿಗಳು ತಾವೇ ಒಂದು ಸಭೆ ಸೇರಿ ಚರ್ಚಿಸಿದರು. ಟಿಪ್ಪು ಸುಲ್ತಾನನ ಪುತ್ರನ ವಿದ್ಯಾಭ್ಯಾಸಕ್ಕೆ ಆಗುವ ಖರ್ಚು ವೆಚ್ಚ ಎಷ್ಟು? ಅದನ್ನು ಭರಿಸುವವರು ಯಾರು? ಟಿಪ್ಪುವಿನ ಪುತ್ರ ಪ್ಯಾರಿಸ್ಸಿನಲ್ಲಿ ಹೇಗಿರಬೇಕು? ಆತನನ್ನು ಯಾವ ಅರಮನೆಯಲ್ಲಿ ಉಳಿಸಿಕೊಳ್ಳಬೇಕು? ಆತನ ಸಿಬ್ಬಂದಿಯು ಎಷ್ಟು ಜನ ಇರಬೇಕು? ಅವರ ಖರ್ಚುಗಳೇನು? ಪ್ಯಾರಿಸ್ಸಿನಲ್ಲಿ ಈತ ಯಾವ ಯಾವ ವಿಷಯಗಳಲ್ಲಿ ಅಧ್ಯಯನ ಮಾಡಬೇಕು? ಇತ್ಯಾದಿಗಳನ್ನು ಚರ್ಚಿಸಿದ ಅವರು ಕೊನೆಗೆ ಒಂದು ನಿರ್ಧಾರಕ್ಕೆ ಬಂದರು.

ಟಿಪ್ಪುವಿನ ಪುತ್ರ ಪ್ಯಾರಿಸ್ಸಿನಲ್ಲಿ ವಿದ್ಯಾಭ್ಯಾಸ ಮಾಡಬೇಕಾದರೆ ಆತನ ನಿರ್ವಹಣಾ ವೆಚ್ಚವು ವರ್ಷಕ್ಕೆ ೫೦ ಸಾವಿರ ರೂ. ಗಳಾಗುತ್ತದೆಂದು, ಆತನು ಅಲ್ಲಿ ಗಣಿತಶಾಸ್ತ್ರ, ಫ್ರೆಂಚ್ ಭಾಷೆ ಮತ್ತು ವಸ್ತುಗಳ ಉತ್ಪಾದನೆ ವಿಧಾನ ಮೊದಲಾದವುಗಳನ್ನು ಕಲಿಯಬೇಕೆಂದು ಒಂದು ಪಟ್ಟಿ ಮಾಡಿದರು. ರಾಜಕುಮಾರನ ವಿದ್ಯಾಭ್ಯಾಸದ ಖರ್ಚು ತುಂಬಾ ಆಗುವುದರಿಂದ ಆ ಖರ್ಚನ್ನು ಫ್ರೆಂಚ್ ದೊರೆ ಭರಿಸಲಾರರೆಂದೂ, ಅದನ್ನು ಟಿಪ್ಪು ಸುಲ್ತಾನರೇ ಭರಿಸಬೇಕೆಂದು ತೀರ್ಮಾನಿಸಿದರು. ಒಂದು ವೇಳೆ ಟಿಪ್ಪುವಿನ ರಾಜಕುಮಾರ ತಾನು ಮಾರುವೇಷದಲ್ಲಿ ಅಲ್ಲಿ

ಇದ್ದು ಕಲಿಯುವುದಾದರೆ ಅಥವಾ ತನ್ನ ಆಳುಕಾಳುಗಳ ಸಿಬ್ಬಂದಿಯನ್ನು ಕಡಿಮೆ ಮಾಡಿಕೊಂಡು ಓದುವುದಾದರೆ ಖರ್ಚು ಕಡಿಮೆ ಬರುತ್ತದೆಂದು ಅಂದಾಜು ಮಾಡಿದರು.

ಈ ಎಲ್ಲಾ ವಿಷಯಗಳೂ ಟಿಪ್ಪು ಸುಲ್ತಾನನಿಗೆ ತಿಳಿದು ಆತನು ತನ್ನ ಮಗನನ್ನು ಉನ್ನತ ವಿದ್ಯಾಭ್ಯಾಸಕ್ಕಾಗಿ ಪ್ಯಾರಿಸ್ಸಿಗೆ ಕಳುಹಿಸಬೇಕೆಂಬ ನಿರ್ಧಾರವನ್ನು ತೆಗೆದುಕೊಳ್ಳುವಷ್ಟರಲ್ಲಿ ಮೂರನೇ ಮೈಸೂರು ಯುದ್ಧವು ಪ್ರಾರಂಭವಾಯಿತು. ಯುದ್ಧದ ಕಡೆ ಹೆಚ್ಚಿನ ಗಮನವನ್ನು ಹರಿಸಿದ ಟಿಪ್ಪು ಸುಲ್ತಾನನು ಅಂತಿಮವಾಗಿ ತನ್ನ ಮಕ್ಕಳ ವಿದೇಶದ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಗಮನವನ್ನು ಕೊಡಲು ಸಾಧ್ಯವಾಗಲೇ ಇಲ್ಲ. ಅಂತಿಮವಾಗಿ "ಟಿಪ್ಪು ಸುಲ್ತಾನನ ಮಕ್ಕಳ ವಿದ್ಯಾಭ್ಯಾಸವೆಲ್ಲವೂ ಶ್ರೀರಂಗಪಟ್ಟನದಲ್ಲಿಯೇ ನಡೆಯಿತು".

೩.೧೧ ಶ್ರೀಗಂಧದ ಕೋಟೆ ಕಟ್ಟಿದ್ದ ಟಿಪ್ಪು ಸುಲ್ತಾನ್

ಕನ್ನಡನಾಡು ಶ್ರೀಗಂಧದ ಬೀಡು ಎಂದು ಕವಿಪುಂಗರು ಹಾಡಿ ಹೊಗಳಿದ್ದಾರೆ. ನಮ್ಮ ನಾಡಿನಲ್ಲಿ ದೊರೆಯವಷ್ಟು ಶ್ರೀಗಂಧವು ಬೇರೆ ಎಲ್ಲಿಯೂ ಕೂಡ ದೊರೆಯದು. ಅದರಲ್ಲೂ ಹಳೆಯ ಮೈಸೂರು ಪ್ರಾಂತ್ಯದಲ್ಲಿ ಶ್ರೀಗಂಧದ ಮರವನ್ನು ಲೂಟಿ ಮಾಡಲೆಂದೇ ಮರಾಠಿ ಸೈನ್ಯದಳದ ಪರಶುರಾಮ್ ಭಾವು ಆಗಾಗ್ಗೆ ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಬರುತ್ತಿದ್ದ ಎಂದು ಬ್ರಿಟೀಷರ ಡಾ॥ ಫ್ರಾನ್ಸಿಸ್ ಬುಕಾನನ್ ಮೈಸೂರು ಕುರಿತ ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ.

ಹೈದರಾಲಿ- ಟಿಪ್ಪು ಸುಲ್ತಾನರ ಕಾಲದಲ್ಲಿ ಶ್ರೀಗಂಧದ ಮರಗಳನ್ನು ರಾಷ್ಟ್ರೀಯ ಸಂಪತ್ತು ಎಂದು ಘೋಷಿಸಿ ಅದರ ಸಾಮ್ಯತೆಯನ್ನ ಸರ್ಕಾರವು ಪಡೆದುಕೊಂಡಿತು. ಟಿಪ್ಪು ಸುಲ್ತಾನನ ರಾಜ್ಯಕ್ಕೆ ಅತಿ ಹೆಚ್ಚಿನ ಆದಾಯವು ಬರುತಿದ್ದುದು ಶ್ರೀಗಂಧ, ಕಾಳುಮೆಣಸು, ಎಲ್ಲಕ್ಕಿ ಹತ್ತಿ, ಅಕ್ಕಿ, ರೇಷ್ಮೆ ಮುಂತಾದ ಉತ್ಪನ್ನಗಳಿಂದ. ಅದರಲ್ಲು ಕಾಡಿನಲ್ಲಿ ಯಥೇಚ್ಛವಾಗಿ ಬೆಳೆದು ನಿಂತಿದ್ದ ಶ್ರೀಗಂಧದ ಮರವನ್ನು ಕಡಿದು, ಅವುಗಳನ್ನು ವಿದೇಶಕ್ಕೆ ಮಾರಿ ಆ ಹಣದಿಂದ ಟಿಪ್ಪು ಸುಲ್ತಾನ್ ತನ್ನ ಬೊಕ್ಕಸವನ್ನು ತುಂಬಿಸುತ್ತಿದ್ದ. ಟಿಪ್ಪು ಸುಲ್ತಾನನ ಕಾಲದಲ್ಲಿ ಕಾಡಿನ ಇತರೆ ಮರಗಳಿಗಿಂತ ತೇಗದ ಮರಗಳಿಗಿಂತ ಶ್ರೀಗಂಧದ ಮರಗಳೇ ಅಧಿಕ ಸಂಖ್ಯೆಯಲ್ಲಿ ಇದ್ದವು. ಇವುಗಳನ್ನು ಕಾಲಕಾಲಕ್ಕೆ ಕಡಿದು ಒಂದೆಡೆ ಸಂಗ್ರಹಿಸಿ, ವಿದೇಶದಲ್ಲಿ ಒಳ್ಳೆಯ ಬೆಲೆ ಬಂದಾಗ ಮಾರುತ್ತಿದ್ದನಂತೆ.

ಈ ರೀತಿ ಮಾರಾಟ ಮಾಡುವ ಮೊದಲು ಈ ಮರಗಳನ್ನು ಶ್ರೀರಂಗಪಟ್ಟಣದ ಕೋಟೆಯೊಳಗೆ ಉತ್ತರ ದಿಕ್ಕಿನಲ್ಲಿ ಇರುವ ವಾಟರ್ ಗೇಟ್ ಬಾಗಿಲ ಬಳಿಯ ಉಗ್ರಾಣದಲ್ಲಿ ಅಡಗಿಸಿ ಇಡುತ್ತಿದ್ದ. ಇದೇ ತರಹ ಬೆಂಗಳೂರಿನ ಮಲ್ಲೇಶ್ವರಂ - ಸದಾಶಿವನಗರದ

ಮಧ್ಯದಲ್ಲಿರುವ ಕೆರೆ ಸ್ಯಾಂಕಿಟ್ಯಾಂಕ್ ಬಳಿ ಕೂಡ ಒಂದು ಶ್ರೀಗಂಧದ ಮರದ ತುಂಡುಗಳ ಉಗ್ರಾಣವನ್ನು ಟಿಪ್ಪು ನಿರ್ಮಿಸಿದ. ಇಲ್ಲಿ ಶ್ರೀಗಂಧದ ಮರಗಳನ್ನು ಶೇಖರಿಸಿ ಇಡುತ್ತಿದ್ದ. ಈ ಜಾಗಗಳಿಗೆ ಸಂದಲ್ ಕೋಠಿ ಎಂದು ಕರೆಯುತ್ತಿದ್ದರು. ಈ ಕೆರೆಯನ್ನು ಜೀರ್ಣೋದ್ಧಾರ ಮಾಡಿಸಿದ. ನಂತರ ಕೆರೆಗೆ ಸ್ಯಾಂಕಿಕೆರೆ ಎಂದು ಕರೆಯಲಾಯಿತು. ಈಗಲೂ ಹಳಬರು ಈ ಕೆರೆಯನ್ನು ಗಂಧದಕೋಟೆ ಕೆರೆ ಎಂದೇ ಕರೆಯುತ್ತಾರೆ.

೩.೧೨ ಟಿಪ್ಪುವಿನ ಗ್ರಂಥಾಲಯ

ಶ್ರೀರಂಗಪಟ್ಟಣವನ್ನು ವಶವಡಿಸಿಕೊಂಡ ಬಳಿಕ ಬ್ರಿಟೀಷರು ಮಾಡಿದ ಶೋಧನೆಗಳಲ್ಲಿ ಒಂದೆಂದರೆ ಟಿಪ್ಪೂವಿನ ಗ್ರಂಥಾಲಯ. ಬೃಹತ್ ಗಾತ್ರದ ಪತ್ರವ್ಯವಹಾರದ ಸಂಪುಟಗಳು ಮತ್ತು ಅಧಿಕೃತ ದಾಖಲೆಗಳು ಮಾತ್ರವಲ್ಲದೆ ಅದರಲ್ಲಿ ೨೦೦೦ ಗ್ರಂಥಗಳಿದ್ದವು. ಬಹಪಾಲು ಹಸ್ತಪ್ರತಿಗಳು ಇಸ್ಲಾಮೀಯ ಮತಧರ್ಮಶಾಸ್ತ್ರಕ್ಕೆ ಸಂಬಂಧಿಸಿದ್ದವು. ಇತರ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳು, ಕಾವ್ಯ, ಇತಿಹಾಸ, ಗಣಿತಶಾಸ್ತ್ರ, ನ್ಯಾಯಶಾಸ್ತ್ರ, ತತ್ವಶಾಸ್ತ್ರ ಖಗೋಳವಿಜ್ಞಾನ, ಭಾಷಾಶಾಸ್ತ್ರ ಮೊದಲಾದ ವಿಷಯಗಳಿಗೆ ಸಂಬಂದಿಸಿದ್ದವು. ಇವು ಅರಬ್ಬೀ, ಫಾರ್ಸಿ ಉರ್ದು ಮತ್ತು ಹಿಂದಿ ಭಾಷೆಯಲ್ಲಿ ರಚಿತವಾದ ಗ್ರಂಥಗಳಾಗಿದ್ದವು. ಕೆಲವೊಂದು ಹಸ್ತಪ್ರತಿಗಳಲ್ಲಿ ಮೊದಲ ಅಕ್ಷರಗಳನ್ನು ಉಜ್ವಲವಾಗಿ ಅಲಂಕರಿಸಲಾಗಿತ್ತು. ಅತ್ಯಂತ ಅಮೂಲ್ಯವಾದ ಸಂಪುಟವೆಂದರೆ ಖುರಾನಿನ ಒಂದು ಪ್ರತಿ. ಇದು ಒಂದು ಕಾಲದಲ್ಲಿ ಔರಂಗಜೇಬನಿಗೆ ಸೇರಿದುದಾಗಿತ್ತು. ಅದು ಸುಂದರವಾದ ನಕ್ಷೆ ಆಪಿಯಿಂದ ಬರೆಯಲ್ಪಟ್ಟದ್ದು, ೬೦೦೦ ರೂಪಾಯಿಗಳನ್ನು ಕೊಟ್ಟು ಅದನ್ನು ಕೊಂಡುಕೊಂಡಿದ್ದಾಗಿ ಹೇಳಲಾಗಿದೆ. ಆದರೆ ನಿಜವಾಗಿಯೂ ಅದು ಅಮೂಲ್ಯವಾದುದೇ ಸರಿ. ಅದನ್ನು ಇಂಗ್ಲೆಂಡಿಗೆ ಕಳುಹಿಸಲಾಗಿತ್ತು. ಇವು ಈಗ ವಿಂಡ್ಸರ್ ಗ್ರಂಥಾಲಯದಲ್ಲಿದೆ. ಇನ್ನೊಂದು ಅಪೂರ್ವ ಹಸ್ತಪ್ರತಿ ಶಾಹ್‌ನಾಮಗೆ ಸಂಬಂಧಿಸಿದ್ದು. ಫಿರ್ದೌಸಿಯ ಈ ಕೃತಿ ಫಾರ್ಸಿ ಭಾಷೆಯಲ್ಲಿದೆ. ಈ ಸಂಗ್ರಹದಲ್ಲಿ ಟಿಪ್ಪುವಿನ ಸ್ವಹಸ್ತಾಕ್ಷರದಲ್ಲಿ ಬರೆಯಲಾಗಿರುವ ಕನಸಿನ ಪುಸ್ತಕವೂ ಇದ್ದು, ಅದು ಟಿಪ್ಪುವಿನ ಸ್ವಭಾವದ ಮೇಲೆ ಬೆಳಕು ಚೆಲ್ಲುವಂಥಹದ್ದಾಗಿದೆ.

"ಸುಮಾರು ಹತ್ತನೆಯ ಒಂದರಷ್ಟು ಪ್ರಮಾಣದ ಗ್ರಂಥಗಳನ್ನು ಇಂಗ್ಲೆಂಡಿಗೆ ಕಳಿಸಲಾಯಿತು. ಉಳಿದವನ್ನು ಹೊಸತಾಗಿ ನಿರ್ಮಿಸಲಾಗಿದ್ದ ಫೋರ್ಟ್ ವಿಲಿಯಮ್ ಕಾಲೇಜಿನ ಗ್ರಂಥಾಲಯದಲ್ಲಿ ಇರಿಸಲಾಯಿತು. ಮುಂದೆ ಕೆಲವು ಸಂಪುಟಗಳನ್ನು ಕೋಲ್ಕತ್ತಾದ ಏಷ್ಯಾಟಿಕ್ ಸೊಸೈಟಿಯ ಗ್ರಂಥಾಲಯಕ್ಕೆ ವರ್ಗಾಯಿಸಲಾಯಿತು. ಕೇಂಬ್ರಿಡ್ಜ್‌ನಲ್ಲಿ ಪ್ರಾಚ್ಯಭಾಷೆಗಳ ಪ್ರಾಧ್ಯಾಪಕರಾಗಿದ್ದ ಚಾರ್ಲ್ಸ್ ಸ್ಟುವರ್ಟ್ ಅವರು ಟಿಪ್ಪೂ-ಗ್ರಂಥ ಸಂಗ್ರಹದ

ಗ್ರಂಥಸೂಚಿಯನ್ನು ಸಿದ್ಧಪಡಿಸಿದ್ದು, ಇವುಗಳನ್ನು Descreptive catalogue of the oriental of the Tippu Sulthan of Mysore ಎಂಬ ಹೆಸರಿನಲ್ಲಿ ಅದನ್ನು ಪ್ರಕಟಿಸಲಾಗಿದೆ. ಕೆಲವು ಪುಸ್ತಕಗಳು ಬಿಜಾಪುರದ ಹಾಗೂ ಗೋಲ್ಕೊಂಡಾದ ನವಾಬರಿಗೆ ಸೇರಿದವಾಗಿವೆ. ಬೌರಿಂಗನ ಹೇಳಿಕೆಯ ಪ್ರಕಾರ, ಬಹುಸಂಖ್ಯೆಯ ಪುಸ್ತಕಗಳನ್ನು ಚಿತ್ತೂರು, ಸವಣೂರು, ಮತ್ತು ಕಡಪದ ಆಕ್ರಮಣದ ಸಂದರ್ಭಗಳಲ್ಲಿ ಲೂಟಿ ಮಾಡಲಾಗಿತ್ತು". [೪]

೩.೧೩ ಟಿಪ್ಪುವಿನ ಮರಣದ ನಂತರ ವಶಪಡಿಸಿಕೊಂಡ ವಸ್ತುಗಳು

ಮೈಸೂರು ಹುಲಿ ಟಿಪ್ಪು ಸುಲ್ತಾನ್ ರಣಭೂಮಿಯಲ್ಲಿ ವೀರ ಮರಣವನ್ನು ಅಪ್ಪಿದ ಸುದ್ದಿಯು ಬ್ರೀಟಿಷರಿಗೆ ರಾತ್ರಿಯ ವೇಳೆ ತಿಳಿಯಿತು. ಈ ಸುದ್ದಿಯನ್ನು ಕೇಳುತ್ತಿದ್ದಂತೆಯೇ ಬ್ರಿಟೀಷ್ ಅಧಿಕಾರಿಗಳಾದಿಯಾಗಿ ಎಲ್ಲ ಸೈನಿಕರು ಇಡಿ ಶ್ರೀರಂಗಪಟ್ಟಣದ ಅರಮನೆಗೆ, ಸಾಮಾನ್ಯ ಪ್ರಜೆಗಳ ಮನೆಗಳಿಗೆ ನುಗ್ಗಿ ಲೂಟಿ ಮಾಡತೊಡಗಿದರು. ಈ ಲೂಟಿಯು ಸುಮಾರು ೩ ದಿನಗಳ ಕಾಲ ನಿರಂತರವಾಗಿ ನಡೆದು, ಕೊನೆಗೆ ೬ನೇ ತಾರೀಖಿನಂದು ಲಾರ್ಡ್ ವೆಲ್ಲೆಸ್ಲಿಯು ಪರಿಸ್ಥಿತಿಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಾಗ ನಿಂತಿತು.

ಈ ಮಹಾ ಲೂಟಿಯಲ್ಲಿ ಮೈಸೂರು ಹುಲಿ ಟಿಪ್ಪು ಸುಲ್ತಾನನ ಅಳಿದುಳಿದ ಬೊಕ್ಕಸದ ನಿಧಿ ಅಲ್ಲದೆ ಶ್ರೀರಂಗಪಟ್ಟಣದ ಅಧಿಕಾರಿಗಳು, ವ್ಯಾಪಾರಿಗಳು, ಶ್ರೀಮಂತರ ಮನೆಗಳಿಂದಲೂ ಅಪಾರ ಪ್ರಮಾಣದ ಸಂಪತ್ತನ್ನು ಬ್ರಿಟೀಷರು ದೋಚಿದರು. ಇವುಗಳ ಸರಿಯಾದ ಲೆಕ್ಕವು ಯಾರಿಗೂ ಸಿಗಲಿಲ್ಲ. ಆದರೆ ಮೈಸೂರು ಹುಲಿ ಟಿಪ್ಪು ಸುಲ್ತಾನನ ಅರಮನೆಯಿಂದ ಲೂಟಿ ಮಾಡಿದ ಚಿನ್ನ, ಬೆಳ್ಳಿ, ಮುತ್ತು, ರತ್ನ ಮತ್ತಿತರೆ ವಸ್ತುಗಳ ಲೆಕ್ಕ ಮಾತ್ರ ಹಲವು ದಿನಗಳ ನಂತರ ಸಿಕ್ಕಿತು. ಈ ಎಲ್ಲವನ್ನೂ ಬ್ರಿಟೀಷರು ಲಂಡನ್ನಿಗೆ ಸಾಗಿಸಿ ಅಲ್ಲಿನ ವಸ್ತು ಸಂಗ್ರಹಾಲಯಗಳಲ್ಲಿ ಸೇರಿಸಿಟ್ಟರು. ಅವುಗಳ ವಿವರ ಈ ರೀತಿ ಇದೆ.

೧. **ದಿ ರಾಯಲ್ ಕನೆಕ್ಷನ್: ಹರ್ ಮೆಜೆಸ್ಟಿ ದಿ ಕ್ವೀನ್ ಮ್ಯೂಸಿಯಂ**

   ಚಿನ್ನದ ಹುಲಿಯ ತಲೆ, ಹ್ಯೂಮ ಪಕ್ಷಿ, ರೇಷ್ಮೆ ಬ್ಯಾನರ್, ಸೂರ್ಯ ಬ್ಯಾನರ್, ಚಿನ್ನದ ಕತ್ತಿ, ಟಿಪ್ಪು ಸುಲ್ತಾನ್ ಯುದ್ಧದಲ್ಲಿ ಧರಿಸುತ್ತಿದ್ದ ಕಬ್ಬಿಣದ ಉಡುಪು, ಯುದ್ಧದಲ್ಲಿ ಧರಿಸುತ್ತಿದ್ದ ವೆಲ್ವೆಟ್ ಹೆಲ್ಮೆಟ್ ಮತ್ತು ಚಿನ್ನದ ರಾಜಮುದ್ರೆ.

೨. **ನ್ಯಾಷನಲ್ ಟ್ರಸ್ಟ್ ಎಂಟರ್ ಪ್ರೈಸಸ್ ಲಿ. ಲಂಡನ್(ಪೊವಿಸ್ ಕ್ಯಾಸೆಲ್)**

   ಚಿನ್ನದ ಹುಲಿಯ ತಲೆ, ಟಿಪ್ಪು ಸುಲ್ತಾನನು ಕೂರುತ್ತಿದ್ದ ಸಿಂಹಾಸನದ ನೀಲಿ ನಕ್ಷೆ, ಟಿಪ್ಪು ಸುಲ್ತಾನನು ಯುದ್ಧದ ಸಮಯದಲ್ಲಿ ವಾಸಿಸುತ್ತಿದ್ದ ಬಿಡಾರ, ಟಿಪ್ಪು ಸುಲ್ತಾನನು

ಧರಿಸುತ್ತಿದ್ದ ಶೂ. ಫ್ರಾನ್ಸ್ ದೊರೆ ೧೬ನೇ ಲೂಯಿಯು ಟಿಪ್ಪು ಸುಲ್ತಾನನಿಗೆ ಕೊಡುಗೆಯಾಗಿ ನೀಡಿದ್ದ ಕಪ್ಪು ಮತ್ತು ಸಾಸರ್.

೩. ಬ್ರಿಟೀಷ್ ಲೈಬ್ರರಿ-ಲಂಡನ್

ಟಿಪ್ಪು ಸುಲ್ತಾನನು ಕೂರುತ್ತಿದ್ದ ನೀಲ ನಕ್ಷೆ

೪. ದಿ ಸ್ಟೀನ್ ಆಫ್ ಸಿ ವ್ಯಾಲೆಸ್ ಕಲೆಕ್ಷನ್-ಲಂಡನ್

ಚಿನ್ನದ ಕತ್ತಿ, ಪಟಾನ್ ಕತ್ತಿ.

೫. ಎಡಿನ್ ಬರ್ಗ್

ಟಿಪ್ಪು ಸುಲ್ತಾನನ ಕತ್ತಿ, ಅಮ್ಯುಲೆಟ್, ಟರ್ಬನ್ ಮತ್ತು ಬ್ರೂಚ್.

೬. ದಿ ಬೋರ್ಡ್ ಆಫ್ ಟ್ರಸ್ಟೀಸ್ ಆಫ್ ದಿ ವಿಕ್ಟೋರಿಯ ಮತ್ತು ಆಲ್ಬರ್ಟ್ ಮ್ಯೂಸಿಯಂ-ಲಂಡನ್

ಮುತ್ತು, ರತ್ನ, ವಜ್ರ ಹವಳಗಳ ಸೆಟ್, ರೂಬೀಸ್ ಮತ್ತು ವಜ್ರಗಳ ಸೆಟ್, ಚಿನ್ನದ ಪ್ಯಾಕೆಟ್ ವಾಚ್, ಚಿನ್ನದ ಬ್ರೂಚ್, ಟಿಪ್ಪು ಸುಲ್ತಾನನ ಹುಲಿ, ಟಿಪ್ಪು ಸುಲ್ತಾನನ ತೋಳು ಬಂದಿ ಹಾಗೂ ಶಿರಸ್ತ್ರಾಣ, ಕುದುರೆ ಸ್ಟಿಕ್, ಕುದುರೆ ಮೇಲೆ ಹಾಕುವ ಬಟ್ಟೆಯ ಜೀನ, ರತ್ನಗಂಬಳಿ.

೭. **ದಿ ರಾಯಲ್ ಆಂಗ್ಲೀಯನ್ ರೆಜಿಮೆಂಟ್ ಬರಿ-ಸಯಂಟ್ ಎಡ್ಮಂಡ್ಸ್ ಸಿಲ್ವರ್** ಪೌಡರ್, ಫ್ಲಾಸ್ಕ್.

೮. **ದಿ ನ್ಯಾಷನಲ್ ಆರ್ಮಿ ಮ್ಯೂಸಿಯಂ- ಚೆಲ್ಸಿಯ, ಲಂಡನ್**

ಬಿಳಿ ಕತ್ತಿ ಮತ್ತು ಡ್ಯಾಗರ್, ಪ್ಯಾಬ್ರಿಕ್ ಹೆಲ್ಮೆಟ್, ವಾಕಿಂಗ್ ಸ್ಟಿಕ್.

ಅಡಿ ಟಿಪ್ಪಣಿ

೧) ತಲಕಾಡು ಚಿಕ್ಕರಂಗೇಗೌಡ, ಟಿಪ್ಪುಸುಲ್ತಾನ್ ಕಾಲದ ಪ್ರಸಂಗಗಳು, ಚಂದ್ರಗಿರಿ ಪ್ರಕಾಶನ - ಬೆಂಗಳೂರು-೨೦೧೩. ಪು.ಸಂ.೬೫.

೨) ಅದೇ ಪುಟ ಸಂ ೭೩.

೩) ಅದೇ ಪುಟ ಸಂ ೧೭೫.

೪) ಹೆಚ್.ಡಿ.ಶರ್ಮ, ಟಿಪ್ಪು ನಿಜಸ್ವರೂಪ, ಸಾಹಿತ್ಯಸಿಂಧು ಪ್ರಕಾಶನ, ಬೆಂಗಳೂರು-೨೦೧೨. ಪು.ಸಂ.೭೪.

ಅಧ್ಯಾಯ – ೪

ಟಿಪ್ಪು ಕುರಿತು ಶಿಷ್ಟ ಸಾಹಿತ್ಯ ಮತ್ತು ಬರವಣಿಗೆಗಳು

೪.೧ ಪೀಠಿಕೆ

೪.೨ ನಾಟಕಗಳು

೪.೩ ಕೃತಿಗಳು

೪.೪ ಸಂಶೋಧನಾತ್ಮಕ ಬರವಣಿಗೆಗಳು

೪.೫ ಟಿಪ್ಪುವಿನ ಹಸ್ತ ಪ್ರತಿಗಳು

ಅಧ್ಯಾಯ – ೪

ಟಿಪ್ಪು ಕುರಿತು ಶಿಷ್ಟ ಸಾಹಿತ್ಯ ಮತ್ತು ಬರವಣಿಗೆಗಳು

೪.೧ ಪೀಠಿಕೆ

ಶಿಷ್ಟ ಸಾಹಿತ್ಯ ಎನ್ನುವಂತದ್ದು ಉದ್ದೇಶಪೂರ್ವಕವಾಗಿ, ವ್ಯಕ್ತಿಯೊಬ್ಬನಿಂದ ರಚಿತವಾಗಿ ಬರವಣಿಗೆಯ ಮೂಲಕ ಉಳಿದು ಬರುವಂಥದ್ದು. ಇದು ಕಾಲದ ಯಾವುದೇ ವ್ಯತ್ಯಾಸಕ್ಕೆ ಗುರಿಯಾಗುವುದಿಲ್ಲ. ಆಯಾ ಕಾಲದ ಸಾಮಾಜಿಕ ಪ್ರವೃತ್ತಿಗಳಗೆ ಮತ್ತು ಪರಿವರ್ತನೆಗಳಗೆ ಶಿಷ್ಟ ಸಾಹಿತ್ಯಕ್ಕೆ ಕರ್ತೃತ್ವ ಅಧಿಕಾರವಿದೆ. ಶಿಷ್ಟ ಸಾಹಿತ್ಯದಲ್ಲಿ ವ್ಯಷ್ಟಿ ಅನಿಸಿಕೆಗಳೇ ಹೆಚ್ಚು ಪ್ರಾಧಾನ್ಯತೆ ಪಡೆಯುತ್ತವೆ.

ಶಿಷ್ಟ ಸಾಹಿತ್ಯ ಎಂಬುದು ಲಿಖಿತ ರೂಪಕ್ಕೆ ಬದ್ದವಾದ ಸಾಹಿತ್ಯ. ಅದು ವ್ಯಕ್ತಿ ನಿಷ್ಟವಾದುದು. ಬರವಣಿಗೆಗೆ ಬಧ್ಧವಾದ ಕಾರಣದಿಂದ ಮತ್ತು ವ್ಯಕ್ತಿಯ ಸ್ವಂತದ್ದಾಗುವುದರಿಂದ ಅದರಲ್ಲಿ ಯಾವ ಬದಲಾವಣೆಯು ಸಾಧ್ಯವಿಲ್ಲ. ಶಿಷ್ಟ ಸಾಹಿತ್ಯದಲ್ಲಿ ಪ್ರತಿಯೊಂದು ಕೃತಿಯು ಆಯಾ ಕರ್ತೃವಿನ ಹೆಸರಿನಿಂದಲೇ ಗುರ್ತಿಸಲ್ಪಡುತ್ತದೆ. ಶಿಷ್ಟ ಸಾಹಿತ್ಯದ ರಚನೆ ಎಲ್ಲರಿಂದಲೂ ಸಾಧ್ಯವಾಗುವಂಥದ್ದಲ್ಲ. ಅದಕ್ಕೆ ಕೆಲವೊಂದು ತಾಲೀಮುಗಳು ಬೇಕಾಗುತ್ತವೆ. ಈ ತಾಲೀಮುಗಳನ್ನು ನಡೆಸಿದವರು ಮಾತ್ರ ಅದರ ರಚನೆಗೆ ಕೈಹಾಕಬಹುದು. ಶಿಷ್ಟ ಸಾಹಿತ್ಯ ಹಲವಾರು ಕಟ್ಟು–ಪಾಡುಗಳಗೆ ಬದ್ದವಾಗಿರುತ್ತದೆ. ಇಲ್ಲಿ ಕವಿಯೇ ಬೇರೆ, ಸಹೃದಯವೇ ಬೇರೆ. ಕವಿಯ ರಚನೆಯ ಬಗ್ಗೆ ಸಹೃದಯ ಟೀಕಿಸಬಹುದು, ಆದರೆ ಅವನ ರಚನೆಯಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

ಶಿಷ್ಟ ಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ಮೂಲ ಪ್ರೇರಕ ಶಕ್ತಿ, ಆದ್ದರಿಂದಲೆ ಬಿ.ಎಂ.ಶ್ರೀ ಅವರು "ಜನವಾಣಿ ಬೇರು ಕವಿವಾಣಿ ಹೂವು"ಎಂದಿರುವುದು.

ಶಿಷ್ಟ ಸಾಹಿತ್ಯವು ಕನ್ನಡ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಜನಪದ ಸಾಹಿತ್ಯದಿಂದ ಸ್ಫೂರ್ತಿ ಮತ್ತು ಸ್ವತ್ತುಗಳನ್ನು ಪಡೆಯುತ್ತಾ ಬಂದಿರುತ್ತದೆ. ಶಿಷ್ಟ ಲೇಖಕನು ಹಲವು ಬಾರಿ ಜಾನಪದೀಯ ವಸ್ತುವನ್ನು ಆಯ್ದುಕೊಂಡು ಶಿಷ್ಟ ಸಾಹಿತ್ಯದ ಕಟ್ಟು–ಪಾಡುಗಳಗೆ ಅನುಗುಣವಾಗಿ ಪುನರ್ ರಚಿಸುವುದುಂಟು. ಇದನ್ನೇ ಪಂಪನು "ದೇಸಿಯೊಳು ತಳ್ಪುವುದು"ಎಂದು ಹೇಳದ್ದು. ಇಡೀ ಜನಪದ ಕಥೆಯೇ ಶಿಷ್ಟ ಕೃತಿಯಾಗಿ ಮೈದಾಳರುವುದಾಗಿ

ಉಂಟು. ಇಲ್ಲಿ ವಸ್ತು ಸಂಪೂರ್ಣ ಜಾನಪದೀಯವೇ ಆದರೂ ಈ ಕೃತಿಗಳನ್ನು ಆಯಾ ಕವಿಯ ಹೆಸರಿನಿಂದ ಗುರುತಿಸುತ್ತೇವೆ ಹೊರತು ಜನಪದ ಸಾಹಿತ್ಯ ಎಂದಲ್ಲ.

ಸುಲ್ತಾನ್ ಟಿಪ್ಪು ಬಗ್ಗೆ ಚರಿತ್ರೆಯ ನೆಲೆಗಳಲ್ಲಿ ಮಾತನಾಡುವುದೇ ಬೇರೆ, ಜನಪದ ಸಾಹಿತ್ಯದ ಹಿನ್ನೆಲ್ಲೆಯಲ್ಲಿ ಆತನ ವ್ಯಕ್ತಿತ್ವವನ್ನು ಗ್ರಹಿಸುವುದೇ ಬೇರೆ. ಅದೇ ಸೃಜನಶೀಲ ಸಾಹಿತ್ಯದ ಸಂದರ್ಭದಲ್ಲಿ ಸುಲ್ತಾನ್ ಟಿಪ್ಪು ಬಗ್ಗೆ ಮಾತಾನಾಡುವುದು ಇವೆಲ್ಲಕ್ಕಿಂತಲೂ ಭಿನ್ನವಾದ ವಿಷಯವೇ ಆಗಿದೆ.

ಸುಲ್ತಾನ್ ಟಿಪ್ಪು ಬಗ್ಗೆ ಜನಜನಿತ ವಿಷಯಗಳು ಕೇವಲ ಚರಿತ್ರೆಯ ಹಿನ್ನೆಲೆಯಲ್ಲಿ ಮಾತ್ರ ಜನಮನವನ್ನು ಮುಟ್ಟಿರುವಂತೆ ತಿಳಿದುಬರುತ್ತದೆ. ಆದರೆ ಶಿಷ್ಟ ಸಾಹಿತ್ಯ ಪ್ರಕಾರಗಳಲ್ಲಿ ಚಿತ್ರಿಸಲಾಗಿರುವ ಟಿಪ್ಪುವಿನ ಪಾತ್ರ ಜನಸಮುದಾಯದಲ್ಲೂ ಚಿರಪರಿಚಿತವಲ್ಲ. ಸಮೂಹ ಮಾಧ್ಯಮಗಳಲ್ಲೂ ಅಷ್ಟು ಪರಿಚಿತವಲ್ಲ. ಆದಾಗ್ಯೂ ಚರಿತ್ರೆಯ ಮುಖಾಂತರ ಜನರನ್ನು ಮುಟ್ಟಿರುವ ಟಿಪ್ಪು ಬಗೆಗಿನ ವಿಷಯ ಕೇವಲ ವಿಕಾರಗೊಳಿಸಲಾದ ಚರಿತ್ರೆಯನ್ನೇ ಹೆಚ್ಚು ಪ್ರಚಾರ ಮಾಡಲಾಗಿರುವುದು ಮಾತ್ರ ಸ್ಪಷ್ಟವಾಗಿಯೇ ತಿಳಿದುಬರುತ್ತದೆ. ಆದರೆ ಸುಲ್ತಾನ್ ಟಿಪ್ಪುವನ್ನು ಕುರಿತ ಚರಿತ್ರೆಯನ್ನು ಹೀಗೆ ವಿಕಾರಗೊಳಿಸಲು ಕಾರಣವೇನು? ಇದು ಅತ್ಯಂತ ಚರ್ಚಾಸ್ಪದವಾದಂತಹ ಪ್ರಶ್ನೆ. ಸದ್ಯ ಶಿಷ್ಟ ಸಾಹಿತ್ಯದ ಯಾವ ಯಾವ ಪ್ರಕಾರಗಳಲ್ಲಿ ಸುಲ್ತಾನ್ ಟಿಪ್ಪುವಿನ ಐತಿಹಾಸಿಕ ಪಾತ್ರವನ್ನು ಚಿತ್ರಿಸಲಾಗಿದೆ ಎಂಬುದನ್ನು ವಿವರಿಸಬಹುದಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುಲ್ತಾನನಾದ ಟಿಪ್ಪುವನ್ನು ಕುರಿತಂತೆ ಪ್ರಾಯಶಃ ಪ್ರಪ್ರಥಮ ಐತಿಹಾಸಿಕ ಕಾದಂಬರಿಯೆಂಬಂತೆ ಇಪ್ಪತ್ತನೆ ಶತಮಾನದ ಪೂರ್ವಾರ್ಧದಲ್ಲೇ ಪ್ರಕಟವಾಗಿರಬಹುದಾದ ವೀರಕೇಸರಿ ಕಾವ್ಯನಾಮದ ಸೀತಾರಾಮಶಾಸ್ತ್ರಿ ವಿರಚಿತ ಮೈಸೂರು ಹುಲಿ. ಹಾಗೆ ನೋಡಿದರೆ ಚಿತ್ರದುರ್ಗದ ಮದಕರಿ ನಾಯಕನನ್ನು ಕುರಿತ ತ.ರಾ.ಸು. ಅವರ ದುರ್ಗಾಸ್ತಮಾನ ಕಾದಂಬರಿಯೂ ಐತಿಹಾಸಿಕ ಕಾದಂಬರಿಯೇ. ಆಧುನಿಕ ಕನ್ನಡದಲ್ಲಿ ಅದೊಂದು ಮಹತ್ವಾಕಾಂಕ್ಷೆಯ ಕಾದಂಬರಿಯೂ ಹೌದು. ಆದರೆ ಆ ಕಾದಂಬರಿಯ ಐತಿಹಾಸಿಕ ನಾಯಕ ಮದಕರಿ ನಾಯಕ, ಸುಲ್ತಾನ ಟಿಪ್ಪುವಿನಂತೆ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಅಷ್ಟು ಜನಪ್ರಿಯವಾಗಿ ಪ್ರಸಿದ್ಧಿಯಾಗಿಲ್ಲ.

ಆಧುನಿಕ ಕನ್ನಡದಲ್ಲಿ ಸುಲ್ತಾನ್ ಟಿಪ್ಪುವಿನ ಪಾತ್ರವನ್ನು ಕೊನೆಯ ಪಕ್ಷ ಮೂರು ರೀತಿಯ ಸಾಹಿತ್ಯ ಪ್ರಕಾರಗಳಲ್ಲಿ ಕಾಣಬಹುದಾಗಿದೆ. ಮೊದಲನೆಯದಾಗಿ ಜನಪದ ಸಾಹಿತ್ಯ, ಎರಡನೆಯದು ಈಗಾಗಲೇ ಸೂಚಿಸಿರುವ ಕಾದಂಬರಿ ಸಾಹಿತ್ಯ, ಮೂರನೆಯದು ಮತ್ತು ಮುಖ್ಯವಾದುದು ನಾಟಕ ಸಾಹಿತ್ಯ. ಅಂದರೆ ವೈಚಾರಿಕ ಬರವಣಿಗೆಯನ್ನು ಮೊದಲುಗೊಂಡು

ಸಾಹಿತ್ಯದ ಈ ವಿಭಿನ್ನ ಪ್ರಕಾರಗಳಲ್ಲಿ ಸುಲ್ತಾನ್ ಟಿಪ್ಪು ನಾಯಕಪಾತ್ರವಾಗಿ ಕಾಣಿಸಿಕೊಂಡಿರುವುದರ ಹಿಂದಿನ ಮೂಲ ಪ್ರೇರಣೆ ಸುಲ್ತಾನ್ ಟಿಪ್ಪು ಮೂಲತಃ ಪರಾಕ್ರಮಿ, ಯುದ್ಧವೀರ, ಕ್ರಾಂತಿಕಾರಿ ಚಿಂತಕ, ಅಭಿವೃದ್ಧಿ ಮತ್ತು ನಿತ್ಯಪರಿವರ್ತನಶೀಲ ಆಡಳಿತಗಾರ. ಅವನ ನಾಯಕ ಪಾತ್ರದ ವ್ಯಕ್ತಿತ್ವವೇ ತುಂಬಾ ರೋಚಕವಾದುದು ಮತ್ತು ವರ್ಣರಂಜಿತವಾದುದು.

ಜನಪದ ಸಾಹಿತ್ಯದಲ್ಲಿ ಟಿಪ್ಪು ನಿಜವಾದ ಜನನಾಯಕನೇ ಆಗಿದ್ದಾನೆ. ಜನಪದ ಸಾಹಿತ್ಯವು ಸದಾ ನಂಬಿಕೆಗೆ ಅರ್ಹವಾದ ಸಾಹಿತ್ಯ. ಈ ಹಿನ್ನೆಲೆಯಲ್ಲಿ ಲಿಂಗದೇವರು ಹಳೆಮನೆ ಅವರು ಸಂಗ್ರಹಿಸಿ ಪ್ರಕಟಿಸಿರುವ ಧೀರ ಟಿಪ್ಪುವಿನ ಲಾವಣಿಗಳು ಎಂಬ ಸಂಕಲನ ಇಲ್ಲಿ ಉದ್ಧರಣೀಯ. ಶ್ರೀ ಲಿಂಗದೇವರು ಹಳೆಮನೆ ಅವರು ಹೈದರನನ್ನು ಕುರಿತು ನಾಟಕವನ್ನು ರಚಿಸಿರುವುದು ಗಮನಾರ್ಹ ಸಂಗತಿ. ಅಂದರೆ ಹೈದರ್ ಮತ್ತು ಟಿಪ್ಪುವನ್ನು ಕುರಿತಂತೆ ಸಾಕಷ್ಟು ಅಧ್ಯಯನವನ್ನೇ ಅವರು ಕೈಗೊಂಡಿದ್ದಾರೆ.

ಶ್ರೀ ಲಿಂಗದೇವರು ಹಳೆಮನೆ ಅವರು ಸಂಗ್ರಹಿಸಿರುವ ಹೈದರ್ ಮತ್ತು ಟಿಪ್ಪುವನ್ನು ಕುರಿತ ಲಾವಣಿಗಳಲ್ಲಿ ಒಂದು ಅಥವಾ ಎರಡು ಗದ್ಯರೂಪಗಳನ್ನು ಸದ್ಯ ಪರಿಶೀಲಿಸಲಾಗಿದೆ. ಹೈದರ್ ಜಾತಿ ಸಮನ್ವಯತೆಯ ಬಗೆಗೆ ಅನೇಕ ಕಥೆಗಳು ಮೈಸೂರಿನ ಸುತ್ತಮುತ್ತ ಇವೆ. ಅದರಲ್ಲಿ ಒಂದು ಕಥೆ ಹೀಗಿದೆ, ಒಮ್ಮೆ ಗಣೇಶ ಚತುರ್ಥಿಯಂದು ಹಿಂದೂಗಳು ಶ್ರೀರಂಗಪಟ್ಟಣದ ರಾಜಬೀದಿಯಲ್ಲಿ ಗಣೇಶನ ವಿಗ್ರಹವನ್ನು ಕೊಂಡೊಯ್ಯುತ್ತಿದ್ದರು. ಗಣೇಶನ ಮೆರವಣಿಗೆ ಎಂದ ಮೇಲೆ ಬಾಜಾ, ಭಜಂತ್ರಿ, ವಾದ್ಯ, ಘೋಷಣೆಗಳು ಇದ್ದದ್ದೆ. ಮೆರವಣಿಗೆ ರಾಜ್ಯದ ಮೌಲ್ವಿಯ ಮನೆಯ ಮುಂದೆ ಹಾದು ಹೋಗುತ್ತಿತ್ತು. ಮೆರವಣಿಗೆಯ ಗಲಾಟೆ ಮೌಲ್ವಿಯ ಕಿವಿಗೆ ಬಿತ್ತು. ಅದೇನೆಂದು ನೋಡಿಕೊಂಡು ಬರುವಂತೆ ತನ್ನ ಆಳನ್ನು ಅಟ್ಟಿದ. ಅದನ್ನು ನೋಡಿ ಬಂದ ಆಳು ಅದು ಹಿಂದೂಗಳ ಗಣಪತಿ ಮೆರವಣಿಗೆ ಎಂದು ತಿಳಿಸಿದ. ಇದನ್ನು ಕೇಳಿ ಕ್ರುದ್ಧನಾದ ಮೌಲ್ವಿ ಅಲ್ಲಾನ ರಾಜ್ಯದಲ್ಲಿ ಕಾಫೀರರ ಮೆರವಣಿಗೆಯೆ? ಎಂದು ತನ್ನ ಸೈನಿಕರನ್ನು ಕರೆದು ಕೂಡಲೆ ಮೆರವಣಿಗೆಯನ್ನು ಚದುರಿಸಲು ಹೇಳಿದ. ಅದರಂತೆ ಸೈನಿಕರು ಮೆರವಣಿಗೆಗಾರರನ್ನು ಚದುರಿಸಿ ಓಡಿಸಿದರು. ಮಾರನೆಯ ದಿನ ಮರೆವಣಿಗೆಯ ಮುಂದಾಳುಗಳು ದೂರು ತೆಗೆದುಕೊಂಡು ಹೈದರನ ಹತ್ತಿರ ಹೋದರು. ಹೈದರ್ ಅವರ ದೂರು ಆಲಿಸಿ ಮೌಲ್ವಿಗೆ ಬರುವಂತೆ ಹೇಳಿ ಕಳುಹಿಸಿದ. ಮೌಲ್ವಿಯನ್ನು ಕುರಿತು ನೀವು ಮೆರವಣಿಗೆಯನ್ನು ಚದುರಿಸಿದ್ದು ನಿಜವೇ? ಎಂದು ಪ್ರಶ್ನಿಸಿದ. ಅದಕ್ಕೆ ಮೌಲ್ವಿ ಹೌದು ಎಂದ. ಏಕೆ ಹಾಗೆ ಮಾಡಿದಿರಿ? ಎಂದು ಹೈದರ್ ಕೇಳಿದ. ಅದಕ್ಕೆ ಮೌಲ್ವಿ ಮುಸ್ಲಿಂ ರಾಜ್ಯದ

ರಾಜಬೀದಿಯಲ್ಲಿ ಕಾಫೀರರು ತಮ್ಮ ಮೆರವಣಿಗೆ ತೆಗೆದುಕೊಂಡು ಹೋಗಲು ಹಕ್ಕಿಲ್ಲ ಎಂದು ಉತ್ತರಿಸಿದ. ಆಗ ಹೈದರ್ ಇದನ್ನು ಮುಸ್ಲಿಂ ರಾಜ್ಯವೆಂದು ನಿಮಗೆ ಹೇಳಿದವರಾರು? ಎಂದು ಮತ್ತೆ ಪ್ರಶ್ನಿಸಿದ. ಅದಕ್ಕೆ ಮೌಲ್ವಿ ನನಗೆ ಯಾರು ಹೇಳಬೇಕಾಗಿಲ್ಲ, ಇಲ್ಲಿ ಮುಸ್ಲಿಂ ದೊರೆ ಆಳುತ್ತಿದ್ದಾನೆ. ಅದಕ್ಕೆ ಇದು ಮುಸ್ಲಿಂ ರಾಜ್ಯ ಎಂದು ತಿಳಿಸಿದ. ಆಗ ಹೈದರ್ ಇಲ್ಲ ಕೇಳಿ ಇದು ಮುಸ್ಲಿಂ ರಾಜ್ಯವೂ ಅಲ್ಲ, ಹಿಂದೂ ರಾಜ್ಯವೂ ಅಲ್ಲ. ಇದು ಮೈಸೂರು ರಾಜ್ಯ, ಇಲ್ಲಿ ಎಲ್ಲಾ ಪ್ರಜೆಗಳಿಗೂ ಸಮಾನ ಸ್ವಾತಂತ್ರ್ಯವಿದೆ. ಇಲ್ಲಿ ಯಾರು ಬೇಕಾದರೂ ತಮ್ಮ ಧಾರ್ಮಿಕ ಆಚರಣೆಗಳನ್ನು ತಮಗಿಷ್ಟ ಬಂದಂತೆ ಆಚರಿಸಿಕೊಳ್ಳಬಹುದು. ಇನ್ನು ಮೇಲೆ ನೀವು ಅವರ ತಂಟೆಗೆ ಹೋಗಕೂಡದು ಎಂದು ಆಜ್ಞಾಪಿಸಿದ. ಇದರಿಂದ ವ್ಯಾಘ್ರನಾದ ಮೌಲ್ವಿ ಇಂಥ ಕಾಫೀರರ ರಾಜ್ಯದಲ್ಲಿ ಇರಲು ನಾನು ಇಷ್ಟ ಪಡುವುದಿಲ್ಲ ಎಂದು ನುಡಿದ. ಆ ಕೂಡಲೇ ಹೈದರ್ ತನ್ನ ಸೇನಾಧಿಪತಿಯನ್ನು ಕರೆದು ಮೌಲ್ವಿ ಅವರಿಗೆ ಸೂಕ್ತವಾದ ಎಲ್ಲ ಗೌರವವನ್ನು ಸಲ್ಲಿಸಿ ಅವರನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗಿ ನಮ್ಮ ರಾಜ್ಯದ ಗಡಿ ದಾಟಿಸಿ ಬಾ ಎಂದು ಆಜ್ಞಾಪಿಸಿದನಂತೆ.

ಈ ಉದಾಹರಣೆಯನ್ನು ಪ್ರಾಯಶಃ ಪ್ರತ್ಯೇಕವಾಗಿಯೇ ಹೇಳಬೇಕೆನಿಸುತ್ತದೆ. ಮೌಲ್ವಿ ಗಣಪತಿ ಮೆರವಣಿಗೆ ಚದುರಿಸಿದ್ದನ್ನು ಸಮರ್ಥಿಸುವುದು ಹೈದರ್‌ಗೆ ಸುಲಭವಾಗಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ. ಬದಲಾಗಿ ಮೌಲ್ವಿಗೆ ಬುದ್ಧಿ ಹೇಳಿದ. ಹೈದರ್‌ನ ಬುದ್ಧಿಮಾತನ್ನು ಮೌಲ್ವಿ ನಿರಾಕರಿಸಿದ. ತತ್ಪರಿಣಾಮವಾಗಿ ಹೈದರ್ ಮೌಲ್ವಿಯನ್ನು ಮೈಸೂರು ರಾಜ್ಯದ ಗಡಿಯಾಚೆಗೆ ಕಳುಹಿಸಿದ. ಇಂದಿನ ಸಂವಿಧಾನಾತ್ಮಕ ಸಮಾಜದಲ್ಲಿ ಕೂಡ ಈ ರೀತಿಯ ಧಾರ್ಮಿಕ ಮೌಲ್ವಿಯ ಧಾರ್ಮಿಕ ದುರಹಂಕಾರವನ್ನು ಸುಮ್ಮನೆ ಸಮರ್ಥಿಸಿಬಿಡಬಹುದಿತ್ತು. ಇದು ಹಿಂದು ರಾಜ್ಯವಲ್ಲ, ಬದಲಾಗಿ ಮುಸ್ಲಿಂ ರಾಜ್ಯ ಎಂತಲೂ ಹೈದರ್ ಹೇಳಬಹುದಿತ್ತು. ಬದಲಾಗಿ ಇದು ಮೈಸೂರು ರಾಜ್ಯವೆಂದೇ ಘೋಷಿಸಿದ. ಇಂತಹ ಒಬ್ಬ ನೈಜ ಜನನಾಯಕ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದು ನಾಟಕದ ನಾಯಕನೆ. ಅದರಲ್ಲಿ ಆಶ್ಚರ್ಯವೇನೂ ಇಲ್ಲ. ನಾಯಕ ವ್ಯಕ್ತಿತ್ವ ನಾಯಕನಲ್ಲೇ ಇದ್ದಾಗ ಮಾತ್ರ ನಾಟಕದಲ್ಲಿ ನಾಯಕನ ಪಾತ್ರಸೃಷ್ಟಿ ಸಾಧ್ಯ ಮತ್ತು ಅರ್ಥಪೂರ್ಣ. ಅಂತಹ ನಾಯಕ ಗುಣ ಶ್ರೇಷ್ಠತೆ ಹೈದರ್‌ನಲ್ಲಿ ಧಾರಾಳವಾಗಿದೆ.

ಇದೇ ರೀತಿಯ ಇನ್ನೊಂದು ಲಾವಣಿಯಲ್ಲಿ ಸುಲ್ತಾನ್ ಟಿಪ್ಪುವಿನ ನಾಯಕ ಪಾತ್ರದ ಎಪಿಸೋಡ್‌ನ ಚಿತ್ರಣವಿದೆ. ಟಿಪ್ಪು ಸುಲ್ತಾನನ ಬೀಳಿನ ಹಾಡು ಲಾವಣಿಯನ್ನು ಎಲ್.ಗುಂಡಪ್ಪನವರ ನಾಡಪದಗಳು (೧೯೪೭) ಸಂಗ್ರಹದಿಂದ ತೆಗೆದುಕೊಳ್ಳಲಾಗಿದೆ. ಈ ಲಾವಣಿ ಕನ್ನಡದಿಂದ ಬೇರೆ ಭಾಷೆಗೆ ಪ್ರಯಾಣ ಮಾಡಿ ಮರಳಿ ಕನ್ನಡಕ್ಕೆ ಬಂದಿದೆ. ಟಿಪ್ಪು

ರಣರಂಗದಲ್ಲಿ ಮಡಿದದ್ದು ಕ್ರಿ.ಶ.೧೭೯೯ರಲ್ಲಿ ಅವನು ಮಡಿದ ಸಮಯಕ್ಕೆ ಅವನ ಬಗ್ಗೆ ಅನೇಕ ಲಾವಣಿಗಳು ಹುಟ್ಟಿಕೊಂಡಿರಬೇಕು. ಅವುಗಳಲ್ಲಿ ಈ ಟಿಪ್ಪುಸುಲ್ತಾನನ ಬೀಳಿನ ಹಾಡು ಕೂಡ ಒಂದು. ಕ್ರಿ.ಶ.೧೮೦೫ರಲ್ಲಿ ಈ ಲಾವಣಿಯನ್ನು ಜಾನ್ ಲೇಡನ್ ಎಂಬ ಬ್ರಿಟೀಷ್ ಪ್ರವಾಸಿಗ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ ಟಿಪ್ಪು ಬ್ರಿಟೀಷರನ್ನು ಎಷ್ಟೊಂದು ಕಾಡಿರಬೇಕು? ಬಹುಶಃ ಟಿಪ್ಪುವನ್ನು ಜನಪದರು ಕಂಡ ರೀತಿಯನ್ನು ಬ್ರಿಟೀಷರಿಗೆ ಪರಿಚಯ ಮಾಡಿಸಿಕೊಡಲು ಈ ಲಾವಣಿಯನ್ನು ಅವನು ಇಂಗ್ಲೀಷ್‌ಗೆ ಅನುವಾದಿಸಿರಬಹುದು. ಇದೇ ಲಾವಣಿಯನ್ನು ಎಲ್. ಗುಂಡಪ್ಪನವರು ಕ್ರಿ.ಶ.೧೯೪೫ರಲ್ಲಿ ಇಂಗ್ಲೀಷ್‌ಗೆ ಅನುವಾದಿಸಿದ್ದಾರೆ. ಇದೇ ಅದರ ಇನ್ನೊಂದು ಭಾಗ. ಅದಕ್ಕಿಂತ ಮೊದಲೇ ಹಿಂದಿಗೆ ಭಾಷಾಂತರವಾಗಿದೆ. ಹಿಂದಿಯ ಮೂಲದಿಂದ ಜಾನ್ ಲೇಡನ್ ಇಂಗ್ಲೀಷಿಗೂ ಅನುವಾದಿಸಿದ್ದಾರೆ. ಅದನ್ನೇ ಗುಂಡಪ್ಪನವರು ಕನ್ನಡಕ್ಕೂ ಅನುವಾದಿಸಿದ್ದಾರೆ.... "ಈ ಲಾವಣಿ ಶ್ರೀರಂಗಪಟ್ಟಣದ ವೈಭವವನ್ನು ಅದರ ಏಳು-ಬೀಳನ್ನು ವರ್ಣಿಸುತ್ತದೆ. ಹಾಗೆಯೇ ಟಿಪ್ಪುವಿನ ವ್ಯಕ್ತಿತ್ವವನ್ನು ವಿಧವಿಧವಾಗಿ ಬಣ್ಣಿಸುತ್ತದೆ. ಅವನು ಜನಾನುರಾಗಿಯಾಗಿದ್ದು ಪರಮ ಸ್ವಾಭಿಮಾನಿಯೂ ಆಗಿದ್ದು, ಅವನು ತನ್ನ ದೇಶವನ್ನು ಕಾಪಾಡಿಕೊಳ್ಳಲು ವೀರಾವೇಶದಿಂದ ಹೋರಾಡಿದ್ದು ಈ ಲಾವಣಿಯ ಪ್ರಧಾನ ವಸ್ತು".[೧]

ಟಿಪ್ಪುವಿನ ಜನಪ್ರಿಯತೆಯನ್ನು ಅವನ ಪರಾಕ್ರಮ, ಯುದ್ಧ ಕೌಶಲವನ್ನು ಬಣ್ಣಿಸುವ ಇನ್ನೊಂದು ಪ್ರಸಿದ್ಧ ಲಾವಣಿಯನ್ನು ಉತ್ತರ ಕರ್ನಾಟಕದ ಜನಪದ ತಜ್ಞರಾದ ಡಾ. ನಿಂಗಣ್ಣ ಸಣ್ಣಕ್ಕಿಯವರು ಸಂಪಾದಿಸಿ ಪ್ರಕಟಿಸಿದ್ದಾರೆ.

ಸುಲ್ತಾನ್ ಟಿಪ್ಪುವಿನ ಬಗೆಗಿನ ಲಿಂಗದೇವರು ಹಳೆಮನೆ ಅವರು ಸಂಗ್ರಹಿಸಿ ನೀಡುತ್ತಿರುವ ಮೇಲಿನ ಉದ್ಧರಣೆಯಲ್ಲಿ ಗ್ರಹಿಸಬೇಕಾದ ಕೆಲವು ಮಹತ್ವದ ಅಂಶಗಳಿವೆ. ಮೊದಲನೆಯದಾಗಿ ಸುಲ್ತಾನನಾದ ಟಿಪ್ಪುವನ್ನು ಕುರಿತ ಈ ಜನಪದ ಲಾವಣಿ ಕನ್ನಡದ ಹಿರಿಯ ವಿದ್ವಾಂಸರಲ್ಲೊಬ್ಬರಾದ ಎಲ್. ಗುಂಡಪ್ಪನವರನ್ನೇ ಆಕರ್ಷಿಸಿದೆ. ಹಾಗೆಯೇ ಎರಡನೆಯದಾಗಿ ಬ್ರಿಟೀಷ್ ಪ್ರವಾಸಿಗನಾದ ಜಾನ್ ಲೇಡನ್ ಈ ಲಾವಣಿಯನ್ನು ಇಂಗ್ಲೀಷಿಗೆ ಭಾಷಾಂತರಿಸುವ ಮೊದಲು ಮೂಲತಃ ಪ್ರವಾಸಿಯಾದ ಅವನು ಟಿಪ್ಪುವಿನ ಜನಪ್ರಿಯತೆಯನ್ನು ಅವನ ಅಗಾಧವಾದ ವ್ಯಕ್ತಿತ್ವವನ್ನು ಕನ್ನಡ ನೆಲದಲ್ಲೇ ಕನ್ನಡ ಜನರಿಂದಲ್ಲೇ ಅರಿತವನಾಗಿರಬೇಕು. ಮೂರನೆಯದಾಗಿ ಮತ್ತು ಅಷ್ಟೇ ಮುಖ್ಯವಾಗಿ ಸೂರ್ಯ ಮುಳುಗದ ಬ್ರಿಟೀಷ್ ಸಾಮ್ರಾಜ್ಯಶಾಹಿ ಶಕ್ತಿಯನ್ನೇ ಗಡಗಡನೆ ನಡುಗಿಸಿದ್ದಂತಹ ಟಿಪ್ಪು ಪರಾಕ್ರಮಿ, ಯುದ್ಧವೀರನೂ, ವರ್ಣನಾತೀತವಾದ ಜನಪರ ನಾಯಕನೂ ಆಗಿದ್ದನೆಂಬುದನ್ನು ಅಧಿಕೃತವಾಗಿ ಬಲ್ಲವನಾಗಿ. ಜಾನ್ ಲೇಡನ್ ಅವನ ಕಾಲಕ್ಕೆ ಅತ್ಯಂತ ಪ್ರಸಿದ್ಧವಾಗಿಯೂ ಜನಮನದ ನಡುವೆ

ನಿರರ್ಗಳವಾಗಿಯೂ ಹರಿದಾಡುತ್ತಿದ್ದಂತಹ ಈ ಜನಪದ ಲಾವಣಿಯನ್ನು ಇಂಗ್ಲೀಷಿಗೆ ಭಾಷಾಂತರಿಸಿರಬೇಕು.

೪.೨ ನಾಟಕಗಳು

ಟಿಪ್ಪುವನ್ನು ಕುರಿತು ಕನ್ನಡದಲ್ಲಿಯೇ ರಚನೆಯಾಗಿರುವ ಕೆಲವು ನಾಟಕಗಳು ಗಮನಾರ್ಹ ಅವುಗಳಲ್ಲಿ ಕೆರೆಮನೆ ಶಾಸ್ತ್ರಿಯವರ ಸುಲ್ತಾನ್ ಟಿಪ್ಪು ಮತ್ತು ಆರ್.ಡಿ ಕಾಮತ್‌ರ ಸುಲ್ತಾನ್ ಟಿಪ್ಪು ನಾಟಕಗಳು ಹೆಚ್ಚು ಕಂಪನಿ ನಾಟಕಗಳನ್ನು ಹೋಲುತ್ತವೆ, ತದನಂತರ ಅದೇ ರೀತಿಯಲ್ಲಿ ಕಂಪನಿ ನಾಟಕದಂತೆಯೇ ಇರುವ ಎಂ.ವಿ.ಚಿತ್ರಲಿಂಗಯ್ಯನವರ ಸುಲ್ತಾನ್ ಟಿಪ್ಪು ಎಂಬ ಇನ್ನೊಂದು ನಾಟಕ. ಅವುಗಳ ನಂತರದ ಎರಡು ತೀರಾ ಆಧುನಿಕ ರಂಗನಾಟಕಗಳೆಂದರೆ ಮೊದಲನೆಯರು ಎಚ್. ಎಸ್. ಶಿವಪ್ರಕಾಶ್ ರವರ ಸುಲ್ತಾನ್ ಟಿಪ್ಪು ಮತ್ತು ಎರಡನೆಯದು ಗಿರೀಶ್ ಕಾರ್ನಾಡರ ಟಿಪ್ಪು ಸುಲ್ತಾನ ಕಂಡ ಕನಸು. ಆಧುನಿಕ ಕನ್ನಡದಲ್ಲಿ ರಚಿತವಾಗಿರುವ ಈ ಎರಡು ರಂಗನಾಟಕಗಳು ಒಂದಕ್ಕಿಂತ ಇನ್ನೊಂದು ಭಿನ್ನವಾಗಿದೆ. ಅದಕ್ಕಿಂತಲೂ ಮೊದಲಾಗಿ ಸುಲ್ತಾನ್ ಟಿಪ್ಪು ಆ ಕಾಲದ ಕಂಪನಿ ನಾಟಕಗಳಲ್ಲೇ ಅಷ್ಟೊಂದು ಜನಾನುರಾಗಿ ಜನಪದ ನಾಯಕನೂ, ಜನನಾಯಕನೂ ಆಗಿದ್ದನೆಂಬುದು ಇದರರ್ಥ. ಸಾಮಾಜಿಕ ಸಹನೆಯ ದೃಷ್ಟಿಯಲ್ಲೂ ರಾಜಕೀಯ ನಾಯಕತ್ವದಲ್ಲೂ, ನಿಸ್ಸೀಮ ದೇಶಪ್ರೇಮ ತತ್ವದಲ್ಲೂ ಟಿಪ್ಪು ಸರಿಸಾಟಿಯಿಲ್ಲದ ನಾಯಕನೇ ಆಗಿದ್ದಿರಬೇಕೆಂಬುದನ್ನು ಪ್ರತ್ಯೇಕವಾಗಿಯೆ ಹೇಳಬೇಕಾದ ಪ್ರಮೇಯವಿರಲಾರದು.

ಇನ್ನು ಕನ್ನಡದಲ್ಲಿ ಸುಲ್ತಾನ ಟಿಪ್ಪುವನ್ನು ಕುರಿತ ಅನ್ಯ ಬರಹಗಳ ಚರ್ಚೆಯಲ್ಲಿ ತೊಡಗುವ ಮೊದಲು ಇನ್ನೊಂದು ಮುಖ್ಯಾಂಶ ಸುಲ್ತಾನ್ ಟಿಪ್ಪುವನ್ನು ಮೈಸೂರು ಹುಲಿ ಎಂಬ ಒಂದು ಪ್ರಸಿದ್ಧ ವಿಶೇಷಣದಿಂದಲೂ ಸಂಬೋಧಿಸುವುದು ಉಂಟು. ಈ ಸಂಬೋಧನೆಯ ಹಿಂದೆ ಅವನ ಪರಾಕ್ರಮವನ್ನು ಮೆಚ್ಚುವ ಉಪಮಾ ಸಂಭ್ರಮವಿದೆ ಎಂಬುದೇನೋ ಇದರಿಂದ ವೇದ್ಯವಾಗುತ್ತದೆ. ಆದರೆ ಈ ಮೈಸೂರು ಹುಲಿ ಎಂಬ ಉಪಮೆಯಲ್ಲಿರುವ ಹುಲಿ ಎಂಬ ನಾಮವಿಶೇಷ ಟಿಪ್ಪುವಿನ ಹೆಸರಿನೊಡನೆ ಬೆಸೆದುಕೊಂಡು ಹೇಗೆ ನಡೆದುಬಂದಿತು? ಎಂಬುದನ್ನು ಮಾತ್ರ ಚರಿತ್ರೆಕಾರರೂ ಹೇಳದಂತಿಲ್ಲ. ಬಹಳ ಜನ ಸೃಜನಶೀಲ ಲೇಖಕರೂ ಹೇಳದಂತಿಲ್ಲ. ಬಹಳವೆಂದರೆ ಸುಲ್ತಾನ್ ಟಿಪ್ಪು ಒಂದು ಜೀವಂತ ಹುಲಿಯೊಡನೆ ಹೋರಾಡಿದನೆಂಬ ಕಾರಣಕ್ಕಾಗಿ ಅವನನ್ನು ಮೈಸೂರು ಹುಲಿ ಎಂಬುದಾಗಿ ಕರೆಯಲಾಯಿತು ಎಂಬ ಒಂದು ಸಾಮಾನ್ಯ ಗ್ರಹಿಕೆಯನ್ನು ಬಿಟ್ಟರೆ, ಸುಲ್ತಾನ್ ಟಿಪ್ಪು ಹಾಗೆ ಜೀವಂತ ಹುಲಿಯೊಡನೆ ಯುದ್ಧ ಮಾಡಲು ಮೂಲ ಕಾರಣವೇನು? ಪ್ರೇರಣೆ ಏನು? ಎಂಬ

ಬಗ್ಗೆ ಸೂರಪ್ಪ ಕಾದಂಬರಿಯಲ್ಲಿನ ಒಂದೇ ಒಂದು ಅಂಶ ಬಿಟ್ಟರೆ ಟಿಪ್ಪುವನ್ನು ಕುರಿತ ಅನ್ಯ ಯಾವುದೇ ಬರವಣಿಗೆಯಲ್ಲೂ ಆ ಬಗ್ಗೆ ಪ್ರಸ್ತಾಪವಿರುವುದಿಲ್ಲ.

ಸುಲ್ತಾನ್ ಟಿಪ್ಪು ಎಂಬ ವಿಷಯದ ಕುರಿತ ಮೂರನೆಯ ಅಂಶವಾದ ವೈಚಾರಿಕ ಬರವಣಿಗೆಯನ್ನು ಗಮನಿಸಬಹುದಾಗಿದೆ. ಆ ಕಾಲದ ಪುರೋಹಿತ ವರ್ಗ ಸುಲ್ತಾನ್ ಟಿಪ್ಪುವಿಗೆ ವಿರುದ್ಧವಾಗಿದ್ದುದಕ್ಕೆ ಮಹತ್ವದ ನಾಲ್ಕು ಅಥವಾ ಐದು ಕಾರಣಗಳನ್ನು ಆ ಕುರಿತ ವೈಚಾರಿಕ ಬರವಣಿಗೆಗಳಲ್ಲಿ ದಾಖಲಿಸಲಾಗಿದೆ.

೧. ಟಿಪ್ಪು ಜಾರಿಗೆ ತಂದ ಜೀತಪದ್ಧತಿಯ ರದ್ದತಿ.
೨. ಜಾಹಗೀರಿ ಮತ್ತು ಜಮೀನ್ದಾರಿ ಪದ್ಧತಿಗಳ ರದ್ದತಿ.
೩. ಅಸ್ಪೃಶ್ಯರು ಸೈನ್ಯಕ್ಕೆ ಸೇರಲು ಅವಕಾಶ.
೪. ರೈತನಿಗೆ ದುಡಿಮೆಯ ಫಲ.
೫. ಸರ್ವರ ಶಿಕ್ಷಣಕ್ಕೆ ಆದ್ಯತೆ.

ಇವೆಲ್ಲಕ್ಕಿಂತಲೂ ಮಿಗಿಲಾದುದು ಮಹಿಳಾ ಸ್ವಾತಂತ್ರ್ಯಕ್ಕೆ ಟಿಪ್ಪು ನೀಡಿದ ಆದ್ಯತೆ. ಈ ಬಗೆಗಿನ ಒಂದು ಉದಾಹರಣೆ ಕೂಡ ಹೀಗಿದೆ ಟಿಪ್ಪು ಹಾಗೂ ಹೈದರಾಲಿ ಇಬ್ಬರೂ ಸಹ ಮಹಿಳೆಯರು ಮೂಢಸಂಪ್ರದಾಯದಡಿ ಅನುಭವಿಸುತ್ತಿದ್ದ ಶೋಷಣೆಯ ಬಗ್ಗೆ ಸಂವೇದನಾಶೀಲರಾಗಿದ್ದರು. ಈಗಿನ ಆಧುನಿಕ ಮಹಿಳಾ ವಿಮೋಚನಪ್ರಜ್ಞೆ ಅವರಿಗಿರಲಿಲ್ಲವಾದರೂ ಅವರಿಗಿದ್ದ ಐತಿಹಾಸಿಕ ಕಾಲಘಟ್ಟದಲ್ಲಿ ಮೂಢ ಸಂಪ್ರದಾಯಗಳಿಂದ ಮಹಿಳೆಯರ ಮೇಲಿನ ಶೋಷಣೆಯನ್ನು ತಡೆಗಟ್ಟಲು ಸಾಕಷ್ಟು ಪ್ರಯತ್ನಿಸಿದರು. ಉದಾಹರಣೆಗೆ ಕೇರಳದ ಉತ್ತರ ಮಲಬಾರ್ ಪ್ರಾಂತ್ಯದಲ್ಲಿ ಮಹಿಳೆಯರು ಎದೆಯ ಮೇಲೆ ಬಟ್ಟೆ ಹಾಕುವಂತಿರಲಿಲ್ಲ. ಇಂಥ ಪದ್ದತಿಯ ವಿರುದ್ಧ ಕ್ರಮ ಕೈಗೊಂಡು ಸುಲ್ತಾನ್ ಟಿಪ್ಪು ಹೊರಡಿಸಿದ ನಿರೂಪವೊಂದರಲ್ಲಿ ಮಹಿಳೆಯರ ಎದೆಯ ಮೇಲೆ ಬಟ್ಟೆ ಹಾಕಲಾರದ ಅನಿಷ್ಟ ಸಂಪ್ರದಾಯ ಸಮಾಜಕ್ಕೆ ಒಂದು ಕಳಂಕ. ಒಂದು ವೇಳೆ ಬಲಪ್ರಯೋಗದಿಂದ ಮಹಿಳೆಯನ್ನು ಈ ಸ್ಥಿತಿಗೆ ದೂಡಿದ್ದರೆ ಅಂಥವರ ವಿರುದ್ಧ ಕ್ರಮ ಕೈಗೊಳ್ಳತಕ್ಕದ್ದು ಎಂದು ಆದೇಶಿಸಿದ್ದ.

ಕರ್ನಾಟಕ ವಿಮೋಚನಾ ರಂಗದವರು ಪ್ರಕಟಿಸಿರುವ ಕೇವಲ ನಲವತ್ತನಾಲ್ಕು ಪುಟಗಳ ಕಿರುಪುಸ್ತಕವು ಸುಲ್ತಾನ್ ಟಿಪ್ಪು ಆಡಳಿತ ಕಾಲದ ಕ್ರಾಂತಿಕಾರಿ ಹಾಗೂ ಡಾಕ್ಯುಮೆಂಟರಿ ಮಾಹಿತಿಗಳನ್ನು ಮಾತ್ರ ಒದಗಿಸುತ್ತದೆ. ಮೂಲತ: ಲೇಖಕನೂ ಆಗಿದ್ದ ಟಿಪ್ಪು ಟಿಪ್ಪು ಕನಸುಗಳು ಎಂಬ ಪುಸ್ತಕವು ಸುಮಾರು ಮುವತ್ತೆಂಟು ಲೇಖನಗಳನ್ನು ಒಳಗೊಂಡಿದ್ದು, ಆ ಲೇಖನಗಳಲ್ಲಿ ಮೈಸೂರು ರಾಜ್ಯವನ್ನು ಸಂಪದ್ಭರಿತವನ್ನಾಗಿಯೂ, ಆಧುನಿಕ

ಸಾಮ್ರಾಜ್ಯವನ್ನಾಗಿಯೂ ಕಟ್ಟುವುದು ಅವನ ಪರಮ ಧ್ಯೇಯವಾಗಿತ್ತು ಎಂಬುದಾಗಿ ತಿಳಿದುಬರುತ್ತದೆ. ಗಿರೀಶ್ ಕಾರ್ನಾಡ್‌ರ ಸುಲ್ತಾನ್ ಟಿಪ್ಪು ಕಂಡ ಕನಸು ಎಂಬ ಪ್ರಸಿದ್ಧ ನಾಟಕಕ್ಕೆ ಟಿಪ್ಪುವಿನ ಕನಸುಗಳು ಎಂಬ ಈ ಪುಸ್ತಕ ಮೂಲ ಆಕರ ಗ್ರಂಥವೇ ಆಗಿದೆ ಎಂಬುದು ಸಾಕಷ್ಟು ಕೂತೂಹಲದ ಸಂಗತಿಯೇ ಸರಿ. ಆದರೆ ಕಾರ್ನಾಡರ ನಾಟಕವು ಕೇವಲ ಆರ್ಥಿಕ ಅಭಿವೃದ್ಧಿಯನ್ನಷ್ಟೇ ಕೇಂದ್ರ ಪ್ರಜ್ಞೆಯನ್ನಾಗಿಸಿಕೊಂಡಿದೆ. ಅದೇ ಕೇರಳದ ಮಹಿಳೆಯರು ಸೊಂಟದ ಕೆಳಗೆ ಕೇವಲ ಒಂದು ಸೀರೆ ತುಂಡನ್ನು ಮಾತ್ರ ಬಿಗಿದುಕೊಳ್ಳಬೇಕೇ ಹೊರತು ಅವರು ಎದೆಯ ಮೇಲೆ ಬಟ್ಟೆ ಹಾಕುವಂತಿಲ್ಲವೆಂಬ ಅನಿಷ್ಟ ಪದ್ಧತಿಗಳ ವಿರುದ್ಧದ ಟಿಪ್ಪುವಿನ ಕ್ರಾಂತಿಕಾರಿ ಬದಲಾವಣೆಗಳನ್ನಾಗಲೀ ಅಥವಾ ಜೀತಪದ್ಧತಿಯ ರದ್ದತಿಯಂಥ ಸಾಮಾಜಿಕ ಬದಲಾವಣೆಗಳಾಗಲೀ, ಟಿಪ್ಪುವಿನ ಚಿಂತನೆಗಳನ್ನಾಗಲಿ, ನಾಟಕವನ್ನಾಗಿ ಮಾಡುವುದು ಕಾರ್ನಡರಿಗೆ ಸಾಧ್ಯವಾಗಿಲ್ಲ. ಏಕೆಂದರೆ ಅವೆಲ್ಲ ಟಿಪ್ಪು ಜೀವನದ ಮತ್ತು ಆತನ ಆಡಳಿತ ಕಾಲದ ಕಟುವಾಸ್ತವ ಸತ್ಯಗಳು. ಆ ರೀತಿಯ ಕ್ರಾಂತಿಕಾರಿ ಆಲೋಚನೆಗಳನ್ನೆಲ್ಲ ಇನ್ನು ಹಸ್ತಪ್ರತಿಯ ಸ್ಥಿತಿಯಲ್ಲಿರುವ ಕ್ರಾಂತಿಕಾರಿ ಸುಲ್ತಾನ್ ಟಿಪ್ಪು ಎಂಬ ಇನ್ನೊಂದು ನಾಟಕದಲ್ಲಿ ಚಿತ್ರಸಲು ಯತ್ನಿಸಲಾಗಿದೆ.

ಹಾಗೆ ನೋಡಿದರೆ ಟಿಪ್ಪು ಒಬ್ಬ ಮತಾಂಧ ದೊರೆ ಎಂದು ಮೊದಲು ಅಪಪ್ರಚಾರವನ್ನು ಆರಂಭಿಸಿದವರೆ ಬ್ರಿಟೀಷರು. ಅದೇ ವೇಳೆಯಲ್ಲಿ ವೈದಿಕ ಧರ್ಮದ ಪುರೋಹಿತವರ್ಗದವರಿಗೆ ಬೇಕಾಗಿದ್ದುದು ಅದೇ. ಎರಡು ಯುದ್ಧಗಳಲ್ಲಿ ಟಿಪ್ಪುವಿಗೆ ಸೋತು ಹೇಳಲು ಅಸಾಧ್ಯವೆಂಬಷ್ಟು ಮುಖಭಂಗ ಹೊಂದಿದ್ದ ಬ್ರಿಟೀಷರು ಸುಲ್ತಾನ್ ಟಿಪ್ಪು ವಿರುದ್ಧ ಪುರೋಹಿತ ವರ್ಗದವರನ್ನು ಮೊದಲು ಹೇಗೆ ಎತ್ತಿಕಟ್ಟಿದರು? ಎಂಬ ಸಂಗತಿಯೇ ಸೃಜನಶೀಲ ಸಾಹಿತ್ಯದಲ್ಲಿ ಒಂದು ಅದ್ಭುತವಾದ ಕಥಾವಸ್ತು ಎಂದೆನಿಸಲು ಸಾಧ್ಯವಿದೆ. ಆದರೆ ಅಂತಹ ನೈಜ ಸೃಷ್ಟ್ಯಾತ್ಮಕ ಕೃತಿಗಳು ಟಿಪ್ಪು ಬಗ್ಗೆ ಈವರೆಗೂ ರಚನೆಗೊಂಡಂತೆ ಕಾಣುವುದಿಲ್ಲ. ಮರಾಠರು ಹೈದರಾಬಾದ್‌ನ ನಿಜಾಮರು ಮತ್ತು ಉತ್ತರ ಇಂಡಿಯಾದ ರಾಜ ಮಹಾರಾಜರ ವಿರುದ್ಧ ಬ್ರಿಟೀಷರು ನಡೆಸಿದ ರಾಜಕೀಯ ಪಿತೂರಿಗಳೇ ಬೇರೆ. ಅದೇ ಸುಲ್ತಾನ್ ಟಿಪ್ಪುವಿನ ಮೈಸೂರು ರಾಜ್ಯದಲ್ಲಿ ಅವನ ಕೆಲವು ಆಂತರಿಕ ವೈರಿಗಳೇ ಆಗಿದ್ದಂತಹ ಮೀರ್ ಸಾದಿಖ್, ತಿರುಮಲರಾಯ ಮತ್ತು ನಾರಾಯಣರಾವ್‌ನಂಥವರನ್ನು ಖರೀದಿಸಿದ ಅದೇ ಬ್ರಿಟೀಷರು ಇಲ್ಲಿ ನಡೆಸಿದ ರಾಜಕೀಯ ಪಿತೂರಿಗಳೇ ಬೇರೆ.

೪.೩ ಕೃತಿಗಳು

ಟಿಪ್ಪುವನ್ನು ಕುರಿತಂತೆ ಕನ್ನಡ ಗ್ರಂಥಗಳೆಂದರೆ ಒಂದು ಕೋ. ಚೆನ್ನಬಸಪ್ಪನವರು ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿರುವ ಹಿಂದೂಧರ್ಮ ರಕ್ಷಕ ಟಿಪ್ಪು ಸುಲ್ತಾನ್ ಎಂಬ ಒಂದು ಕಿರುಹೊತ್ತಿಗೆ ಗಮನಾರ್ಹವಾದುದು. ಹಿಂದೂಧರ್ಮದ ಹೆಸರಿನಲ್ಲಿ ಸುಲ್ತಾನ್ ಟಿಪ್ಪುವನ್ನು ಟೀಕಿಸುವ, ಮಡಿವಂತರ ಧರ್ಮದ ಮೂಲಭೂತವಾದಿ ಅಂಶಕ್ಕೆ ಅನುಗುಣವಾಗಿ ನ್ಯಾಯಾಧೀಶರಾದ ಕೋ. ಚೆನ್ನಬಸಪ್ಪನವರು ಹಿಂದೂಧರ್ಮವನ್ನು ಕುರಿತ ಸುಲ್ತಾನ್ ಟಿಪ್ಪುವಿನ ಧೋರಣೆಯನ್ನು ಕುರಿತಂತೆ ಅವರು ನಡೆಸಿರುವ ಅತಿ ಗಂಭೀರವಾದ ಚರ್ಚೆ ಮತ್ತು ಆ ಬಗೆಗೆ ಅವರು ನೀಡುವ ತೀರ್ಪು ಪ್ರಾಯಶಃ ಸೃಜನಶೀಲ ಸಾಹಿತ್ಯದ ರಚನಾಸಕ್ತರಿಗೆ ಮೂಲಪ್ರೇರಣೆಯಾಗಲು ಸಾಧ್ಯವಿದೆ. ಅದೇ ರೀತಿ ಇನ್ನೊಂದು ಮಹತ್ವದ ಕನ್ನಡ ಗ್ರಂಥವೆಂದರೆ ಗೌರಿ ಸುಂದರ್‌ರವರು ಸಂಪಾದಿಸಿ ಪ್ರಕಟಿಸಿರುವ ಟಿಪ್ಪು ಸುಲ್ತಾನ್ ಕನ್ನಡ ದ್ರೋಹಿಯೇ? ಎಂಬ ಸುಮಾರು ನಲವತ್ತೈದು ಲೇಖನಗಳ ಸಂಪುಟ. ಈ ನಲವತ್ತಕ್ಕಿಂತಲೂ ಹೆಚ್ಚಿನ ಲೇಖನಗಳ ಲೇಖಕರು ನಾಡಿನಾದ್ಯಂತ ಪ್ರಸಿದ್ಧ ಲೇಖಕರೇ ಆಗಿದ್ದಾರೆಂಬುದು ತುಂಬಾ ಮುಖ್ಯ. ಈ ಲೇಖನಗಳ ಸಂಪುಟದಲ್ಲಿ ಅನನ್ಯವೂ, ವರ್ಣನಾಮಯವೂ ಆದ ಸುಲ್ತಾನ್ ಟಿಪ್ಪುವಿನ ವ್ಯಕ್ತಿತ್ವವನ್ನು ಆಧಾರಸಹಿತದ ಮಾಹಿತಿಗಳಿಂದ ಸಾಕಷ್ಟು ಅರ್ಥಪೂರ್ಣವಾಗಿಯೂ ಬಣ್ಣಿಸಲಾಗಿದೆ. ಟಿಪ್ಪುವಿನ ಪಾತ್ರವನ್ನು ಕನ್ನಡದಲ್ಲಿ ಅಭೂತಪೂರ್ವವಾಗಿ ಪುನಃ ಸೃಷ್ಟಿಸಲು ಪ್ರೇರಣಾತ್ಮಕ ಮಾಹಿತಿಗಳೇ ಈ ಸಂಪುಟದಲ್ಲಿವೆ.

ಕೃಷ್ಣಮೂರ್ತಿ ಹನೂರುರವರು ರಚಿಸಿದ ಅಜ್ಞಾತನೊಬ್ಬನ ಆತ್ಮ ಚರಿತ್ರೆ ಎಂಬ ಕಾದಂಬರಿಯಲ್ಲಿ ಟಿಪ್ಪು ಮರಣದ ನಂತರ ಶ್ರೀರಂಗಪಟ್ಟಣದ ನೈಜ ಸ್ಥಿತಿಯನ್ನು ಎತ್ತಿಹಿಡಿದಿದ್ದಾರೆ.

"ಟಿಪ್ಪು ಖಾವಂದರು" ದೇವರ ಪಾದ ಸೇರಿ ಆಗಲೇ ಒಂದು ವಾರವಾಗಿತ್ತು. ಪಟ್ಟಣವೆಲ್ಲ ಕಳ್ಳಕಾಕರು ದರೋಡೆಕೋರರಿಂದ ಲೂಟಿಯಾಗಿತ್ತು. ಸಂಸಾರಸ್ಥರು ಊರು ಬಿಟ್ಟಿದ್ದರು. ಭಯಂಕರ ಮೌನ ಪಟ್ಟಣದ ಸಾವಿನ ಸೂತಕವನ್ನು ಆಚರಿಸುತ್ತಿತ್ತು".[೨]

ಎಸ್.ಎಲ್.ಭೈರಪ್ಪನವರು ತಮ್ಮ ಆವರಣ ಕಾದಂಬರಿಯಲ್ಲಿ ಟಿಪ್ಪುವಿನ ಧರ್ಮಾಂಧತೆ ಸ್ಥಳನಾಮಗಳ ಬದಲಾವಣೆಯನ್ನು ವಿವರಿಸಿದ್ದಾರೆ. ಅವರು ಆತನನ್ನು ರಾಷ್ಟ್ರನಾಯಕನೆಂದು ಒಪ್ಪಿಕೊಳ್ಳಲು ಸಿದ್ಧರಿಲ್ಲ.

"ಹಳೆ ಮೈಸೂರಿನ ಸಂತೆ-ಜಾತ್ರೆಗಳಲ್ಲಿ ಮಾರುಕಟ್ಟೆಯ ಮೂಲೆಗಳಲ್ಲಿ ಇತಿಹಾಸದ ಅಧ್ಯಯನವಿಲ್ಲದ ಅರೆ ಓದು-ಬರಹ ಬಲ್ಲ ಲಾವಣಿಕಾರರು ಟಿಪ್ಪುವನ್ನು ವೈಭವೀಕರಿಸಿ ಬರೆದ ಲಾವಣಿಗಳನ್ನು ದಮಡಿ ಭಾರಿಸಿಕೊಂಡು ಹಾಡುತ್ತಿದ್ದರು. ಮುಸಲ್ಮಾನರು ಅದರಲ್ಲೂ ಮುಸಲ್ಮಾನ ವ್ಯಾಪಾರಿಗಳು ಈ ಲಾವಣಿಕಾರರಿಗೆ ಹಣಕೊಟ್ಟು ಪ್ರೋತ್ಸಾಹಿಸುತ್ತಿದ್ದರು".[೩]

ಅಂಗಪ್ಪ ಟಿ.ಪಿ. ಅವರು ಬರೆದಿರುವ ಟಿಪ್ಪು ಸುಲ್ತಾನ್ ಎಂಬ ಕೃತಿಯಲ್ಲಿ ಟಿಪ್ಪುವಿನ ಜನನ ಮತ್ತು ಬಾಲ್ಯ, ಟಿಪ್ಪುವಿನ ಆಡಳಿತ, ಮೂರನೇ ಮೈಸೂರು ಯುದ್ಧ, ಟಿಪ್ಪುವಿನ ವೀರ ಮರಣ ಕುರಿತಂತೆ ಮಾಹಿತಿ ಸಿಗುತ್ತದೆ.

ಎಚ್.ಡಿ ಶರ್ಮಾ ಬರೆದಿರುವ ಟಿಪ್ಪುವಿನ ನಿಜಸ್ವರೂಪ ಎಂಬ ಕೃತಿಯಲ್ಲಿ ಟಿಪ್ಪುವಿನ ಬಾಲ್ಯ, ಮೈಸೂರು ಯುದ್ಧಗಳು, ಟಿಪ್ಪುವಿನ ವೈವಾಹಿಕ ಜೀವನ, ಕೊಡಗಿನ ದಂಗೆಗಳು, ಟಿಪ್ಪುವಿನ ಧಾರ್ಮಿಕ ಅಸಹಿಷ್ಣುತೆ, ಟಿಪ್ಪುವಿನ ಮೂಲ ಹಸ್ತ ಪ್ರತಿಗಳು, ಟಿಪ್ಪು ಮರಣದ ನಂತರದ ಮಾಹಿತಿ, ಟಿಪ್ಪುವಿನ ಹುಲಿಯ ಆಟಿಕೆ, ಟಿಪ್ಪುವಿನ ಖಡ್ಗದ ಮೇಲಿನ ಬರಹದ ಕನ್ನಡ ಅನುವಾದದ ಮಾಹಿತಿ ತಿಳಿಯುತ್ತದೆ.

ಎಸ್.ಎಲ್. ಶ್ರೀನಿವಾಸಮೂರ್ತಿ ಮತ್ತು ವಿ. ವಸಂತಶ್ರೀ ಈ ಇಬ್ಬರಿಂದ ರಚಿತವಾದ ಜಂಗ್ ನಾಮಾ ಕೃತಿಯಲ್ಲಿ ಹೈದರಾಲಿಯ ಏಳ್ಗೆ, ಟಿಪ್ಪುವಿನ ಬಾಲ್ಯ, ಟಿಪ್ಪುವಿನ ಯುದ್ಧಗಳು, ಟಿಪ್ಪುವಿನ ಕಲಾಭಿರುಚಿ, ಸಾಹಿತ್ಯದ ಮೇಲಿನ ಟಿಪ್ಪುವಿನ ಪ್ರೀತಿ ಬಗ್ಗೆ ಮಾಹಿತಿ ಒದಗಿಸುತ್ತದೆ.

ನಡಿಕೇರಿಯಂಡ ಚಿಣ್ಣಪ್ಪ ರವರು ರಚಿಸಿರುವ ಪಟ್ಟೋಲೆ ಪಳಮೆ ಕೃತಿಯು ಹೈದರಾಲಿಯ ಮುತ್ಸದ್ಧಿತನ, ಟಿಪ್ಪುವಿನ ಬಾಲ್ಯ, ಮಂಗಳೂರು ಒಪ್ಪಂದ, ಟಿಪ್ಪುವಿನ ಯುದ್ಧಗಳು, ಕೊಡಗಿನ ದಂಗೆಗಳು ಮತ್ತು ಟಿಪ್ಪುವಿನ ಧಾರ್ಮಿಕತೆ ಮೇಲೆ ಬೆಳಕು ಚೆಲ್ಲುತ್ತದೆ.

ಹೆಚ್.ಎಲ್. ನಾಗೇಗೌಡ ಅವರು ರಚಿಸಿರುವ ಟಿಪ್ಪುವಿನ ಖೈದಿಗಳು ಎಂಬ ಕೃತಿಯು ಟಿಪ್ಪುವಿನ ಜನನ ಮತ್ತು ಬಾಲ್ಯ, ಟಿಪ್ಪುವಿನ ಯುದ್ಧದ ನೀತಿ, ಟಿಪ್ಪುವಿನ ಧಾರ್ಮಿಕತೆ ಇತ್ಯಾದಿ ಅಂಶಗಳ ಬಗ್ಗೆ ಮಾಹಿತಿ ಒದಗಿಸುತ್ತದೆ.

ತಿ.ತಾ. ಶರ್ಮಾ ರವರು ತಮ್ಮ ಚಾರಿತ್ರಿಕ ದಾಖಲೆಗಳು ಕೃತಿಯಲ್ಲಿ ಟಿಪ್ಪುವಿನ ಏಳ್ಗೆ, ಯುದ್ಧಗಳು, ಟಿಪ್ಪುವಿನ ಕೊಡಗಿನ ದಂಗೆ ಇತ್ಯಾದಿಗಳ ಬಗ್ಗೆ ವಿವರಿಸಿದ್ದಾರೆ.

ಚಿದಾನಂದಮೂರ್ತಿರವರು ಬರೆದಿರುವ ಮೂಲ ದಾಖಲೆಗಳಲ್ಲಿ ಹುದುಗಿದ್ದ ಟಿಪ್ಪು ಎಂಬ ಕೃತಿಯಲ್ಲಿ ಹೈದರಾಲಿ ಬೆಳಕಿಗೆ ಬಂದಿದ್ದು, ಹೈದರಾಲಿಯ ಏಳ್ಗೆ, ಟಿಪ್ಪುವಿನ ಜನನ ಮತ್ತು ಬಾಲ್ಯ,

ಮಲಬಾರ್ ದಂಗೆ, ಕೊಡಗಿನ ದಂಗೆಗಳು, ಮೈಸೂರು ಯುದ್ಧಗಳು, ಟಿಪ್ಪುವಿನ ನಾಣ್ಯಗಳು, ಟಿಪ್ಪುವಿನ ಗ್ರಂಥಾಲಯ, ಟಿಪ್ಪುವಿನ ಖಡ್ಗ, ಟಿಪ್ಪುವಿನ ಸಿಂಹಾಸನ, ಟಿಪ್ಪುವಿನ ವೈವಾಹಿಕ ಜೀವನ ಮತ್ತು ಟಿಪ್ಪು ವೀರಮರಣದ ನಂತರದ ಪರಿಸ್ಥಿತಿ ಬಗ್ಗೆ ಮಾಹಿತಿ ಒದಗಿಸುತ್ತದೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ರವರು ಬರೆದಿರುವ ಯಂಗ್ ಇಂಡಿಯಾ ಕೃತಿಯಲ್ಲಿ ಟಿಪ್ಪುವಿನ ಧಾರ್ಮಿಕತೆ, ಸ್ವಾತಂತ್ರ್ಯ ಹೋರಾಟದ ಛಲದ ಬಗ್ಗೆ ವಿವರಿಸಿದ್ದಾರೆ.

ಬಿ.ಎಸ್ ಪಾಂಡೆರವರು ಬರೆದಿರುವ ಟಿಪ್ಪು ಕೃತಿಯಲ್ಲಿ ಟಿಪ್ಪುವಿನ ಸ್ಥಳನಾಮಗಳ ಬದಲಾವಣೆ, ಟಿಪ್ಪುವಿನ ಮತಾಂತರದ ಬಗ್ಗೆ ಮಾಹಿತಿ ಒದಗಿಸುತ್ತದೆ.

ಪ್ರತಾಪ್ ಸಿಂಹ ರವರು ರಚಿಸಿರುವ ಟಿಪ್ಪುಸುಲ್ತಾನ ಸ್ವಾತಂತ್ರ್ಯ ವೀರನಾ? ಎಂಬ ಕೃತಿಯು ಟಿಪ್ಪುವಿನ ಕೊಡಗಿನ ದಂಗೆಗಳು, ಟಿಪ್ಪುವಿನ ಮತಾಂತರದ ಬಗ್ಗೆ ಮಾಹಿತಿ ನೀಡುತ್ತದೆ.

ಜೀ. ಶಂ.ಪ. ಅವರು ರಚಿಸಿರುವ ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು ಎಂಬ ಕೃತಿಯಲ್ಲಿ ಟಿಪ್ಪು ಕುರಿತ ಲಾವಣಿಗಳನ್ನು, ಲಾವಣಿಗಳ ಪ್ರಕಾರಗಳನ್ನು ವಿವರಿಸಿದ್ದಾರ.

ಮ.ನ. ಮೂರ್ತಿ ಬರೆದಿರುವ ಟಿಪ್ಪುಸುಲ್ತಾನ್ ಕೃತಿಯು ಟಿಪ್ಪು ಹುಲಿಯೊಂದಿಗೆ ಸೆಣಸಾಡಿದ ಹಿನ್ನೆಲೆ, ಮೈಸೂರು ಯುದ್ಧಗಳು ಪ್ರಾರಂಭಕ್ಕಿಂತ ಹಿಂದಿನ ಸನ್ನಿವೇಶಗಳು, ಟಿಪ್ಪುವಿನ ವೀರಮರಣದ ಬಗ್ಗೆ ತಿಳಿಸುತ್ತದೆ.

ದೇವುಡು ನರಸಿಂಹಶಾಸ್ತ್ರಿ ಅವರು ಬರೆದಿರುವ ಕರ್ನಾಟಕ ಸಂಸ್ಕೃತಿ ಕೃತಿಯಲ್ಲಿ ಹೈದರಾಲಿಯ ಚಿತ್ರದುರ್ಗ ಆಕ್ರಮಣ, ಟಿಪ್ಪುವಿಗೆ ಸಂಬಂಧಿಸಿದ ಕಥನಗಳು, ಲಾವಣಿಗಳ ಬಗ್ಗೆ ತಿಳಿಸಿಕೊಡುತ್ತದೆ.

ಭಗವಾನ್ ಎಸ್. ಕಿದ್ವಾನಿರವರು ಕ್ರಿ.ಶ.೧೯೭೬ರಲ್ಲಿ ಬರೆದಿರುವ The sword of Tippu Sultan ಕೃತಿಯನ್ನು ಆಧರಿಸಿ ಸಂಜಯ್ ಖಾನ್ ೧೯೯೦ ರಲ್ಲಿ ಟಿಪ್ಪುವನ್ನು ಪರದೆಯ ಮೇಲೆ ತರುವುದರ ಮೂಲಕ ಟಿಪ್ಪುವನ್ನು ಜಗಜ್ಜಾಹೀರು ಮಾಡಿದರು. ಇದು ಹೈದರಾಲಿ ಮತ್ತು ಟಿಪ್ಪುವಿನ ಚಾರಿತ್ರಿಕ ಅಂಶಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

ಟಿಪ್ಪುವಿನ ಪುತ್ರನಾದ ಗುಲಾಂ ಮೊಹಮ್ಮದ್ ಕ್ರಿ.ಶ.೧೮೫೫ರಲ್ಲಿ The History of Tippu Sultan ಕೃತಿಯನ್ನು ಬರೆದಿದ್ದಾನೆ.

೪.೪ ಟಿಪ್ಪುವಿನ ಹಸ್ತ ಪ್ರತಿಗಳು :

ಟಿಪ್ಪುವಿನ ಹಸ್ತ ಪ್ರತಿಗಳು ಮುಖ್ಯವಾಗಿ ಪರ್ಷಿಯನ್ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಅವು.

೧. ಸುಲ್ತಾನ್-ಉತ್-ತವಾರಿಕ್

೨. ತಾರೀಖ್-ಇ-ಖದಾದದೀ

೩. ಟಿಪ್ಪುವಿನ ಕನಸುಗಳು (Tippoo's Dream Book)

೪. ಹುಕ್ಕುಂ-ನಾಮಾ

ಟಿಪ್ಪುವಿಗೆ ಸಂಬಂಧಿಸಿದ ಪತ್ರಗಳು /ಗೆಜೆಟಿಯರ್‌ಗಳು;-

೧. ಕೊಡಗು ಜಿಲ್ಲಾ ಕನ್ನಡ ಗೆಜೆಟಿಯರ್

೨. ವೀರರಾಜೇಂದ್ರರ ಪತ್ರ

೩. ಸೈಯದ್ ಅಜಂರ ಪತ್ರ

೪. ಬೌರಿಂಗ್‌ರ ಪತ್ರ

೫. ಸೈಯದ್ ದಾವೂದ್ ಅಪ್ರಫ್‌ರ ಹಸ್ತ ಪ್ರತಿ.

೪.೫ ಸಂಶೋಧನಾತ್ಮಕ ಬರವಣಿಗೆಗಳು

ಸುಲ್ತಾನ್ ಟಿಪ್ಪುವನ್ನು ಕುರಿತ ಸಂಶೋಧನಾತ್ಮಕ ಬರವಣಿಗೆಗಳನ್ನು ಎಡ್ವರ್ಡ್ ಥಾಮ್ಸನ್, ಜಿ.ಟಿ. ಗ್ಯಾರೇಟ್, ಕಿರ್ಕ್ ಪ್ಯಾಟ್ರಿಕ್ ಟಿಟ್ಸನ್, ಫರ್ನಾಂಡೀಸ್ ಪ್ರ್ಯಾಕ್ಸಿ, ವಿ.ಕೆ.ಆರ್. ಮೆನನ್, ಮಿಶೊ, ಕಿರ್ಮಾನಿ, ಕಬೀರ್ ಕೌಸರ್ ಸಮರೋಪಾಧ್ಯಾಯ, ಗಿದ್ವಾನಿ, ಡಾ.ಶೇಖ್ ಅಲಿ. ಭಗವಾನ್‌ದಾಸ್, ಮೇಜರ್ ಡಿರೋಮ್, ಮೊಹಿಬುಲ್ ಹಸನ್, ಸತ್ಯನಾತಿಯರ್ ಮತ್ತು ಬಿ.ಎನ್.ಪಾಂಡೆ. ಮುಂತಾದ ವಿದ್ವಾಂಸರು ಬರವಣಿಗೆ ಮಾಡಿದ್ದಾರೆ. ಇವರಲ್ಲಿ ಬಹುತೇಕ ವಿದ್ವಾಂಸರು ಸುಲ್ತಾನ್ ಟಿಪ್ಪುವಿನ ಪರಾಕ್ರಮ, ಸ್ವಾತಂತ್ರ್ಯ, ರಣವೀರತ್ವವನ್ನೂ, ಪರಧರ್ಮ ಸಹಿಷ್ಣುತೆಯನ್ನು, ಅವನ ಅನುಪಮ ರಾಷ್ಟ್ರಪ್ರೇಮವನ್ನೂ ಅನುಮಾನಿಸಲು ಸಾಧ್ಯವೇ ಆಗಿಲ್ಲದಿರುವುದು ಗಮನಾರ್ಹ.

ಆದರೆ ಸುಲ್ತಾನ್ ಟಿಪ್ಪುವನ್ನು ಕೆಲವರು ಪ್ರಶ್ನಿಸುತ್ತಿರುವ ಸದ್ಯದ ಮುಖ್ಯವಾದ ಮೂರು ವಿಷಯಗಳೆಂದರೆ ಒಂದು ಅವನ ಕನ್ನಡಪ್ರೇಮ. ಎರಡನೆಯದು ಪರಧರ್ಮ ಸಹಿಷ್ಣತೆ ಮತ್ತು ಮೂರನೆಯದು ಬಲಾತ್ಕಾರದ ಮತಾಂತರವೆಂಬುದು.

ಮೊದಲನೆಯದಾಗಿ ಸಮಕಾಲೀನ ಕನ್ನಡಪರ ನೆಲೆಗಳಲ್ಲಿ ನಿಂತು ಹದಿನೆಂಟನೆ ಶತಮಾನದ ಸುಲ್ತಾನ್ ಟಿಪ್ಪುವಿನ ಕನ್ನಡಪರ ಅಥವಾ ವಿರುದ್ಧವೆಂಬ ಮಾತನಾಡುವುದು ವಸ್ತುನಿಷ್ಠ ವಿವೇಚನೆಯೂ ಅಲ್ಲ. ಇಂಡಿಯಾದ ದೊರೆಗಳು ಮತ್ತು ನವಾಬರು ಆಡಳಿತ ಭಾಷಾನೀತಿಯ ಚರಿತ್ರೆಗೆ ಅದರಿಂದ ನ್ಯಾಯ ದೊರೆಯುವುದೂ ಇಲ್ಲ. ಏಕೆಂದರೆ ಪ್ರೀಕಲೋನಿಯಲ್ ಪೋಸ್ಟ್ ಇಂಡಿಯಾದ ಬಹುತೇಕ ರಾಜ ಮಹಾರಾಜರು ಮತ್ತು ನವಾಬರ ಆಡಳಿತ ಭಾಷೆ ಪರ್ಷಿಯನ್ ಆಗಿದ್ದುದರ ಜೊತೆ ಜೊತೆಗೆ ಆಯಾ ಪ್ರದೇಶದ ಸ್ಥಳೀಯ ಭಾಷೆಗೂ ಮನ್ನಣೆ ಇತ್ತೆಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳನ್ನೇ ವಿದ್ವಾಂಸರು ಒದಗಿಸಿದ್ದಾರೆ. ಇಂದಿಗೂ ಸುಧಾರಣಾವಾದಿ ಹಿಂದೂ ಚಿಂತಕರೆಂತಲೆ ಕರೆಯಲಾಗುವ ರಾಜಾರಾಮ್ ಮೋಹನ್‌ರಾಯ್ ಮುನ್ಷಿ ಹುದ್ದೆಗಾಗಿ ಗಳಿಸಿದ ಪ್ರಥಮ ಅರ್ಹತೆಯೇ ಪರ್ಷಿಯನ್ ಭಾಷೆ. ಅವರು ಪಡೆದ ಪರಿಣತಿ ಎಂಬುದಾಗಿ ವಿದ್ವಾಂಸರೂ ಹೇಳುತ್ತಾರೆ. ಅವರ ಜೀವನ ಚರಿತ್ರೆಯೂ ಅದನ್ನೇ ಹೇಳುತ್ತದೆ. ಆದರೆ ಅವರ ಮಾತೃಭಾಷೆ ಮಾತ್ರ ಬಂಗಾಳಿ ಎಂಬುದನ್ನು ನೆನಪಿಡಬೇಕು. ಹಾಗೆಂದು ರಾಜಾರಾಮ್ ಮೋಹನ್‌ರಾಯ್‌ರವರನ್ನು ಬಂಗಾಳಿ ಭಾಷಾದ್ರೋಹಿ ಎಂದು ತೀರ್ಮಾನಿಸಬೇಕೆ? ಯಥಾಪ್ರಕಾರ ಸುಲ್ತಾನ್ ಟಿಪ್ಪುವಿನ ಮಾತೃ ಭಾಷೆ ಉರ್ದು, ಆದರೆ ಆತನ ಆಡಳಿತ ಭಾಷೆ ಪರ್ಷಿಯನ್ ಆಗಿತ್ತು ಎಂಬುದಾಗಿ ಆತನ ಆಸ್ಥಾನ ವಿದ್ವಾಂಸನಾಗಿದ್ದ ಕಿರ್ಮಾನಿಯೇ ಹೇಳುತ್ತಾನೆ. ಒಬ್ಬ ಅಪ್ಪಟ ಸ್ಥಳೀಯ ಮುಸಲ್ಮಾನನ ಮಗನಾದ ಸುಲ್ತಾನ್ ಟಿಪ್ಪುವಿಗೆ ಕನ್ನಡ ಗೊತ್ತೇ ಇರಲಿಲ್ಲವೆಂಬ ತೀರ್ಮಾನಕ್ಕೆ ಬರಬೇಕೆ? ಆ ಕಾರಣಕ್ಕಾಗಿ ಟಿಪ್ಪು ಕನ್ನಡದ್ರೋಹಿ ಎಂದು ನಿರ್ಧರಿಸಬೇಕೇ? ಇನ್ನು ಉಳಿದಂತೆ ಶೃಂಗೇರಿ ಮಠದೊಡನೆ ಸುಲ್ತಾನ್ ಟಿಪ್ಪು ಕನ್ನಡದಲ್ಲಿ ನಡೆಸಿರುವ ಪತ್ರ ವ್ಯವಹಾರಗಳನ್ನು ಅನೇಕ ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ.

ಇನ್ನು ಎರಡನೆಯ ಮುಖ್ಯ ವಿಷಯ ಸುಲ್ತಾನ್ ಟಿಪ್ಪು ಬಲಾತ್ಕಾರದ ಮತಾಂತರ ಮಾಡಿದನೆಂಬುದು: ಮನುವಾದಿ ಜಾತೀಯ ವ್ಯವಸ್ಥೆಯನ್ನು ಇಂದಿಗೂ ಅಪಮಾನಗಳೇ ತುಂಬಿರುವ ಘನಘೋರ ಮತಾಂತರವನ್ನು ಪ್ರಶ್ನಿಸುವ ಅಥವಾ ಆ ವಿಷಯವನ್ನು ವೈಭವೀಕರಿಸುವ ಯಾವುದೇ ಅಂಶವಿಲ್ಲ. ಸುಲ್ತಾನ್ ಟಿಪ್ಪು ಬಲಾತ್ಕಾರದ ಮತಾಂತರ ಮಾಡಿದನೆಂಬ ವಿಷಯವನ್ನು ಪರೋಕ್ಷವಾಗಿಯೋ ಅಥವಾ ಪ್ರತ್ಯಕ್ಷವಾಗಿಯೋ ಹೇಳಲೇಬೇಕೆಂಬ ಸ್ಥಿತಿಯಾಗಲಿ ಇಲ್ಲವೆ ಆ ಕುರಿತ ಟೀಕೆಯ ಪ್ರಮೇಯವೇ ಇಲ್ಲ. ಏಕೆಂದರೆ ಪ್ರಿಕಲೋನಿಯಲ್ ಕಾಲದ ರಾಜ ಮಹಾರಾಜರು, ನವಾಬರ ಕಾಲಗಳಲ್ಲಿ ಮತ್ತು ಪೋಸ್ಟ್ ಕಲೋನಿಯಲ್‌ನ ಬ್ರಿಟೀಷರ ಕಾಲದಲ್ಲೂ ಮತಾಂತರವೆಂಬುದು ನಿರಂತರವಾಗಿ ನಡೆದೇ ಇದೆ. ಸುಲ್ತಾನ್ ಟಿಪ್ಪು ಬಲಾತ್ಕಾರದ ಮತಾಂತರ ಮಾಡಿದನೆಂಬ ವಿವೇಚನಶೂನ್ಯ ಭೂತಕಾಲದ

ಭೂತ ಎಬ್ಬಿಸುವ ಮೂಲಕ ಸಮಕಾಲೀನ ಇಂಡಿಯಾದ ಅಸ್ಪೃಶ್ಯರೇ, ಮೊದಲಾದ ಅವಮಾನಿತ ಜನವರ್ಗದ ಮತಾಂತರದ ವಿರುದ್ಧ ಒಂದು ರೀತಿಯ ಪರೋಕ್ಷ ಎಚ್ಚರಿಕೆ ನೀಡುವ ಯಾವುದೇ ಮಾನವೀಯ ಅನುಕಂಪವಾಗಲಿ ಇಲ್ಲವೆಂಬುದನ್ನು ನೆನಪಿಡಬೇಕು. ಆದರೂ ಸಹ ಸುಲ್ತಾನ್ ಟಿಪ್ಪು ನಡೆಸಿರಬಹುದಾದ ಮತಾಂತರದ ಕಾರಣ ಮತ್ತು ಪರಿಣಾಮಗಳೇನೆಂಬುದನ್ನು ಶೋಧಿಸದೆ ಬಿಡುವುದು ಕೂಡ ವಸ್ತುನಿಷ್ಠ ಸಂಶೋಧನೆ ಎಂದೆನಿಸುವಂತಿಲ್ಲ.

ಸುಲ್ತಾನ್ ಟಿಪ್ಪು ಕಾಲದ ಮತಾಂತರದ ಆ ಇನ್ನೊಂದು ಆಯಾಮದ ಹೀರೊ ಎಂದರೆ ಬೇರಾರೂ ಆಗಿರದೆ, ಸುಲ್ತಾನ್ ಟಿಪ್ಪುವಿನ ಖಾಸಾ ಭಾವ-ಮೈದುನನೇ ಆಗಿದ್ದ ಬುರ್‌ಹಾನ್-ಉದ್ದಿನ್ ಎಂಬ ಪ್ರಚಂಡ ಬುದ್ಧಿವಂತಿಕೆಯ ಸೇನಾನಿ. ಊರೂರು ಅಡ್ಡಾಡಿ ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸುವುದರ ಜೊತೆ-ಜೊತೆಗೆ ಅವನು ತೋರಿದ ಸೇನಾ ನೈಪುಣ್ಯ. ಕುದುರೆಯನ್ನೇರಿ ಶ್ರೀರಂಗಪಟ್ಟಣದ ಸುತ್ತಲಿರುವ ಗ್ರಾಮಗಳು ಮೈಸೂರು ಮತ್ತು ಚಾಮರಾಜನಗರದ ಸುತ್ತಮುತ್ತಲ ಹಳ್ಳಿ ಹಳ್ಳಿಯನ್ನೂ ಸುತ್ತಾಡಿದ ಈ ಸೇನಾನಿ, ಗ್ರಾಮಸ್ಥರಲ್ಲಿ ಅದೂ ನಿರ್ದಿಷ್ಟವಾಗಿ ಅಸ್ಪೃಶ್ಯರಲ್ಲಿ ಸೈನ್ಯಕ್ಕೆ ಯೋಗ್ಯರಾದವರನ್ನೆಲ್ಲ ಆಯ್ಕೆ ಮಾಡುತ್ತ ನಡೆದ ಅವರಿಗೆ ನಿರಂತರ ತರಬೇತಿ ನೀಡಿದ. ತದನಂತರ ಅಸ್ಪೃಶ್ಯರು ಸುಲ್ತಾನ್ ಟಿಪ್ಪು ಸೈನ್ಯದಲ್ಲಿ ಸಿಪಾಯಿಗಳಾದ ಬಳಿಕ ಕಾಲಕ್ರಮದಲ್ಲಿ ಅವರು ಮುಸಲ್ಮಾನರಾಗಿ ಮತಾಂತರವೂ ಆಗಿರಬಹುದು. ಅದು ಸುಲ್ತಾನ್‌ನ ಶಕ್ತಿಶಾಲಿ ಸೇನಾಬಲದ ಹಿಂದಿನ ನಿಗೂಢ ರಹಸ್ಯವೂ ಆಗಿರಬಹುದು.

ಕ್ರಿ.ಶ.೧೮೫೭ರ ಮೇ ೧೦ ರಂದು ಬ್ರಿಟೀಷ್ ವಸಾಹತುಶಾಹಿ ಸಾಮ್ರಾಜ್ಯದ ವಿರುದ್ಧ ಮಹರ್ ರೆಜಿಮೆಂಟ್‌ನ ಪರಾಕ್ರಮಿ ಯೋಧರು ದಂಗೆಯೆದ್ದರು. ಅದೇ ಮಹರ್ ರೆಜಿಮೆಂಟ್‌ನ ಸಾವಿರಾರು ಸೈನಿಕರನ್ನು ಕೊಚ್ಚಿ-ಕೊಚ್ಚಿ ಕೊಂದುಹಾಕಿದವರು, ಆ ಕಾಲದ ಮನುವಾದಿ ಜಮೀನ್ದಾರರು ಮತ್ತು ವೈದಿಕ ರಾಜ ಮಹಾರಾಜರ ಸೈನಿಕರು ಈ ಮಹರ್ ಇನ್ನೆಂದೂ ತಲೆ ಎತ್ತದಂತೆ ದಮನ ಮಾಡಬೇಕೆಂದು ಆ ಕಾಲದ ಬಂಗಾಳದ 'ಬ್ರಿಟೀಷ್ ಇಂಡಿಯಾ ಅಸೋಸಿಯೇಷನ್' ಎಂಬ ಬ್ರಾಹ್ಮಣರ ವೇದಿಕೆಯ ಮುಖಾಂತರ ಸಾವಿರಾರು ಸಹಿ ಸಂಗ್ರಹಿಸಿ ಬ್ರಿಟೀಷ್ ಮಹಾರಾಣಿಗೆ ಮನವಿ ಸಲ್ಲಿಸಿದವರು. ಅದೇ ಸಾಮ್ರಾಜ್ಯದ ಪ್ರಧಾನ ಮಂತ್ರಿಯಾಗಿದ್ದ ದಿನಕರ್‌ರಾವ್ ರಾಜ್‌ವಾಡೆ ಅದೆಷ್ಟೋ ಮಂದಿ ಸ್ವಾತಂತ್ರ್ಯ ವೀರರನ್ನು ಬ್ರಿಟೀಷರ ಬಂದೂಕಿನ ಗುಂಡಿಗೆ ಸಾಮೂಹಿಕವಾಗಿ ಆಹುತಿ ನೀಡಲು ಮಹಾನ್ ಪಿತೂರಿಯನ್ನೇ ಮಾಡಲಿಲ್ಲವೇ? ಸುಲ್ತಾನ್ ಟಿಪ್ಪುವಿಗೆ ವಚನ ನೀಡಿದ್ದ ಪೂನಾದ ಪೇಶ್ವೆ ಬ್ರಾಹ್ಮಣ ದೊರೆ ಕೊನೆಗೆ ಟಿಪ್ಪುವಿಗೆ ವಿರುದ್ಧವಾಗಿ ಬ್ರಿಟೀಷ್‌ರೊಡನೆ ಶಾಮೀಲಾಗಲಿಲ್ಲವೆ? ತದನಂತರ ಅದೇ ಪೂನಾದ ಬ್ರಾಹ್ಮಣ

ದೊರೆ ಕ್ರಿ.ಶ.೧೮೧೮ರ ಡಿಸೆಂಬರ್ ೩೧ರಂದು ಘಟಿಸಿದ 'ಗೋರೇಗಾಂವ್ ಯುದ್ಧ' ದಲ್ಲಿ ಪೇಶ್ವೆಯ ಸಾವಿರಾರು ಸೈನಿಕರ ನರಮೇಧವೇ ನಡೆದ ನಂತರ ಅದೇ ಬ್ರಿಟೀಷರಿಗೆ ಸಾಮ್ರಾಜ್ಯವನ್ನು ಶರಣಾಗತ ಮಾಡಿ, ಕೊನೆಗೆ ಅದೇ ಪೇಶ್ವೆ ಬ್ರಾಹ್ಮಣ ದೊರೆ ಬ್ರಿಟೀಷರ ಮುಂದೆ ಪಿಂಚಣಿಗೆ ಕೈಯೊಡ್ಡಿದ್ದ. ಈ ಬ್ರಾಹ್ಮಣ ದೊರೆ ಪರಮ ದೇಶದ್ರೋಹಿಯಲ್ಲವೇ? ಆದರೆ ಬ್ರಿಟೀಷರಿಗೆ ಶರಣಾಗತನಾಗದೆ, ರಣರಂಗದಲ್ಲಿ ಹೋರಾಡಿ ಸ್ವಾತಂತ್ರ್ಯಕ್ಕಾಗಿ ತನ್ನನ್ನೇ ಬಲಿದಾನ ನೀಡಿದ ಸುಲ್ತಾನ್ ಟಿಪ್ಪು ಅಪ್ರತಿಮ ದೇಶಪ್ರೇಮಿಯಲ್ಲದೆ ಮತ್ತೇನು?

ಅಡಿ ಟಿಪ್ಪಣಿಗಳು :

೧) ಲಿಂಗದೇವರು ಹಳೇಮನೆ, ಧೀರ ಟಿಪ್ಪುವಿನ ಲಾವಣಿಗಳು, ವಿಸ್ಮಯ ಪ್ರಕಾಶನ, ಮೈಸೂರು-೨೦೦೩, ಪು.ಸಂ.೧೬, ೧೭.

೨) ಕೃಷ್ಣಮೂರ್ತಿ ಹನೂರು,ಅಜ್ಞಾತನೊಬ್ಬನ ಆತ್ಮಚರಿತ್ರೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು-೨೦೧೨, ಪು.ಸಂ.೧೫೦.

೩) ಎಸ್.ಎಲ್.ಭೈರಪ್ಪ, ಆವರಣ, ಸಾಹಿತ್ಯ ಭಂಡಾರ, ಬಳೇಪೇಟೆ, ಬೆಂಗಳೂರು, ಪು.ಸಂ.೫೯.

ಅಧ್ಯಾಯ-೫

ಟಿಪ್ಪು ಕುರಿತು ಜನಪದ ಸಾಹಿತ್ಯ

೫.೧ ಹಾಡು

೫.೨ ಜನಪದರ ಹಾಡಿನಲ್ಲಿ ಟಿಪ್ಪುವಿನ ಮಹತ್ವ

೫.೩ ಕಥನಗಳು

೫.೪ ಐತಿಹ್ಯಗಳು

೫.೫ ಲಾವಣಿಗಳು

೫.೬ ಟಿಪ್ಪು ಕುರಿತು ಆಚರಣಾ ಲೋಕ

೫.೭ ಟಿಪ್ಪು ಜಯಂತಿ

೫.೮ ಟಿಪ್ಪುವಿಗೆ ಸಂಬಂಧಿಸಿದ ಸ್ಥಳನಾಮಗಳು

ಅಧ್ಯಾಯ-೫

ಟಿಪ್ಪು ಕುರಿತು ಜನಪದ ಸಾಹಿತ್ಯ

ಪೀಠಿಕೆ

ಜನಪದರ ಸೃಜನಶೀಲತೆಯ ನೆಲೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಮೊದಲಿಗೆ ಜನಪದ ಸಾಹಿತ್ಯದ ರೂಪಗಳನ್ನು ಅರಿಯಬೇಕು. ಅವುಗಳ ಸ್ವರೂಪ, ಲಕ್ಷಣ, ಉದ್ದೇಶ, ಸಂಸ್ಕೃತಿ ಅಧ್ಯಯನದಲ್ಲಿ ಅವುಗಳ ಪಾತ್ರ ಎಂಥಹದು ಎಂಬುದನ್ನು ತಿಳಿಯಬೇಕು. ಏಕೆಂದರೆ ಬದುಕಿನ ಸಮಸ್ತ ಜೀವನಾನುಭವಗಳ ಮೊತ್ತವಾದ ಜನಪದವು ಪಡೆದುಕೊಳ್ಳುವ ಅಭಿವ್ಯಕ್ತಿಯ ವೈವಿಧ್ಯವೇ ಅಂಥಹುದು. ಜಾನಪದ ವರ್ಗೀಕರಣ ಕ್ಷೇತ್ರದಲ್ಲಿ ರಾಲ್ಫ್ ಸ್ಟೀಲ್ ಬಾಗ್ಸ್ ಅವರು ಜಾನಪದವನ್ನು ಚತುರ್ಮುಖಗಳಾಗಿ ವಿಭಜಿಸಿ ನೋಡಿದ್ದಾರೆ. ಅವರ ವಿಭಜನಾ ಕ್ರಮದಲ್ಲಿನ ಸಾಹಿತ್ಯದ ಬಗೆ, ಭಾಷಿಕ ಬಗೆ, ವೈಜ್ಞಾನಿಕ ಬಗೆ, ಕ್ರಿಯಾತ್ಮಕ ಬಗೆಗಳಲ್ಲಿ ಜಾನಪದ ಸಾಹಿತ್ಯ ರೂಪಗಳು ಗೋಚರಿಸುತ್ತವೆ. ಸಾಹಿತ್ಯಿಕ ಬಗೆಯಲ್ಲಿ ಗೀತೆ, ಕಥೆ, ಪುರಾಣ ಐತಿಹ್ಯಗಳು ಸೇರಿದರೆ, ಭಾಷಿಕ ಬಗೆಯಲ್ಲಿ ಗಾದೆ, ಒಗಟು, ಒಡಪು ಇತ್ಯಾದಿಗಳು, ವ್ಯಜ್ಞಾನಿಕ ಬಗೆಯಲ್ಲಿ ನಂಬಿಕೆ, ಸಂಪ್ರದಾಯ, ಮಾಟ, ಮಂತ್ರ, ವೈದ್ಯ ಮುಂತಾದವು ಸೇರುತ್ತವೆ. ಕಾವ್ಯದ ಸ್ವರೂಪವು ವೈವಿಧ್ಯಮಯವಾಗಿದ್ದು ಹಾಡುಗಳನ್ನು ಹಾಡುವ ಸಂದರ್ಭಕ್ಕನುಗುಣವಾಗಿ ಅವುಗಳ ಸ್ವರೂಪವೂ ಬದಲಾಗುತ್ತದೆ. ಕುಟ್ಟುವ ಹಾಡು, ಬೀಸುವ ಹಾಡು, ಸೋಬಾನೆ ಹಾಡುಗಳ ಸ್ವರೂಪ, ಅವುಗಳು ಹುಟ್ಟಿಕೊಳ್ಳುವ ಸಂದರ್ಭ ಮತ್ತು ಉದ್ದೇಶಗಳನ್ನು ಆಧರಿಸಿರುತ್ತವೆ. ಜನಪದ ಕಥೆಗಳನ್ನು ಮನರಂಜನೆಗಾಗಿ ಮತ್ತು ಜನರಿಗೆ ತಿಳಿವಳಿಕೆ ನೀಡುವ ಸಲುವಾಗಿ ಹೇಳಿದರೆ, ಗಾದೆಗಳು ಸಮುದಾಯದ ಜೀವನಾನುಭವದ ಅಭಿವ್ಯಕ್ತಿಯಾಗಿದ್ದು ಜನರನ್ನು ತಿದ್ದಿ, ವಿವೇಕವನ್ನು ಎಚ್ಚರಿಸುವ ಸಲುವಾಗಿ ಸೃಷ್ಟಿಗೊಂಡಿವೆ. ಒಗಟುಗಳು ಬುದ್ಧಿವಂತಿಕೆಯ ಪ್ರದರ್ಶನ ಮತ್ತು ಪರೀಕ್ಷೆಗಾಗಿ ಹುಟ್ಟಿಕೊಂಡಿವೆ. ಪುರಾಣವು ಬ್ರಹ್ಮಾಂಡದ ಸ್ಥಿತಿ-ಲಯಗಳನ್ನು ಕುರಿತು ಮತ್ತು ದೇವತೆಗಳು ಹಾಗೂ ಸಾಂಸ್ಕೃತಿಕ ವೀರರುಗಳಿಗೆ ಸಂಬಂಧಿಸಿವೆ. ಐತಿಹ್ಯಗಳು ಲೌಕಿಕ ವಸ್ತು, ಘಟನೆ ಮತ್ತು ಸ್ಥಳಕ್ಕೆ ಸಂಬಂಧಿಸಿದ ವಾಸ್ತವಿಕ ಇಲ್ಲವೆ ಕಾಲ್ಪನಿಕ ಕಥೆಗಳಾಗಿವೆ. ಪುರಾಣಗಳನ್ನು ಜನರು ಪವಿತ್ರವಾದವುಗಳೆಂದು ಭಾವಿಸಿದರೆ, ಐತಿಹ್ಯಗಳನ್ನು ಲೌಕಿಕವಾದವುಗಳೆಂದು ಪರಿಗಣಿಸಿದ್ದಾರೆ.

ಜನಪದ ಸಾಹಿತ್ಯರೂಪಗಳು ಸಂಸ್ಕೃತಿಯಲ್ಲಿ ರೂಪುಗೊಂಡು ಪಕ್ವವಾದವುಗಳು. ಸ್ಥಳೀಯ ಅಭಿವ್ಯಕ್ತಗಳಾದ ಈ ರೂಪಗಳನ್ನು ಅವು ಹುಟ್ಟಿಕೊಂಡ ಸಾಂಸ್ಕೃತಿಕ ಅಂದರೆ ದೇಸೀ

ನೆಲೆಯಲ್ಲಿಯೇ ಅಧ್ಯಯನ ಮಾಡಿದಾಗ ಅವುಗಳನ್ನು ನಿಖರವಾಗಿ ಅರ್ಥೈಸಿಕೊಳ್ಳುವುದು ಸಾಧ್ಯವಾಗುತ್ತದೆ.

೫.೧ ಹಾಡು

ಜನಪದ ಸಾಹಿತ್ಯ ರೂಪಗಳಲ್ಲೆಲ್ಲಾ ಅತ್ಯಂತ ಸಮೃದ್ಧವಾದುದು ಗೀತ ಸಾಹಿತ್ಯ. ಗ್ರಾಮೀಣ ಪ್ರದೇಶಗಳಲ್ಲಿ ಹಳ್ಳಿಹಾಡು ಎಂದು ಹೆಸರಾಗಿರುವ ಈ ಗೀತ ಪ್ರಕಾರವು ಅನಕ್ಷರಸ್ಥ ಜನ ಸಮುದಾಯದ ನಡುವೆ ಹುಟ್ಟಿ, ವಾಚಿಕ ಸಂಪ್ರದಾಯದಲ್ಲಿ ನಿರಂತರವಾಗಿ ಉಳಿದುಬಂದಿವೆ. ಜನಪದ ಹಾಡಿನ ಮೂಲ ಗುಣಗಳು, ಸಂಸ್ಕೃತಿಯ ಆದರ್ಶಗಳು, ಜೀವನಾನುಭವಗಳನ್ನು, ಅಭಿವ್ಯಕ್ತಿ ಸ್ವರೂಪದಲ್ಲಿ ಕಂಡಿರಿಸುವ ಗೀತ ಪ್ರಕಾರವು ನಾಡಿನ ಸಂಸ್ಕೃತಿಯ ವೈವಿಧ್ಯಮಯ ಮುಖಗಳನ್ನು ಪರಿಚಯಿಸುತ್ತದೆ.

ಜನಪದ ಸಾಹಿತ್ಯದ ಇತರ ರೂಪಗಳಂತೆಯೇ ಹಾಡಿನ ಪ್ರಕಾರದ ಉಗಮ ಕಾಲವನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಅಂದಂದಿನ ಸ್ಥಿತಿಗತಿಗಳಗೆ ಮನಸೋತು ಹಾಡಿದ್ದೇ ಹಾಡು. ಇದೊಂದು ರೀತಿಯಲ್ಲಿ Spantanious ಆದುದು. ಯಾರೊಬ್ಬರ ಕೋರಿಕೆಗಾಗಲಿ, ಅಮಿಷಕ್ಕಾಗಲಿ, ಒತ್ತಡಕ್ಕಾಗಲಿ ಹುಟ್ಟಿದುದಲ್ಲ. ದುಡಿಮೆಯ ಜೊತೆಗೆ ಸರಾಗವಾಗಿ ಸಹಜವಾಗಿ ಹೊರಹೊಮ್ಮಿದ್ದು. ಬೀಸುವಾಗ, ಕುಟ್ಟುವಾಗ, ಕೇರುವಾಗ, ತೂರುವಾಗ, ನಾಟಿ ಹಾಕುವಾಗ, ಗಾಡಿ ಹೊಡೆಯುವಾಗ ಹೀಗೆ ದಿನನಿತ್ಯದ ಕಲಸಗಳೊಂದಿಗೆ ಆನಂದ ಉಕ್ಕಿ ಹರಿದಾಗ, ಎದೆಯಲ್ಲಿ ಗೂಡು ಕಟ್ಟಿದ ನೋವು ಮನಸ್ಸನ್ನು ಹಿಂಡಿದಾಗ ಬದುಕಿನ ಪಾಡೇ ಹಾಡಾಗಿ ಪರಿಣಮಿಸಿತು. ಈ ಹಾಡು ಒಬ್ಬರ ಬಾಯಿಂದ ಮತ್ತೊಬ್ಬರ ಬಾಯಿಗೆ ಹರಿಯುವುದರೊಂದಿಗೆ ಸಾಮೂಹಿಕವಾಗಿ ಪುನರ್ ಸೃಷ್ಟಿ ಹೊಂದುತ್ತಾ ಹೋಯಿತು. ಸ್ಮೃತಿ-ವಿಸ್ಮೃತಿಗಳು ಗೀತೆಯ ಸಂಕಲನ ಮತ್ತು ವ್ಯವಕಲನಕ್ಕೆ ಕಾರಣವಾದವು. ಮನುಷ್ಯ ತನ್ನೆಲ್ಲಾ ನೋವು-ನಲಿವುಗಳನ್ನು ಕಷ್ಟ ಸುಖಗಳನ್ನು, ದು:ಖ-ದುಮ್ಮಾನಗಳನ್ನು ತೋಡಿಕೊಳ್ಳಲು ಕಂಡುಕೊಂಡ ಮಾರ್ಗವಿದು. ನೇರವಾಗಿ ಹೃದಯದಿಂದ ಹೃದಯಕ್ಕೆ ಹರಿದು ಬರುವ ಈ ಅಭಿವ್ಯಕ್ತಿಯು ಹುಟ್ಟಿ ಬೆಳೆದದ್ದೆಲ್ಲವೂ ಶುದ್ಧವಾದ ವಾಕ್ ಸಂಪ್ರದಾಯದಲ್ಲಿ. ಇದಕ್ಕೆ ಕಾರಣೀಭೂತರಾದವರು ಅನಕ್ಷರಸ್ಥ ಜನಸಮುದಾಯ. ಇದನ್ನೇ ಎ.ಎಚ್. ಕ್ರಾಪೆಯವರು "ಭೂತಕಾಲದ ಅಜ್ಞಾತ ನಿರಕ್ಷರಕುಕ್ಷಿ ರಚಿಸಿರುವ, ಬಹುಕಾಲದಿಂದ ಮೌಖಿಕ ಸಂಪ್ರದಾಯದಲ್ಲುಳಿದು ಬಂದಿರುವ, ಮಧುರವು, ರಾಗಾತ್ಮಕವೂ ಆದ ಹಾಡೇ ಭಾವಗೀತೆ" ಎಂದು ನಿರೂಪಿಸಿದ್ದಾರೆ. ರವೀಂದ್ರನಾಥ ಠಾಕೂರರು ಜನಪದ ಸಾಹಿತ್ಯದ ಬಗ್ಗೆ ಹೇಳಿರುವ ಮಾತುಗಳು ಮನನೀಯವಾಗಿವೆ. "ಎಲ್ಲ ಕಾವ್ಯಗಳಂತೆ

ಜನಪದ ಗೀತೆಗಳ ಗುಣದಲ್ಲಿ ಬೇರೆ ಬೇರೆ ಮಟ್ಟುಗಳಿವೆ.ಪೌರಾಣಿಕ ನದಿ ಮಂದಾಕಿನಿಯಂತೆ ನಿಜವಾದ ಕವಿಯ ಪ್ರತಿಭೆಯಿಂದ ಹೊರಹೊಮ್ಮುವ ಜೀವವಾಹಿನಿ ಅಪ್ರಾಪ್ಯಲೋಕದಲ್ಲಿ ಉಗಮಗೊಳ್ಳುತ್ತದೆ".

ಜನಪದ ಹಾಡುಗಳನ್ನು ರಚಿಸುವ, ಹಾಡುವ ಮತ್ತು ಬೋಧಿಸುವ ಯಾವ ಕ್ರಮಬದ್ಧ ತಂತ್ರವೂ ರೂಢಿಯಲ್ಲಿಲ್ಲ. ಕೇಳುವುದರ ಮೂಲಕ, ನೆನಪಿನಲ್ಲಿ ಇರಿಸಿಕೊಳ್ಳುವುದರ ಮೂಲಕ ಮತ್ತು ಈಗಾಗಲೇ ಹಾಡುತ್ತಿರುವವರ ಜೊತೆ ದನಿಗೂಡಿಸುವುದರಿಂದ ಇವುಗಳನ್ನು ಕಲಿಯಲಾಗುತ್ತದೆ. ಈ ಮಾದರಿಯಲ್ಲೇ ಹಾಡುಗಳು ತಲೆಮಾರಿನಿಂದ-ತಲಮಾರಿಗೆ ಮುಂದುವರಿದುಕೊಂಡು ಬಂದಿವೆ. ಜನಪದ ಹಾಡುಗಾರರಿಗೆ ತಾವು ಹಾಡುವ ಗೀತೆಗಳ ಬಗೆಗಿನ ಸ್ವರೂಪ ಮತ್ತು ರಚನೆಗೆ ಸಂಬಂಧಿಸಿದಂತೆ ಯಾವುದೇ ಪ್ರಜ್ಞಾಪೂರ್ವಕವಾದ ಅರಿವಿರುವುದಿಲ್ಲ. ಅಲ್ಲದೆ ಇವುಗಳ ಕಲಾತ್ಮಕತೆ ಅಥವಾ ವಿಶ್ಲೇಷಣೆಗೆ ಸಂಬಂಧಿಸಿದಂತೆ ಯಾವ ಸಿದ್ಧಾಂತವೂ ಅವರ ತಲೆಯಲ್ಲಿರುವುದಿಲ್ಲ. ಸತತ ಅಭ್ಯಾಸ ಮತ್ತು ಪೂರ್ವ ಪ್ರದರ್ಶನಗಳ ತಾಲೀಮು ಇತ್ಯಾದಿಗಳಾವುವೂ ಇಲ್ಲಿಲ್ಲ. ಗುಂಪಿನ ಪ್ರತಿಯೊಬ್ಬ ಸದಸ್ಯನೂ ಹಾಡುವ ಕ್ರಿಯೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದರ ಮೂಲಕವೇ ಪದವನ್ನು ಕಲಿಯುತ್ತಾ ಹೋಗುತ್ತಾನೆ. ಹೀಗೆ ಒಂದು ಸಮುದಾಯದ ಆಶಯಗಳನ್ನು ಅಭಿವ್ಯಕ್ತಿಸುವ ಆಶಯವನ್ನು ಹೊಂದಿರುವ ಜನಪದ ಹಾಡಿನ ಅಜ್ಞಾತ ಕರ್ತೃತ್ವ, ಮೌಖಿಕತೆ, ಸಾಮೂಹಿಕ ಪುನರ್ ಸೃಷ್ಟಿ, ಪ್ರತಿಭಾ ಸಂಪನ್ನವಾದ ಭಾವ ತೀವ್ರತೆ, ರೂಪಾಂತರಗಳನ್ನು ಮುಖ್ಯ ಲಕ್ಷಣಗಳನ್ನಾಗಿ ಜನಪದ ಸಾಹಿತ್ಯ ತನ್ನಲ್ಲಿ ಒಳಗೊಂಡಿದೆ.

ಜನಪದ ಹಾಡುಗಾರನೊಬ್ಬ ಏಕಕಾಲದಲ್ಲಿ ಕವಿ-ಗಾಯಕ-ಶ್ರೋತೃ ಇವು ಮೂರು ಆಗಿರುತ್ತಾನೆ. ಈ ಮೂರು ಘಟಕಗಳು ವಾಚಕ ಪರಂಪರೆಯಲ್ಲಿ ಎದ್ದುಕಾಣುವಂಥವು. ಶಿಷ್ಟ ಸಾಹಿತ್ಯದಲ್ಲಿ ಇದು ಕಂಡುಬರುವುದಿಲ್ಲ. ಇಲ್ಲಿ ಕವಿ ಎಲ್ಲೋ ಇರುತ್ತಾನೆ. ಗಾಯಕ ಮತ್ತೆಲ್ಲೋ ಇರುತ್ತಾನೆ. ಜನಪದ ಹಾಡುಗಾರನು ವಾಚಿಕ ಪರಂಪರೆಯಲ್ಲಿ ತೇಲಿ ಬಂದ ಹಾಡೊಂದನ್ನು ತನ್ನದಾನ್ನಾಗಿಸಿಕೊಂಡು ಕೌಶಲ್ಯದಿಂದ ಪುನರ್ ಸೃಷ್ಟಿಸುವುದರ ಮೂಲಕ ಕವಿಯಾಗುತ್ತಾನೆ. ಆ ಹಾಡನ್ನು ಸ್ವತ: ತಾನೇ ಹಾಡುವುದರಿಂದ ಗಾಯಕ ಎನಿಸಿಕೊಳ್ಳುತ್ತಾನೆ. ಹಾಡಿನೊಂದಿಗೆ ಹಾಡುವಾಗ ತಾನು ಹಾಡಿದ್ದನ್ನು ಸಮೂಹವು ಮತ್ತೆ ಮತ್ತೆ ಪುನರುಚ್ಚರಿಸಿದಾಗ ಅದನ್ನು ಕೇಳಿಸಿಕೊಂಡು ತನ್ನ ಹಾಡಿನ ಗತಿಯನ್ನು ಮುಂದುವರಿಸುವುದರಿಂದ ಶ್ರೋತೃವೂ ಅವನೇ ಆಗಿರುತ್ತಾನೆ.

ಕನ್ನಡ ಜನಪದ ಹಾಡುಗಳ ರಚನೆ ತುಂಬಾ ಸರಳವಾದುದು. ಆದರೆ ಬಳಕೆಯಾಗುವ ಛಂದಸ್ಸು ವೈವಿಧ್ಯಮಯವಾದುದು. ದ್ವಿಪದಿ, ತ್ರಿಪದಿ, ಚೌಪದಿ, ರಗಳೆ, ಮುಕ್ತ ಛಂದಸ್ಸು ಮೊದಲಾದವೆಲ್ಲವೂ ಜನಪದ ಹಾಡುಗಳಲ್ಲಿ ಬಳಕೆಯಾಗಿವೆ. ಸಾಮಾನ್ಯವಾಗಿ ತ್ರಿಪದಿ ಪದ್ಯಗಳೇ ಹೆಚ್ಚು. ಮೂರು ಸಾಲುಗಳುಳ್ಳ ತ್ರಿಪದಿಯು ಜನಪದ ಹಾಡುಗಾರಿಕೆ, ಅಭಿವ್ಯಕ್ತಿಯ ವೈವಿಧ್ಯಕ್ಕೆ ಪರಿಣಾಮಕಾರಿಯಾದ ಮಾಧ್ಯಮವಾಗಿದೆ.

ಲಯ, ಪ್ರಾಸ ಮತ್ತು ಯತಿಗಳಿಗೂ ಇಲ್ಲಿ ಗೌರವವುಂಟು. ಪ್ರಾಸ ನಿಯತವಾಗಿಲ್ಲದಿದ್ದರೂ, ಲಯದ ನಿಯಮವನ್ನು ಮಾತ್ರ ಸಡಿಲಿಸುವಂತಿಲ್ಲ. ಪ್ರಾಸದ ಬದಲಿಗೆ ಧ್ವನಿ ಸಾಮ್ಯತೆ ಇದ್ದರೆ ಸಾಕು. ಹಾಡುವ ಧಾಟಿ ಪರಿಸರಕ್ಕೆ ಅನುಗುಣವಾಗಿ ಕಾಲದಿಂದ-ಕಾಲಕ್ಕೆ ವ್ಯತ್ಯಾಸಗೊಳ್ಳಬಹುದು. ಗ್ರಾಮೀಣರಿಗೆ ಛಂದಸ್ಸಿನ ಅನುಭವವಿಲ್ಲ. ಭಾವ-ಲಯಪ್ರಜ್ಞೆ ಅವರಿಗೆ ಸಹಜವಾಗಿ ಒದಗಿ ಬಂದಂಥ ಗುಣ, ಅಂಶಗಣದ ನಿಯಮಕ್ಕನುಸಾರವಾಗಿ ಅವರ ಹಾಡನ್ನು ವಿಶ್ಲೇಷಿಸಬಹುದೇ ಹೊರತು ಅನ್ಯಥಾ ಸಾಧ್ಯವಿಲ್ಲ.

೫.೨ ಜನಪದರ ಹಾಡಿನಲ್ಲಿ ಟಿಪ್ಪುವಿನ ಮಹತ್ವ

ಈ ನಾಡಿನ ಜನಪದರು ಇಲ್ಲಿನ ನೆಲ, ಜಲ, ಸಂಸ್ಕೃತಿಯನ್ನಲ್ಲದೆ ತಮ್ಮನ್ನು ಆಳಿದ ರಾಜ ಮಹಾರಾಜರ ಗುಣಾವಗುಣಗಳನ್ನು ಅವರ ವೀರತನ, ಸಾಹಸ, ಧೈರ್ಯ, ರಾಷ್ಟ್ರಪ್ರೇಮ, ಆಡಳಿತ ಸುಧಾರಣೆಗಳನ್ನು ಕಂಡು ಅಭಿಮಾನದಿಂದ ಹಾಡಿ ಹೊಗಳಿದ್ದಾರೆ. ಅಂತಹ ವೀರ, ಧೀರ, ಕೆಚ್ಚೆದೆಯ, ಸುಲ್ತಾನರಲ್ಲಿ ಟಿಪ್ಪು ಅಗ್ರಗಣ್ಯ.

ಮೈಸೂರು ಸಂಸ್ಥಾನದ ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಜನಪದರ ಹೃದಯಾಂತರಾಳದಲ್ಲಿ ಟಿಪ್ಪು ಇಂದಿಗೂ ಜೀವಂತನಾಗಿದ್ದು, ಅಮರ ಸುಲ್ತಾನನಾಗುಳಿದಿದ್ದಾನೆ. ಮೈಸೂರು ಹುಲಿ ಟಿಪ್ಪು ಕುರಿತು ಆತನ ಜನೋಪಯೋಗಿ ಅಭಿವೃದ್ಧಿ ಕೆಲಸಗಳನ್ನು, ವೀರತ್ವವನ್ನು ಮತ್ತು ಟಿಪ್ಪುವಿನ ಬಗ್ಗೆ ಜನಪದರು ಹೊಂದಿದ್ದ ಪ್ರೀತಿ, ಸ್ವಾಭಿಮಾನ, ಗೌರವ ಕುರಿತಾದ ಅನಾಮಧೇಯ ಕವಿಯೊಬ್ಬ ರಚಿಸಿರುವ ಜನಪದ ಗೀತೆಯೊಂದು ಈ ಕೆಳಗಿನಂತಿದೆ.

ಪರಕೀಯ ದಾಳಿ ಇಕ್ಕೆ ಮೆಟ್ಟಿದವನ
ನೀರಾವರಿ ಯೋಜನೆ ಕೈಗೆತ್ತಿಗೊಂಡವನ
ಊರೂರಲ್ಲಿ ಕೆರೆಕಟ್ಟಿ ನಿರ್ಮಾಣ ಮಾಡುತ್ತಾ

ರೈತರ ಬವಣೆ ಸಾಂತ್ವಾನ ಹೇಳಿಧವನ
ನೀರಿನ್ಯಾಗೆ ಹುದುಗ್ಯಾನ, ಬೆಳೆಯಾಗ ಅರಳ್ಯಾನ
ನಮ್ಮ ಮೈಸೂರು ಹುಲಿಯಾದ ಟಿಪ್ಪು ಸುಲ್ತಾನ್ ।

ನಮ್ಮ ಟಿಪ್ಪು ಸುಲ್ತಾನ್ ಅಪರಂಜಿ – ಚಿನ್ನ
ಸ್ವಾತಂತ್ರ್ಯ ಕಹಳೆಯ ಮೊಳಗಿಸಿದವನ
ಕತ್ತರಿಸಿ ಹಾಕಿದನು ಮನು ಸಂವಿಧಾನ ।
ಆಂಗ್ಲರ ವಿರುದ್ಧ ಸಿಡಿದೆದ್ದನಾ
ಹೋರಾಡಿ ಮಡಿದು ಹುತಾತ್ಮನಾದನ
ನಮ್ಮ ಟಿಪ್ಪು ಸುಲ್ತಾನ ಜನಮನದಾಗೆ ಉಳಿದಾನ ।

ಈ ಮೇಲಿನ ಜನಪದ ಗೀತೆಯಲ್ಲಿ ಜನಪದರು ಟಿಪ್ಪುವಿನ ದೇಶಪ್ರೇಮ, ಆಡಳಿತ ಸುಧಾರಣೆ, ಜನೋಪಕಾರ ಯೋಜನೆಗಳನ್ನು ಕೊಂಡಾಡಿದ್ದಾರೆ. ಬ್ರಿಟೀಷರಂತಹ ಪರಕೀಯರ ದಾಳಿಯಿಂದ ಈ ನಾಡನ್ನು ರಕ್ಷಿಸಿ, ಶತ್ರುಗಳನ್ನು ತನ್ನ ವೀರತ್ವದಿಂದ ಹಿಮ್ಮೆಟ್ಟಿಸಿ, ದಾಳಿಯನ್ನು ಅಡಗಿಸಿದ ಟಿಪ್ಪುವನ್ನು ಹೇಗೆ ಹಾಡಿ ಕೊಂಡಾಡಲಿ? ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ಊರೂರಲ್ಲಿ ಕೆರೆಕಟ್ಟಿಸಿ, ಈ ನಾಡಿನ ಬೆನ್ನೆಲುಬು ಕೃಷಿ ಎಂದರಿತ. ಟಿಪ್ಪು ಕೃಷಿಕರಿಗೆ ಮತ್ತು ಕೃಷಿಗೆ ನೀಡಿದ ಆದ್ಯತೆ ಪ್ರೋತ್ಸಾಹ ಅಪಾರವಾದದ್ದು, ರೈತರ ಜೀವನೋಪಾಯಕ್ಕೆ ಹಲವಾರು ಯೋಜನೆಗಳನ್ನು ಜಾರಿಗೆ ತಂದ ಟಿಪ್ಪು ರೈತರ ಅಚ್ಚುಮೆಚ್ಚಿನ ದೊರೆಯಾಗಿ, ಅವರ ಬವಣೆಗಳನ್ನು ಬಲ್ಲವನಾಗಿದ್ದ. ಕೃಷಿಗಾಗಿ ಕೆರೆಕಟ್ಟೆ, ಕಾಲುವೆಗಳನ್ನು ನಿರ್ಮಿಸಿ ನೀರಿನಂತೆ ಹುದುಗಿದ, ಬೆಳೆಯಂತೆ ಅರಳಿದ, ಈ ನಾಡಿನ ಹುಲಿ ಟಿಪ್ಪುಸುಲ್ತಾನ್ ಎಂದು ಹೆಮ್ಮೆಯಿಂದ ಜನಪದರು ಮೊದಲನೇ ಪದ್ಯದಲ್ಲಿ ಹಾಡಿ ಹೊಗಳಿದ್ದಾರೆ.

ಎರಡನೇ ಪದ್ಯದಲ್ಲಿ (ಗೀತೆಯಲ್ಲಿ) ಟಿಪ್ಪುವಿನ ರಾಷ್ಟ್ರಪ್ರೇಮ, ದೇಶಭಕ್ತಿ, ವ್ಯಕ್ತವಾಗುತ್ತದೆ. ಟಿಪ್ಪು ಈ ನಾಡನ್ನು ಪರಕೀಯರ ದಾಸ್ಯಕ್ಕೆ ಬಿಡುವುದರ ಬದಲು ಆತ್ಮಾರ್ಪಣೆ ಮಾಡಿ ಸಾಯುವುದೇ ಲೇಸು ಎಂದರಿತ ಅಪ್ರತಿಮ ದೇಶಭಕ್ತ. "ಇಲಿಯಂತೆ ನೂರು ವರ್ಷ ಬದುಕುವುದಕ್ಕಿಂತ ಹುಲಿಯಂತೆ ಹೋರಾಡುವುದೇ ಲೇಸು" ಎಂದರಿತ. ದೃಢನಿರ್ಧಾರ ಅಸಾಮಾನ್ಯ ವ್ಯಕ್ತಿತ್ವದ ಟಿಪ್ಪು ಈ ದೇಶದ ಹೆಮ್ಮೆಯ ಪುತ್ರ. ಪರಕೀಯರ ವಿರುದ್ಧ ಹೋರಾಡಿ ವೀರ ಮರಣವನ್ನಪ್ಪುವವರೆಗೂ ಬ್ರಿಟೀಷರ ಪಾಲಿನ ಹುಲಿಯಾಗಿಯೇ ಮೆರೆದನು. ಈ ನಾಡಿನ ಸ್ವಾತಂತ್ರ್ಯ ಅವನ ಪ್ರಾಣಕ್ಕಿಂತಲೂ ಪರಯವಾಗಿತ್ತು. ಹಾಗಾಗಿಯೇ ಈ ಮೇಲಿನ ಜನಪದ

ಗೀತೆಯಲ್ಲಿ ಜನಪದರು ಟಿಪ್ಪುಸುಲ್ತಾನ್ ಅಪರಂಜಿ-ಚಿನ್ನ ಎಂದಿದ್ದಾರೆ. ಈ ನೆಲದಲ್ಲಿ ಹೆಮ್ಮರವಾಗಿ ಹರಡಿಕೊಂಡು, ಅಂಧಕಾರದ ಕಗ್ಗತ್ತಲಿನಿಂದ ಕೂಡಿ ರಾರಾಜಿಸುತ್ತಿದ್ದ ಮನು ಸಂವಿಧಾನವನ್ನು ಬೇರು ಸಮೇತ ಕಿತ್ತು ಸರ್ವರಿಗೂ ಸಮಾನತೆಯ ಬದುಕು ನೀಡಲು, ಜಾತಿ, ಧರ್ಮ, ಮೇಲು-ಕೀಳು, ಶ್ರೀಮಂತ-ಬಡವ ಎಂಬ ಅಸಮಾನತೆಯ ಸಮಾಜ ಧಿಕ್ಕರಿಸಿದ ಧೀಮಂತ ಟಿಪ್ಪು ಆಂಗ್ಲರ ಗುಂಡಿಗೆ ಮಡಿದು ಹುತಾತ್ಮನಾದ ಟಿಪ್ಪುಸುಲ್ತಾನ್. ದೊರೆಯನ್ನು ಹೇಗೆ ವರ್ಣಿಸಿ ಹಾಡಿ ಹೊಗಳಲಿ? ಎಂದು ಜನಪದರು ತಮ್ಮ ದೊರೆಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ.

ಕೃಷ್ಣಮೂರ್ತಿ ಹನೂರು ರಚಿಸಿರುವ ಅಜ್ಞಾತನೊಬ್ಬನ ಚರಿತ್ರೆ ಕಾದಂಬರಿಯಲ್ಲಿ ಒಮ್ಮೆ ಟಿಪ್ಪುವಿಗೆ ಹುಲಿಯ ಮೇಲಿನ ಅತಿಯಾದ ಪ್ರೀತಿಯಿರುತ್ತದೆ. ಟಿಪ್ಪು ತನ್ನ ಅರಮನೆಯ ಮುಂಭಾಗದಲ್ಲಿ ನಾಲ್ಕು ಹೆಬ್ಬುಲಿಗಳನ್ನು ಸಾಕಿದ್ದನು. ಈ ನಾಲ್ಕರಲ್ಲಿ ಒಂದನ್ನು ಹುಲಿಯೂರು ದುರ್ಗದಿಂದ, ಮೂರನ್ನು ಮಲೆಮಹದೇಶ್ವರ ಬೆಟ್ಟದಿಂದ ಹಿಡಿದು ತಂದಿರುತ್ತಾನೆ. ಮಹದೇಶ್ವರ ಬೆಟ್ಟದಲ್ಲಿ ಹಿಡಿದು ತಂದ ಮೂರು ಹುಲಿಗಳಲ್ಲಿ ಒಂದು ಹುಲಿ ತಪ್ಪಿಸಿಕೊಂಡು ಹೋದಾಗ ದಳವಾಯಿಗಳೊಡನೆ ಟಿಪ್ಪು ನಾಲ್ಕನೇ ಮೈಸೂರು ಯುದ್ಧದ ಸಂದರ್ಭದಲ್ಲಿ ಹುಲಿ ಬೇಟೆಗೆ ಹೋಗಿ ಹುಲಿ ಹಿಡಿದುಕೊಂಡು ಹೊತ್ತು ಬರುವಾಗ ಜನಪದರು ಈ ಜನಪದ ಗೀತೆಯನ್ನು ಹಾಡಿ ಆತನ ಸಾಹಸವನ್ನು, ವೀರತ್ವವನ್ನು ಹೀಗೆ ವರ್ಣಿಸಿದ್ದಾರೆ.

"ಆಡದನಲ್ಲೋ ಗುಡ್ಡವ ಬೆಟ್ಟದ ಅಣಿ ಕಲ್ಮಾಡಿ
ಸವರಿದನಲ್ಲೊ ಹಸಿರು ಅರಣ್ಯವ ನುರಿ ನುಗ್ಗಾಡಿ
ಹುಲಿಯನು ಹಿಡಿದು
ಹಾಲನೆ ಹಿಂಡಿದ ಹಮ್ಮೀರ
ಜೀವದ ಹುಲಿಯಾ ಮೀಸೆಯನು
ಹಿಡಿದಲುಗಾಡಿದನೊ ಧೀರ
ಸಿಂಹದ ಮುಂದೆ ನಿಲ್ಲುವ ಗಂಡ
ಶೂರರ ಮಧ್ಯದ ಬೇರುಂಡ."

ಎಪ್ಪತ್ತೇಳು ಮಲೆಯ ಮಹದೇಶ್ವರ ಬೆಟ್ಟದ ಮಹಾ ಅರಣ್ಯದಲ್ಲಿ ಮಕ್ಕಳು ಆಣೆಕಲ್ಮಣೆ ಆಟವನ್ನು ಆಡಿದಂತೆ ಅಲ್ಲಿನ ಬೆಟ್ಟಗುಡ್ಡಗಳೊಡನೆ ಆಣೆ ಕಲ್ಮಾಡಿ ಆಟವಾಡಿ, ಭಯಾನಕವಾದ ದಟ್ಟಡವಿಯ ಹಸಿರನ್ನು ತನ್ನ ಕೈಗಳಿಂದ ಸವರಿ-ಸವರಿ, ನೂಕಿ-ನುಗ್ಗಾಡಿ ಹುಲಿಯನ್ನು ಹಿಡಿದು,

ಹಾಲನ್ನು ಹಿಂಡಿದ ವೀರ-ಧೀರ. ಕೆಚ್ಚೆದೆಯ ಹಮ್ಮೀರ ಟಿಪ್ಪು. ಜೀವವಿರುವ ಭಯಂಕರ ಹುಲಿಯ ಮೀಸೆಯನ್ನು ಹಿಡಿದು ಅಲುಗಾಡಿಸಿ ಸಿಂಹದ ಮುಂದೆ ನಿಲ್ಲುವ ಗಂಡೆದೆಯ ಶೂರ ಟಿಪ್ಪು ಎಂದು ಆತನ ಸಾಹಸ ಶೂರತ್ವವನ್ನು ಈ ಮೇಲಿನಂತೆ ವರ್ಣಿಸಿದ್ದಾರೆ.

ಟಿಪ್ಪುಸುಲ್ತಾನನ ಭಾರತ (ಆಧುನಿಕ ಜನಪದ ಗೀತೆ)

ಯುದ್ಧ ಯುದ್ಧ ಯುದ್ಧ
ಅಪ್ಪ ಮಕ್ಕಳು ಸಿದ್ಧ ।

ಗೆದ್ರು ಗೆದ್ರು ಗೆದ್ರು
ದಕ್ಷಿಣ ಭಾರತ್ವ ಗೆದ್ರು ।

ಹೊಡ್ದ್ರು ಹೊಡ್ದ್ರು ಹೊಡ್ದ್ರು
ಬ್ರಿಟೀಷರೆ, ಹೊಡ್ದ್ರು ।

ಕೊಟ್ರು ಕೊಟ್ರು ಕೊಟ್ರು
ಇವರ್ಕಡೆವ್ರೆ ಕೈಯ ಕೊಟ್ರು ।

ಬಿದ್ದ ಬಿದ್ದ ಬಿದ್ದ
ಒಂಟಿ ಟಿಪ್ಪು ಬಿದ್ದ ।

ಎದ್ರು ಎದ್ರು ಎದ್ರು
ಭಾರ್ತೀಯರು ಗುಲಾಮರಾದ್ರು ।

ಟಿಪ್ಪು ಇಲ್ಲದಿದ್ಕೆ
ಗುಲಾಮರಾದ್ವಿ ಅದ್ಕೆ ।

ಬನ್ನಿ ಬನ್ನಿ ಬನ್ನಿ
ಇನ್ನಾದ್ರೂ ಒಂದಾಗಿ ಬನ್ನಿ ।

ಕಟ್ಟಿ ಕಟ್ಟಿ ಕಟ್ಟಿ
ಗಟ್ಟಿ ಭಾರತ್ವ ಕಟ್ಟಿ ।

ಈ ಮೇಲಿನ ಜನಪದ ಗೀತೆಯನ್ನು ತಲಕಾಡು ಚಿಕ್ಕರಂಗೇಗೌಡರು ಟಿಪ್ಪು ಸುಲ್ತಾನ್ ಕಾಲದ ಪ್ರಸಂಗಗಳು ಎಂಬ ಕೃತಿಯಲ್ಲಿ ಸಂಗ್ರಹಿಸಿದ್ದಾರೆ. ಆಧುನಿಕ ಜನಪದ

ಗೀತೆಯಂತೆಯೂ, ಶಿಶುಗೀತೆಯಂತೆಯೂ ರೂಪ ತಾಳಿದೆ. ಅನಾಮಧೇಯ ಜನಪದ ಕವಿ ಟಿಪ್ಪು ಸುಲ್ತಾನನಿಲ್ಲದ ಭಾರತದಲ್ಲಿ ಬ್ರಿಟೀಷರ ಗುಲಾಮಗಿರಿಯ ಆಳ್ವಿಕೆಗೆ ಭಾರತೀಯರ ವೈಷಮ್ಯತೆಯೇ ಕಾರಣ ಎಂಬುದನ್ನು ವ್ಯಕ್ತಪಡಿಸಿದ್ದಾರೆ.

ಮ.ನ.ಮೂರ್ತಿ ಅವರ ಟಿಪ್ಪುಸುಲ್ತಾನ್ ಎಂಬ ಕೃತಿಯಲ್ಲಿ ೪ನೇ ಮೈಸೂರು ಯುದ್ಧದ ಸಂದರ್ಭದಲ್ಲಿ ಮಹಿಷಾಮರ್ಧಿನಿ ಚಾಮುಂಡಿ ನೆಲೆಯಾದ ಮೈಸೂರು ರಾಜ್ಯಕ್ಕೆ ಮತ್ತು ಸುಲ್ತಾನ ಟಿಪ್ಪುವಿಗೆ ಒದಗಬಹುದಾದ ತೊಂದರೆ, ಆಪತ್ತನ್ನು ನೆನೆದು ಬುಡಬುಡಿಕೆಯವನು (ಗಿಣಿಶಾಸ್ತ್ರ ಹೇಳುವವನು) ಈ ಹಾಡಿನ ಮೂಲಕ ಭವಿಷ್ಯ ಹೇಳುತ್ತಾನೆ.

"ಜಯ ಜಯ ಜಯವಾಗಲಿ ತಂದೆ
ಜಯತು ಕಾರ್ಯಗಳು ನಡೆಯಲಿ ತಂದೆ
ನಿಮ್ಮ ಕಾರ್ಯ ಕೈಗೂಡುವುದೆಂದೆ
ಹಕ್ಕಿ ನುಡಿಯುವುದ ಹೇಳಲು ಬಂದೆ
ತಣಕ್ ತಣಕ್ ತನತಣಕ್ ತಣಕ್
ಕಿಣಿ ಕಿಣಿ ಕಿಣಿ ಕಿಣಿ ॥೧॥
ತಣಕ್ ತಣಕ್ ತಣ ತಣಕ್ ತಣಕ್
ಆದಿಶಕ್ತಿ ಓಂಕಾರ ರೂಪಿಣಿ
ಚಂಡಿ ಚಾಮುಂಡಿ ಮಹಿಷಮರ್ಧಿನಿ
ಕಾಲಭೈರವೀ ಅಘನೀವಾರಿಣಿ
ನುಡಿಯಮ್ಮ ತಾಯೆ
ನುಡಿಯಮ್ಮ ದೇವಿ
ಕಿಣಿ ಕಿಣಿ ಕಿಣಿ ಕಿಣಿ ॥೨॥
ತಣಕ್ ತಣಕ್ ತಣಕ್ ತಣಕ್
ಹಕ್ಕಿ ನುಡಿಯುತ್ತಿದೆ ಕೇಳಿರಿ ಎಲ್ಲಾ
ಅದರ ಮಾತು ಎಂದಿಗೂ ಸಟೆಯಲ್ಲ
ಬಡಗ ದಿಕ್ಕಿನಲ್ಲಿ ಚುಕ್ಕಿ ಬಿದ್ದಿತು
ಹೊಸ ಚಂದ್ರ ಮತ್ತೆ ಹುಟ್ಟುವ ಮೊದಲೆ
ಬಿದ್ದೀತು ಒಂದು ಹಿರಿಯ ತಲೆ
ತಣಕ್ ತಣಕ್ ತಣ್ ತಣಕ್ ತಣಕ್"

ಭವಿಷ್ಯವಾಣಿಯಂತಿರುವ ಈ ಹಾಡಲ್ಲಿ ಗಿಳಶಾಸ್ತ್ರ ಅಥವಾ ಬುಡಬುಡಕಿಯವನು ಟಿಪ್ಪು ಮತ್ತು ಮೈಸೂರು ಸಂಸ್ಥಾನಕ್ಕೆ ಮುಂದೆ ಬರುವ ದುಸ್ಥಿತಿಯನ್ನು ಈ ಕೆಳಗಿನಂತೆ ವಿವರಿಸುತ್ತಾನೆ.

ಜಯ ಜಯವಾಗಲಿ ತಂದೆ (ಒಡೆಯ) ಕೈಗೊಳ್ಳುವ ಕಾರ್ಯಗಳಿಗೆಲ್ಲಾ ಜಯ ಒದಗಲಿ ಜನರೆ ನಿಮ್ಮ ಕೆಲಸ ಕೈಗೂಡುವುದಕ್ಕಾಗಿಯೆ ಹಕ್ಕಿ (ಗಿಣಿ) ನುಡಿಯುವುದನ್ನು ನಾ ಹೇಳಲು ಬಂದಿರುವೆ ಎಂದು ರಾಜ ಬೀದಿಯಲ್ಲಿ ಬುಡಬುಡಕಿಯವನು ಬುಡಬುಡಕಿಯನ್ನು ಬಾರಿಸುತ್ತಾ ಜನರ ಮನಸ್ಸನ್ನು ತನ್ನತ್ತಾ ಆಕರ್ಷಿಸುತ್ತಾ ಬರುತ್ತಾನೆ.

ಈ ಭೂಲೋಕಕ್ಕೆಲ್ಲಾ ಆದಿಶಕ್ತಿಯಾಗಿ ದುಷ್ಟಶಕ್ತಿಯ ಸಂಹರಿಸಲು ಬಂದಿರುವ ಓಂಕಾರ ರೂಪಿಣಿಯಾದ ಬೆಟ್ಟದ ಚಾಮುಂಡಿ, ಮಹಿಷಾಸುರರನ್ನು ಸಂಹರಿಸಿ ಶಿಷ್ಟರ ರಕ್ಷಣೆಗಾಗಿ ಅವತರಿಸಿದ ಕಾಲಭೈರವಿ ಅಘನೀವಾರಿಣಿಯೇ ಹೇಳಮ್ಮ ತಾಯೇ, ನುಡಿಯಮ್ಮ ಚಾಮುಂಡಿ ದೇವಿ ಎಂದು ತನ್ನಲ್ಲಿದ್ದ ಗಿಳಿಗೆ ಭಕ್ತಿಯಿಂದ ಹೇಳುತ್ತಾ ಬುಡಬುಡಕಿಯನ್ನು ಬಾರಿಸುತ್ತಾ ಕಿಣಿ ಕಿಣಿ ತಣಕ್ ತಣಕ್ ತಣ್ ತಣಕ್ ಎಂದು ಶಬ್ದ ಮಾಡುತ್ತಾ ಬರುತ್ತಾನೆ. ಆಗ ಗಿಳಿ ಏನೋ ಶಬ್ದ ಮಾಡಿದ್ದನ್ನು ಕೇಳಿ ಜನರತ್ತಾ ಹಕ್ಕಿ ನುಡಿಯುತ್ತಿದೆ. ಕೇಳಿರಿ ಎಲ್ಲಾ, ಅದರ ಮಾತು ಎಂದಿಗೂ ಸುಳ್ಳಾಗಲ್ಲ ಎಂದು ಜನರನ್ನು ತನ್ನತ್ತಾ ಸೆಳೆಯುತ್ತಾ, ಬಡಗಣ ದಿಕ್ಕಿನಲ್ಲಿ ಚುಕ್ಕಿ ಬಿದ್ದಿತು. ಅಂದರೆ ನಕ್ಷತ್ರ ಬಿದ್ದಿತು. ಅದು ಮುಂದುಂಟಾಗುವ ಕೇಡಿನ ಚಿಹ್ನೆ, ಆಪತ್ತು ಸಂಭವಿಸುವ ಮುನ್ನೆಚ್ಚರಿಕೆಯ ರಕ್ತ ಚಿಮ್ಮುತ್ತಾ, ರಕ್ತದ ಮಳೆಯೇ ಆಗುವಂತಿದೆ. ಶಾಂತಿಯ ಪ್ರತಿಬಿಂಬ ಚಂದ್ರ, ಮೂಡುವ ಮೊದಲೇ ಬಿದ್ದಂತಿದೆ. ಆ ದಿಕ್ಕಿನಲ್ಲಿ ಒಂದು ಹಿರಿಯ ತಲೆಯಾದ ಸುಲ್ತಾನ, ರಾಜ ಟಿಪ್ಪುವಿನ ಪ್ರಾಣಕ್ಕೆ ಅಪಾಯ ಉಂಟಾಗುವ ಕಾಲ ಬಂದಿದೆ. ಮೈಸೂರು ಬ್ರಿಟೀಷರ ವಶವಾಗಿ, ಟಿಪ್ಪು ಸಾವನ್ನಪ್ಪುವ ಗಳಿಗೆ ಸಮೀಪಿಸುತ್ತಿದೆ ಎಂದು ಭವಿಷ್ಯವನ್ನು ಹೇಳುತ್ತಾ ಬುಡಬುಡಕಿಯನ್ನು ಪಟಿಸಿ ತಣ್ ತಣ್ ತಣಕ್ ಕಿಣಿ ಕಿಣಿ ಕಿಣಿ ತಣಕ್ ಶಬ್ದಗೈಯುತ್ತಾ ಹಾಡನ್ನು ಹಾಡುತ್ತಾ ಹೋಗುತ್ತಾನೆ.

ಟಿಪ್ಪು ಸುಲ್ತಾನ್ ಬಗೆಗಿನ ಕೋಲಾಟದ ಪದ

"ಏನು ಮೋಸವಾಯಿತು ಸುಲ್ತಾನ ದೌಲತ್
ಯಾರ ಪಾಲಿಗೆ ಸೇರಿತು ॥ ಪಲ್ಲವಿ ॥
ಸುತ್ತಮುತ್ತ ಕಲ್ಲುಕೋಟೆ
ನಡುವೆ ಸುಲ್ತಾನ ಪೇಟೆ

ಪೇಟೆಗೆ ತಕ್ಕಂಥಾ ಟಿಪ್ಪುಸುಲ್ತಾನ್ ಇದ್ದುಕೊಂಡು ॥ಏನು॥
ಆರು ಸಾವಿರ ಗುಂಡಿದ್ದು
ಮೂರು ಸಾವಿರ ದಂಡಿದ್ದು
ದಂಡಿಗೆ ತಕ್ಕಂಥಾ ಟಿಪ್ಪುಸುಲ್ತಾನ್ ಇದ್ದುಕೊಂಡು ॥ಏನು॥
ಪರಂಗಿ ಪಟ್ಟವಾಯ್ತು
ಮೀರು ಸಾಬ್ರು ಕೆಟ್ಟುಹೋದ್ರು
ಮೀರು ಸಾಬ್ರು ಪಟ್ನದೊಳಗೊಂದ್ ಆರು ತಿಂಗಾಳದ್ದುಕೊಂಡು ॥ಏನು॥"

"ಟಿಪ್ಪು ಒಂಟ್ಯಾಗ್ ಮಡ್ಡೋದ್

ಹೈದರಾಲಿ–ಟಿಪ್ಪುಸುಲ್ತಾನ್ ನಮ್ಮ ರಾಜ್ಯವಾಳದರು
ಅನ್ನ–ಬಟ್ಟೆ–ಭೂಮಿಯನು ನಮಗಾಗಿ ನೀಡಿದರು
ಇಂಥ ಅಪ್ಪ–ಮಗನನು ಎಂದ್ಗೂ ನಾವು ಕಾಣೇವು
ತಂದನಯ್ಯಾ ತಂದಾನ ತಂದನಯ್ಯಾ ತಂದನಾ
ತಂದನಯ್ಯಾ ತಂದನಾ ತಂದನಯ್ಯ ತಂದನಾ ॥ ೧ ॥

ಮೂರೂರಿದ್ದ ಮೈಸೂರ್ನ ನೂರಾರ್ ಊರ್ನಾಗ್ ಮಾಡಿದ್ರು
ಕೆರೆ–ಕುಂಟೆ–ಕಟ್ಟೆಗಳನ್ನ ಎಲ್ಲ ಕಡೆ ಕಟ್ಸಿದ್ರು
ಬಂಗಾಳದಿಂದ ರೇಷ್ಮೆಹುಳ ತಂದು ಇಲ್ಲಿ ಸಾಕ್ಬಿಟ್ರು
ತಂದನಯ್ಯಾ ತಂದನಾ ತಂದನಯ್ಯಾ ತಂದನಾ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ ॥ ೨ ॥

ರೈತರ್ಗಾಗಿ ಸಾಲವಾ ಕೊಡೋ ಯಾಚ್ನೆ ಮಾಡಿದ್ರು
ಎಲ್ಲ ರೀತಿ ಬೆಳೆಯ ಬೆಳೀಬೇಕಂತೇಳಿದ್ರು
ಅದನ್ನೆಲ್ಲ ಕೊಡ್ಕೊಂಡು ಬೇರೆ ದೇಶಕ್ಮಾರಿದ್ರು
ತಂದನಯ್ಯಾ ತಂದನಾ ತಂದನಯ್ಯಾ ತಂದನಾ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ ॥ ೩ ॥

ಅದ್ರಿಂದ್ಬಂದ ದುಡ್ತಿಂದು ಬೊಕ್ಕಸಕ್ಕೆ ತುಂಬಿದ್ರು
ಇದನ್ತದ್ದು ಸೈನಿಕರ್ಗೆ ಸಂಬ್ಳ ಅಂತ ಕೊಡ್ತಿದ್ರು
ಇದನ್ಪಡ್ದ ಸೈನಿಕ್ರು ಹುಲ್ಗಳಂತ ಹೋರಾಡ್ತಿದ್ರು
ತಂದನಯ್ಯಾ ತಂದನಾ ತಂದನಯ್ಯಾ ತಂದನಾ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ ॥ ೪ ॥

ಚಿತ್ತೂರನ್ನು ಗೆಲ್ಲೋಕ್ಕೋದ ಹೈದರಾಲಿ ಅಲ್ಲೇ ಮಡ್ದ
ಆಗ ಪಟ್ಣದ್ ಜನ್ಗಳಿಂದ ಟಿಪ್ಪುಸುಲ್ತಾನ್ ದೊರ್ಯಾದ
ಅಪ್ಪನಂತೆ ಮಗ್ನೂ ಕೂಡ ರಾಜ್ಯವಾಳಕ್ ಶುರುಮಾಡಿದ್ದ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ ॥ ೫ ॥

ಬನ್ನೂರು ಕುರಿ, ಕುಣಿಗಲ್ ಕುದ್ರೆ, ತಿರ್ಥಿ ಹಸು ಹಿಡ್ದು ತಂದು
ಅವ್ಗಳ್ನೆಲ್ಲ ಕಸಿ ಮಾಡಿ ಸೈನ್ಯದೊಳ್ಗೆ ಸೇರ್ಸಿಕೊಂಡು
ಭದ್ರವಾದ ಸೈನ್ಯ ಕಟ್ಟಿ ಬ್ರಿಟೀಷರ್ನ ಹೊಡೆಯೊಕ್ಕೋದ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ ॥ ೬ ॥

ಯುದ್ಧದಲ್ಲಿ ಇವನ್ನಡ್ಯೋರು ಬ್ರಿಟೀಷರ್ನ ಅಪ್ಪಿಟ್ಟು
ಆಗ ಟಿಪ್ಪು ಸುಲ್ತಾನು ಸೋತು ಸುಣ್ಣವಾಗ್ಬಿಟ್ಟ
ತನ್ನ ಇಬ್ರು ಮಕ್ಳನೂ ಬ್ರಿಟೀಷರ್ಗೆ ಒಪ್ಸಿಬಿಟ್ಟ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ ॥ ೭ ॥

ಪ್ರಜೆಗಳು ಒಂದಾಗ್ಸೇರಿ ಟಿಪ್ಪುಕೋಟಿ ತಂದ್ಕೊಟ್ರು
ಅದನ್ನೂಡ್ಲೆ ಟಿಪ್ಪುಸುಲ್ತಾನ್ ಬ್ರಿಟೀಷರ್ಗೆ ಬಿಸಾಕ್ಬಿಟ್ಟು
ತನ್ನ ಇಬ್ರು ಮಕ್ಳನ್ನು ಅವರ್ಗಳಿಂದ ಬಿಡ್ಸಿ ತಂದ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ ॥ ೮ ॥

ಮಕ್ಳು ಕಳ್ಸಿದ್ ಬ್ರಿಟೀಷ್ರು ಸುಮ್ನೆ ಕೈಕಟ್ ಕೂರ್ಲಿಲ್ಲ
ಸಿರಿತುಂಬಿದ್ ಪಟ್ಣದ್ ಮ್ಯಾಗೆ ಸೈನ್ಯ ನುಗ್ಸಿ ಬಿಟ್ರಲ್ಲ
ಕೂಡ್ಲೆ ಟಿಪ್ಪು ಕತ್ತಿ ಇಡ್ದು ಬ್ರಿಟೀಷರ್ನ ಕೊಚ್ಚೋಕ್ಕೋದ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ ॥ ೯ ॥

ಟಿಪ್ಪು ಕತ್ತಿ ಇರ್ಕೊಂಡು ಬ್ರಿಟೀಷಿರ್ನಲ್ಲಿ ಕೊಚ್ಚಿದ್ರೆ
ಅವನ್ನಡೆ ಮಂತ್ರಿಗಳೆಲ್ಲ ಬ್ರಿಟೀಷ್ ಜೊತೆ ಸೆರ್ಕಂಡ್ರು

ಕೊನೆಗೊಂಟಿಯಾಗಿದ್ದ ಟಿಪ್ಪು ಅಲ್ಲೋ ಮಡ್ಗೋದ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ
ತಂದನಯ್ಯಾ ತಂದನಾ ತಂದನಯ್ಯಾ ತಂದನಾ ॥ ೧೦॥

ಅನಾಮಧೇಯ ಜನಪದ ಕವಿಯೊಬ್ಬ ಆಡಿರುವ ಟಿಪ್ಪುಸುಲ್ತಾನ್ ಒಂಟ್ಯಾಗ್ ಮಡ್ಗೋದ್ ಎಂಬ ಜನಪದ ಗೀತೆಯನ್ನು ತಲಕಾಡು ಚಿಕ್ಕರಂಗೇಗೌಡ ಅವರು ಸಂಪಾದಿರುವ ಟಿಪ್ಪು ಸುಲ್ತಾನ್ ಕಾಲದ ಪ್ರಸಂಗಗಳು ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ”[೧].

ಈ ಗೀತೆಯಲ್ಲಿ ಜನಪದ ಕವಿ ನಮ್ಮ ರಾಜ್ಯವನ್ನು ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಅಪ್ಪ-ಮಕ್ಕಳು ಆಳಿದರು. ಇವರು ಆಡಳಿತ ನಡೆಸುವಾಗ ಬಡವರಿಗೆ, ಹಸಿದವರಿಗೆ ಅನ್ನ, ಬಟ್ಟೆ ನೀಡಿ ಸಲುಹಿದರು. ಇಂಥ ಕಾರುಣ್ಯವಂತ ಅಪ್ಪ-ಮಗನನ್ನು ನಾವು ಎಂದೋ ಕಾಣೆನಯ್ಯಾ ಎಂದು ಹಾಡುತ್ತಾರೆ. ಅಲ್ಲದೆ ಇವರು ಆಡಳಿತದ ನಡುವೆ ರಾಜ್ಯ ವಿಸ್ತರಿಸುವ ಕಾರ್ಯವನ್ನು ತಮ್ಮ ಶೌರ್ಯ-ಸಾಹಸಗಳಿಂದ ಕೈಗೊಂಡು ಮೂರೂರಿದ್ದ ಮೈಸೂರನ್ನು ನೂರಾರ್ ಊರನ್ನು ಸೇರುವಂತೆ ಗಡಿ ವಿಸ್ತರಿಸಿದ ರೀತಿ, ಕೆರೆಕುಂಟೆ, ಕಟ್ಟೆಗಳು ಮತ್ತು ಭೂಸುಧಾರಣೆಗೆ ರೈತರಿಗಾಗಿ ತಂದ ಯೋಜನೆಗಳು, ಹೊರ ದೇಶದಿಂದ ರೇಷ್ಮೆಹುಳು, ಕೃಷಿಯನ್ನು ಇಲ್ಲಿನ ರೈತರಿಗೆ ಪರಿಚಯಿಸಿದ ಆಧುನಿಕ ಬೇಸಾಯದ ಹರಿಕಾರ ಟಿಪ್ಪುವನ್ನು ಮನತುಂಬಾ ಕೊಂಡಾಡಿದ್ದಾರೆ. ರೈತರಿಗಾಗಿ ಅವರ ಶ್ರೇಯಸ್ಸಿಗಾಗಿ ಬ್ಯಾಂಕ್‌ಗಳನ್ನು ಸ್ಥಾಪಿಸಿ ಸಾಲಕೊಡುವ ಯೋಜನೆ, ಎಲ್ಲಾ ರೀತಿಯ ಮಿಶ್ರ ಬೇಸಾಯ ಪದ್ಧತಿ ಬೆಳೆಯಬೇಕೆಂದು ರೈತರಿಗೆ ಸೂಚಿಸಿ, ಅದನ್ನು ಹೊರ ದೇಶಕ್ಕೆ ಮಾರಿ ಹೆಚ್ಚು ಆದಾಯ ಗಳಿಸುವ ಮಹತ್ವದ ಯೋಜನೆಯನ್ನು ಟಿಪ್ಪು ಜಾರಿಗೆ ತಂದಿದ್ದ. ಕೃಷಿ ಅಭಿವೃದ್ಧಿಯೇ ರಾಜ್ಯದ ಅಭಿವೃದ್ಧಿ ಎಂದರಿತಿದ್ದ ಟಿಪ್ಪು ಕೃಷಿಗೆ ಹೆಚ್ಚು ಮಹತ್ವ ನೀಡಿದ್ದ ಎಂಬುದು ಅರಿವಾಗುತ್ತದೆ. ಸೈನಿಕರಿಗೆ ಹೆಚ್ಚು ಸಂಬಳ ನೀಡಿ ಉತ್ತಮ ಸೈನ್ಯವನ್ನು ಹೊಂದಿದ್ದ, ಸೈನಿಕರು ಹುಲಿಗಳಂತೆ ಹೋರಾಡುತ್ತಿದ್ದರು. ಚಿತ್ತೂರನ್ನು ಗೆದ್ದು ಬರಲು ಹೋದ ಹೈದರಾಲಿ ಅಲ್ಲೇ ವೀರ ಮರಣ ಹೊಂದಿದ. ನಂತರ ಟಿಪ್ಪು ಪಟ್ಟಣದಲ್ಲಿ ದೊರೆಯಾಗಿ, ಪಟ್ಟಣಕ್ಕೆ ಬಂದು, ಅಪ್ಪನಂತೆ ಆತನೂ ರಾಜ್ಯ ಆಳೋಕೆ ಪ್ರಾರಂಭಿಸಿದ. ಈತ ಬ್ರಿಟೀಷರ ವಿರುದ್ಧ ಹೋರಾಡಲು ತನ್ನ ಸೈನ್ಯವನ್ನು ಬಲಿಷ್ಠವಾಗಿ ರೂಪಿಸಿಕೊಳ್ಳಲು ಬನ್ನೂರಿನ ಕುರಿ, ಕುಣಿಗಲ್ ಕುದುರೆ, ತಿರ್ಚಿ ಹಸುಗಳನ್ನು ತಂದು ಅವುಗಳಿಗೆ ಕಸಿ ಮಾಡಿ ಉತ್ತಮ ತಳಿಯ ಗೂಳಿಯನ್ನು, ಕುದುರೆಯನ್ನು ಸೃಷ್ಟಿಸಿ ದಷ್ಟ-ಪುಷ್ಟವಾಗಿ ಸಾಕಿ, ಸೈನ್ಯಕ್ಕೆ ಸೇರಿಸಿಕೊಂಡ ಪ್ರಸಂಗ ಗೀತೆಯಲ್ಲಿದೆ. ಅಲ್ಲದೆ ಯುದ್ಧದಲ್ಲಿ ಇವನ ಸೈನಿಕರೆಲ್ಲಾ ಬ್ರಿಟೀಷರೊಡನೆ ಸೇರಿಕೊಂಡ ಮೋಸಗಾರಿಕೆಯ ಪರಿ, ಟಿಪ್ಪುಸುಲ್ತಾನ ಸೋಲನನುಭವಿಸಿದಾಗ ತನ್ನ ತಾಯಿ ನೆಲದ ಉಳುವಿಗಾಗಿ ಬ್ರಿಟೀಷರಿಗೆ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಳಾಗಿಟ್ಟನು. ಆಗ ಪ್ರಜೆಗಳೆಲ್ಲಾ ಶ್ರೀರಂಗಪಟ್ಟಣಕ್ಕೆ ಬಂದು ಟಿಪ್ಪು

ಆರ್ಥಿಕ ಸಂಕಷ್ಟದಲ್ಲಿದ್ದಾಗ ಸಾವಿರಾರು ಕೋಟಿ ಹಣವನ್ನು ತಂದುಕೊಟ್ಟರು. ನಂತರ ಆ ಹಣವನ್ನು ಟಿಪ್ಪು ಬ್ರಿಟೀಷರಿಗೆ ನೀಡಿ ತನ್ನಿಬ್ಬರು ಮಕ್ಕಳನ್ನು ಅವರಿಂದ ಬಿಡಿಸಿತಂದನು. ನಂತರ ಬ್ರಿಟೀಷರು ಹಣ ಪಡೆದ ಮಾತ್ರಕ್ಕೆ ಸುಮ್ಮನೆ ಕೂರದೆ ಸಿರಿಸಂಪತ್ತು ತುಂಬಿದ ಶ್ರೀರಂಗಪಟ್ಟಣಕ್ಕೆ ಮತ್ತೆ ಮತ್ತೆ ಲಗ್ಗೆ ಹಾಕತೊಡಗಿದರು. ಪಟ್ಟಣವನ್ನು ಮುತ್ತಿಗೆ ಹಾಕಿದರು. ಆಗ ಟಿಪ್ಪು ವೀರಾವೇಶದಿಂದ ಕತ್ತಿಯನ್ನು ಹಿಡಿದು, ಪರಾಕ್ರಮ ಮೆರೆದು ಬ್ರಿಟೀಷರನ್ನು ಸದೆಬಡಿದನು. ಬ್ರಿಟೀಷರೊಡನೆ ಜಂಟಿಯಾಗಿ ಹೋರಾಡುವಾಗ ಅವನೊಡಗಿದ್ದ ಮಂತ್ರಿಗಳೆಲ್ಲಾ ಅನ್ನ ಹಾಕಿದ್ ಮನೆಗೆ ಕನ್ನಾ ಹಾಕಿದಂತೆ ಬ್ರಿಟೀಷರೊಡನೆ ಸೇರಿದರು. "ಟಿಪ್ಪು ಒಬ್ಬಂಟಿಯಾಗಿ ಬ್ರಿಟೀಷರ ಗುಂಡೇಟಿಗೆ ಬಲಿಯಾಗಿ ರಣರಂಗದಲ್ಲಿ ವೀರ ಮರಣವಪ್ಪಿದ ಟಿಪ್ಪು ಕತೆಯ ವ್ಯಥೆಯನ್ನು ಈ ಗೀತೆ ಸಾದರಪಡಿಸುತ್ತದೆ".[೨]

೫.೩ ಕಥನಗಳು

ಜನಪದ ಕಥೆ ಮೂಲತ: ಮುನಷ್ಯನ ವೈಯಕ್ತಿಕ ಹಾಗೂ ಅವಶ್ಯಕತೆಯ ಫಲ. ಮನುಷ್ಯನ ಪುರಾತನ ಸಂಸ್ಕೃತಿ ಮತ್ತು ಸಂಪ್ರದಾಯಗಳ ಮೇಲೆ ಬೆಳಕು ಚಲ್ಲುವ ಕಥೆಗಳನ್ನು ಹೇಳುವ ಮತ್ತು ಕೇಳುವ ಸ್ವಭಾವ ಮಾನವ ಸಮಾಜದಷ್ಟೇ ಪುರಾತನವಾದುದು. ನಿತ್ಯದ ದುಡಿಮೆಯ ಶ್ರಮವನ್ನು ಮರೆಯುವುದಕ್ಕೆ, ಬಿಡುವಿನ ಸಮಯವನ್ನು ನಿರಾಳವಾಗಿ ಕಳೆಯುವುದಕ್ಕೆ, ಬೇಸತ್ತ ಮನಸ್ಸಿಗೆ ರಂಜನೆಯೊದಗಿಸುವುದಕ್ಕೆ, ಮಕ್ಕಳ ತುಂಟಾಟವನ್ನು ನಿಲ್ಲಿಸುವುದಕ್ಕೆ ಹೀಗೆ ನಾನಾ ಉದ್ದೇಶಗಳ ಹಿನ್ನೆಲ್ಲೆಯಲ್ಲಿ ಆದಿಮಾನವನು ಕಥೆ ಹೇಳುವ ಕಲೆಯನ್ನು ರೂಢಿಸಿಕೊಂಡಿರಬೇಕು.

ಕಥಾ ನಿರೂಪಕರ ಕಲ್ಪನೆ ಮತ್ತು ಶ್ರಾವಕರ ಕುತೂಹಲಗಳೆರಡನ್ನೂ ಒಟ್ಟಿಗೆ ಸಾಗಿಸಿಕೊಂಡು ಹೋಗುವ ವಿಶಿಷ್ಟ ಜನಪದ ಪ್ರಕಾರವೇ ಜನಪದ ಕಥೆ. ಇದಕ್ಕೆ ಶಾಸ್ತ್ರೀಯ ಹೆಸರನ್ನು ನೀಡಿ ವೈಜ್ಞಾನಿಕ ಅಧ್ಯಯನಕ್ಕೆ ಒಳಪಡಿಸುವ ಮೊದಲು ಮತ್ತು ಈಗಲೂ ಗ್ರಾಮೀಣ ಅನಕ್ಷರಸ್ಥ ಜನಸಮುದಾಯ ಇದನ್ನು ಕರೆಯುವುದು 'ಅಜ್ಜಿಕಥೆ' ಎಂತಲೇ. ಏಕೆಂದರೆ ಕಥೆ ಹೇಳುವುದರಲ್ಲಿ ಅಜ್ಜಿಯನ್ನು ಮೀರಿಸುವವರಿಲ್ಲ. ಆದರೂ ಕಥೆ ಹೇಳುವುದಕ್ಕೆ ಮತ್ತು ಕೇಳುವುದಕ್ಕೆ ಪುರುಷರು. ಮಹಿಳೆಯರು. ವಯಸ್ಸಾದವರು. ಬಾಲಕರು ಎನ್ನುವ ಬೇಧವಿಲ್ಲ. ಜಗತ್ತಿನಲ್ಲಿ ಮನುಷ್ಯರಿರುವ ಕಡೆಯಲ್ಲೆಲ್ಲ ಈ ಕ್ರಿಯೆ ಏಕಪ್ರಕಾರವಾಗಿ ಕಂಡುಬಂದಿದೆ. ಜಗತ್ತಿನ ಬೇರೆ-ಬೇರೆ ಭಾಗಗಳಲ್ಲಿ ಪ್ರಚಲಿತವಿರುವ ಜನಪದ ಕಥೆಗಳಲ್ಲಿ ಏಕರೂಪತೆ ಇರುವಂತೆ. ಭಿನ್ನತೆಗಳೂ ಇವೆ. ಬಾಯಿಂದ-ಬಾಯಿಗೆ. ತಲೆಮಾರಿನಿಂದ-ತಲೆಮಾರಿಗೆ. ದೇಶದಿಂದ-ದೇಶಕ್ಕೆ ವಾಗ್ರೂಪದಲ್ಲಿ ಹರಿದು ಬರುವುದರಿಂದ ಅವು ನಿರಂತರ ಬದಲಾವಣೆಗಳಗೊಳಗಾಗುತ್ತಲೇ

ಇರುತ್ತವೆ. ಕಥೆಗಳು ಬೇರೆ-ಬೇರೆ ಕಾಲ ಮತ್ತು ಪ್ರದೇಶಗಳಲ್ಲಿ ಬದುಕಬೇಕಾದ್ದರಿಂದ ಭೌಗೋಳಿಕವಾಗಿ ಒಳಗಾಗುವುದು ಸರ್ವೇಸಾಮಾನ್ಯ. ಈ ಕಾರಣದಿಂದಾಗಿ ಜನಪದ ಕಥೆಗಳು ರೂಪದಲ್ಲಿ ವೈವಿಧ್ಯತೆಯನ್ನು ಭೌಗೋಳಿಕವಾಗಿ, ಚಾರಿತ್ರಿಕವಾಗಿ ವಿಸ್ತೃತ ವ್ಯಾಪ್ತಿಯನ್ನು ಪಡೆದುಕೊಂಡಿದೆ.

ಮನುಷ್ಯ ಸಂಸ್ಕೃತಿಯ ವಿಕಾಸದ ವಿವಿದ ಘಟ್ಟಗಳನ್ನು ಅಧ್ಯಯನ ಮಾಡಲು ಕಥೆಗಳು ವಿಫುಲ ಸಾಮಗ್ರಿಯನ್ನು ಒದಗಿಸುತ್ತವೆ. ಮನುಷ್ಯನ ನಂಬಿಕೆಗಳು, ಸಂಪ್ರದಾಯಗಳು, ಆಚಾರ-ವಿಚಾರಗಳು, ಭಾಷಿಕ ವೈವಿಧ್ಯಗಳು, ಅಭಿವ್ಯಕ್ತಿಯ ಸ್ವರೂಪ ಇತ್ಯಾದಿಗಳನ್ನೆಲ್ಲ ಒಳಗೊಂಡಿರುವ ಕಥೆಗಳು ಆದಿಮ ಸಂಸ್ಕೃತಿಯ ವಿಕಾಸದ ಅಭಿವ್ಯಕ್ತಿಗಳಾಗಿವೆ. ಒಬ್ಬ ವ್ಯಕ್ತಿಗೆ ಮೌಖಿಕ ಕೊಡುಗೆಯಾಗಿ ತಲೆ-ತಲಾಂತರಗಳಿಂದ ಹರಿದುಬಂದಿರುವ ಜನಪದ ಕಥೆಗಳ ವಿಶಿಷ್ಟ ಲಕ್ಷಣವೆಂದರೆ ಸಾಂಪ್ರದಾಯಿಕತೆ. ಬಲ್ಲವರಿಂದ ಕಥೆಯನ್ನು ಕೇಳಿದ ಮೇಲೆ ಅದನ್ನು ಹೇಳುವ ಸಂದರ್ಭ, ಅವಶ್ಯಕತೆ ಪ್ರಾಪ್ತವಾದಲ್ಲಿ ಅದನ್ನು ಹೇಗೆ ನೆನಪಿನಲ್ಲುಳಿಸಿಕೊಳ್ಳಲಾಗಿದೆಯೋ ಹಾಗೆಯೇ ಪುನರುಚ್ಛರಿಸಲಾಗುತ್ತದೆ. ಈ ಪುನರುಚ್ಛಾರಣೆಯು ಆಯಾ ಕಥಗಾರನ ನೆನಪಿನ ಶಕ್ತಿ, ಕಲ್ಪನಾ ಸಾಮರ್ಥ್ಯ, ಅನುಭವಗಳನಗನುಗುಣವಾಗಿ ಬೆಳೆಯುತ್ತಾ ಹೋಗುತ್ತದೆ. ಈ ಸಂದರ್ಭದಲ್ಲಿ ಮೂಲ ಕಥೆಯಲ್ಲಿದ್ದ ಕೆಲವು ಅಂಶಗಳು ಕೈಬಿಟ್ಟು ಹೋಗಬಹುದು. ಹೊಸ ಅಂಶಗಳು ಸೇರಿಕೊಳ್ಳಬಹುದು. ಜಗತ್ತಿನ ಎಲ್ಲ ಜನಪದ ಕಥೆಗಳ ಪ್ರಯಾಣ, ಪ್ರವೃತ್ತಿ ಕಾರಣವಿದ್ದಿರಬಹುದು ಅಥವಾ ಕಥೆ ಹೇಳುವ ಮತ್ತು ಕಲ್ಪಿಸಿಕೊಳ್ಳುವ ಮಾನವ ಮೂಲ ಪ್ರವೃತ್ತಿ ಕಾರಣವಿರಬಹುದು. ಇದಕ್ಕೆ ವಿವರಣೆ ಕೊಡುತ್ತಾ Stith Thomson ಅವರು ತಮ್ಮ The Folk Tale ಕೃತಿಯಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ. "The Limitations of human life and the similarity of its basic situations necessarily produce tails everywhere which are much alike in all important structural aspects" ಈ ಲಕ್ಷಣಗಳು ಇದ್ದು, ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು.

ಜನಪದ ಕಥೆ ಇದ್ದಕ್ಕಿದ್ದಂತೆ ಒಂದು ಕ್ರಿಯೆಯಿಂದ ಪ್ರಾರಂಭವಾಗುವುದಿಲ್ಲ ಮತ್ತು ದಿಢೀರನೆ ಮುಕ್ತಾಯಗೊಳ್ಳುವುದಿಲ್ಲ. ಉತ್ಸಾಹವನ್ನು ಕ್ರಮೇಣ ಕೆರಳಿಸಿಕೊಂಡು ಹೋಗಿ, ಭಾವ ತೀವ್ರತೆಗೆ ಕೊಂಡೊಯ್ದು, ಸಾವಧಾನವಾಗಿ ಎಲ್ಲಾ ಕಡೆಯಲ್ಲೂ ಸಾಮಾನ್ಯವಾಗಿ ಕಂಡುಬರುತ್ತದೆ. ಕಥಾನಾಯಕ ಒಳ್ಳೆಯವನು, ಪ್ರತಿನಾಯಕ ದುಷ್ಟನು ಆಗಿರುತ್ತಾನೆ. ಕಥಾರಂಭದಲ್ಲಿ ದುಷ್ಟರಾಗಿದ್ದರು ಕೊನೆಗೆ ಉತ್ತಮರಾಗುತ್ತಾರೆ. ಕಿರಿಯರು, ದುರ್ಬಲರು, ನಿರ್ಲಕ್ಷ್ಯಕ್ಕೆ ಗುರಿಯಾದವರು ಜಯ ಗಳಿಸುತ್ತಾರೆ. ಕಥಾವಸ್ತು ಸರಳವಾಗಿದ್ದು, ಒಂದು

ಕಥೆಯನ್ನು ಮಾತ್ರ ಒಳಗೊಂಡಿರುತ್ತದೆ. ಉಪಕಥೆಗಳಿರುವುದಿಲ್ಲ. ಒಂದು ದೃಶ್ಯದಲ್ಲಿ ಸಾಮಾನ್ಯವಾಗಿ ಇಬ್ಬರು ಮಾತ್ರ ಕಾಣಿಸಿಕೊಳ್ಳುತ್ತಾರೆ. ಹೆಚ್ಚು ಜನರಿದ್ದಲ್ಲಿ ಇಬ್ಬರಷ್ಟೇ ಕ್ರಿಯಾಶೀಲರಾಗಿರುತ್ತಾರೆ. ಜನಪದ ಕಥೆಗಳು ಚಿಕ್ಕವರು-ದೊಡ್ಡವರು, ಮನುಷ್ಯ-ರಾಕ್ಷಸ, ಒಳ್ಳೆಯದು-ಕೆಟ್ಟದ್ದು, ನಾಯಕ-ಪ್ರತಿನಾಯಕ ಮುಂತಾದ ವೈದೃಶ್ಯಗಳಲ್ಲಿ ವ್ಯಕ್ತವಾಗುತ್ತವೆ. ಸ್ವರ್ಗ, ಮರ್ತ್ಯ, ನರಕ ಈ ಮೂರು ಲೋಕಗಳೂ ಕಥೆಯಲ್ಲಿ ಬರುತ್ತವೆ. ಮನುಷ್ಯರ ಜೊತೆಗೆ ದೇವತೆ, ರಾಕ್ಷಸ, ದೆವ್ವ, ಬೇತಾಳ, ಪ್ರಾಣಿಗಳೂ ಪಾತ್ರಗಳಾಗಿ ಕಾಣಿಸಿಕೊಳ್ಳುತ್ತವೆ. ಮಂತ್ರದಂಡ, ಮಾಯಾದ ಚಾಪೆ, ಮಂತ್ರದ ಟೋಪಿ, ಉಂಗುರ, ಕಪ್ಪು ಕನ್ನಡಿ ಇವುಗಳ ಜೊತೆಗೆ ಮಂತ್ರವಾದಿಯ ಕೈವಾಡವೂ ಇರುತ್ತದೆ. ಈ ಎಲ್ಲ ಲಕ್ಷಣಗಳನ್ನು ಗಮನಿಸಿದರೆ ಜನಪದ ಕಥೆಗಳು ಪ್ರಾಚೀನ ಮಾನವನ ಅಪೂರ್ವ ಕಲಾತ್ಮಕ ನಿರೂಪಣೆ ಎನ್ನುವುದರಲ್ಲಿ ಸಂಶಯವಿಲ್ಲ.

ಟಿಪ್ಪುವನ್ನು ಕುರಿತು ಇರುವ ಕಥನಗಳನ್ನು ಕೆಳಕಂಡಂತೆ ಗುರುತಿಸಬಹುದು.

ಟಿಪ್ಪು ಪದದ ಹಿನ್ನೆಲೆ

ಟಿಪ್ಪು ಹೈದರಾಲಿಯ ಎರಡನೇ ಹೆಂಡತಿಯ ಮಗ. ಮೊದಲನೆ ಹೆಂಡತಿಗೆ ಮಕ್ಕಳಾಗದ ಕಾರಣ ೨ನೇ ಹೆಂಡತಿಯಾದ ಫಕ್ರುನ್ನೀಸಾ ಆರ್ಕಾಟಿನ ಮಸ್ತನ್-ಔಲಿಯಾ-ಫಿರ್(ಸಂತ)ನಿಗೆ ಮಕ್ಕಳಾಗಲೆಂದು ಹರಕೆ ಹೊತ್ತಿದ್ದರಿಂದ, ಆತನ ಕೃಪೆಯಿಂದ ಹುಟ್ಟಿದ ಟಿಪ್ಪು ಖ್ಯಾತಿ ಪಡೆದನು. ಆಗ ಟಿಪ್ಪುವಿಗೆ ಫತೇ ಆಲಿಖಾನ್ ಎಂದು ನಾಮಕರಣ ಮಾಡಿದರು ಎಂಬ ಒಂದು ಪ್ರತೀತಿ ಇದೆ.

ಅಲ್ಲದೇ ಒಮ್ಮೆ ಹೈದರಾಲಿಯು ಚಿತ್ರದುರ್ಗದ ನಾಯಕನ ಹಟ್ಟಿಯ ಮೇಲೆ ಆಕ್ರಮಣ ಮಾಡಿದಾಗ ಅಲ್ಲಿನ ಗುರು ತಿಪ್ಪೇರುದ್ರಸ್ವಾಮಿಯ ಪವಾಡಗಳನ್ನು ಕೇಳಿದ ಹೈದರಾಲಿಯು ತಿಪ್ಪೇರುದ್ರಸ್ವಾಮಿಗೆ ಮಕ್ಕಳಾಗುವಂತೆ ಹರಸಿ ಎಂದು ಬೇಡಿಕೊಂಡಿದ್ದರಿಂದ ಟಿಪ್ಪು ಹುಟ್ಟಿದನಂತೆ. ತಿಪ್ಪೇರುದ್ರಸ್ವಾಮಿ ಕೃಪೆಯಿಂದ ತಿಪ್ಪು ಹುಟ್ಟಿದ್ದರಿಂದ ತಿಪ್ಪುವನ್ನು ಟಿಪ್ಪು ಎಂದು ಕರೆಯಲಾಯಿತು ಎಂಬ ಇನ್ನೊಂದು ಪ್ರತೀತಿ ಇದೆ.

ಟಿಪ್ಪು ಪದದ ಅರ್ಥ

ಟಿಪ್ಪು ಎಂದರೆ ಅತ್ಯಂತ ಪ್ರಿಯವಾದ ಸಿಹಿ ಪದಾರ್ಥ ಎಂದರ್ಥ.

ನಿಜವಾದ ಫಕೀರನ ಭವಿಷ್ಯವಾಣಿ

ಟಿಪ್ಪು ತನ್ನ ೧೦ನೇ ವಯಸ್ಸಿನಲ್ಲಿ ಒಂದು ದಿನ ಶ್ರೀರಂಗಪಟ್ಟಣದ ಆಟದ ಮೈದಾನದಲ್ಲಿ ಆಟವಾಡುತ್ತಿದ್ದಾಗ ಒಬ್ಬ ಫಕೀರನು ಅಲ್ಲಿಗೆ ಬಂದನಂತೆ. ಆಟ ಆಡುತ್ತಿದ್ದ ಆ ಬಾಲಕನನ್ನು ದಿಟ್ಟಿಸಿ ನೋಡಿ ಸಮೀಪಕ್ಕೆ ಕರೆದು ಅವನ ಭುಜದ ಮೇಲೆ ಕೈಹಾಕಿ ತಟ್ಟುತ್ತಾ ಮಗು ನಿನ್ನ ಮುಖದ ಮೇಲೆ ರಾಜಕಳೆಯಿದೆ. ನೀ ಮುಂದೆ ಈ ನಾಡನ್ನು ಆಳುವ ರಾಜನಾಗುವೆ. ಆಗ ನಿನಗೆ ರಾಜ್ಯ ಲಭ್ಯವಾಗಿ ರಾಜನಾದರೆ ಈ ಸ್ಥಳದಲ್ಲಿ ಒಂದು ಮಸೀದಿಯನ್ನು ಕಟ್ಟಿಸುವೆಯಾ?" ಎಂದು ಹೇಳಿದನಂತೆ. ಆಗ ಫಕೀರನ ಮಾತಿಗೆ ಪ್ರತ್ಯುತ್ತರವಾಗಿ ಅಗತ್ಯವಾಗಿ ಮಸೀದಿ ಕಟ್ಟಿಸುವೆ ಎಂದನಂತೆ. ಮುಂದೆ ಫಕೀರನ ಭವಿಷ್ಯವಾಣಿ ನಿಜವಾಗಿ ಟಿಪ್ಪು ಮೈಸೂರು ರಾಜ್ಯಕ್ಕೆ ಒಡೆಯನಾದ ಮೇಲೆ ಶ್ರೀರಂಗಪಟ್ಟಣದ ಆ ಮೈದಾನದಲ್ಲಿ ಒಂದು ಭವ್ಯವಾದ ಮಸೀದಿಯನ್ನು ಕಟ್ಟಿಸಿದನು ಎಂಬುದೊಂದು ಪ್ರತೀತಿಯಿದೆ. ಅದಕ್ಕೆ ಸಾಕ್ಷಿಯಂತೆ ಶ್ರೀರಂಗಪಟ್ಟಣದಲ್ಲಿ ಇಂದಿಗೂ ಎತ್ತರವಾದ ಮಿನಾರುಗಳಿಂದ ಕೂಡಿರುವ ಭವ್ಯವಾದ ಮಸೀದಿ ಮಸ್‌ಜಿದ್-ಎ-ಅಲಾ ಆಕರ್ಷಣೀಯವಾಗಿದೆ.

೧. ಟಿಪ್ಪು ಮೈಸೂರು ಹುಲಿ ಆದ ಬಗೆ

ಒಂದು ದಿನ ಒಬ್ಬ ಪ್ರೆಂಚ್ ಕಪ್ತಾನನು ಹಾಗೂ ಟಿಪ್ಪುವು ಹುಲಿಯ ಬೇಟೆಗಾಗಿ ಕಾಡಿಗೆ ಹೋಗಿದ್ದರು. ಎಷ್ಟು ಹೊತ್ತಾದರೂ ಬೇಟೆ ಸಿಗಲಿಲ್ಲ. ಕಾದು ಕಾದು ಬೇಸತ್ತರು. ಸಂಜೆಯಾಗುತ್ತಾ ಬಂದಿತು. ಇನ್ನು ಕಾಡಿನಲ್ಲಿ ಕಾಲ ಕಳೆಯುವುದು ಒಳ್ಳೆಯದಲ್ಲ ಎಂದು ಯೋಚಿಸಿ, ಅವರು ಶ್ರೀರಂಗಪಟ್ಟಣಕ್ಕೆ ಹಿಂತಿರುಗುತ್ತಿದ್ದರು. ಆ ಕ್ಷಣದಲ್ಲಿ ಎದುರಿಗಿದ್ದ ಪೊದೆಯಲ್ಲಿ ಸರ್ರನೆ ಶಬ್ದವಾಯಿತು. ಅತ್ತ ನೋಡುತ್ತಾರೆ ಕೆಂಡದಂತಹ ಕಣ್ಣುಗಳ ವ್ಯಾಘ್ರ ಇವರನ್ನೇ ನೋಡುತ್ತಾ ಹೊಂಚು ಹಾಕಿ ನಿಂತಿರುವಾಗ ಹುಲಿಯನ್ನು ಕಂಡ ತಕ್ಷಣವೇ ಪ್ರೆಂಚ್ ಕಪ್ತಾನನು ತನ್ನ ಬಂದೂಕನ್ನು ಎತ್ತಿ. ಅದರ ಕಡೆಗೆ ಗುರಿ ಹಿಡಿದನು. ಆಗ ಅವನನ್ನು ತಡೆದು ಹುಲಿಯನ್ನು ಬೇಟೆ ಆಡುವುದು ಹಾಗಲ್ಲ ಮೆಸ್ಸೆಯರ್ ಎಂದು ಹೇಳುತ್ತಿದ್ದಂತೆ ಹುಲಿ ಅವನ ಮೇಲೆ ಎರಗಿತ್ತಂತೆ. ಅರೆ ಕ್ಷಣದಲ್ಲಿಯೇ ಟಿಪ್ಪು ಕಿಸೆಯಿಂದ ಕತ್ತಿಯನ್ನೆಳೆದು ಮೇಲೆ ಬೀಳುತ್ತಿದ್ದ ಹುಲಿಯ ಎದೆಗೆ ಬಲವಾಗಿ ತಿವಿದನು. ಹುಲಿಯು ಘರ್ಜಿಸುತ್ತಾ ಕೆಳಕ್ಕೆ ಬಿದ್ದಿತು. ರೆಪ್ಪೆ ಹೊಡೆದು ಕಣ್ಣು ತೆರೆದು ನೋಡುವಷ್ಟರಲ್ಲಿ ಟಿಪ್ಪು ಕತ್ತಿಯಿಂದ ಅದರ ಮುಖಕ್ಕೆ ಬಲವಾಗಿ ಹೊಡೆದನು. ಹುಲಿಯ ಮೈಯೆಲ್ಲಾ ರಕ್ತವಾಯಿತು. ಆದರೂ ಹುಲಿ ಮತ್ತೊಮ್ಮೆ ಛಂಗನೆ ಹಾರಿಬಂದು ಟಿಪ್ಪುವನ್ನು ಅಪ್ಪಳಿಸಿತು. ಟಿಪ್ಪು ಕೆಳಗೆ ಬಿದ್ದನು. ಹುಲಿಯು ಘರ್ಜಿಸುತ್ತಾ ಅವನನ್ನು ಕಚ್ಚಿತು. ಪರಚಿ ಎರಗಿತು. ಆಗ ಸಾವಿನ ದವಡೆಯಲ್ಲಿದ್ದ ಟಿಪ್ಪು ಧೈರ್ಯದಿಂದ ಎದೆಗುಂದದೆ ಸರ್ರನೆ

ಪಕ್ಕಕ್ಕೆ ಉರುಳಿ ಎದ್ದುನಿಂತು, ಮಂಡಿಯೂರಿ ಕತ್ತಿಯಿಂದ ಬಲವಾಗಿ ಮತ್ತೊಮ್ಮೆ ಅದರ ಮುಖಕ್ಕೆ ಹೊಡೆದನು. ಹುಲಿ ಘರ್ಜಿಸುತ್ತಾ ಮುನ್ನುಗ್ಗಿ ಮುಂಗಾಲಿನಿಂದ ಅವನನ್ನು ಝಾಡಿಸಿತು. ಅದರ ಪೆಟ್ಟಿನ ರಭಸಕ್ಕೆ ಅವನ ಕಡೆಗೆ ಬರುತ್ತಿದ್ದ ಸಮಯ ಕಾಯುತ್ತಿದ್ದ ಟಿಪ್ಪು ಅದರ ದವಡೆಯಲ್ಲಿ ಎಡ ಕೈಯನ್ನು ಒಡ್ಡಿ ಬಲಮುಷ್ಠಿಯಿಂದ ಬಲವಾಗಿ ಕಣ್ಣಿಗೆ ಹೊಡೆದನು. ಅದರ ದವಡೆ ಸೀಳಿದನು. ಹುಲಿ ಸತ್ತಿತು. ಇದರ ಕಳೇಬರವನ್ನು ಬಂಡಿಯಲ್ಲಿರಿಸಿ, ಶ್ರೀರಂಗಪಟ್ಟಣದ ಬೀದಿ-ಬೀದಿಗಳಲ್ಲಿ ಮೆರೆವಣಿಗೆ ಮಾಡಲಾಯಿತು. ಜನರು ನಿಬ್ಬೆರಗಾಗಿ ಹುಲಿಯ ಜೊತೆ ಹೋರಾಡಿದ ಟಿಪ್ಪುವಿಗೆ 'ಮೈಸೂರು ಹುಲಿ' ಎಂದು ಕರೆದರಂತೆ.

ಟಿಪ್ಪುವಿಗೆ ಸಂಬಂಧಿಸಿದ ಇತರೆ ಕಥೆಗಳು

ಅ. ಕಿತ್ತೂರಿನ ಮುಕ್ತಿ

ಕಿತ್ತೂರು ಪ್ರತಾಪ್‌ರಾವ್ ಮಲ್ಲಸರ್ಜನ ಕಾಲದಲ್ಲಿ ಅತ್ಯಂತ ಸಂಪದ್ಭರಿತವಾಗಿತ್ತು. ಟಿಪ್ಪು ಒಂದೊಂದೇ ರಾಜ್ಯವನ್ನು ವಶಪಡಿಸಿಕೊಂಡರೂ ಸಹ ಕಿತ್ತೂರನ್ನು ಮಾತ್ರ ವಶಪಡಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ಟಿಪ್ಪು ತನ್ನ ಸೇನಾನಿಯಾದ ಬುರ್ಹಾ ಖಾನ್‌ನನ್ನು ಕಿತ್ತೂರನ್ನು ಗೆದ್ದುಕೊಂಡು ಬರಲು ಮತ್ತು ಕಪ್ಪ ಕಾಣಿಕೆಗಳನ್ನು ಕೊಡುವಂತೆ ಮಾಡಲು ಸೈನ್ಯ ಸಮೇತ ಕಳುಹಿಸಿದನು. ಮಲ್ಲಸರ್ಜನು ೧೨ ಸಾವಿರ ಸೈನ್ಯವನ್ನು ಹೊಂದಿ ಕೋಟೆಯನ್ನು ಭದ್ರಪಡಿಸಿದ್ದನು. ಯಾವುದೇ ಆತಂಕವಿಲ್ಲದೇ ರಾಜ್ಯಭಾರವನ್ನು ನಡೆಸುತ್ತಿದ್ದನು. ಮಲ್ಲಸರ್ಜನ ಹಿರಿಯ ರಾಣಿ ರುದ್ರವ್ವ ಶಿವರುದ್ರನೆಂಬ ಬಾಲಕನನ್ನು ದತ್ತು ತೆಗೆದುಕೊಂಡಿದ್ದಳು. ಶಿವರುದ್ರನನ್ನು ಎಲ್ಲರೂ ಪ್ರೀತಿಯಿಂದ ಬಾಪುಸಾಹೇಬನೆಂದು ಕರೆಯುತ್ತಿದ್ದರು. ಮಲ್ಲಸರ್ಜನು ಕಲ್ಲು ಮಠದ ಶ್ರೀ ಗುರುಸಿದ್ಧ ಸ್ವಾಮಿಗಳಲ್ಲಿ ಅಪಾರ ಭಕ್ತಿ ಹೊಂದಿದ್ದನು. ಗುರುಸಿದ್ಧಸ್ವಾಮಿಗಳು ಮಲ್ಲಸರ್ಜನನ್ನು ಬರಹೇಳಿದ್ದರಿಂದ, ಅವರನ್ನು ಕಾಣಲು ಮಲ್ಲಸರ್ಜನು ಮಗನನ್ನು ಕರೆದುಕೊಂಡು ಮಠಕ್ಕೆ ಹೋದನು. ಮಲ್ಲಸರ್ಜನು ಬರಹೇಳಲು ಕಾರಣವೇನೆಂದು ಕೇಳಿದಾಗ ಗುರುಸಿದ್ಧಸ್ವಾಮಿಗಳು ತಮಗೆ ಹಿಂದಿನ ರಾತ್ರಿ ಬಿದ್ದ ಕನಸನ್ನು ಕುರಿತು ಹೇಳಿದರು. 'ನೀವು ಶಿವಪೂಜೆಗೆ ಕೂತು ಶಿವನಿಗೆ ಅರ್ಪಿಸಿದ ಹೂ, ಬಿಲ್ಲುಪತ್ರೆಗಳು, ಅಂಗದ ಮೇಲೆ ಕೂರದೆ ಗಾಳಿಗೆ ಹಾರಿಹೋದವು. ಇದು ಮುಂದೆ ನಿಮ್ಮ ರಾಜ್ಯಕ್ಕೆ ಆಪತ್ತು ಬರುವುದನ್ನು ಸೂಚಿಸುತ್ತದೆ' ಎಂದರು. ಗುರುಗಳ ಮಾತು ಅಕ್ಷರಶಃ ನಿಜವಾಯಿತು. ಟಿಪ್ಪು ಸೈನ್ಯವು ಬಾದಾಮಿ, ಧಾರವಾಡಗಳನ್ನು ಗೆದ್ದು, ಕಿತ್ತೂರಿಗೆ ಮುತ್ತಿಗೆ ಹಾಕಿತು. ಮಲ್ಲಸರ್ಜನು ಕೋಟೆಯನ್ನು ಎಷ್ಟೇ ಭದ್ರಪಡಿಸಿದರೂ ಯುದ್ಧದಲ್ಲಿ ಸಮರ್ಥವಾಗಿ ಹೋರಾಡಿದರೂ ಯಶಸ್ಸನ್ನು ಕಾಣದೇ ಬರ್ಹಾ ಮುದ್ದೀನನಿಗೆ ಸೆರೆಯಾದನು. ಟಿಪ್ಪು ಸೆರೆ ಸಿಕ್ಕ ಮಲ್ಲಸರ್ಜನನ್ನು ಶ್ರೀರಂಗಪಟ್ಟಣದ

ಕೋಟೆಯಲ್ಲಿ ಸ್ವಲ್ಪ ದಿನ ಸೆರೆಯಲ್ಲಿಟ್ಟು. ನಂತರ ಕೊಪ್ಪಳ ಕೋಟೆಯಲ್ಲಿ ಸೈನಿಕರ ಸರ್ಪಕಾವಲಿನಲ್ಲಿರಿಸಿದನು.

ಒಮ್ಮೆ ಮಲ್ಲಸರ್ಜನು ಕೋಟೆಯ ಬುರುಜಿನ ಮೇಲೆ ಶ್ರಮದಾಯಕ ಕೆಲಸ ಮಾಡುತ್ತಿರುವಾಗ ಪಾರಿವಾಳವೊಂದು ಪತ್ರವನ್ನು ತಂದು ಮಲ್ಲಸರ್ಜನಿಗೆ ನೀಡಿತು. ಅದರಲ್ಲಿ ಗುರುಗಳು ನೀನು ಇಷ್ಟರಲ್ಲಿಯೇ ತಪ್ಪಿಸಿಕೊಂಡು ಬರಲು ಅವಕಾಶವಿದೆ. ನಿನ್ನ ಬರುವಿಕೆಗಾಗಿ ನಾವೆಲ್ಲರೂ ಕಾಯುತ್ತಿದ್ದೇವೆ ಎಂದು ಸುಳಿವು ನೀಡಿದ್ದರು. ಅದರಂತೆ ಲಾರ್ಡ್ ಕಾರ್ನ್‌ವಾಲೀಸ್ ಬೆಂಗಳೂರನ್ನು ಗೆದ್ದು, ಶ್ರೀರಂಗಪಟ್ಟಣದ ಕೋಟೆ ಮೇಲೆ ಆಕ್ರಮಣ ಮಾಡಿದನು. ಟಿಪ್ಪು ಚದುರಿದ ಸೈವನ್ನು ಸಂಘಟಿಸುವಲ್ಲಿ ಕಾರ್ಯಗತನಾಗಿದ್ದನು. ಇದೇ ಸಂದರ್ಭವನ್ನರಿತ ಮಲ್ಲಸರ್ಜನು ಕೊಪ್ಪಳ ಕೋಟೆಯಿಂದ ತಪ್ಪಿಸಿಕೊಂಡು ಕೋಹಿನೂರು ಎಂಬ ಹಳ್ಳಿಗೆ ಬಂದು ಸೇರಿದನು. ತದನಂತರ ತಾನು ತಪ್ಪಿಸಿಕೊಂಡು ಬಂದಿರುವ ವಿಚಾರವನ್ನು ಪತ್ರದ ಮುಖಾಂತರ ಗುರುಗಳಿಗೆ ರವಾನಿಸಿದನು. ವಿಷಯ ತಿಳಿದ ಗುರುಗಳು ಮಲ್ಲಸರ್ಜನ ಬರುವಿಕೆಯಿಂದ ಸಂತೋಷಗೊಂಡು ಸ್ವಾಗತಕ್ಕೆ ಸಿದ್ಧತೆಗಳನ್ನು ಮಾಡಿಕೊಂಡರು. ಮಲ್ಲಸರ್ಜ ಕಿತ್ತೂರು ತಲುಪಿದ ಮೇಲೆ ಶುಭದಿನದಂದು ಕಿತ್ತೂರು ಸಿಂಹಾಸನರೂಢನಾದನು. ಕಿತ್ತೂರು ಟಿಪ್ಪುವಿನಿಂದ ಮುಕ್ತಿ ಪಡೆಯಿತು.

ಆ. ಹುಲಿಕಲ್ಲು ದುರ್ಗದ ಹುಲಿ

ಹುಲಿಕಲ್ಲಿನ ಪಾಳೆಯಗಾರ ಮುದ್ದುಕೃಷ್ಣೇಗೌಡನಿಗೆ ಮೈಸೂರಿನ ಕೃಷ್ಣರಾಜ ಒಡೆಯರು ದಸರಾ ಹಬ್ಬಕ್ಕೆ ಆಹ್ವಾನಿಸಿದರು. ತಿರುಮಲೆಯಲ್ಲಿ ಆಕಸ್ಮಿಕವಾಗಿ ಮುದ್ದಪ್ಪಗೌಡರ ಪರಿಚಯ ಒಡೆಯರಿಗೆ ಆಗಿತ್ತು. ದಸರೆಗೆ ಮುದ್ದುಕೃಷ್ಣೇಗೌಡ ಆನೆ ಮತ್ತು ಕುದುರೆಗಳನ್ನು ಕಳುಹಿಸಿಕೊಟ್ಟಿದ್ದನು. ಆದರೆ ಅಶ್ವಶಾಲೆಯಲ್ಲಿನ ಕುದುರೆಯೊಂದು ಯಾರನ್ನು ಹತ್ತಿರಕ್ಕೆ ಸೇರಿಸುತ್ತಿರಲಿಲ್ಲ. ಸದಾ ಒಂಟಿಯಾಗಿರುತ್ತಿತ್ತು. ಎಲ್ಲರ ತಿರಸ್ಕಾರಕ್ಕೆ ಒಳಪಟ್ಟಿತ್ತು. ಈ ಕುದುರೆಯನ್ನು ಬೇರೊಂದು ಲಾಯದಲ್ಲಿ ಇರಿಸಿದ್ದರು. ಈ ಕುದುರೆಯ ಬಗ್ಗೆ ಒಡೆಯರು ಜೋಯಿಸರನ್ನು ಕೇಳಿದಾಗ ಇದು ದೇವಾಂಶ ಸಂಭೂತದ ಕುದುರೆ ಯಾವುದೋ ಶಾಪಕ್ಕೆ ಗುರಿಯಾಗಿದೆ. ಇದನ್ನು ಯಾವುದಾದರೂ ದೇವಾಲಯೊಂದಕ್ಕೆ ಕಾಣಿಕೆಯಾಗಿ ಕೊಟ್ಟು ಬಿಡಿ ಎಂದರು. ಈ ಕುದುರೆಯನ್ನು ತಿರುಮಲೆ ರಂಗನಾಥ ಸ್ವಾಮಿಗೆ ಕಾಣಿಕೆಯಾಗಿ ನೀಡಿದರು. ಈ ಕುದುರೆಯನ್ನು ಯಾರೋ ಕಳ್ಳರು ಅಪಹರಿಸಿದ್ದರು. ಮುದ್ದುಕೃಷ್ಣೇಗೌಡನು ತನ್ನ ಅಶ್ವಬಲದ ಚಾಣಾಕ್ಷತನದಿಂದ ಆ ಕುದುರೆಯನ್ನು ಬಿಡಿಸಿಕೊಂಡು ಬಂದು ತಿರುಮಲೆಗೆ ಒಪ್ಪಿಸಿದ. ಜೊತೆಗೆ ಕುದುರೆಯ ಹೃದಯವನ್ನು ಗೆದ್ದಿದ್ದನು.

ಒಮ್ಮೆ ಮುದ್ದುಕೃಷ್ಣೇಗೌಡರು ತಿರುಮಲೆ ರಥೋತ್ಸವಕ್ಕೆ ಬಂದಾಗ ಗಜಗಳ ಜೊತೆಯಲ್ಲಿ ಸಾಗುತ್ತಿದ್ದ ಈ ಕುದುರೆಯು ಮುದ್ದಪ್ಪಗೌಡರನ್ನು ದೂರದಿಂದಲೇ ನೋಡಿ ಛಂಗನೇ ಹಾರಿ ಅವರ ಬಳ ಹೋಯಿತು. ಇದರಿಂದ ಒಡೆಯರು ಆಶ್ಚರ್ಯ ಚಕಿತರಾದರು. ಇದರಿಂದ ಇವರ ಸ್ನೇಹ ಇಮ್ಮಡಿಸಿತು. ಅಂದಿನಿಂದ ಒಡೆಯರು ಮುದ್ದುಕೃಷ್ಣೇಗೌಡರಿಗೆ ಖಿಲ್ಲತ್ತುಗಳನ್ನು ಕಪ್ಪ ಕಾಣಿಕೆಗಳನ್ನು, ವರ್ಷಕ್ಕೆ ಐದುನೂರು ವರಹಗಳ ಪೊಗದಿಯನ್ನು ನೀಡಿದರು. ಮುದ್ದುಕೃಷ್ಣೇಗೌಡರ ಮರಣನಂತರ ಅವನ ಮಗ ಮುದ್ದಪ್ಪಗೌಡ ರಾಜನಾದನು. ಇವನ ಕಾಲದಲ್ಲಿ ಹೈದರಾಲಿಯು ಹುಲಿಕಲ್ಲಿಗೆ ಕೊಡಬೇಕಾಗಿದ್ದ ಪೊಗದಿಯನ್ನು ಒಂದು ಸಾವಿರಕ್ಕೆ ಹೆಚ್ಚಿಸಿದನು. ಇದನ್ನು ಟಿಪ್ಪು ಸಹಿಸದಾದನು. ಮುದ್ದಪ್ಪಗೌಡನನ್ನು ಹೇಗಾದರೂ ಯುದ್ಧದಲ್ಲಿ ಸೋಲಿಸಿ ಶ್ರೀರಂಗಪಟ್ಟಣ ಕೋಟೆಯಲ್ಲಿ ಬಂಧಿಯಲ್ಲಿರಿಸಬೇಕೆಂದು ಯೋಚಿಸಿದನು. ಅದರಂತೆ ಮುದ್ದಪ್ಪಗೌಡ ಶ್ರೀರಂಗಪಟ್ಟಣಕ್ಕೆ ಬರುವಂತೆ ಕೋರಿ ಟಿಪ್ಪು ಪತ್ರ ಬರೆದು ಕಳುಹಿಸಿದನು. ಟಿಪ್ಪುವಿನ ಆಜ್ಞೆಯಂತೆ ಮುದ್ದಪ್ಪಗೌಡ ಹೊರಡಲು ಸಿದ್ಧನಾಗಿರುವಾಗ ಹೆಂಡತಿಯಾದ ಕೆಂಪರಾಜಮ್ಮ ಹೋಗಬಾರದೆಂದು ತಿಳಿಸಿ, ಹಿಂದಿನ ರಾತ್ರಿ ಬಿದ್ದ ಕನಸನ್ನು ವಿವರಿಸಿ ಹೇಳಿದಳು. ತಮ್ಮ ಅರಮನೆಯು ಬಿದ್ದು ಹೋಗಿ, ಅದರಲ್ಲಿ ಬಾವಲಿಗಳು ಸೇರಿದವು. ಈ ಕನಸಿನ ಅರ್ಥವನ್ನು ಜೋಯಿಸರ ಬಳಿಗೆ ಕೇಳಿದಾಗ ಮುದ್ದಪ್ಪಗೌಡ ಶ್ರೀರಂಗಪಟ್ಟಣಕ್ಕೆ ಹೋದರೆ ಅಶುಭವಾಗುವುದೆಂದು ತಿಳಿಸಿದರು ಎಂದು ಕೆಂಪರಾಜಮ್ಮ ಹೇಳಿದಳು. ಈ ವಿಷಯ ತಿಳಿದ ಟಿಪ್ಪು ಘರ್ಜಿಸಿ ಸೈನ್ಯ ಸಮೇತ ಹೊರಟು, ಮುದ್ದಪ್ಪಗೌಡನನ್ನು ಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ಕರೆದೊಯ್ದನು. ಮುದ್ದಪ್ಪಗೌಡನನ್ನು ಕರೆಯಿಸಿ ನಮ್ಮ ಆಜ್ಞೆಯನ್ನು ತಿರಸ್ಕರಿಸುವಷ್ಟು ಸೊಕ್ಕೇ ನಿನಗೆ? ಯಾರಲ್ಲಿ? ನಾಳಿನ ಬೆಳಗಿನ ಜಾವ ಇವನನ್ನು ಹುಲಿಯ ಬಾಯಿಗೆ ತಳ್ಳಿರಿ ಎಂದು ಆಜ್ಞೆ ಮಾಡಿದನು. ಮುದ್ದಪ್ಪಗೌಡನು ಹೇಡಿಯಂತೆ ಸಾಯುವುದಕ್ಕಿಂತ ಹುಲಿಯೊಂದಿಗೆ ಹೋರಾಡಿ ವೀರಮರಣವನ್ನು ಅಪ್ಪುವುದು ಒಳ್ಳೆಯದೆಂದು ತಿಳಿದು, ಸೆರೆಮನೆಯಲ್ಲಿ ಒರಗಿ ಮಲಗಿದನು. ಮುದ್ದಪ್ಪಗೌಡನು ಮಲಗುತ್ತಲೇ ತನ್ನ ವಂಶಸ್ಥರ ಶೌರ್ಯ, ಪರಾಕ್ರಮಗಳನ್ನು ಮತ್ತು ಸಾಮಾನ್ಯ ಗೂಳಿಯೊಂದು ಹುಲಿಯನ್ನು ಕೊಂದಿದ್ದರಿಂದಲೇ ಹುಲಿಕಲ್ಲು ದುರ್ಗವೆಂದು ಹೆಸರು ಪಡೆದುದನ್ನು ನೆನಪಿಸಿಕೊಂಡನು. ಇದರಿಂದ ಪ್ರೇರಣೆ ಪಡೆದನು.

ಮಾರನೆಯ ದಿನ ಟಿಪ್ಪು ಮುದ್ದಪ್ಪಗೌಡನನ್ನು ಹುಲಿಯ ಬಾಯಿಗೆ ನೂಕಿದನು. ಮುದ್ದಪ್ಪಗೌಡ ತನ್ನ ಮನೆತನದ ಹೆಸರನ್ನು ನೆನೆದು, ಹುಲಿಯನ್ನು ಬಲವಾದ ಮುಷ್ಠಿಯಿಂದ ಹೊಡೆದನು. ಎರಡು ಕೈಗಳಿಂದ ಅದರ ಬಾಯಿಯನ್ನು ಸೀಳಿದನು. ಹುಲಿಯು ನೋವಿನಿಂದ ಚೀರಿ, ಮುದ್ದಪ್ಪಗೌಡನ ಮುಷ್ಠಿಯಿಂದ ಬಿಡಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ ತಲೆಸುತ್ತಿ ಬಿದ್ದಿತು.

ಮುದ್ದಪ್ಪಗೌಡನ ಹೋರಾಟದಿಂದ ಟಿಪ್ಪು ಆನಂದಿಸಿದನು. ಅವನ ಧೈರ್ಯ, ಸಾಹಸವನ್ನು ಕೊಂಡಾಡಿದನು. ಅವನನ್ನು ಒಂದು ತಿಂಗಳ ಕಾಲ ಶ್ರೀರಂಗಪಟ್ಟಣದಲ್ಲಿ ಇರಿಸಿಕೊಂಡು ಸತ್ಕರಿಸಿದನು. ಮುದ್ದಪ್ಪಗೌಡನು ಹುಲಿಯೊಂದಿಗೆ ಸೆಣಸಿದ್ದರಿಂದ ಜನರು ಅವನನ್ನು ಹುಲಿಕಲ್ಲು ದುರ್ಗದ ಹುಲಿ ಎಂದೇ ಕರೆಯತೊಡಗಿದರು.

ಇ. ಉತ್ತರ ದುರ್ಗದ ಹುಲಿ

ಎರಡನೆಯ ಮೈಸೂರು ಯುದ್ಧದ ಸಂದರ್ಭದಲ್ಲಿ ಹೈದರಾಲಿಗೆ ಅಡ್ಮಿರಲ್ ಸುಫರಿನ್ ಹ್ಯಾನಿಸಿಬಲ್ ಹಡಗಿನ ೧೨ ಮಂದಿ ನಾವಿಕರನ್ನು ಒಪ್ಪಿಸಿದನು. ಹೈದರಾಲಿಯು ಇವರನ್ನು ದುರ್ಗಮ ಕೋಟೆ ಎನಿಸಿದ ಉತ್ತರ ದುರ್ಗದ ಕೋಟೆಯಲ್ಲಿ ಸೆರೆಯಲ್ಲಿಟ್ಟನು. ಹೈದರಾಲಿಯು ಬೆನ್ನುಫಣಿಯಿಂದ ಮರಣ ಹೊಂದಿದನು. ಟಿಪ್ಪು ಅಧಿಕಾರಕ್ಕೆ ಬಂದರೂ ಈ ನಾವಿಕರು ಪ್ರಪಂಚದ ಸಂಪರ್ಕವಿಲ್ಲದೆಯೇ ಸೆರೆಮನೆಯಲ್ಲಿಯೇ ಇದ್ದರು. ಇವರಿಗೆ ಕಾಡಮನ್ ನಾಯಕರಾಗಿದ್ದನು. ಎಷ್ಟೋ ಖಿಲ್ಲೇದಾರರು ಬಂದು ಹೋಗಿದ್ದರೂ ಖಾಸಿಂ ಅಲಿ ಬೇಗ್ ಖಿಲ್ಲೇದಾರ್ ಮಾತ್ರ ವಿಚಿತ್ರ ವ್ಯಕ್ತಿಯಾಗಿದ್ದನು. ಎಲ್ಲಾ ನಾವಿಕರು ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದರೆ ಮಾತ್ರ ಬಿಡುಗಡೆ ಎಂದಿದ್ದನು. ಕಾಡ್‌ಮನ್ ಸೇರಿದಂತೆ ಉಳಿದ ೧೧ ಮಂದಿ ಕ್ರೈಸ್ತರಾಗಿದ್ದರು. ಖಾಸಿಂ ಬೇಗ್ ೨೪ ಗಂಟೆಯೊಳಗೆ ನಿರ್ಧಾರ ತಿಳಿಸಬೇಕೆಂದು ಅಲ್ಲಿಂದ ಹೊರಟು ಹೋದನು. ಮಾರನೆಯ ದಿನ ಖಾಸಿಂ ಬೇಗ್ ಕೇಳಿದಾಗ ೧೨ ಜನ ನಾವಿಕರು ಕ್ರೈಸ್ತರಾಗಿ ಉಳಿಯುತ್ತೇವೆ ವಿನಾ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಲ್ಲ ಎಂದು ಹೇಳಿದಾಗ ಇವರಿಗೆ ಅನ್ನ, ನೀರು ಕೊಡದಂತೆ ಇಸ್ಲಾಂ ಧರ್ಮದ ಉಪದೇಶ ಬೋಧಿಸಿರಿ ಎಂದು ಬೇಗ್ ಆಜ್ಞೆ ಮಾಡಿದ.

ಇವರು ಸೆರೆಯಲ್ಲಿದ್ದ ಕೋಣೆಯು ಕಗ್ಗತ್ತಲ ಕೋಣೆಯಾಗಿ ಸೂರ್ಯನ ಕಿರಣ ಕೂಡ ಪ್ರವೇಶಿಸದೆ ದುರ್ಗಂಧದ ವಾಸನೆ ಬೀರುತ್ತಿತ್ತು. ೫ ವರ್ಷಗಳಿಂದ ಇವರು ಸೆರೆವಾಸದಲ್ಲಿದ್ದು, ಜೀವಂತವಾಗಿದ್ದರೂ ಕೂಡ ಸತ್ತ ಶವಗಳಂತೆ ಆಗಿದ್ದರು. ಕೆಲ ನಾಯಕರು ಎಷ್ಟು ವರ್ಷಗಳು ಈ ಸೆರೆಮನೆಯಲ್ಲಿರುವುದು? ಬದುಕುವಷ್ಟು ದಿನವಾದರೂ ಕೂಡ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿ ಬದುಕುವುದೇ ಲೇಸೆಂದೂ, ಮತ್ತೆ ಕೆಲವರು ಹೀಗೆ ಹೀನಾಯವಾಗಿ ಬದುಕುವುದಕ್ಕಿಂತ ಕ್ರಿಸ್ತನ ಹೆಸರೇಳಿಕೊಂಡು ಸಾಯುವುದೇ ಲೇಸೆಂದರು. ಈ ನಾವಿಕರಲ್ಲಿ ಒಬ್ಬನಾದ ಲೀಕಾರ್‌ನು ತಾನು ಇಸ್ಲಾಂ ಧರ್ಮದ ಮತಾಂತರ ಹೊಂದುವುದರಿಂದ ಇತರ ೧೧ ನಾವಿಕರು ಉಳಿಯಲೆಂದು ತಿಳಿದು. ತನ್ನ ಮತಾಂತರ ಉದ್ದೇಶವನ್ನು ಖಾಸಿಂ ಬೇಗ್‌ಗೆ ತಿಳಿಸಿದ. ಮೊದಲು ಖಾಸಿಂಬೇಗ್ ಇದರಲ್ಲಿ ಏನೋ ದ್ರೋಹವಿದೆಯೆಂದು ತಿಳಿದನು. ಆದರೆ

ಆಲೀಕಾರ್ ತನ್ನ ಹೆಂಡತಿ, ಮಕ್ಕಳಿಗೋಸ್ಕರ ಮತಾಂತರ ಹೊಂದುತ್ತೇನೆಂದು ತಿಳಿಸಿದಾಗ ಖಾಸಿಂ ಬೇಗ್ ಹರ್ಷಿತನಾದ. ಅಂದಿನಿಂದ ಆಲೀಕಾರ್‌ಗೆ ರುಸ್ತುಂಖಾನ್ ಎಂದು ನಾಮಕರಣ ಮಾಡಲಾಯಿತು. ರುಸ್ತುಂ ಖಾನ್ ದಿನೇ ದಿನೇ ಖಾಸಿಂ ಖಾನ್‌ಗೆ ಆಪ್ತನಾದನು. ಒಮ್ಮೆ ರಾತ್ರಿ ಎಲ್ಲರೂ ಮಲಗಿದ್ದಾಗ ರುಸ್ತುಂ ಖಾನ್ ಕಾಡ್‌ಮನ್‌ನ್ನು ಸಂಧಿಸಿ, ಪಾರಾಗುವ ಉಪಾಯವನ್ನು ತಿಳಿಸಿದನು. ಸೆರೆಮನೆಯ ಎಲ್ಲಾ ಬೀಗದ ಕೈಗಳನ್ನು ನೀಡುತ್ತೇನೆ. ನೀವು ಒಬ್ಬೊಬ್ಬರೇ ಸುರಂಗ ಮಾರ್ಗದ ಮೂಲಕ ಹೋಗಿ. ಅಲ್ಲಿ ನಿಮಗೆ ದನಗಾಹಿ ಎದುರಾಗುತ್ತಾನೆ. ಅವನನ್ನು ಹಿಂಬಾಲಿಸಿಕೊಂಡು ವೇಷ ಮರಿಸಿಕೊಂಡು ತಾಯ್ನಾಡನ್ನು ಸೇರಿರಿ ಎಂದನು. ರುಸ್ತುಂ ಖಾನ್ ಉಪಾಯದಂತೆ ಸೆರೆಮನೆಯ ಬಾಗಿಲನ್ನು ಬೀಗದ ಕೈಗಳಿಂದ ತೆಗೆದು, ಅಲ್ಲಿನ ನಾವಿಕರನ್ನು ಬೇಗ-ಬೇಗ ತಪ್ಪಿಸಿಕೊಂಡು ಹೋಗಲು ತಿಳಿಸಿದ. ಎಲ್ಲರೂ ಹೋದ ನಂತರ, ಕಾಡ್‌ಮನ್ ನಿನ್ನ ಗತಿಯೇನು? ಎಂದು ಪ್ರಶ್ನಿಸಿದಾಗ, ಹೇಗಿದ್ದರು ಸಾಯಲು ಸಿದ್ಧನಿದ್ದೇನೆ ಚಿಂತಿಸಬೇಡ ಇಲ್ಲಿಂದ ನೀನು ತಪ್ಪಿಸಿಕೋ ಎಂದನು ರುಸ್ತುಂ ಖಾನ್. ಮಾರನೆಯ ದಿನ ಬಂದು ಖಾಸಿಂ ಬೇಗ್ ಸೆರೆಮನೆ ಹೊಕ್ಕಾಗ ನಾವಿಕರೆಲ್ಲರೂ ತಪ್ಪಿಸಿಕೊಂಡು ಹೋಗಿರುವುದನ್ನು ಖಚಿತಪಡಿಸಿಕೊಂಡ. ಇದಕ್ಕೆಲ್ಲ ರುಸ್ತುಂ ಖಾನನೇ ಕಾರಣವೆಂದು ತಿಳಿದು ಅವನನ್ನು ಕಂಬಕ್ಕೆ ಕಟ್ಟಿಹಾಕಿ, ಹೊಡೆದು, ಅವನ ದೇಹವನ್ನು ನಾಯಿಗಳಿಗೆ ಹಾಕಿದ. ನಾವಿಕರೆಲ್ಲರೂ ಸ್ವತಂತ್ರ ಜೀವನಕ್ಕೆ ಹಂಬಲಿಸಿ ತಪ್ಪಿಸಿಕೊಳ್ಳುವಾಗ ಕೈ-ಕಾಲು ಮುರಿದಿದ್ದವು. ಖಾಸಿಂ ಖಾನ್ ಇವರು ಮತ್ತೆ ಸೆರೆ ಸಿಗುವಂತೆ ಮಾಡಲು ಸೈನ್ಯ ಕಳುಹಿಸಿ, ಬೇರೊಬ್ಬ ದನಗಾಹಿಯನ್ನು ನೇಮಿಸಿದ. ಇವರೆಲ್ಲರೂ ಸೆರೆಸಿಕ್ಕಿ ಆಹಾರ, ನೀರಿಲ್ಲದೇ, ರೋಗಗಳಿಗೆ ತುತ್ತಾಗಿ ಅಸುನೀಗಿದರು. ಆದರೆ ಕಾಡ್‌ಮನ್ ಮಾತ್ರ ಸಾಯಲಿಲ್ಲ. ಲಾರ್ಡ್ ಕಾರ್ನ್‌ವಾಲೀಸ್ ಶ್ರೀರಂಗಪಟ್ಟಣದ ಮೇಲೆ ಆಕ್ರಮಣ ಮಾಡುವನೆಂದು ತಿಳಿದು ಟಿಪ್ಪು ಉತ್ತರ ದುರ್ಗದಲ್ಲಿದ್ದ ಕಾಡ್‌ಮನ್‌ನನ್ನು ಕರೆತಂದು ಶ್ರೀರಂಗಪಟ್ಟಣ ಕೋಟೆಯಲ್ಲಿರಿಸಿದ.

ಬ್ರಿಟೀಷ್ ಸೈನ್ಯವು ಸಾವನದುರ್ಗ ಕೋಟೆಯನ್ನು ವಶಪಡಿಸಿಕೊಂಡು ಉತ್ತರ ದುರ್ಗದ ಕೋಟೆ ಮೇಲೆ ಆಕ್ರಮಣ ಮಾಡಿ, ಕೋಟೆಯನ್ನು ತಮ್ಮ ವಶಕ್ಕೆ ಬಿಟ್ಟುಕೊಡಬೇಕೆಂದು ಕಾರ್ನ್‌ವಾಲೀಸ್ ಆಜ್ಞೆ ಮಾಡಿದ. ಆದರೆ ಖಿಲ್ಲೇದಾರನಾದ ಖಾಸಿಂ ಖಾನ್ ತಾನು ಟಿಪ್ಪುವಿನ ಋಣದಲ್ಲಿ ಬದುಕುತ್ತಿರುವುದರಿಂದ ಬಿಡಲು ಸಾಧ್ಯವಿಲ್ಲ ಎಂದನು. ಆದರೆ ಕಾರ್ನ್‌ವಾಲೀಸ್ ಸೈನ್ಯ ಸಮೇತ ಬಂದು, ಉತ್ತರ ದುರ್ಗವನ್ನು ಆಕ್ರಮಿಸಿ ಖಿಲ್ಲೇದಾರ ಖಾಸಿಂ ಖಾನ್‌ನ್ನು ಸೆರೆಹಿಡಿದು, ಕಾರ್ನ್‌ವಾಲೀಸ್‌ನ ಮುಂದೆ ಹಾಜರುಪಡಿಸಿದರು. ಆಗ ಖಾಸಿಂ ಖಾನ್ ತಾನು ೧೧ ಮಂದಿ ನಾವಿಕರನ್ನು ಕೊಂದೆನೆಂಬ ನಿಜ ಒಪ್ಪಿದಾಗ ಆತನನ್ನು ಬ್ರಿಟೀಷ್ ಸೈನಿಕರು ಕ್ರೂರವಾಗಿ ಕೊಂದು ಹಾಕಿದರು. ಉಳಿದ ಒಬ್ಬನಾದ ಕಾಡ್‌ಮನ್‌ನನ್ನು ಕಾರ್ನ್‌ವಾಲೀಸ್

ಶ್ರೀರಂಗಪಟ್ಟಣ ಸೆರೆಮನೆಯಿಂದ ಬಿಡಿಸಿಕೊಂಡು ಬಂದನು. ೧೨ ಮಂದಿ ನಾವಿಕರಲ್ಲಿ ಉಳಿದವನು ಒಬ್ಬನೇ ಕಾಡ್‌ಮನ್.

ಈ. ಬಲ್ತುವಿನ ಚಟ್ನಿ

ಹೈದರಾಲಿಯು ಕ್ರಿ.ಶ.೧೭೬೩ರಲ್ಲಿ ಬಿದನೂರನ್ನು ವಶಪಡಿಸಿಕೊಂಡಾಗ, ಆ ಪ್ರದೇಶಕ್ಕೆ ತಮಿಳುನಾಡಿನ ಇತರ ಪ್ರದೇಶಗಳು ಮೈಸೂರಿಗೆ ಸೇರಿದವು. ಹೈದರಾಲಿ ಟಿಪ್ಪುವಿಗೆ ತಮಿಳುನಾಡಿನ ಇತರೆ ಪ್ರದೇಶಗಳನ್ನು ವಶಪಡಿಸಿಕೊಳ್ಳುವಂತೆ ಸೈನ್ಯ ಸಮೇತ ಕಳುಹಿಸಿಕೊಟ್ಟನು. ಅದರಂತೆ ಟಿಪ್ಪು ಕರಾವಳಿಯ ಪೋರ್ಚುಗೀಸ್ ಕ್ರೈಸ್ತರ ಆಸ್ತಿ-ಪಾಸ್ತಿ, ಭೂಮಿಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಅಲ್ಲದೇ ಮಂಗಳೂರಿನ ಕ್ರೈಸ್ತ ಕ್ಯಾಥೋಲಿಕ್ ಪಾದ್ರಿಯನ್ನು ಜಮಾಲಗಡ ಕೋಟೆಯಲ್ಲಿ ಸೆರೆಯಿಟ್ಟನು. ಕರಾವಳಿಯ ಕ್ರೈಸ್ತರನ್ನು ಸೆರೆಹಿಡಿದು ಅವರನ್ನು ಶಿಕ್ಷಿಸಿದನು. ಸೈನ್ಯಕ್ಕೆ ಸೇರಿಸಿಕೊಂಡನು. ಮಹಿಳೆಯರನ್ನು, ದುರ್ಬಲರನ್ನು ಗ್ರಾಮಗಳಿಗೆ ಕಳುಹಿಸಿದನು. ಸೆರೆಸಿಕ್ಕವರಲ್ಲಿ ಪಾಕಶಾಸ್ತ್ರದಲ್ಲಿ ನೈಪುಣ್ಯತೆ ಪಡೆದವನೇ **ಬಲ್ತು**. ಮಂಗಳೂರಿನಲ್ಲಿ ಟಿಪ್ಪು ಸೆರೆಹಿಡಿದ ಪಾದ್ರಿಗಳಲ್ಲಿ **ಬಲ್ತು** ಕೂಡ ಒಬ್ಬ. ಈತನು ಬಾಲ್ಯದಲ್ಲಿಯೇ ತಂದೆ-ತಾಯಿಯನ್ನು ಕಳೆದುಕೊಂಡು ಅಲೆಮಾರಿಯಾಗಿ ಮಂಗಳೂರಿನ ಜೆಸ್ಯೂಟ್ ಪಾದ್ರಿಯ ಬಳಿ ಅಡಿಗೆಯವನಾಗಿ ಸೇರಿಕೊಂಡಿದ್ದ. ಈತನು ಬಗೆ ಬಗೆಯ ತಿನಿಸುಗಳನ್ನು ಸಿಹಿಗಳನ್ನು ಪಲಾವ್ ಚಟ್ನಿ ಮಾಡುವುದರಲ್ಲಿ ಪ್ರವೀಣನಾಗಿದ್ದ. ಟಿಪ್ಪು ಸೆರೆಹಿಡಿದು ತಂದಿದ್ದ ಸೈನ್ಯಕ್ಕೆ ಸೇರಿ ಅವರಿಗೆ ಅಡುಗೆ ಮಾಡುತ್ತಿದ್ದನು. ಬ್ರಿಟೀಷರ ಮೇಲೆ ಯುದ್ಧ ಮಾಡಲು ದಂಡಯಾತ್ರೆ ಕೈಗೊಂಡ ಟಿಪ್ಪು ಸೈನ್ಯವು ರಾತ್ರಿಯ ವೇಳೆ ಬೀಡುಬಿಟ್ಟು, ಬಿಡಾರ ನಿರ್ಮಿಸಿತು. ಇದೇ ಸಮಯದಲ್ಲಿ ದೋ-ದೋ ಎಂದು ಮಳೆಯು ಸುರಿಯಲಾರಂಬಿಸಿತು. ಎಲ್ಲರೂ ಹಸಿವಿನಿಂದ ಕಂಗಾಲಾದರು. ಮಳೆಯಿಂದ ಅಡಿಗೆಗೆ ತಂದ ಸರಂಜಾಮುಗಳೆಲ್ಲ ತೋಯ್ದು ಹೋದವು. ಅಳಿದು-ಉಳಿದ ಅಕ್ಕಿಯಿಂದ ಅನ್ನವನ್ನು ಅಡಿಗೆಯವನು ಸಿದ್ಧಪಡಿಸಿದ. ಈ ಅನ್ನವನ್ನು ಹೇಗೆ ಸುಲ್ತಾನನ ಮುಂದಿಡುವುದು ಎಂದು ಅಡಿಗೆಯವ ಯೋಚಿಸತೊಡಗಿದ. ಆಗ ಬಲ್ತು ಉಳಿದ ಅಡುಗೆ ಪದಾರ್ಥಗಳನ್ನು ನನಗೆ ನೀಡಿ ನಾನು ರುಚಿಯಾದ ಚಟ್ನಿ ಸಿದ್ಧಪಡಿಸುತ್ತೇನೆ. ಆ ಅನ್ನದ ಜೊತೆ ಈ ಚಟ್ನಿಯನ್ನು ನೀಡಿದರೆ ಅವರು ಖಂಡಿತ ತಿನ್ನುವರೆಂದು ತಿಳಿಸಿದ.

ಅದರಂತೆ ಚಟ್ನಿ ತಯಾರಿಸಿದ ನಂತರ ಅಡಿಗೆಯವ ಸುಲ್ತಾನನಿಗೆ ಅನ್ನದೊಂದಿಗೆ ಚಟ್ನಿಯನ್ನು ಹಾಕಿ ಉಣಬಡಿಸಿದ. ಸುಲ್ತಾನ ತಿಂದಾದ ನಂತರ ಊಟ ರುಚಿಯಾಗಿದೆ. ಚಟ್ನಿ ರುಚಿಕರವಾಗಿದೆ. ಯಾರು ತಯಾರಿಸಿದ್ದು? ಎಂದು ಪ್ರಶ್ನಿಸಿದಾಗ ಅಡಿಗೆಯವ ಇದನ್ನು ಬಲ್ತು

ತಯಾರಿಸಿದ ಎಂದು ಉತ್ತರಿಸಿದ. ನಂತರ ಸುಲ್ತಾನ ಬಲ್ತುವನ್ನು ಕರೆಯಿಸಿ, ಇನ್ನುಮುಂದೆ ನೀನೇ ನನಗೆ ಅಡುಗೆ ಮಾಡಬೇಕು. ವಿಧ-ವಿಧವಾದ ಚಟ್ನಿಗಳನ್ನು ತಯಾರಿಸಿಕೊಡಬೇಕು. ಇಲ್ಲದಿದ್ದರೆ ನಿನ್ನ ತಲೆಯನ್ನು ಕಡಿಯುತ್ತೇನೆ ಎಂದು ಹೇಳಿ ಉಂಗುರವನ್ನು ಬಹುಮಾನವಾಗಿ ನೀಡಿದನು. ಅಂದಿನಿಂದ ಟಿಪ್ಪು ಬಲ್ತು ಪಾದ್ರಿ ಎಂಬುದನ್ನು ಮರೆತು ಸದಾ ತನ್ನ ಬಳಿಯಲ್ಲಿರಿಸಿದ. ಇದರಿಂದ ಬಲ್ತುವಿನ ಜೀವನದ ದಿಕ್ಕು-ದೆಸೆಗಳೇ ಬದಲಾದವು. ಅಲ್ಲದೇ ಬಲ್ತು ಟಿಪ್ಪುವಿನ ಅಂತರಂಗದ ಆಪ್ತರಲ್ಲಿ ಒಬ್ಬನಾದ. ಸುಲ್ತಾನನ ಆಪ್ತರಲ್ಲಿ ಒಬ್ಬನಾಗಿದ್ದ ಅಬ್ದುಲ್ಲಾನೆಂಬುವವನು ಕಾಲರಾ ರೋಗದಿಂದ ನರಳುತ್ತಿದ್ದ. ಅವನನ್ನು ನೋಡಿಕೊಳ್ಳಲು ಯಾರು ಇಲ್ಲದಾಗ ಟಿಪ್ಪು ಬಲ್ತುವನ್ನು ಅವನ ಮನೆಗೆ ಕಳುಹಿಸಿದ. ಬಲ್ತು ಸುಲ್ತಾನನ ಅಪ್ಪಣೆಯಂತೆ ಅಬ್ದುಲ್ಲಾನ ಸೇವೆ ಮಾಡಿ, ಅವರು ಕಾಲರಾದಿಂದ ಗುಣಮುಖವಾಗುವಂತೆ ಮಾಡಿದ. ಪುನಃ ಅರಮನೆಗೆ ಬಲ್ತುವನ್ನು ಟಿಪ್ಪು ಕರೆದುಕೊಂಡನು. ವೆಲ್ಲೆಸ್ಲಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ಗುಂಡಿನ ಮಳೆ ಸುರಿಸಿದ. ಈ ಗುಂಡಿನ ಮಳೆಗೆ ಟಿಪ್ಪು ತುತ್ತಾಗಿದ್ದ. ರಾಶಿ-ರಾಶಿ ಹೆಣಗಳಲ್ಲಿ ಟಿಪ್ಪುವನ್ನು ಗುರ್ತಿಸುವುದೇ ಕಷ್ಟವಾದಾಗ ಬಲ್ತು ಟಿಪ್ಪುವಿನ ಶವವನ್ನು ಗುರ್ತಿಸಿದ. ಇದರಿಂದ ಹರ್ಷಿತನಾದ ವೆಲ್ಲೆಸ್ಲಿ ಬಲ್ತುವನ್ನು ತನ್ನ ಜೊತೆಯಲ್ಲಿಯೇ ಕರೆದುಕೊಂಡು ಹೋಗಲು ನಿರ್ಧರಿಸಿದ. ಆದರೆ ಬಲ್ತು ನಿರಾಕರಿಸಿ ಶ್ರೀರಂಗಪಟ್ಟಣದಲ್ಲಿಯೇ ಸುಲ್ತಾನನ ವಂಶಸ್ಥರ ಸೇವೆ ಮಾಡಿಕೊಂಡು ಇರಲು ಇಚ್ಛಿಸಿದ.

ಉ. ಗುರು ಕೃಪೆ

ಸವಣೂರಿನ ನವಾಬ ಅಬ್ದುಲ್ ಹಕೀಂ ಖಾನನ ಮುಂದೆ ದೊಡ್ಡದೊಂದು ಸಮಸ್ಯೆ ಎದುರಾಗಿತ್ತು. ಏನೆಂದರೆ ಆಗತಾನೆ ಟಿಪ್ಪುವಿನ ದೂತನೊಬ್ಬ ತಂದಿದ್ದ ಪತ್ರದಿಂದ ಆತನಿಗೆ ಸಂತೋಷ, ದುಗುಡ ಎರಡು ಆಗಿತ್ತು. ಟಿಪ್ಪು ಸಿಂಹಾಸನ ಏರುವ ಪಟ್ಟಾಭಿಷೇಕಕ್ಕೆ ಆಹ್ವಾನಿಸಿದ್ದರಿಂದ ಸಂತೋಷ. ಎರಡನೇ ಮೈಸೂರು ಯುದ್ಧದಲ್ಲಿ ಹೈದರಾಲಿ ಹಠಾತ್ತನೆ ಬೆನ್ನುಫಣಿಯಿಂದ ಮಡಿದಿದ್ದ ಸುದ್ದಿಯನ್ನು ಟಿಪ್ಪು ಶ್ರೀರಂಗಪಟ್ಟಣಕ್ಕೆ ಹಿಂದಿರುಗಿ ಬರುವವರೆಗೂ ತಿಳಿಸದಿದ್ದುದು ದುಗುಡಕ್ಕೆ ಕಾರಣವಾಗಿತ್ತು.

ಇದರಿಂದ ನವಾಬನಿಗೆ ಪಟ್ಟಾಭಿಷೇಕ ಸಮಾರಂಭಕ್ಕೆ ಹೋಗಲು ಮನಸ್ಸಿರಲಿಲ್ಲ. ಆದರೆ ಹೋಗದೆ ಟಿಪ್ಪುವಿನೊಂದಿಗೆ ವಿರಸ ಕಟ್ಟಿಕೊಳ್ಳಲು ಕೂಡ ಆತನಿಗೆ ಮನಸ್ಸಿರಲಿಲ್ಲ. ಈ ಸಮಸ್ಯೆಯಿಂದ ಹೊರಬರಲು ಖಂಡೇರಾಯನನ್ನು ಆಹ್ವಾನಿಸಿದನು. ಆತನ ಮುಂದೆ ಟಿಪ್ಪು ಕಳುಹಿಸಿದ್ದ ಪತ್ರವನ್ನು ಕೈಗೆ ನೀಡಿ ತನ್ನ ಮನದಾಳದ ನೋವನ್ನು ತೋಡಿಕೊಂಡನು. ನಾನು ಶ್ರೀರಂಗಪಟ್ಟಣಕ್ಕೆ ಹೋದರೆ ಟಿಪ್ಪು ಗೌರವಿಸುವನೆ? ಅವಮಾನಿಸುವನೆ? ನಾನು ಹೈದರಾಲಿಯ

ಮರಣದ ತರುವಾಯ ಕರೀಂನಿಗೆ ಸಿಂಹಾಸನ ಸಿಗುವುದೆಂದು ಬಯಸಿದ್ದೆ. ಆದರೆ ದುರಾದೃಷ್ಟಾವಶಾತ್ ಟಿಪ್ಪು ಸಿಂಹಾಸನ ಏರುತ್ತಿರುವುದು ನನಗೆ ಇಷ್ಟವಿಲ್ಲ. ಆದ್ದರಿಂದ ಸಮಾರಂಭಕ್ಕೆ ಹೋಗದೆ ಇರುವುದೇ ಸೂಕ್ತವಲ್ಲವೆ? ಎಂದು ಪ್ರಶ್ನಿಸಿದ. ಆಗ ಖಂಡೇರಾಯನು ಹೌದು ನಿಮ್ಮ ತೀರ್ಮಾನವೇ ನನಗೂ ಸರಿಯೆನಿಸುತ್ತಿದೆ. ಈಗಾಗಲೇ ಬ್ರಿಟೀಷರು ಮರಾಠರು ಮತ್ತು ನಿಜಾಮರು ಆಕ್ರಮಣ ಮಾಡಿರುವುದರಿಂದ ರಾಜ್ಯದ ಬಂಡಾರವೆಲ್ಲ ಖಾಲಿಯಾಗಿದೆ. ಟಿಪ್ಪುವಿಗೆ ಸೂಕ್ತವೆನಿಸುವ ಉಡುಗೊರೆಯನ್ನು ನೀಡದಿದ್ದರೆ ಆತ ನಮ್ಮನ್ನು ಗೌರವಿಸದೆ ಇರಬಹುದಲ್ಲವೇ? ನೀವು ಹೈದರಾಲಿಯ ಸಮಕಾಲೀನರು ಇದೇ ಸ್ಥಾನದಲ್ಲಿ ಹೈದರಾಲಿ ಇದ್ದಿದ್ದರೆ ಗೌರವಿಸುತ್ತಿದ್ದರು. ಇದೇ ಗೌರವವನ್ನು ಟಿಪ್ಪು ಮುಂದುವರಿಸುವನೇ? ಇರಲಿ ಬಿಡಿ. ನಮಗೆ ಯಾರ ಅನುಗ್ರಹವು ಸಿಗದಿದ್ದರೂ ಗುರು ಶ್ರೀ ಸತ್ಯಬೋಧ ಸ್ವಾಮಿಗಳ ಆಶೀರ್ವಾದ ನಮ್ಮ ತಲೆಯ ಮೇಲೆ ಇರುವುದರಿಂದ ಭಯಪಡುವ ಅವಶ್ಯಕತೆಯಿಲ್ಲ ಎಂದನು. ಆಗ ಹಕೀಂ ಖಾನನು ಖಂಡೇರಾಯರೇ ನನ್ನ ಪರವಾಗಿ ನೀವೇ ಸೈನ್ಯ ಸಮೇತ ಸಮಾರಂಭಕ್ಕೆ ಹೋಗಿ ಅಲ್ಲಿನ ವಿದ್ಯಮಾನವನ್ನು ಮುಟ್ಟಿಸಿ ಎಂದು ಹೇಳಿದನು. ಖಂಡೇರಾಯನು ಸಮಾರಂಭಕ್ಕೆ ಹೋಗಿ ಅಲ್ಲಿಂದ ಭಯಂಕರವಾದ ಸುದ್ದಿಯನ್ನು ತಂದನು. ತಾವು ಉದ್ದೇಶಪೂರ್ವಕವಾಗಿಯೇ ಸಮಾರಂಭಕ್ಕೆ ಬಂದಿಲ್ಲವೆಂದು, ಟಿಪ್ಪು ಸಭೆಯಲ್ಲಿ ರಾಜರೋಷವಾಗಿ ಹೇಳುತ್ತಿದ್ದರಂತೆ, ಸಭೆಯಲ್ಲಿ ಪಾಲ್ಗೊಂಡಿದ್ದ ಪಿಸುಣರು ಇದಕ್ಕೆ ತುಪ್ಪ ಸುರಿದರು. ನವಾಬರು ಬರಲು ಸಾಧ್ಯವಿಲ್ಲದಾಗ ಅವರ ಮಗನನ್ನು ಕಳುಹಿಸಬಹುದಿತ್ತು. ನನಗೆ ಗೌರವಿಸಬೇಕಾಗುತ್ತದೆಂದು ತಿಳಿದು ಕೆಲವು ಸಾಮಾನ್ಯ ಜನರನ್ನು ಕಳುಹಿಸಿ ನನ್ನನ್ನು ಅವಮಾನಿಸಿದ್ದಾರೆಂದು ಟಿಪ್ಪು ಹೇಳಿದನು.

ನನ್ನನ್ನು ನವಾಬ ಹೀಗೆ ಅವಮಾನಿಸಿರುವುದರಿಂದ ಅವರ ರಾಜ್ಯದ ಮೇಲೆ ಆಕ್ರಮಣ ಮಾಡಿ ಶಿಕ್ಷಿಸಬೇಕಿರುವುದು ಸರಿಯಲ್ಲವೇ? ಎಂದು ಟಿಪ್ಪು ತೀರ್ಪಿಟ್ಟನು. ಹಿಂದೆ ಬಿದನೂರಿನ ಆಯಾಜ್. ಖಾನನು ಟಿಪ್ಪುವನ್ನು ಯುಧ್ಧದಲ್ಲಿ ಎದುರಿಸಲಾಗದೇ ಓಡಿಹೋಗಿದ್ದನು. ಆದರೆ ಇದರಿಂದ ನವಾಬನು ಎದೆಗುಂದಲಿಲ್ಲ. ಇಂದಲ್ಲ-ನಾಳೆ ತಾನು ಮೈಸೂರು ಹುಲಿಯ ಜೊತೆ ಸೆಣಸಾಟ ಆಗಬಹುದೆಂದು ಅರಿತಿದ್ದನು. ಆದರೆ ಬ್ರಿಟೀಷರು, ಮರಾಠರು ಪದೇ ಪದೇ ಆಕ್ರಮಣ ಮಾಡಿದ್ದರಿಂದ ಸರಿಯಾದ ಸಮಯಕ್ಕೆ ಮಳೆ ಬರದೇ ಬೆಳೆಯಾಗದ್ದರಿಂದ ರಾಜ್ಯದ ಖಜಾನೆ ಕೂಡ ಬರಿದಾಗಿತ್ತು. ಇದರಿಂದ ನವಾಬನು ಯಾವ ಗಳಿಗೆಯಲ್ಲಿ ಏನೋ? ಎಂಬ ಭೀತಿಯನ್ನು ಎದುರಿಸುತ್ತಿದ್ದನು. ಸತ್ಯಬೋಧರಂತಹ ಗುರುಗಳು ನೆಲೆಸಿರುವ ಈ ರಾಜ್ಯದಲ್ಲಿ ಯುದ್ಧ ಮಾಡಿ ರಕ್ತಪಾತ ಆಗಿ, ಕೊಲೆ-ಸುಲಿಗೆಗೆ ಅವಕಾಶ ನೀಡದೆ ಶಾಂತಿಯನ್ನು ಕಾಪಾಡುವುದು ಹೇಗೆ? ಎಂದು ಯೋಚಿಸಿದ. ಆದರೆ ಒಮ್ಮೊಮ್ಮೆ ಆದದ್ದು ಆಗಲಿ, ಈ ರಾಜ್ಯ ಉಳಿಸಲು ಯುದ್ಧದಲ್ಲಿ

ಹೋರಾಡಿ, ವೀರಮರಣವನ್ನು ಅಪ್ಪುವುದು ಬಹಳಷ್ಟು ಸರಿಯೆಂದೇ ಮತ್ತೊಮ್ಮೆ ಯೋಚಿಸುತ್ತಿದ್ದ.

ಯುದ್ಧಕ್ಕೆ ನವಾಬನು ಸಿದ್ಧನಾದವನು. ಆದರೆ ಸತ್ಯಬೋಧ ಗುರುಗಳು ಇದಕ್ಕೆ ಸಮ್ಮತಿ ಕೊಡಲಿಲ್ಲ. ವಿನಾ ಕಾರಣ ಟಿಪ್ಪು ಯುದ್ಧ ಘೋಷಿಸಿರುವುದು ನಿಜಕ್ಕೂ ಅನ್ಯಾಯವೆನಿಸಿತು. ಹೇಗಾದರೂ ಮಾಡಿ ಇಬ್ಬರ ನಡುವೆ ಉಂಟಾಗಿರುವ ಕಂದಕವನ್ನು ಸರಿಪಡಿಸಿ ಶಾಂತಿಯನ್ನು–ಸೌಹಾರ್ದತೆಯನ್ನು ಕಾಪಾಡಬೇಕೆಂದು ಗುರುಗಳು ನಿಶ್ಚಯಿಸಿದರು. ನವಾಬರೇ ಸ್ವಭಾವತಃ ನೀವು ಶಾಂತಿಪ್ರಿಯರು, ಯುದ್ಧ, ರಕ್ತಪಾತದಿಂದ ಹಾನಿಯೇ ಹೊರತು, ಯಾರಿಗೂ ಲಾಭವಾಗದೆಂದು ನವಾಬರಿಗೆ ಗುರುಗಳು ತಿಳಿಸಿದರು. ಖಂಡೇರಾಯ ನವಾಬನಿಗೆ ರಾಜ್ಯದಲ್ಲಿ ಶಾಂತಿಯನ್ನು ಹೇಗೆ ಕಾಪಾಡಲು ಸಾಧ್ಯ? ಎಂದು ಕೇಳಿದಾಗ ಈ ರಾಜ್ಯದಲ್ಲಿ ಶಾಂತಿ ನೆಲೆಸಲು ಮುಖ್ಯ ಕಾರಣಕರ್ತರಾದವರೇ ಈ ಗುರುಗಳು. ಇವರು ಇಲ್ಲಿ ಧ್ಯಾನ, ಪೂಜೆ, ತಪ, ಜಪ ಮಾಡುತ್ತಿರುವುದರಿಂದಲೇ ಇಲ್ಲಿ ಎಲ್ಲರು ಶಾಂತಿಪ್ರಿಯರಾಗಿದ್ದಾರೆ. ಅವರು ನೀಡುವ ಗಂಗಾ ಜಲದಿಂದ ಎಂತಹ ಬೆಂಕಿಯನ್ನು ಕೂಡ ಆರಿಸಬಹುದು. ಆಗ ಗುರುಗಳು ಟಿಪ್ಪು ಬಗ್ಗೆ ನೀವು ಸಂದೇಹಗ್ರಸ್ತರಾಗಿದ್ದೀರಿ. ಯುದ್ಧಕ್ಕೆ ಬಂದಾಗ ಟಿಪ್ಪುವಿನ ಮನಸ್ಸನ್ನು ಗೆಲ್ಲಲು ಏಕೆ ಪ್ರಯತ್ನಿಸಬಾರದು? ಆದ್ದರಿಂದ ನೀವು ಸಂಧಾನಕ್ಕಾಗಿ ಟಿಪ್ಪುವಿನ ಬಳಿಗೆ ರಾಯಭಾರಿಗಳನ್ನು ಕಳುಹಿಸಿ ಶಾಂತಿ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಿ ಎಂದು ತಿಳಿಸಿದರು.

ಇದರಿಂದ ಪ್ರೇರಿತನಾದ ನವಾಬನು ತನ್ನ ಹಿರಿಯ ಮಗ ಮತ್ತು ಖಂಡೇರಾಯನನ್ನು ಯೋಗ್ಯ ಬಹುಮಾನಗಳನ್ನು ನೀಡಿ ಖುದ್ದಾಗಿ ಬರೆದ ಪತ್ರದಲ್ಲಿ ಹಿಂದೆ ಆಗಿರುವ ಪ್ರಮಾದಗಳನ್ನು ಮನ್ನಿಸಬೇಕೆಂದೂ ನಿಮ್ಮ ತಂದೆಯರ ಕಾಲದಿಂದಲೂ ನಡೆದುಕೊಂಡು ಬಂದಿರುವ ಸ್ನೇಹ, ಗೌರವಗಳನ್ನು ಉಳಿಸಿಕೊಳ್ಳಬೇಕೆಂದು ತಿಳಿಸಿದ್ದನು. ಟಿಪ್ಪುವಿನ ಮೇಲೆ ಪ್ರೇಮ ಜಲವನ್ನು ಹರಿಸಿದನು. ಈ ಪತ್ರವನ್ನು ಓದಿದ ಟಿಪ್ಪು ಪತ್ರದಲ್ಲಿನ ನವಾಬರ ಮನದಾಳದ ಮಾತುಗಳನ್ನು ಮೆಚ್ಚಿದರೂ ಮೀರ್ ಸಾದಕ್ ಇದಕ್ಕೆ ಒಪ್ಪದೇ ಯುದ್ಧದ ವೆಚ್ಚವಾಗಿ ಒಂದು ಲಕ್ಷ ವರಹ ನೀಡಬೇಕೆಂದು ಒತ್ತಾಯಿಸಿ ಎಂದ.

ನವಾಬನು ಖಜಾನೆ ಬರಿದಾಗಿದ್ದರಿಂದ ಬೇರೆ ದಾರಿ ಕಾಣದೇ ನವಾಬ ಗುರುಗಳ ಬಳಿಗೆ ಹೋಗಿ ಟಿಪ್ಪುವಿನ ನಿಲುವನ್ನು ತಿಳಿಸಿದನು. ಆಗ ಗುರುಗಳು ಏಕೆ ಯೋಚಿಸುತ್ತಿದ್ದೀರಿ? ಇಲ್ಲಿಯವರೆಗೆ ನನಗೆ ನೀವು ನೀಡಿರುವ ಹಣವೆಲ್ಲಾ ಒಂದು ಲಕ್ಷವಿರಬಹುದು. ತೆಗೆದುಕೊಂಡು ಹೋಗಿ ಅದನ್ನು ಟಿಪ್ಪುವಿಗೆ ನೀಡಿ ಅವರ ಸ್ನೇಹವನ್ನು ಕಾಪಾಡಿಕೊಳ್ಳಿ ಎಂದು ಹೇಳಿದರು.

೫.೪ ಐತಿಹ್ಯಗಳು

ಐತಿಹ್ಯಗಳು ಜನಸಾಮಾನ್ಯರು ನೈಜಸಂಗತಿಗಳೆಂದು ತಿಳಿದುಕೊಂಡ ಸಂಗತಿಗಳಾಗಿವೆ. ಜನಪದ ಕಥೆಗಳಲ್ಲಿ ಕಾಲ್ಪನಿಕತೆ ಎದ್ದು ಕಂಡರೆ ಐತಿಹ್ಯ ಕಾಲ್ಪನಿಕತೆಯ ಅಲ್ಪಮಟ್ಟಿನ ಸತ್ಯವನ್ನು ತನ್ನಲ್ಲಿ ಹುದುಗಿಸಿಟ್ಟುಕೊಂಡಿರುತ್ತದೆ. ತೀರಾ ಸರಳವಾಗಿ ಐತಿಹ್ಯವನ್ನು ಗುರುತಿಸಬಹುದಾದ ಅಂಶವೆಂದರೆ ಒಂದು ಸಂಗತಿಯನ್ನು ವಿವರಿಸುತ್ತಾ, ಅದಕ್ಕೆ ಸಮರ್ಥನೆಯಾಗಿ ಸಾಕ್ಷಿಯನ್ನು ತೋರಿಸುವುದು. ಈ ಸಂಗತಿಯನ್ನು ತಕ್ಷಣವೇ ನಿಜ ಎಂದು ನಂಬುವುದಕ್ಕಾಗಲಿ, ಇಲ್ಲವೆ ಸುಳ್ಳೆಂದು ವ್ಯಕ್ತಿನಾಮ ಇಲ್ಲವೆ ಸ್ಥಳನಾಮ ಚರಿತ್ರೆಗೆ ಸಂಬಂಧಪಟ್ಟಿರುವುದು ಸಾಮಾನ್ಯವಾದ ಸಂಗತಿ.

ಐತಿಹ್ಯ-ಪುರಾಣಗಳು ಒಂದೇ ನಾಣ್ಯದ ಎರಡು ಮುಖಗಳು. ಎರಡಕ್ಕೂ ನಿಕಟ ಸಂಬಂಧ, ಐತಿಹ್ಯ ಜನರು ನಂಬಿದ ಇತಿಹಾಸವಾದರೆ, ಪುರಾಣ ಪವಿತ್ರವೆಂದು ಭಾವಿಸಿದ ಸತ್ಯ ಕಥನ. ಹಿಂದೆಂದೋ ನಡೆಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟು ಕತೆಗಳೇ ಐತಿಹ್ಯಗಳು.

ಐತಿಹ್ಯ ಎನ್ನುವುದು ಇಂಗ್ಲೀಷಿನ Legend ಎನ್ನುವುದರ ಕನ್ನಡ ಸಂವಾದಿ ಪದ. Legend ಪದವು ಮಧ್ಯಕಾಲಿನ ಲ್ಯಾಟಿನಿನ Legend ಎಂಬ ಪದದಿಂದ ನಿಷ್ಪನ್ನಗೊಂಡಿದೆ. ಪ್ರಾರಂಭಕ್ಕೆ ಐತಿಹ್ಯಗಳು ಸರಳವು, ಸಂಕ್ಷಿಪ್ತವು ಆಗಿದ್ದು ಕಾಲ ಕಳೆದಂತೆ ಉತ್ಪ್ರೇಕ್ಷಿತ ವಿವರಣೆಗೆ ದೀರ್ಘ ಹಾಗೂ ಕಲ್ಪನಾತ್ಮಕ ಕಥೆಗಳೂ ಬೆಳವಣಿಗೆ ಹೊಂದಿದ್ದವು. ಮೂಲದಲ್ಲಿ ಇವು ಚಾರಿತ್ರಿಕ ಎನಿಸಿದರೂ ಅನಂತರದಲ್ಲಿ ಸಾಂಪ್ರದಾಯಿಕ ರೂಪವನ್ನು ಧರಿಸಿದವು.

ಐತಿಹ್ಯವು ರೂಪದಲ್ಲಿ ತೀರಾ ಸರಳವಾಗಿದ್ದು ನಿರ್ದಿಷ್ಟ ವ್ಯಕ್ತಿ, ಸ್ಥಳ, ಘಟನೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕಥೆಯಾಗಿದೆ. ಐತಿಹ್ಯ ಮತ್ತು ಇತಿಹಾಸಗಳೆರಡೂ ಒಂದೇ ಮೂಲದ ಪದಗಳು. ಇತಿಹಾಸವು ವಾಸ್ತಾವಾಂಶಗಳನ್ನು ನಿರೂಪಿಸುತ್ತದೆ. ಇಲ್ಲಿ ಕಲ್ಪನೆಗೆ ಎಡೆಯಿಲ್ಲ. ಐತಿಹ್ಯಗಳನ್ನು ನಿಜವಾಗಿಯೂ ನಡೆದಂಥವು ಎಂದು ಜನ ನಂಬುತ್ತಾರೆ. ಆದರೆ ಅವುಗಳಿಗೆ ಯಾವುದೇ ಲಿಖಿತ ಆಧಾರಗಳು ಇರುವುದಿಲ್ಲ. ಕಂಠಸ್ಥ ಸಂಪ್ರದಾಯದಲ್ಲಿ ಬೆಳೆಯುತ್ತಾ ಬಂದಿವೆ. ಐತಿಹ್ಯದಲ್ಲಿ ನಿರೂಪಿತವಾಗುವ ವಿಷಯಗಳೆಲ್ಲವೂ ನಿಜವೆಂದು ನಂಬಲು ಗಟ್ಟಿಯಾದ ಆಧಾರಗಳಲ್ಲ. ಎಲ್ಲಾ ಐತಿಹ್ಯಗಳಲ್ಲಿ ಸತ್ಯಾಂಶ ಮತ್ತು ಕಾಲ್ಪನಿಕ ಅಂಶಗಳು ವಿವಿಧ ಪ್ರಮಾಣದಲ್ಲಿ ಬೆರೆತಿರುತ್ತವೆ. ಐತಿಹ್ಯಗಳನ್ನು ಆಕರ್ಷಣೀಯವಾಗುವಂತೆ ಮಾಡಿರುವುದು

ಅವುಗಳಲ್ಲಿನ ಕಾಲ್ಪನಿಕ ಅಂಶವಾಗಿದೆ. ಈ ಆಕರ್ಷಣೆಯ ಕಾರಣದಿಂದಲೇ ಐತಿಹ್ಯಗಳು ಜನರ ಮನಸ್ಸಿನಲ್ಲಿ ಉಳಿದುಕೊಂಡು ಬಂದಿವೆ.

ಐತಿಹ್ಯದಲ್ಲಿ ಕಥೆಗೆ ಕಾರಣವಾಗುವ ವಸ್ತು ಮೊದಲೇ ವಾಸ್ತವ ಪ್ರಂಪಂಚದಲ್ಲಿ ನಡೆದಿರುತ್ತದೆ. ಅಥವಾ ಹಾಗೆಂದು ಜನರು ಭಾವಿಸುತ್ತಾರೆ. ಯಾವುದೋ ಒಂದು ನಿದಿಷ್ಟತೆಗೆ ಇಡೀ ಕಥೆಯು ಬದ್ಧವಾಗಿರುತ್ತದೆ. ಐತಿಹ್ಯಗಳ ಕ್ರಿಯೆಯ ವಾಸ್ತವ ಪ್ರಪಂಚಕ್ಕೆ ಸಂಬಂಧಿಸಿರುವುದರಿಂದ ಇದು ಕೇಳುವವರಿಗೆ ತೀರಾ ಹತ್ತಿರ ಮತ್ತು ಇದರ ಪರಿಣಾಮ ನೇರ, ಗಾಢತರ ಹಾಗೂ ಭಾವನಾತ್ಮಕ. ವ್ಯಕ್ತಿ, ಸ್ಥಳ, ಚರಿತ್ರೆ ಸಮಾಜ ಸಂಸ್ಕೃತಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಹುಟ್ಟಿಕೊಳ್ಳುತ್ತವೆ.

ಟಿಪ್ಪುವಿಗೆ ಸಂಬಂಧಿಸಿದ ಐತಿಹ್ಯಗಳನ್ನು ಮುಖ್ಯವಾಗಿ ದೇವನಹಳ್ಳಿ, ಬೆಂಗಳೂರು ನಗರ, ನಂಜನಗೂಡು, ಕಾಸರಗೋಡು, ಮಂಗಳೂರು, ಶ್ರೀರಂಗಪಟ್ಟಣ, ಮೈಸೂರು, ಸಕಲೇಶಪುರ ಮತ್ತು ನಂದಿ ಬೆಟ್ಟದಲ್ಲಿ ಕಾಣಬಹುದು. ಇಲ್ಲಿನ ಅರಮನೆಗಳು ಮತ್ತು ಕೋಟೆಗಳು ಐತಿಹ್ಯಗಳಿಗೆ ಸಾಕ್ಷಿಯಾಗಿ ನಿಂತಿವೆ.

೧. ಪೂರ್ಣಯ್ಯನವರ ಮಗಳು ಕಾವೇರಿಯು ಕಾವೇರಿ ನದಿಯಲ್ಲಿ ಸ್ನಾನಮಾಡುತ್ತಿರುವಾಗ ಟಿಪ್ಪು ಖಿಲ್ಲೇದಾರ್ ಖಾದಿರ್‌ಖಾನ್ ನದಿ ದಂಡೆಯಲ್ಲಿ ಮಾನಭಂಗ ಮಾಡಿದ. ಟಿಪ್ಪು ಆ ಅಪರಾದಿಯನ್ನು ಶಿಕ್ಷಿಸುವ ಬದಲು "ನಾಯಿ ತಿಂದ ಎಂಜಲ ಮಡಿಕೆಯನ್ನು ನಾಯಿ ಕೊರಳಿಗೆ ಕಟ್ಟಿ" ಎಂದ. (ಆ ಹುಡುಗಿಯನ್ನು ಖಾದಿರ್ ಖಾನ್‌ಗೆ ಒಪ್ಪಿಸಿ ಎಂದು ಹೇಳಿದ) ಇಂತಹ ಘಟನೆಗಳು ನಡೆದುದರಿಂದ ಪೂರ್ಣಯ್ಯ ಬ್ರಿಟೀಷರ ಜೊತೆ ಶಾಮೀಲಾಗಿ ಟಿಪ್ಪುವನ್ನು ಸೋಲಿಸಿದ. ಈ ಮೇಲಿನ ಘಟನೆ ನಡೆದದ್ದು ಮೋಹಿನಿ ದಿಬ್ಬ ಎಂಬಲ್ಲಿ. ಇದು ಈಗಲೂ ಐತಿಹ್ಯವಾಗಿ ಉಳಿದಿದೆ.

೨. ಟಿಪ್ಪುವಿನ ಮುಸ್ಲಿಂ ಸೈನಿಕರು ಶ್ರೀವೈಷ್ಣವ ಬ್ರಾಹ್ಮಣರ ಹಣೆಯ ನಾಮವನ್ನು ನೆಕ್ಕಿ ಅವರನ್ನು ಜಾತಿ ಭ್ರಷ್ಟರನ್ನಾಗಿ ಮಾಡುತ್ತಿದ್ದರು. ಆ ಸೈನಿಕರ ವಿರುದ್ಧ ಟಿಪ್ಪು ಯಾವ ಕ್ರಮವನ್ನು ಕೈಗೊಳ್ಳಲಿಲ್ಲ. ಪೂರ್ಣಯ್ಯನವರಿಗೆ ಶ್ರೀರಂಗಪಟ್ಟಣದ ಪಟ್ಟಣಗೌಡ ಎಂಬಾತ ದೂರು ಕೊಟ್ಟಾಗ. ಪೂರ್ಣಯ್ಯನವರು ಟಿಪ್ಪುವಿನ ಕೈಯಲ್ಲೇ ನಾಮ ನೆಕ್ಕಿಸಿದರು – ಟಿಪ್ಪು ನಾಮ ನೆಕ್ಕಿದ ಫಲವಾಗಿ ಅವನ ಸೈನಿಕರು ಸತ್ತೇಹೋದರು ಎಂಬ ಪ್ರತೀತಿಯಿದೆ.

ಟಿಪ್ಪುವಿಗೆ ಸಂಬಂಧಿಸಿದ ಅರಮನೆಗಳು

ಅ. ಶ್ರೀರಂಗಪಟ್ಟಣದ ದರಿಯಾದೌಲತ್

ಕಾವೇರಿ ನದಿ ದಡದಲ್ಲಿ ಶೇ. ೬೦ ರಷ್ಟು ಸಾಗುವಾನಿ ಮರಗಳನ್ನು ಬಳಸಿ, ನಿರ್ಮಿಸಿರುವ ಅರಮನೆಯೇ ದರಿಯಾ – ದೌಲತ್ (ಬೇಸಿಗೆ ಅರಮನೆ). ಇದು ೨೧೭ ವರ್ಷಗಳ ಹಿಂದಿನ ಕಲಾತ್ಮಕ ಚಿತ್ರಗಳಿಂದ ಆಕರ್ಷಣೀಯವಾಗಿದೆ. ದರಿಯಾ ದೌಲತ್‌ನ ಪೂರ್ವ ಮತ್ತು ಪಶ್ಚಿಮದ ಗೋಡೆ ಮೇಲಿನ ಅಪೂರ್ವ ಚಿತ್ರಗಳು ಪ್ರಮುಖ ಆಕರ್ಷಣೆಯಾಗಿವೆ. ಇದರ ಪೂರ್ವಗೋಡೆಯ ಮೇಲೆ ಟಿಪ್ಪು ಸಮಕಾಲೀನರಾದ ಮುಮ್ಮಡಿ ಕೃಷ್ಣರಾಜ ಒಡೆಯರ್, ೨ನೇ ಬಾಲಾಜಿರಾವ್ ಪೇಶ್ವೆ, ಮಾಗಡಿ ಕೆಂಪೇಗೌಡ, ಚಿತ್ರದುರ್ಗದ ಮದಕರಿ ನಾಯಕ, ತಂಜಾವೂರಿನ ರಾಜ, ಚಿತ್ತೂರಿನ ರಾಣಿ ಮತ್ತಿತರ ದರ್ಬಾರ್ ಸನ್ನಿವೇಶಗಳು, ಒಪ್ಪಂದಗಳು, ರಾಜಪ್ರತಿನಿಧಿಗಳ ಸ್ವಾಗತ ದೃಶ್ಯವನ್ನು ಬಿಂಬಿಸುವ ಚಿತ್ರಗಳನ್ನು ನೈಸರ್ಗಿಕ ಬಣ್ಣಗಳಿಂದ ಕೆತ್ತಲಾಗಿದೆ.

ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲಾಳು, ಆನೆ, ಅಶ್ವದಳಗಳ ಜೊತೆಯಲ್ಲಿ ಯುದ್ಧಕ್ಕೆ ತೆರಳುತ್ತಿರುವ ದೃಶ್ಯದ ಚಿತ್ರ ಪಶ್ಚಿಮದ ಗೋಡೆಯ ಮೇಲಿದೆ. ಚಿತ್ರದಲ್ಲಿನ ಯುದ್ಧದ ಸನ್ನಿವೇಶಗಳು ನೈಜ ದೃಶ್ಯಗಳೇನೊ ಎನ್ನುವಷ್ಟು ಸಹಜವಾಗಿವೆ. ಬ್ರಿಟೀಷ್ ಸೈನಿಕರು ಆಧುನಿಕ ಶಸ್ತ್ರಾಸ್ತ್ರಗಳ ಜತೆ ಕರ್ನಲ್ ಬೈಲಿಯ ರಕ್ಷಣೆಗೆ ನಿಂತಿರುವುದು ಕಂಡುಬರುತ್ತದೆ. ಕ್ರಿ.ಶ. ೧೮೦೦ರಲ್ಲಿ ಬ್ರಿಟೀಷ್ ಕಲಾವಿದ ಸರ್ ರಾಬರ್ಟ್ ಪೋರ್ಟರ್ ಚಿತ್ರಿಸಿರುವ ಕ್ರಿ.ಶ ೧೭೯೯ರ ಮೇ ೪ರ ಶ್ರೀರಂಗಪಟ್ಟಣದ ಪತನ ಕುರಿತ ಚಿತ್ರದ ವಿವರಗಳು ಕಣ್ಣಿಗೆ ಕಟ್ಟುತ್ತದೆ.

ಅರಮನೆ ಛಾವಣಿ ಕಂಬಗಳು ಸೇರಿದಂತೆ ಪ್ರತಿಯೊಂದು ಕಲಾತ್ಮಕ ಹಾಗೂ ಕುಸುರಿ ಕೆತ್ತನೆಗಳಿಂದ ಕೂಡಿದೆ. ಈ ಮರದ ಮಹಲಿನ ದಕ್ಷಿಣ ಭಾಗದ ಗೋಡೆಯ ಮೇಲಿರುವ ಬ್ರಿಟೀಷ್ ಕಲಾವಿದ ಜಿ.ಎಫ್.ಚೆರ್ರಿ ಕ್ರಿ.ಶ ೧೭೯೨ ರಲ್ಲಿ ಚಿತ್ರಿಸಿರುವ ಯುವರಾಜ ಟಿಪ್ಪುವಿನ ತೈಲಚಿತ್ರ ಮನಮುಟ್ಟುತ್ತದೆ. ಒಳಭಾಗದಲ್ಲಿ ೧೮ ಪೆನ್ಸಿಲ್ ಚಿತ್ರಗಳಿದ್ದು ಇದರಲ್ಲಿ ಟಿಪ್ಪುವಿನ ಏಳು ಮಕ್ಕಳ ಚಿತ್ರಗಳು ಸೇರಿವೆ. ಇಲ್ಲಿ ಟಿಪ್ಪು ಸುಲ್ತಾನ ಬಳಸುತ್ತಿದ್ದ ಪೀಠೋಪಕರಣ, ಖಡ್ಗ-ಗುರಾಣಿಗಳು, ದಿರಿಸುಗಳನ್ನು ಸಂರಕ್ಷಿಸಲಾಗಿದೆ.ಈ ಎರಡು ಅಂತಸ್ತಿನ ಅರಮನೆಯನ್ನು ಕ್ರಿ.ಶ ೧೯೫೭ರಲ್ಲಿ ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸಲಾಯಿತು.

ಆ. ನಂದಿಬೆಟ್ಟದ ಟಿಪ್ಪುವಿನ ಬೇಸಿಗೆ ಅರಮನೆ

೧. ನಂದಿಬೆಟ್ಟವು ಮಲಗಿರುವ ನದಿಯಂತೆ ಕಾಣುವುದರಿಂದ ಈ ಹೆಸರು ಬಂದಿದೆ.

೨. ಕೂಷ್ಮಾಂಡ ಋಷಿ ಇಲ್ಲಿ ತಪಸ್ಸು ಮಾಡಿದ್ದರಿಂದ ಇದಕ್ಕೆ ಕೋಷ್ಮಾಂಡ ಪರ್ವತ ಎಂತಲೂ ಕರೆಯುವರು.
೩. ಟಿಪ್ಪು ಸುಲ್ತಾನನು ಕೋಟೆ ಕಟ್ಟಿಸಿರುವುದರಿಂದ ನಂದಿದುರ್ಗ ಎಂದು ಕರೆಯುವರು.
೪. ಜೋಡಿ ಸಾಲಿನ ಕೋಟೆ ಇಲ್ಲಿ ಕಂಡುಬರುವುದರಿಂದ ನಂದಿದುರ್ಗ ಎನ್ನುವರು.
೫. ಬೆಟ್ಟದ ಮೇಲಿನ ಯೋಗನಂದೀಶ್ವರ ನ ದೇವಸ್ಥಾನದಿಂದಾಗಿ ಇದಕ್ಕೆ ನಂದಿಬೆಟ್ಟ ಎಂದು ಕರೆಯುವರು.

ನಂದಿ ಗಿರಿಧಾಮದಲ್ಲಿ ಭೋಗ ನಂದೀಶ್ವರ, ನೆಲ್ಲಿಕಾಯಿ ಬಸವ, ನೆಹರು ನಿಲಯ, ಟಿಪ್ಪು ಡ್ರಾಫ್ ಮತ್ತು ಅಮೃತ ಸರೋವರಗಳ ಮಧ್ಯದಲ್ಲಿ ಟಿಪ್ಪುವಿನ ಬೇಸಿಗೆ ಅರಮನೆಯನ್ನು ಕಾಣಬಹುದು. ಟಿಪ್ಪು ಕ್ರಿ.ಶ ೧೭೭೦ರಲ್ಲಿ ನಂದಿದುರ್ಗವನ್ನು ವಶಪಡಿಸಿಕೊಂಡಾಗ ತನಗಾಗಿ ಇಲ್ಲೊಂದು ವಿಶ್ರಾಂತಿ ಗೃಹವನ್ನು ನಿರ್ಮಿಸಿಕೊಂಡ. ಟಿಪ್ಪು ಬೇಟೆಗಾಗಿ ಬಂದಾಗ ಇಲ್ಲಿ ಉಳಯುತ್ತಿದ್ದ ಎಂಬ ಪ್ರತೀತಿ ಇದೆ.

೩ .ಬೆಂಗಳೂರಿನ ಬೇಸಿಗೆ ಅರಮನೆ

ಬೆಂಗಳೂರಿನ ಟಿಪ್ಪು ಬೇಸಿಗೆ ಅರಮನೆಯು ಕೆ.ಆರ್.ಮಾರ್ಕೇಟ್‌ನ ಹೃದಯಭಾಗದಲ್ಲಿದೆ. ಇದು ಬೆಂಗಳೂರಿನ ಇಸ್ಲಾಮಿಕ್ ಕಟ್ಟಡಗಳ ಪೈಕಿ ಪ್ರಥಮವಾದುದು. ಕ್ರಿ.ಶ.೧೭೮೧ ರಲ್ಲಿ ಹೈದರಾಲಿ ಪ್ರಾರಂಭಿಸಿದರೆ, ಕ್ರಿ.ಶ.೧೭೯೧ರಲ್ಲಿ ಟಿಪ್ಪು ಪೂರ್ಣಗೊಳಸಿದ. ಇದು ಎರಡು ಅಂತಸ್ತಿನ ಕಟ್ಟಡವಾಗಿದ್ದು ಟಿಪ್ಪು ಇದನ್ನು ಲಾಲ್ ಮಹಲ್ ಎಂದು ಕರೆಯುತ್ತಿದ್ದ. ಇದು ಬೇಸಿಗೆಯ ತಾಣ ಮಾತ್ರ ಆಗಿರದೇ ಅರಮನೆಯ ನಿರ್ಮಾಣದ ಉದ್ದೇಶ ಆಡಳತ ಹಾಗೂ ದರ್ಬಾರ್‌ಗೆ ಸಂಬಂಧಪಟ್ಟ ಕಾರ್ಯಗಳನ್ನು ನಿರ್ವಹಿಸುವುದು ಸಹ ಆಗಿತ್ತು.

ಅರಮನೆಯ ಕೆಳ ಅಂತಸ್ತಿನಲ್ಲಿ ಟಿಪ್ಪು ಸುಲ್ತಾನನ ಘಟನೆಗಳ ಕಾಲಸೂಚಿ, ಟಿಪ್ಪುವಿನ ಸಿಂಹಾಸನದ ಗೋಡೆಯ ಮೇಲೆ ಉರ್ದು ಶಾಸನದ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.

ಟಿಪ್ಪು ಸುಲ್ತಾನನ ಘಟನೆಗಳ ಕಾಲಸೂಚಿ:

ಕ್ರಿ.ಶ.೧೭೫೦	ದೇವನಹಳ್ಳಿಯಲ್ಲಿ ಫಕ್ರುನ್ನೀಸಾ & ಹೈದರಾಲಿ ದಂಪತಿಗಳಂದ ಟಿಪ್ಪುಸುಲ್ತಾನನ ಜನನ.
ಕ್ರಿ.ಶ.೧೭೬೭	ಹೈದರಾಲಿ ಜೊತೆ ೧ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಹೋರಾಡಿ ಆಂಗ್ಲರನ್ನು ಸೋಲಿಸಿದ.
ಕ್ರಿ.ಶ.೧೭೮೦	೨ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಗಣನೀಯ ಪಾತ್ರವಹಿಸಿ. ಪೋಲಿಲೂರ್ ಬಳ ಕರ್ನಲ್ ಬೇಯ್‌ಲಿಯನ್ನು ಸೋಲಿಸಿದ.

ಕ್ರಿ.ಶ.೧೭೮೨	ಚಿತ್ತೂರು ಮೊಕ್ಕಾಂ ಬಳಿ ಹೈದರಾಲಿಯ ಮರಣ.
ಕ್ರಿ.ಶ.೧೭೮೩	ಮೇ.೪ ರಂದು ಬಿದನೂರಿನಲ್ಲಿ ಸರಳ ಸಮಾರಂಭದಲ್ಲಿ ಮೈಸೂರು ಅರಸನಾಗಿ ಅಧಿಕಾರ ಸ್ವೀಕಾರ.
ಕ್ರಿ.ಶ.೧೭೮೪	ಮಂಗಳೂರು ಒಪ್ಪಂದಕ್ಕೆ ಸಹಿ
ಕ್ರಿ.ಶ.೧೭೯೦	೩ನೇ ಆಂಗ್ಲೊ-ಮೈಸೂರು ಯದ್ಧದಲ್ಲಿ ಪರಾಜಯ ಹಾಗೂ ಶ್ರೀರಂಪಟ್ಟಣ ಒಪ್ಪಂದಕ್ಕೆ ಸಹಿ.
ಕ್ರಿ.ಶ.೧೭೯೨	ಲಾರ್ಡ್ ಕಾರ್ನ್‌ವಾಲೀಸ್ ಆಜ್ಞಾಪಿಸಿದ ಶಾಂತಿ ಒಪ್ಪಂದಕ್ಕೆ ಸಹಿ. ತನ್ನ ಇಬ್ಬರು ಮಕ್ಕಳಾದ ಅಬ್ದುಲ್ ಖಾಲಿಹಿ & ಮೈ-ಉದ್-ದಿನ ಇಬ್ಬರನ್ನು ಆಂಗ್ಲರಿಗೆ ಒಪ್ಪಿಸಿದೆ.
ಕ್ರಿ.ಶ.೧೭೯೯	೪ನೇ ಆಂಗ್ಲೋ-ಮೈಸೂರು ಯುದ್ಧಲ್ಲಿ ಪರಾಜಯ
ಕ್ರಿ.ಶ.೧೭೯೯	ಮೇ ೪ರಂದು ವೀರಮರಣ

ಟಿಪ್ಪುವಿನ ಆಟಿಕೆ (Tippu Tiper Organ)

"ಮೈಸೂರು ಹುಲಿ" ಯಾದ ಟಿಪ್ಪು ದಂಡಸಂಹಿತೆಯನ್ನು ಜಾರಿಗೊಳಿಸಲು ಜೀವಂತ ಹುಲಿಗಳನ್ನು ಬಳಸುತ್ತಿದುದ್ದು ಇತಿಹಾಸವಾಗಿದೆ. ಬಹುಶಃ ಇನ್ನಾವ ಸಂಸ್ಥಾನಾಧಿಪತಿಗಳು ಹೀಗೆ ಹುಲಿಗಳನ್ನು ಬಳಸಿಕೊಂಡದ್ದು ಇಲ್ಲವೆಂದೇ ಹೇಳಬಹುದು. ಟಿಪ್ಪುವಿನ ವ್ಯಾಘ್ರ ಪ್ರೇಮಕ್ಕೆ ಸಾಟಿಯೇ ಇಲ್ಲ. ಇದನ್ನರಿತ ಟಿಪ್ಪುವಿನ ಆಪ್ತರಾದ ಫ್ರೆಂಚರು ಒಂದು ಆಟಿಕೆಯ ಹುಲಿಯನ್ನು ನಿರ್ಮಿಸಿಕೊಟ್ಟಿದ್ದರು. ಫ್ರೆಂಚರು ಇಂಗ್ಲೀಷರ ಬದ್ಧವೈರಿಗಳು, ಶ್ರೀರಂಗಪಟ್ಟಣದ ಪತನ ನಂತರ ಅರಮನೆಯಿಂದ ಬ್ರಿಟೀಷರು ವಶಪಡಿಸಿಕೊಂಡ ಅಪೂರ್ವ ಸ್ಮಾರಕಗಳಲ್ಲಿ ಆಡುವ ಹುಲಿಯೂ ಇತ್ತು. ಹುಲಿಯ ನೈಜ ರೂಪದಲ್ಲಿ ನಿರ್ಮಿಸಲಾದ ಈ ಬೃಹದಾಕಾರದ ಹುಲಿ ಆಂಗ್ಲರ ಮರ್ಮ ಸ್ಥಾನಗಳನ್ನು ಕಿತ್ತುತಿನ್ನುವ ಭಂಗಿಯಲ್ಲಿದೆ. ಹಿಡಿಯನ್ನು ತಿರುಗಿಸಿದರೆ ಸಾಕು ಹುಲಿಯ ಆರ್ಭಟವೂ. ಇಂಗ್ಲೀಷ್ ವ್ಯಕ್ತಿಯ ಚೀತ್ಕಾರವೂ ಕೇಳಿಬರುತ್ತದೆ. ಇದನ್ನು ವೆಲ್ಲೆಸ್ಲಿ ಈಸ್ಟ್ ಇಂಡಿಯಾ ಕಂಪನಿಗೆ ಕಳುಹಿಸಿಕೊಟ್ಟಿದ್ದನಂತೆ. ಇದೊಂದು ಕ್ರೂರ ಆಟಿಕೆಯಾಗಿ ಕಂಡರೂ ಟಿಪ್ಪು-ಫ್ರೆಂಚ್ ಮತ್ತು ಇಂಗ್ಲೀಷರ ಪರಸ್ಪರ ಮೈತ್ರಿ ಶತ್ರುತ್ವಗಳ ಪ್ರತೀಕವಾಗಿದೆ. ಹುಲಿಯಿಂದ ಕೊಲ್ಲಲ್ಪಟ್ಟ ಹೆಕ್ಟೇರ್ ಮುನ್ರೋ ಮರಣದ ಸುದ್ದಿ ಈ ವಿನ್ಯಾಸಕ್ಕೆ ಸ್ಫೂರ್ತಿಯಾಯಿತು. ಪ್ರಸ್ತುತದಲ್ಲಿ ಇದನ್ನು ವಿಕ್ಟೋರಿಯಾ ಮತ್ತು ಆಲ್ಬರ್ಟ್ ವಸ್ತುಸಂಗ್ರಹಾಲಯದಲ್ಲಿ ಇರಿಸಲಾಗಿದೆ.

ಟಿಪ್ಪುವಿನ ಸಿಂಹಾಸನ

ಮೈಸೂರಿನ ಸುಲ್ತಾನರು ಸಿಂಹಾಸನ ಏರಿದ್ದರೆ ರತ್ನಖಚಿತ. ಅಷ್ಟಕೋನ ಸಿಂಹಾಸನವು ಭಾರತದಲ್ಲೇ ಉಳಿಯುತ್ತಿತ್ತು. ಕ್ರಿ.ಶ.೧೭೮೭ರಲ್ಲಿ ಟಿಪ್ಪು ಸಿಂಹಾಸನರೂಢನಾಗುವ ಉದ್ದೇಶದಿಂದ

ಕಪ್ಪುಮರದ ಸಿಂಹಾಸನ ತಯಾರಿಸಲು ಆಜ್ಞಾಪಿಸಿದ. ಆದರೆ ಅನೇಕ ಅಡಚಣೆಗಳು ಆತನ ಯೋಜನೆಗಳನ್ನು ಸ್ಥಗಿತಗೊಳಿಸಿದವು. ಕ್ರಿ.ಶ.೧೭೯೨ರಲ್ಲಿ ಆಂಗ್ಲರನ್ನು ತನ್ನದೇಶದಿಂದ ತೊಲಗಿಸುವ ತನಕ ತಾನು ಸಿಂಹಾಸನರೂಢನಾಗುವುದಿಲ್ಲವೆಂದು ಪ್ರತಿಜ್ಞೆ ಮಾಡಿದ.

ಅಷ್ಟಾಕೃತಿಯ ಸಿಂಹಾಸನವು ಹುಲಿಕಟ್ಟೆ ಮತ್ತು ಮೊನೆಯುಗುರುಗಳಿಂದ, ಎಂಟು ಹುಲಿ ಕಾಲುಗಳಿಂದ ಆಧಾರಗೊಂಡಿದೆ. ಹುಲಿಯಾಕಾರವು ಮುಂಭಾಗದಲ್ಲಿ ರಚಿತವಾಗಿದೆ. ಅಷ್ಟಕೋನ ಅಂಬಾರಿ (೮ ಅಡಿ ಉದ್ದ- ೫ಅಡಿ ಅಗಲ) ಹುಲಿಯ ಬೆನ್ನಿನ ಮೇಲಿದೆ. ಈ ಸಿಂಹಾಸನವು ಸುವರ್ಣ ಹುಲಿ ಶಿಖರಗಳಿಂದ ಸುತ್ತುವರೆದಿದೆ, ವಜ್ರ, ಕೆಂಪು ಮೊದಲಾದ ಉತ್ಕೃಷ್ಟ ರತ್ನಗಳಿಂದ ಪ್ರಶಸ್ತ ಶಿಲೆಗಳಿಂದ ಅಲಂಕೃತವಾಗಿದೆ. ಫ್ರೆಂಚ್ ಆಸ್ಥಾನದಿಂದ ಉಡುಗೊರೆಯಾಗಿ ಬಂದಿದ್ದ ನಾಲ್ಕು ಸ್ಫಟಿಕದ ಆಧಾರ ಸ್ತಂಭಗಳು ಸಿಂಹಾಸನಕ್ಕೆ ಭದ್ರತೆಯನ್ನು ನೀಡಿವೆ.

ಒಂದೊಂದು ಪಕ್ಕದ ಅಂಚನ್ನು ಬೆಳ್ಳಿಯ ಮೊಳೆಗಳನ್ನು ಬಡಿದು ಬಿಗಿಗೊಳಿಸಲಾಗಿದೆ. ಚಕ್ರವರ್ತಿಗೆ ಪವಿತ್ರ ಕುರಾನಿನಿಂದ ಏಳುತ್ತಿರುವಂತೆ ಕಾಣುವ ಅಲಂಕೃತ ಲಘು ಮರದ ಸ್ತಂಭ ಮೇಲ್ಪದರಕ್ಕೆ ಆಧಾರವಾಗಿದೆ. ಮೇಲ್ಪದರದ ಅಂಚಿಗೆ ಮುತ್ತು, ರತ್ನಗಳು ಅಲಂಕಾರ ನೀಡಿವೆ. ರತ್ನ, ವಜ್ರ ಮತ್ತು ವೈಢೂರ್ಯಗಳಿಂದ ಅಲಂಕೃತಗೊಂಡಿರುವ ಹ್ಯೂಮಪಕ್ಷಿ ಮೇಲ್ಪದರದಲ್ಲಿ ಶೋಭಿಸುತ್ತದೆ.

ಈ ಹ್ಯೂಮ ಎಂಬುದು ಪರ್ಷಿಯಾದ ಪುರಾಣಪಕ್ಷಿ. ಕೇವಲ ಒಂದು ನಿಮಿಷ ಮಾತ್ರ ಕೆಳಗಿಳಿಯುವ, ಈ ಪಕ್ಷಿಯ ನೆರಳು ಯಾರ ಮೇಲಾದರೂ ಬಿದ್ದರೆ ಆತನು ಕಿರೀಟಧಾರಿಯಾಗುವ ನಂಬಿಕೆಯಿದೆ.

ಕ್ರಿ.ಶ.೧೭೯೯ ರಲ್ಲಿ ಟಿಪ್ಪುವಿನ ಮರಣ ನಂತರ ಈ ಸಿಂಹಾಸನವನ್ನು ಖರೀದಿಸಲು ಯಾರು ಮುಂದೆ ಬಾರದ ಕಾರಣ ಮತ್ತು ಅಖಂಡವಾಗಿ ಸ್ಥಳಾಂತರಿಸಲು ಆಗದಿದ್ದಾಗ ಸಿಂಹಾಸನವನ್ನು ಮಧ್ಯ ಬಿಡಿ ಭಾಗಗಳನ್ನಾಗಿ ಮಾಡಿ ಈಸ್ಟ್ ಇಂಡಿಯಾ ಕಂಪನಿಯ ಕಮೀಷನರ್‌ರವರ ಉಸ್ತುವಾರಿಯಲ್ಲಿ ಹರಾಜು ಮಾಡಿತು. ಲಾರ್ಡ್ ಮೋರಿಂಗ್ ಟನ್ ಈ ಹ್ಯೂಮ್ ಪಕ್ಷಿಯನ್ನು ಖರೀದಿಸಿದ. ಕೆಲ ವರ್ಷಗಳ ನಂತರ ವಿಕ್ಟೋರಿಯಾ ರಾಣಿಗೆ ಉಡುಗೊರೆಯಾಗಿ ಕಳುಹಿಸಲಾಯಿತೆಂದು ತಿಳಿಯಲಾಗಿದೆ.

ಹುಲಿಯ ಶಿರಭಾಗ ಮತ್ತು ಹ್ಯೂಮ ಈಗ ಲಂಡನ್‌ನ ವಿಂಡ್ಸರ್‌ನಲ್ಲಿ ಪ್ರದರ್ಶಿತವಾಗಿವೆ. ಸಣ್ಣ ಹುಲಿಯ ಶಿಖರಾಲಂಕಾರ ಯು.ಕೆ.ಯ ಪೋಲೀಸ್ ಕ್ಯಾಸ್ಸಲ್‌ನಲ್ಲಿದೆ.

ಟಿಪ್ಪುವಿಗೆ ಸಂಬಂಧಿಸಿದ ಕೋಟೆಗಳು

ಕೋಟೆಗಳು ಆಯಾ ಕಾಲದ ರಾಜರುಗಳ ಆಳ್ವಿಕೆಗೆ ಜೀವಂತ ಐತಿಹ್ಯಗಳು ಎನ್ನಬಹುದು. ತಮ್ಮ ಪ್ರದೇಶ/ಆಳ್ವಿಕೆಯ ಸ್ಥಳ, ಆಳ್ವಿಕೆಯ ಪ್ರಾಂತ್ಯಗಳನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು, ತಮ್ಮ ರಾಜ ಪದವಿಯನ್ನು ಉಳಿಸಿಕೊಳ್ಳಲು ಕಟ್ಟಿಕೊಳ್ಳುತ್ತಿದ್ದರು. ಕರ್ನಾಟಕದ ಹಲವಾರು ಕೋಟೆಗಳು ಟಿಪ್ಪುವಿನ ಪ್ರತೀತಿ ಸಾರುತ್ತವೆ.

ಅ. ದೇವನಹಳ್ಳಿಯ ಕೋಟೆ

ದೇವನಹಳ್ಳಿಯು ಬೆಂಗಳೂರಿನಿಂದ ಉತ್ತರಕ್ಕೆ ೩೫ ಕಿ.ಮೀ. ದೂರದಲ್ಲಿದ್ದು ವೇಗವಾಗಿ ಪ್ರಬುದ್ಧಮಾನಕ್ಕೆ ಬರುತ್ತಿರುವ ಮತ್ತು ಪ್ರಾಗೈತಿಹಾಸಿಕ ಕಾಲದಿಂದ–ಟಿಪ್ಪುವಿನವರೆಗೂ ಪ್ರಾಚೀನತೆಯನ್ನು ಹೊಂದಿರುವ ತಾಲ್ಲೂಕು ವಿಜಯನಗರ ರಾಜರ ಆಳ್ವಿಕೆಯ ಕಾಲದಲ್ಲಿ ಅವರ ಸಾಮಂತ ರಾಜನಾದ ರಣಬೈರೇಗೌಡ ಕ್ರಿ.ಶ.೧೫೦೧ ರಲ್ಲಿ ದೇವನದೊಡ್ಡಿಯ (ದೇವನಹಳ್ಳಿ ಮೊದಲನೇ ಹೆಸರು) ದೇವರಾಯನಿಂದ ಅನುಮತಿಯನ್ನು ಪಡೆದು ಇಲ್ಲಿ ಕೋಟೆ ಕಟ್ಟಿದರೂ ಸಹ ಜನಪದರು 'ಟಿಪ್ಪು ಕೋಟೆ' ಎಂದೇ ಕರೆಯುವರು. ಇದು ಟಿಪ್ಪುವಿನ ಅಚ್ಚುಮೆಚ್ಚಿನ ಬೇಟೆಯಾಡುವ ಸ್ಥಳವಾಗಿತ್ತು. ಟಿಪ್ಪು ಕೋಟೆಯ ರಕ್ಷಣಾರ್ಥ ಕಂದಕ ತೋಡಿ ಅದರಲ್ಲಿ ನೀರು ತುಂಬಿಸಿ, ಮೊಸಳೆಗಳನ್ನು ಬಿಟ್ಟಿದ್ದ ಎಂದು ಜನಪದರು ನಂಬಿದ್ದಾರೆ.

ಆ. ಸುಲ್ತಾನ್ ಬತ್ತೇರಿ ಕೋಟೆ

ಪ್ರಾಚೀನ ಕಾಲದಿಂದಲು ಮಂಗಳೂರು ಒಂದು ಮುಖ್ಯವಾದ ನಗರವಾಗಿತ್ತು. ಕ್ರಿ.ಶ.೧೭೬೮ ರಲ್ಲಿ ಕೆಲ ಕಾಲ ಬ್ರಿಟೀಷರ ಆಳ್ವಿಕೆಯಲ್ಲಿದ್ದ ಈ ಸಂಸ್ಥಾನವು ಕ್ರಿ.ಶ.೧೭೯೯ರಲ್ಲಿ ಟಿಪ್ಪುವಿನ ಮರಣದ ನಂತರ ಮತ್ತೆ ಬ್ರಿಟೀಷರಿಗೆ ಲಭಿಸಿತು.

ಟಿಪ್ಪು ಗುರುಪುರ ನದಿಗೆ ಯುದ್ಧ ನೌಕೆಗಳು ಬರುವುದನ್ನು ತಡೆಯಲು ಕಾವಲು ಕೋಟೆಯಾದ ಸುಲ್ತಾನ್ ಬತೇರಿಯನ್ನು ನಿರ್ಮಿಸಿದನು. ಇದು ಸಣ್ಣದಾದ ಕಾವಲು ಗೋಪುರವಾದರೂ ಸಹ ಕೋಟೆಯಂತೆ ಕಾಣಿಸುತ್ತದೆ. ಫಿರಂಗಿಗಳ ಮೂಲಕ ಗುಂಡು ಹಾರಿಸುವ ಸಲುವಾಗಿ ಇದು ರಚಿತವಾಗಿದೆ.

ಇ. ನಂದಿಬೆಟ್ಟದ ಕೋಟೆ

"ಕರ್ನಾಟಕಕ್ಕೆ ಬಂದು ನಂದಿದುರ್ಗ ನೋಡದೆ ಹೋದರೆ ಹಂದಿಗಿಂತ ಕಡೆ" ಎಂಬ ಉಕ್ತಿಯೊಂದಿದೆ. ಈ ಕೋಟೆಯನ್ನು ಗಂಗರ ಕಾಲದಲ್ಲಿ ಚಿಕ್ಕಬಳ್ಳಾಪುರದ ಪಾಳೆಯಗಾರರು

ನಂದಿದುರ್ಗದ ರಕ್ಷಣೆಗಾಗಿ ಕಟ್ಟಿದರು. ನಂದಿಬೆಟ್ಟದ ಈ ಮಣ್ಣಿನ ಕೋಟೆಯನ್ನು ಟಿಪ್ಪು ಸುಲ್ತಾನನು ಕೋಳಮೊಟ್ಟೆ, ಮರಳು, ಸುಣ್ಣ ಮತ್ತು ಕಲ್ಲುಗಳ ತುಕ್ರಿ ಕೆಲಸ ದ ಮೂಲಕ ಭದ್ರಪಡಿಸಿದ. ಟಿಪ್ಪು ಬ್ರಿಟೀಷರೊಂದಿಗೆ ರಹಸ್ಯವಾಗಿ ಹೋರಾಡಲು ರಹಸ್ಯ ತಾಣ ಮಾಡಿಕೊಂಡಿದ್ದ ಎಂದು ಜನರು ನಂಬಿದ್ದಾರೆ.

ಈ. ಟಿಪ್ಪು ಡ್ರಾಫ್

ಟಿಪ್ಪು ತಪ್ಪು ಮಾಡುವ ಸೈನಿಕರು, ಕಳ್ಳರು, ದರೋಡೆಕೋರರು, ಸುಲಿಗೆ ಮಾಡುವವರನ್ನು ನಿರ್ದಾಕ್ಷಿಣ್ಯವಾಗಿ ನಂದಿಬೆಟ್ಟದ ಡ್ರಾಫ್‌ನಿಂದ ನೂಕುತ್ತಿದ್ದರಿಂದ ಇದನ್ನು ಈಗಲೂ ಟಿಪ್ಪು ಡ್ರಾಫ್ ಎಂದೇ ಕರೆಯುವರು.

ಪ್ರಸ್ತುತ ಈ ಸ್ಥಳವು ಪ್ರೇಮಿಗಳಿಗೆ ಪೋಷಕರು ಮದುವೆಗೆ ಅವಕಾಶ ನೀಡದಿದ್ದಾಗ, ಮನೆಯಲ್ಲಿ ಗಂಡ ಹೆಂಡತಿ ಜಗಳವಾಡಿದಾಗ, ದೂರಚಾರಿಗಳು ಹೆಣ್ಣು ಮಕ್ಕಳನ್ನು ಅತ್ಯಾಚಾರ ಮಾಡಿ ಬೆಟ್ಟದಿಂದ ತಳ್ಳಲು, ಭಗ್ನ ಪ್ರೇಮಿಗಳು ಸಾಯಲು, ಕೌಟುಂಬಿಕ ಜೀವನದಲ್ಲಿ ನೊಂದಿರುವವರು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಳವಾಗಿ ಮಾರ್ಪಟ್ಟಿದೆ.

ಉ. ಬೆಂಗಳೂರು ಕೋಟೆ:

ಬೆಂಗಳೂರು ನಗರ ನಿರ್ಮಾಪಕವಾದ ಕೆಂಪೇಗೌಡ ಇದರ ಸ್ಥಾಪನೆಗೆ ಮೊದಲು ಸ್ಥಳವನ್ನು ಅರಸುತ್ತಾ ಬಂದಾಗ ಹಸಿದಿದ್ದ ಒಬ್ಬ ಮುದುಕಿ ಬೆಂದಕಾಳುಗಳನ್ನು ಕೊಟ್ಟಳಂತೆ, ಆದ್ದರಿಂದಲೇ ಅಜ್ಜಿ ನೆಲಸಿದ್ದ ಸ್ಥಳ ಬೆಂದಕಾಳೂರು ಎಂದು ಪ್ರಸಿದ್ಧವಾಗಿ, ಬರುಬರುತ್ತಾ ಬೆಂಗಳೂರು ಆಗಿದೆ. ಬೆಂಗಳೂರಿನ ಕೋಟೆಯನ್ನು ಟಿಪ್ಪು ತನ್ನ ಪ್ರತಿಷ್ಠೆಗಾಗಿ ಕಾರ್ನ್‌ವಾಲೀಸ್‌ನಿಂದ ಒಂದು ವರ್ಷದ ಅವಧಿಗಾಗಿ ಪಡೆದುಕೊಂಡಿದ್ದ ಎಂಬ ನಂಬಿಕೆ ಇದೆ.

ಊ. ಮಡಿಕೇರಿ ಕೋಟೆ:

ಹಾಲೇರಿ ವಂಶದ ಅರಸರ ಕಾಲದಲ್ಲಿ ಮುದ್ದುರಾಜನೆಂಬುವನು ಮಡಿಕೇರಿ ನಗರವನ್ನು ಕ್ರಿ.ಶ.೧೬೮೧ ರಲ್ಲಿ ಸ್ಥಾಪಿಸಿದನೆಂದು ತಿಳಿದು ಬರುತ್ತದೆ. ಆತನ ಕಾಲದಲ್ಲಿ ಆ ಸ್ಥಳಕ್ಕೆ ಮುದ್ದು ರಾಜಕೇರಿ ಎಂಬ ಹೆಸರಿದ್ದು. ನಂತರ ಜನರ ಬಾಯಲ್ಲಿ ಮಡಿಕೇರಿ ಆಯಿತೆಂದು ತೋರುತ್ತದೆ. ಈ ಸ್ಥಳವನ್ನು ಬ್ರಿಟೀಷರ ಕಾಲದಲ್ಲಿ ಮಾರಕೇರಾ ಎಂದು ಕರೆಯುತ್ತಿದ್ದರು. ಮುದ್ದುರಾಜನು ಇಲ್ಲಿ ಒಂದು ಮಣ್ಣಿನ ಕೋಟೆ ಮತ್ತು ಅರಮನೆಯನ್ನು ಕ್ರಿ.ಶ ೧೭ನೇ ಶತಮಾನದ ಅಂತ್ಯದಲ್ಲಿ

ಕಟ್ಟಿಸಿದನು. ಈ ಮಣ್ಣಿನ ಕೋಟೆಯನ್ನು ಟಿಪ್ಪು ಸುಲ್ತಾನನು ಕಲ್ಲಿನಲ್ಲಿ ಪುನಾರ್ರಚಿಸಿ ಇದಕ್ಕೆ ಜಾಫರಬಾದ್ ಎಂದು ಹೆಸರಿಟ್ಟಿದ್ದನು.

ಋ. ಮಂಜ್ರಾಬಾದ್‌ಕೋಟೆ

ಟಿಪ್ಪುವಿಗೆ ಅತ್ಯಂತ ಪ್ರಿಯವಾದ ಊರುಗಳಲ್ಲಿ ಮಂಜ್ರಾಬಾದ್ ಕೂಡ ಒಂದಾಗಿತ್ತು. ಪ್ರತಿ ದಿನದ ಬೆಳಗ್ಗೆ ಮತ್ತು ಸಾಯಂಕಾಲ ಮಂಜ್ರಾಬಾದ್‌ನಲ್ಲಿ ದಟ್ಟವಾದ ಮಂಜು ಆವರಿಸಿಕೊಂಡು ಪಜ್ಜೆಯ ವಿಶಾಲ ಶ್ವೇತ ವರ್ಣದ ಸಮೂಹವನ್ನೇ ಬಿಡಿಸಿಟ್ಟಂತೆ ತೋರುತ್ತಿತ್ತು. ಇದರ ಸೌಂದರ್ಯಕ್ಕೆ ಟಿಪ್ಪು ಮಾರು ಹೋಗಿದ್ದ. ಆದುದರಿಂದ ಟಿಪ್ಪು ಈ ಊರಿಗೆ ಮಂಜ್ರಾಬಾದ್ ಎಂದು ಹೆಸರಿಟ್ಟಿದ್ದನು.

ಎ. ಟಿಪ್ಪುವಿನ ಜನ್ಮಸ್ಥಳ–ದೇವನಹಳ್ಳಿ

ದೇವನಹಳ್ಳಿ ಒಂದು ತಾಲ್ಲೂಕು. ಈ ಊರಿಗೆ ಪ್ರಸಿದ್ಧಿ ಬಂದಿರುವುದು 'ಮೈಸೂರು ಹುಲಿ' ಎಂದೇ ಖ್ಯಾತಿ ಪಡೆದ ಟಿಪ್ಪು ಸುಲ್ತಾನನಿಂದ. ಕ್ರಿ.ಶ.೧೭೫೦ ನವೆಂಬರ್ ೧೦ರಂದು ಟಿಪ್ಪು ಹುಟ್ಟಿದ್ದು ಈ ಊರಿನ ಚಿಕ್ಕ ಗುಡಿಸಲಿನಲ್ಲಿ. ಟಿಪ್ಪು ಇದಕ್ಕೆ ಯುಸುಫಾಬಾದ್ ಎಂದು ಕರೆಯುತ್ತಿದ್ದನಂತೆ.

೫.೫ ಲಾವಣಿಗಳು

ಜನಪದ ಸಾಹಿತ್ಯದ ಒಂದು ಪ್ರಮುಖ ಪ್ರಕಾರ ಲಾವಣಿ. ಇದು ಕಾವ್ಯ ಕಲೆಯ ಅತ್ಯಂತ ಪ್ರಾಚೀನ ರೂಪ ಹಾಗೂ ಪದ್ಯರೂಪದ ಸಣ್ಣಕತೆ. ಲಾವಣಿ ಜನಪದ ಮೂಲಕ್ಕೆ ಸಂಬಂಧಿಸಿದ ಕಥನಗೀತೆಯಾದುದರಿಂದ ಅದು ಜನಸಾಮಾನ್ಯರ ಸ್ವತ್ತಾಗಿದೆ. ಹಾಡುವವರು, ಕೇಳುವವರು, ರಚಿಸಿದವರು ಎಲ್ಲರೂ ಜನಪದ ಮೂಲದವರೇ ಆದ್ದರಿಂದ ಲಾವಣಿಯು ಜನಸಾಮಾನ್ಯರ ಕಾವ್ಯವೆಂದು ಜನಪ್ರಿಯವಾಗಿದೆ.

ಚಿಕ್ಕ ಚಿಕ್ಕ ಪದ್ಯಗಳಲ್ಲಿ ಜನಪ್ರಿಯ ಕಥೆಯನ್ನು ಒಳಗೊಂಡ ಸರಳ ಶಕ್ತಿಯುತವಾದ ಲಾವಣಿ ತುಂಬಾ ಕಲಾತ್ಮಕವಾಗಿ ಹಾಗೂ ಕ್ಲಿಷ್ಟಕರವಾದ ಸಾಹಿತ್ಯ ಪ್ರಕಾರ ಎಂದು ಹೃದ್ಗೋಚರವಾಗುತ್ತದೆ.

ಇಂಗ್ಲೀಷಿನ Ballad ಎನ್ನುವ ಪದಕ್ಕೆ ಸಂವಾದಿಯಾಗಿ 'ಲಾವಣಿ' ಎಂಬ ಪದ ಈಗ ಬಳಕೆಯಲ್ಲಿದೆ. Ballad ಎಂಬ ಇಂಗ್ಲಿಷ್ ಶಬ್ದವು ಲ್ಯಾಟಿನ್ ಪದದಿಂದ ಬಂದಿದ್ದು, Ballad ಎಂಬ ಪದವು ಕಥನಗೀತೆ ಎಂಬ ಅರ್ಥವನ್ನು ನೀಡುತ್ತದೆ.

ಆಕ್ಸ್‌ಫರ್ಡ್ ಇಂಗ್ಲೀಷ್ ಅರ್ಥಕೋಶ Balladಗೆ ಈ ರೀತಿಯ ಅರ್ಥವನ್ನು ನೀಡುತ್ತದೆ. A simple spirited poem in short stanzas, narrating some popular story". ಆದರೆ ಇದು ತೀರ ಸಂಕುಚಿತ ಅರ್ಥವನ್ನು ನೀಡುತ್ತದೆ. ಲಾವಣಿಯ ನೈಜ ಸ್ವರೂಪವನ್ನು ಅದು ಹೇಳುವುದಿಲ್ಲವೆಂಬುದನ್ನು ಗಮನಿಸಬಹುದಾಗಿದೆ.

ಮ್ಯಾಕ್ ಎಡ್ವರ್ಡ್ ಲೀಚ್ ಅವರ ಪ್ರಕಾರ "ಇದು ಒಂದು ನಿರೂಪಣೆ; ಈ ನಿರೂಪಣೆ ಹಾಡಲು ಬರುವಂಥದು: ವಸ್ತು, ಶೈಲಿ, ತಂತ್ರ, ಗುರಿಗಳಲ್ಲಿ ಅದು ಜಾನಪದೀಯವಾದುದ್ದು".

ವಿಲಿಯಂ ಷೆನ್‌ಸ್ಟೋನ್ ಕ್ರಿ.ಶ.೧೭೬೧ರಲ್ಲಿ ಬಿಷಪ್ ಪೆರ್ಸಿಗೆ ಬರೆದ ಪತ್ರದಲ್ಲಿ ಬ್ಯಾಲೆಡ್ ಎಂಬ ಮಾತನ್ನು ಭಾವಪ್ರಧಾನ ಗೀತೆಗಳಿಂದ ಪ್ರತ್ಯೇಕಿಸಿ ಜನಪದ ಕಥನಗೀತೆಗಳಿಗೆ ಮಾತ್ರ ಅನ್ವಯಿಸುವುದು ಸೂಕ್ತ ಎಂದು ಬರೆದ. ಮುಂದೆ ಪೆರ್ಸಿ ಕ್ರಿ.ಶ.೧೭೬೫ರಲ್ಲಿ ತನ್ನ ಗ್ರಂಥದಲ್ಲಿ ನಿರ್ದಿಷ್ಟವಾಗಿ ಕಥನಗೀತೆಗಳಿಗೆ ಬ್ಯಾಲೆಡ್‌ನ್ನು ಅನ್ವಯಿಸಿ ಬರೆದ. ಇದರಿಂದ ಲಾವಣಿಯ ಮೂಲವನ್ನು ಕಾಣಬಹುದು.

ಜಗತ್ತಿನ ಎಲ್ಲಾ ಜನಪದ ಸಾಹಿತ್ಯದಲ್ಲೂ ಲಾವಣಿ ಒಂದು ಪ್ರಮುಖ ಪ್ರಕಾರ. ಜಾನಪದದ ಮಿಕ್ಕೆಲ್ಲಾ ಪ್ರಕಾರಗಳಂತೆ ಇದೂ ಸಹ ಸ್ವಾಭಾವಿಕಾಗಿ ಹುಟ್ಟಿಕೊಂಡಿದೆ. ಜನಪದ ಲಾವಣಿಗಳ ಮೂಲವನ್ನು ವೇದಗಳ ಕಾಲಕ್ಕೆ ಆರೋಪಿಸುವ ಸಂದರ್ಭಗಳನ್ನು ಕಾಣಬಹುದು. ವೈದಿಕ ಸಾಹಿತ್ಯದ ಗಾದೆಗಳು ನಮ್ಮ ಲಾವಣಿ ಸಾಹಿತ್ಯದ ಪ್ರಾಚೀನ ರೂಪಗಳೆಂದು ಕರೆಯಲಾಗಿದೆ. ಜೈಮಿನಿಯ ಉಪನಿಷತ್ ಬ್ರಾಹ್ಮಣದಲ್ಲಿ ಮೂರು ಬಗೆಯ ಲಾವಣಿಗಳನ್ನು ಹೆಸರಿಸಲಾಗಿದೆ.

ಗಾಥಾ, ನಾರಶಂಸಿ ಮತ್ತು ರೈಭ್ಯಾ ಪವಿತ್ರ ವೇದಗಳಿಂದ ಪ್ರತ್ಯೇಕಿಸಲ್ಪಟ್ಟ ಗಾದೆಗಳು ಲೌಕಿಕ ಗೀತೆಗಳಾಗಿ ಉಳಿದು ಬಂದಿವೆ. ಅವುಗಳನ್ನು ಹಾಡುವವರು. ಕೆಳದರ್ಜೆಯವರೆಂದು ಪರಿಗಣಿತವಾದರು. ಮಾನವನ ಉತ್ತಮ ಕಾರ್ಯಗಳು, ಶೌರ್ಯ, ಸಾಹಸಗಳು, ದಾನ ಧರ್ಮಗಳು ಮುಂತಾದ ಉದಾತ್ತ ಗುಣಗಳನ್ನು ಕೊಂಡಾಡುವ ಈ ಸಾಹಿತ್ಯದ ಪ್ರಥಮ ನಾಯಕ ಪರೀಕ್ಷಿತ್ ರಾಜ. ಅಥರ್ವಣ ವೇದದಲ್ಲಿ ಪರೀಕ್ಷಿತ್ ಗಾದೆಗಳು ಉಲ್ಲೇಖಿತವಾಗಿದೆ.

ಬ್ಯಾಲೆಡ್ ಪ್ರಕಾರದ ಲಕ್ಷಣಗಳನ್ನು ನಿರೂಪಿಸುವಲ್ಲಿ ತಜ್ಞರೊಳಗೆ ಒಮ್ಮತದ ಅಭಿಪ್ರಾಯವಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅದನ್ನು ವಿವರಿಸಲು ಪ್ರಯತ್ನಿಸಿದ್ದಾರೆ. "ಚಿಕ್ಕ ಚಿಕ್ಕ ಪದ್ಯಗಳಲ್ಲಿ ಜನಪ್ರಿಯ ಕಥೆಯನ್ನೊಳಗೊಂಡ ಸರಳವೂ ಶಕ್ತಿಯುತವೂ ಆದ ಕಾವ್ಯವೇ ಬ್ಯಾಲೆಡ್" ಎಂಬುದಾಗಿ ಆಕ್ಸ್‌ಫರ್ಡ್ ಇಂಗ್ಲೀಷ್ ನಿಘಂಟು ಅದರ ಲಕ್ಷಣವನ್ನು

ನಿರೂಪಿಸುತ್ತದೆ. ಉಗಮ ಮತ್ತು ಪ್ರಸಾರಗಳ ದೃಷ್ಟಿಯಿಂದ ಜಾನಪದೀಯವಾಗಿಯೂ ಮೌಖಿಕ ಪದ್ಧತಿಗನುಗುಣವಾಗಿಯೂ ಇರುವ ಭಾವಾತ್ಮಕ ಮನೋಧರ್ಮದ ಮಾಧ್ಯಮದ ಮೂಲಕ ಅಭಿವ್ಯಕ್ತಗೊಳ್ಳುವ, ಶೌರ್ಯಾತ್ಮಕವೂ, ಸಾಹಸಾತ್ಮಕವೂ ಆದ ಘಟನೆಗಳನ್ನು ವಿವರಿಸುವ ಸರಳ ಕಥನಕಾವ್ಯವೇ ಜನಪ್ರಿಯ ಬ್ಯಾಲೆಡ್ ಎಂದು ಎ.ಎಚ್. ಕ್ರಾಪೆಯವರು ವಿವರಣೆ ನೀಡಿದ್ದಾರೆ. ಒಂದೇ ಒಂದು ಪ್ರಮುಖ ಘಟನೆಯ ಸುತ್ತ ಕೇಂದ್ರೀಕರಣಗೊಂಡ ಕತೆ ಇರಬೇಕು. ಸುಂದರವಾದ ಪದಗಳೆಷ್ಟು ಮುಖ್ಯವೋ, ರಾಗ ಮಾಧುರ್ಯವೂ ಅಷ್ಟೇ ಮುಖ್ಯ. ಕವಿಯ ಅಥವಾ ಹಾಡುಗಾರನ ವ್ಯಕ್ತಿತ್ವ ವಿಮುಕ್ತವಾದ ಸಂಗೀತಕ್ಕೊಳಪಟ್ಟ, ಸರಳ ವಸ್ತು ಸಂವಿಧಾನವುಳ್ಳ, ಸುಲಭ ಛಂದಸ್ಸಿನ ಹಲವು ಪದ್ಯಗಳುಳ್ಳ ಚಿಕ್ಕಕಥನ ಕಾವ್ಯವೇ ಬ್ಯಾಲೆಡ್ ಎಂದು ಜಿ.ಎಲ್. ಕಿತ್ರೆಜ್ ಅಭಿಪ್ರಾಯಪಟ್ಟಿದ್ದಾರೆ. ಆದರೆ ಬ್ಯಾಲೆಡ್ ಸಂಗೀತವಲ್ಲ. ಸಾಮಾನ್ಯವಾಗಿ ಅದರ ಮಡಿಲಲ್ಲೊಂಡು ಕಥೆಯಿರುತ್ತದೆ. ಕೆಲವೊಮ್ಮೆ ಅದು ಸಹಾಸಾತ್ಮಕ, ರೋಮಾಂಚಕಾರಕವಾದ ಕಾವ್ಯಗಳ ಸಂಗ್ರಹವಾಗಿದ್ದು ಹ್ರಸ್ವ ಅವಧಿಯ ವಾಚನಕ್ಕಾಗಿ ಹಾಗೂ ಸಾಮಾನ್ಯ ಜನರ ಮನಸ್ಸಿನ ಮೇಲೆ ಬಹು ಬೇಗನೆ ಪ್ರಭಾವ ಬೀರುವ ಸಲುವಾಗಿ ಅಳವಡಿಸಿಕೊಂಡದ್ದು ಅದೊಂದು ಜನಪದ ಕಥನಗೀತೆ. ಕಥಾಂಶ ಇಲ್ಲಿ ಮುಖ್ಯವಾಗಿರುತ್ತದೆ.

ಲಾವಣಿಯು ಕಥನಾತ್ವಕವಾದುದು, ಹಾಡುವಂತದ್ದು, ಹೇಳುವಂತದ್ದಲ್ಲ, ವಸ್ತು, ಶೈಲಿ, ರೂಪಗಳಲ್ಲಿ ಅದು ಜಾನಪದ ಮೂಲಕ್ಕೆ ಸಂಬಂಧಪಡುತ್ತದೆ. ಘಟನೆ ಮತ್ತು ಸಂಭಾಷಣೆಗಳ ಮೂಲಕ ಕ್ರಿಯೆಯ ಉತ್ಕರ್ಷದ ಅಂತ್ಯದಲ್ಲಿ ಎಟುಕಿಸಿಕೊಳ್ಳುತ್ತದೆ. ಲಾವಣಿಯ ಸಂವಿಧಾನ ಮತ್ತು ತಂತ್ರವು ಅತ್ಯಂತ ಸರಳವಾದುದು. ಲಾವಣಿಗಳನ್ನು ಹಾಡುವಾಗ ಜನಪದ ವಾದ್ಯಗಳನ್ನು ಬಳಸಲಾಗುತ್ತದೆ.

ಭಾರತದಲ್ಲಿ ಲಾವಣಿಗಳ ಅಧ್ಯಯನ ಆರಂಭವಾದುದು ಮೊದಲಿಗೆ ಬಂಗಾಳದಲ್ಲಿ. ಕರ್ನಾಟಕದಲ್ಲಿ ಗೀತ ಸಂಗ್ರಹಗಳ ಜತೆ ಜತೆಯಲ್ಲಿಯೇ ಲಾವಣಿಗಳ ಸಂಗ್ರಹವೂ ಆರಂಭವಾಯಿತು. ಕರ್ನಾಟಕದ ಉತ್ತರ ಭಾಗದಲ್ಲಿ ಹೆಚ್ಚಾಗಿ ಮರಾಠಿ ಪ್ರಭಾವವಿರುವ ಕಡೆಗಳಲ್ಲಿ ಲಾವಣಿ ಸಂಪ್ರದಾಯವು ಬೆಳೆದು ಬಂದಿದೆ. ದಕ್ಷಿಣ ಕರ್ನಾಟಕದಲ್ಲಿ ರೂಢಿಯಲ್ಲಿರುವುದಾದರೂ, ಉತ್ತರ ಕರ್ನಾಟಕದಲ್ಲಿರುವಂತೆ ವೈವಿಧ್ಯ ಪ್ರಭೇದ ಮತ್ತು ಸಮೃದ್ಧತೆಯನ್ನು ದಕ್ಷಿಣ ಕರ್ನಾಟಕದಲ್ಲಿ ಕಾಣಲಾಗುವುದಿಲ್ಲ.

ಇತಿಹಾಸವನ್ನು ಆಳಿದ ರಾಜ ಮಹಾರಾಜ ಪಾಳೆಯಗಾರರಿಗೆ ಸಂಬಂಧಿಸಿದ ವಸ್ತುವನ್ನುಳ್ಳ ಲಾವಣಿಗಳನ್ನು ಮುಖ್ಯವಾಗಿ ಐತಿಹಾಸಿಕ ಲಾವಣಿಗಳು ಎಂದು ಕರೆಯಲಾಗುತ್ತದೆ. ಇತರ ವಸ್ತುಗಳನ್ನು ಆಧರಿಸಿ ರಚಿತವಾಗಿರುವ ಲಾವಣಿಗಳಿಗೆ ಹೋಲಿಸಿದರೆ

ಐತಿಹಾಸಿಕ ಲಾವಣಿಗಳು ಕಡಿಮೆ ಇದೆ ಎಂದು ವಿದ್ವಾಂಸರ ಅಭಿಪ್ರಾಯ. ದೊರೆಯುವ ಐತಿಹಾಸಿಕ ಲಾವಣಿಗಳು ಸಣ್ಣಪುಟ್ಟ ಪಾಳೆಯಗಾರರನ್ನು ಕುರಿತವುಗಳು ಅಧಿಕ ಪ್ರಮಾಣದಲ್ಲಿ ದೊರೆಯುತ್ತದೆ. ಪ್ರಸಿದ್ಧ ರಾಜವಂಶಗಳು, ಚಕ್ರವರ್ತಿಗಳು, ನಮ್ಮ ನಾಡನು ಆಳಿಹೋಗಿದ್ದರೂ ಅವರ ಮೇಲೆ ಲಾವಣಿಗಳಾಗಲಿ, ಕಾವ್ಯಗಳಾಗಲಿ ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಹೀಗಾಗಲು ರಾಜರು ಚಕ್ರವರ್ತಿಗಳು ಜನದೂರವಾದ ನಗರಗಳಲ್ಲಿ ವೈಭವೋಪೇತ ಅರಮನೆಗಳಲ್ಲಿ ವಾಸಿಸುತ್ತ ಜನಸಾಮಾನ್ಯರ ಸಂಪರ್ಕಕ್ಕೆ ಬಾರದಿರುವುದೇ ಒಂದು ಮುಖ್ಯ ಕಾರಣವಾಗಿರಬಹುದು ಹಾಗೂ ಸಾರ್ವತ್ರಿಕ ಬದುಕಿನ ಅನೇಕ ವಿವರಗಳು ಗ್ರಾಮೀಣ ಜನಪದ ಸಾಹಿತ್ಯಕಾರರ ಪ್ರತಿಭಾ ಸ್ಪರ್ಶಕ್ಕೆ ಸಿಲುಕದೆ ದೂರವಾಗಿದ್ದುದು ಮತ್ತೊಂದು ಕಾರಣವಿರಬೇಕು.

ಹೀಗಾಗಿ ದೊಡ್ಡ ದೊಡ್ಡ ರಾಜರು ಚಕ್ರವರ್ತಿಗಳ ಪ್ರಭಾವ ವಲಯಕ್ಕೆ ಹೊರಗಾಗಿ ಉಳಿದ ಜನಪದ ಲಾವಣಿಕಾರರು ತಮ್ಮ ಕಣ್ಣ ಮುಂದಿನ ಸಾಮಂತರು ಸಣ್ಣಪುಟ್ಟ ಪಾಳೆಯಗಾರರ ಮೇಲೆ ಲಾವಣಿ ರಚಿಸಿದ್ದು ಸಹಜವೇ ಆಗಿದೆ. ಈ ಜನ ಸಾಮಾನ್ಯರ ಅರಸರು ಶ್ರೀಸಾಮಾನ್ಯನ ಆಸೆ ಅಕಾಂಕ್ಷೆಗಳ ಪೂರೈಕೆಗಾಗಿ ಹೋರಾಟ ನಡೆಸಿದ್ದಾರೆ. ತಮ್ಮ ರಾಜ್ಯ ವಿಸ್ತರಣೆಯ ಮಹತ್ವಕಾಂಕ್ಷೆ, ಜೀವನಾದರ್ಶ, ಕನಸುಗಾರಿಕೆ, ಯೋಜನೆ, ಅಭಿವೃದ್ಧಿ ಕಾರ್ಯಗಳು, ಸೋಲು-ಗೆಲುವುಗಳ ಮೂಲಕ ಜನತೆಯ ಅಂತಃಕರಣವನ್ನು ಮಿಡಿದಿದ್ದಾರೆ. ಅಂತಹ ರಾಜ ಮಹಾಶಯರುಗಳಲ್ಲಿ ಮೈಸೂರಿನ ಹುಲಿ ಟಿಪ್ಪು ಸುಲ್ತಾನ ಕುರಿತು ರಚಿತವಾದ 'ಕಾರುಗದ ಹಳ್ಳಿ ಕಾಳಗ' ಟಿಪ್ಪುವಿನ ಸಾಹಸ, ವೈಭವ ಸಾಮ್ರಾಜ್ಯವನ್ನು ಕುರಿತು ರಚಿಸಿದ ಲಾವಣಿಯಾಗಿದೆ.

ಟಿಪ್ಪು ಸುಲ್ತಾನನ ಬಗೆಗಿನ ಲಾವಣಿಗಳಾದ ಟಿಪ್ಪು ಸುಲ್ತಾನನ ಬೀಳಿನ ಹಾಡು 'ಸುಲ್ತಾನನ ದವಲತ್ತು ಹೋದದ್ದು' (ಕ್ರಿ.ಶ ೧೯೪೭) 'ಶ್ರೀರಂಗಪಟ್ಟಣದ ಲಾವಣಿ' (೧೯೩೬) ಇವುಗಳನ್ನು ಜೀ.ಶಂ.ಪ.ರವರು ತಮ್ಮ ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು ಎಂಬ ಗ್ರಂಥದಲ್ಲಿ ಅಸಮಗ್ರ ಲಾವಣಿಗಳ ಪಟ್ಟಿಗೆ ಸೇರಿಸಿ ಸಂಗ್ರಹಿಸಿದ್ದಾರೆ. ಲಿಂಗದೇವರು ಹಳೇಮನೆ ಅವರು ಧೀರಟೀಪುವಿನ ಲಾವಣಿಗಳಲ್ಲಿ ಆರು ಲಾವಣಿಗಳನ್ನು ಸಂಗ್ರಹಿಸಿದ್ದಾರೆ. ಅವು ೧. ಮೈಸೂರು ಹುಲಿ ಟೀಪು ಸುಲ್ತಾನನ ಲಾವಣಿ, ೨. ಟೀಪು ಸುಲ್ತಾನ ಲಾವಣಿ, ೩. ಟೀಪು ಸುಲ್ತಾನನ ಬೀಳಿನ ಹಾಡು, ೪. ಟೀಪು ಸುಲ್ತಾನ, ೫. ಏನು ಮೋಸಾಯಿತೊ, ೬. ಏನು ಮೋಸವಾಯಿತು ಇವುಗಳನ್ನು 'ಮೈಸೂರು ಹುಲಿ' ಟೀಪು ಸುಲ್ತಾನ್ ಮತ್ತು 'ಟೀಪು

ಸುಲ್ತಾನ್' ಎಂಬ ಲಾವಣಿಗಳು ಸಮಗ್ರವಾದವುಗಳು. ಈ ಎರಡೂ ಲಾವಣಿ ಕಟ್ಟಿದ ಲಾವಣಿಕಾರ ನೀಲಕಂಠ ಎಂಬುವುನೆಂದು ತಿಳಿದುಬಂದಿದೆ".[೩]

ಜನಪದ ನಿರೂಪಣೆ ಟಿಪ್ಪುವನ್ನು ಕಂಡ ರೀತಿ ಹೇಗಿದೆ ಎಂಬುದು ಸಹಜವಾಗಿಯೇ ಕುತೂಹಲಕಾರಿಯಾದುದು. ಟಿಪ್ಪುವಿನ ಸಮಕಾಲೀನವಾಗಿಯೋ, ಅನಂತರದಲ್ಲೋ ಮೂಡಿದ ಅನೇಕ ಲಾವಣಿಗಳು ಮೈಸೂರು, ಶ್ರೀರಂಗಪಟ್ಟಣದ ಆಸುಪಾಸಿನಲ್ಲಿ ದೀರ್ಘಕಾಲ ಜನಪ್ರಿಯವಾಗಿದ್ದವು. ಸಂತೆಯ ಮಾಳದಲ್ಲೋ, ಮೈಸೂರಿನ ಜನನಿಬಿಡ ಮಾರ್ಕೆಟ್ ಚೌಕಗಳಲ್ಲೋ ನಿಂತು ಆಡುತ್ತಿದ್ದ ಅನಾಮಧೇಯ ಲಾವಣಿಕಾರರು ಟಿಪ್ಪುವಿನ ದುರಂತ ವೀರಗಾಥೆಯನ್ನು ಜನರಿಗೆ ಪರಿಚಯ ಮಾಡಿಕೊಡುತ್ತಿದ್ದರು.

"ಬೇಷಕ್ ತಮಾಷ ಬೈಗಕ್ ನಿಶಾನ
ಟಿಪ್ಪು ಸುಲ್ತಾನನ ಹೆಸರಾಯಿತು.
ಮಸಲತ್ ಮಾಡಿದ ಮಿರ್‌ಸಾದಕ್ನಿಗೆ
ದೇಶದ್ರೋಹಿ ಎಂಬ ಹೆಸರಾಯಿತು"

ಎಂಬ ಪಲ್ಲವಿ ಜನಗಳ ಬಾಯಿಯಲ್ಲಿ ಅನುರಣಗೊಳ್ಳುತ್ತಿತ್ತು. ಹೈದರ್ ಮತ್ತು ಟಿಪ್ಪು ಬಗ್ಗೆ ಅನೇಕ ಲಾವಣಿಗಳು ಪ್ರಚಲಿತದಲ್ಲಿದ್ದವೆಂದು ಇತಿಹಾಸದ ಪುಟಗಳು ಅಲ್ಲಲ್ಲಿ ಹೇಳುತ್ತವೆ. ಕಾಲದ ಪದಘಾತಕ್ಕೆ ಸಿಕ್ಕಿ ಇಂದು ಅವುಗಳಲ್ಲಿ ಸಾಕಷ್ಟು ಮರೆಯಾಗಿ ಹೋಗಿವೆ. ಕನ್ನಡದಲ್ಲಿ ಮೊಟ್ಟಮೊದಲು ಐತಿಹಾಸಿಕ ಲಾವಣಿಗಳನ್ನು ಸಂಗ್ರಹಿಸಿದ ಫ್ಲೀಟರಾಗಲಿ, ಇಡೀ ರಾಜ್ಯಸುತ್ತಿ ಜನಪದ ಸಾಹಿತ್ಯ ಸಂಗ್ರಹಿಸಿದ ಮೈಸೂರು ವಿಶ್ವವಿದ್ಯಾಲಯದ ಜಾನಪದ ವಿಭಾಗದವರಾಗಲಿ ಟಿಪ್ಪು ಬಗ್ಗೆ ಇರುವ ಸಮಗ್ರ ಲಾವಣಿಗಳನ್ನು ಸಂಗ್ರಹಿಸಿ ಅಚ್ಚು ಹಾಕಿಸದೆ ಹೋದದ್ದು ಆಶ್ಚರ್ಯಕರ. ದೇವುಡು ನರಸಿಂಹಶಾಸ್ತ್ರಿಯವರು ತಮ್ಮ ಕರ್ನಾಟಕ ಸಂಸ್ಕೃತಿ (೧೯೩೫) ಎಂಬ ಗ್ರಂಥದಲ್ಲಿ ಲಾವಣಿಯ ಲಕ್ಷಣವನ್ನು ಪ್ರಸ್ತಾಪಿಸಲು "ಬೇಷಕ್ ತಮಾಷ ಟೈಗರ್ ನಿಶಾನ" ಲಾವಣಿಯ ಕೆಲವು ಸಾಲುಗಳನ್ನು ಉದಾಹರಿಸುತ್ತಾರೆ.

ಜೀ.ಶಂ. ಪರಮಶಿವಯ್ಯನವರು ತಮ್ಮ "ದಕ್ಷಿಣ ಕರ್ನಾಟಕ ಕಾವ್ಯ ಪ್ರಕಾರಗಳು" (೧೯೭೯) ಎಂಬ ಕೃತಿಯಲ್ಲಿ ಮಳವಳ್ಳಿಯ ರಾಚಪ್ಪ ಎಂಬ ಕಲಾವಿದ ಹಾಡಿದನೆಂದು ಹೇಳಲಾದ "ಏನು ಮೋಸವಾಯಿತು" ಎಂಬ ಲಾವಣಿಯ ಕೆಲವು ಸಾಲುಗಳನ್ನು ಉದ್ಧರಿಸುತ್ತಾರೆ. ಜೀ.ಶಂ. ಪರಮಶಿವಯ್ಯನವರು ತಮ್ಮ ಈ ಕೃತಿಯಲ್ಲಿ ಟಿಪ್ಪು ಲಾವಣಿಗಳನ್ನು ಕುರಿತು ಹೀಗೆ ಅಭಿಪ್ರಾಯಪಟ್ಟಿದ್ದಾರೆ. ಸುಪ್ರಸಿದ್ಧ ಜನಪದ ಕಲಾವಿದ ದಿ. ಮಳ್ಳವಳ್ಳಿ ರಾಚಯ್ಯನವರ ಪ್ರಕಾರ ಅವರ ಬಾಲ್ಯದಲ್ಲಿ ಟಿಪ್ಪು ಸುಲ್ತಾನನ ಲಾವಣಿಯನ್ನು ಪೂರ್ಣವಾಗಿ ಹಾಡಲಾಗುತ್ತಿತ್ತು.

ಆ ಲಾವಣಿಯನ್ನು ಹಾಡಿಸುವ ಸಂಧರ್ಭಗಳು ಹೆಚ್ಚಾಗಿ ಒದಗಿ ಬಾರದೇ ಶಿವ ಕಥೆಗಳನ್ನು, ಶಿವಶರಣ ಕಥೆಗಳನ್ನು, ಪುಣ್ಯ ಪುರುಷರ ಕಥೆಗಳನ್ನು ಹಾಡಿಸುವ ಸಂದರ್ಭ ಹೆಚ್ಚಾಗಿದ್ದು ನೀಲಗಾರರು ತಮ್ಮ ಅಗತ್ಯಕ್ಕೆ ತಕ್ಕಂತೆ ಲಾವಣಿಗಳನ್ನು ಕಾವ್ಯಗಳನ್ನು ಅಭ್ಯಾಸ ಮಾಡಿಕೊಂಡರು. ಇದರಿಂದ ಟಿಪ್ಪು ಸುಲ್ತಾನನ ಲಾವಣಿಗಳು ಸಂಪೂರ್ಣವಾಗಿ ಮರೆತು ಹೋದವು. ಅವರ ಈ ಅಭಿಪ್ರಾಯ ಸಮರ್ಥನೀಯವಾಗಿದೆ. ಅವರೇ ನೆನಪು ಮಾಡಿಕೊಂಡಂತೆ ಟಿಪ್ಪು ಸುಲ್ತಾನನ ಲಾವಣಿಯ ಕೆಲವು ಸಾಲುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. (ಆರು ಸಾಲುಗಳು ಈ ಸಂಕಲನದಲ್ಲಿ ಸೇರಿವೆ)

ಐತಿಹಾಸಿಕ ಲಾವಣಿಗಳನ್ನು ಕುರಿತು ಬರೆಯುತ್ತಾ, ಜಿ.ಶಂಪ.ರವರು ಇವುಗಳನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ.

೧. ಅಸಮಗ್ರ ಐತಿಹಾಸಿಕ ಕಾವ್ಯಗಳು

೨. ಸಮಗ್ರ ಐತಿಹಾಸಿಕ ಕಾವ್ಯಗಳು

೩. ಅಸ್ಪಷ್ಟ ಐತಿಹಾಸಿಕ ಕಾವ್ಯಗಳು

ಅವರ ಗಮನಕ್ಕೆ ಬಂದ ಟಿಪ್ಪು ಸುಲ್ತಾನನ ಬಗೆಗಿನ ಲಾವಣಿಗಳಾದ

೧. ಟಿಪ್ಪು ಸುಲ್ತಾನನ ಬೀಳನ ಹಾಡು(೧೮೦೫)

೨. ಸುಲ್ತಾನನ ದವಲತ್ತು ಹೋದದ್ದು (೧೯೪೭)

೩. ಶ್ರೀರಂಗಪಟ್ಟಣದ ಲಾವಣಿ (೧೯೩೭)

ಇವುಗಳನ್ನು ಅಸಮಗ್ರ ಲಾವಣಿಗಳ ಕೆಳಗೆ ಪಟ್ಟಿ ಮಾಡಿದ್ದಾರೆ. ಬಹುಶಃ ಜೀ.ಶಂ.ಪ ಅವರು ತಮ್ಮ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಟಿಪ್ಪು ಲಾವಣಿಗಳ ಬಗ್ಗೆ ಹೆಚ್ಚು ಗಮನ ವಹಿಸಿದ್ದಲ್ಲಿ ಅವುಗಳ ಪೂರ್ಣ ಪಾಠವನ್ನು ಸಂಗ್ರಹಿಸಲು ಸಾಧ್ಯವಾಗುತ್ತಿತ್ತು. ದುರಾದೃಷ್ಟವಶಾತ್ ಅದು ಸಹ ಆಗಲಿಲ್ಲ. ಪ್ರಸ್ತುತ 'ದೀರ ಟಿಪ್ಪುವಿನ ಲಾವಣಿಗಳಲ್ಲಿ' ಆರು ಲಾವಣಿಗಳು ಸಂಗ್ರಹಣೆಗೊಂಡಿವೆ. ಅವು ಹೀಗಿವೆ.

೧. ಮೈಸೂರಿನಲ್ಲಿ ಟಿಪ್ಪುಸುಲ್ತಾನನ ಲಾವಣಿ

೨. ಟಿಪ್ಪು ಸುಲ್ತಾನನ ಲಾವಣಿ

೩. ಟಿಪ್ಪು ಸಲ್ತಾನನ ಬೀಳನ ಹಾಡು

೪. ಟಿಪ್ಪು ಸುಲ್ತಾನ

೫. ಏನು ಮೋಸವಾಯಿತೋ?

೬. ಏನು ಮೋಸವಾಯಿತು

ಇವುಗಳಲ್ಲಿ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಮತ್ತು ಟಿಪ್ಪುಸುಲ್ತಾನ್ ಎಂಬ ಲಾವಣಿಗಳು ಸಮಗ್ರವಾದವುಗಳು.

ಈ ಎರಡು ಲಾವಣಿಗಳ ಕಡೆಯಲ್ಲಿ ಅವುಗಳನ್ನು ಕಟ್ಟಿದ ಲಾವಣಿಕಾರರ ಹೆಸರುಗಳಿವೆ. ಮೈಸೂರು ಹುಲಿ ಟಿಪ್ಪು ಸುಲ್ತಾನ್ ಎಂಬ ಲಾವಣಿಯನ್ನು ಕಟ್ಟಿದ ಲಾವಣಿಕಾರನ ಹೆಸರು ನೀಲಕಂಠ. ಆ ಲಾವಣಿಯು ಹೀಗಿದೆ

"ಶೇಷನ ಗಿರಿಹರಿದಾಸ ಪುಟ್ಟಣ್ಣನ
ಲೇಸಿನ ಕರುಣವು ನಮಗಾಯಿತು
ಪೋಷಿತ ಶ್ರೀಗುರುದಾಸ ನಂಜಣ್ಣನ
ಸುತ ನೀಲಕಂಠ ಪದವಾಯಿತು

ಟಿಪ್ಪು ಸುಲ್ತಾನ್ ಲಾವಣಿಯನ್ನು ಹಾಡಿದವನು ರಾಜೋಜಿ ಎಂಬುವವನು ಅದನ್ನು ಹೀಗೆ ಹೇಳಿಕೊಂಡಿದ್ದಾನೆ.

"ಧರೆ ಮೈಸೂರು ಪುರಿಯೊಳು ಶ್ರೀರಾಂಪೇಟೆ ಬಜಾರ
ತಾರವರೆ ಪದಗಳು ಆಗತೈತೆ ತಯ್ಯಾರ
ರಾಜೋಜಿ ಪದವನ್ನು ಆಡುತ್ತಾರೆ."

ನೀಲಕಂಠನ ಲಾವಣಿ "ಬೇಷಕ್ ತಮಾಷ ಟೈಗರ್ ನಿಶಾನ" ಎಂದು ಪ್ರಾರಂಭವಾದರೆ, ರಾಜೋಜಿ ಲಾವಣಿ "ಅಜಪ್ ತಮಾಷಾ ಈಸ್ಟ್ ಇಂಡಿಯಾ ಕಂಪನಿ" ಎಂದು ಪ್ರಾರಂಭವಾಗುತ್ತದೆ.

ಹೀಗೆ ಇಂಥ ಎಷ್ಟೋ ಟಿಪ್ಪುವಿನ ಲಾವಣಿಗಳು ಬಾಯಿಂದ-ಬಾಯಿಗೆ, ತಲೆಮಾರಿನಿಂದ- ತಲೆಮಾರಿಗೆ, ಶ್ರೀರಂಗಪಟ್ಟಣ, ಮೈಸೂರು ಸುತ್ತ-ಮುತ್ತಲೂ ಸಂಕಲನ-ವ್ಯವಕಲನಗಳಾಗಿ ಅಳಿದುಳಿದು ಇತಿಹಾಸದ ಪುಟದಲ್ಲಿ ಕೆಲವೊಂದು ದಾಖಲಾಗಿವೆ. ಕೆಲವೊಂದು ದಾಖಲಾಗಿಲ್ಲ.

ಟಿಪ್ಪುಸುಲ್ತಾನ್ ಲಾವಣಿ

ಅಜಪ್ ತಮಾಷ ಈಸ್ಟ್ ಇಂಡಿಯ ಕಂಪನಿ ಇಂಗ್ಲೀಷರ ನೆಲೆ ಆದೀತು.
ಸುತ್ತ ಕಾವೇರಿ ನಡುವೆ ಶ್ರೀರಂಗಪಟ್ಟಣ ಸುಲ್ತಾನ್ ದವಲತ್ತು ಹೋದಿತ್ತು ॥ ಪ ॥
ಇಂಡ್ಯಾ ದೇಶದಲಿ ಪುಂಡು ರಾಜನೆಂದು ಇಂಗ್ಲೆಂಡ್‌ವರೆಗೂ ಹೆಸರಿತ್ತು
ಫ್ರೆಂಚರ ಸ್ನೇಹದಿ ಪವಜನು ಹೆಚ್ಚಿಸಿ ಭರತ ಖಂಡದಲಿ ಭಯವಿತ್ತು ॥

ಇಂಗ್ಲೀಷ್‌ನವರ ಕೂಡೆ ಲಡಾಯಿ ಮಾಡೋಕೆ ಟೀಪುಸುಲ್ತಾನ್‌ಗೆ ಮನಸಿತ್ತು
ಕಾಬೂಲ್ ಷಾಮನ್ ಷಾಹನೊಡನೆ ಕಾಗದ ಪತ್ರದಿ ಸ್ನೇಹವಿತ್ತು ॥
ಮೈಸೂರು ಹುಲಿಯಾ ಹಾವಳ ಕೇಳ ಜನರಲ್ ವೆಲ್ಲೆಸ್ಲಿಗೆ ಬಲ್ ನಿಗಾಬಿತ್ತು
ಜನರಲ್ ಹಾರಿಸ್ ಎಂಬುವರ ಜೊತೆಯಲಿ ಹದಿನೆಂಟು ಸಾವಿರ ಜನವಿತ್ತು ॥
ಸುತ್ತಾ ಕಲ್ಲಿನ ಕೋಟೆ ನಡುವೆ ಸುಲ್ತಾನ್‌ಪೇಟೆ ನೋಡಲು ಆನಂದವಾಗಿತ್ತು
ತಯಾರು ಆಗಿ ಹದಿನಾರು ಸಾವಿರ ಹೈದರಾಬಾದಿನಿಂದ ಪವಜು ಬಂತು ॥
ಮರಾಟೆರಾಜಗೆ ಮೂಲೆಗಾಕಿದ್ದ ಇದೇವತ್ ಎಂದೆ ಎದುರಾಯ್ತು
ನಡುವೆ ರಂಗನಗುಡೀ ಎರಡು ಸುತ್ತಿನ ಕೋಟೆ ಕೋಟೆಕೊಳ್ ಮದ್ದು ಗುಂಡಿತ್ತು ॥
ಸೀಮೆಯ ಕಾಯುವ ಸೋಜರ್ ಪವುಜು ಸುತ್ತಮುತ್ತ ಗೇರಾಯಿಸಿತ್ತು
ಪಶ್ಚಿಮ ದಿಕ್ಕಿನಿಂದ ಬಿದ್ದಿತು ಗುಂಡು ಕಟ್ಟಿದ ಫಿರಂಗಿ ಕೆಳಗಾಯಿತು ॥

ಏನೇಳಲಿ ಅಣ್ಣ ಬಿತ್ತು ಗುಂಡು ಕೋಟೆಗೆ
ನಮ್ಮ ರಾಜನ ದಂಡೂ ಇಲ್ಲವಲ್ಲಾ ಊರೊಳಗೆ
ಘೇರಾಯಿಸಿ ಕೋಟೆಮೇಗೆ ಹತ್ತಿದರು ಕ್ಷಣದಾಗೆ
ಸುಟ್ಟ ಶನಿವಾರ ಮಧ್ಯಾಹ್ನ ಸುಟ್ಟರು ಮದ್ದಿನ ಮನೆಗೆ
ಹಸರೂ ಛತ್ರಿ ನಿಗಾದಿಂದ ಕೊಂದರು ಸೈದ್‌ಗಪೂರಿಗೆ ॥

"ಏನು ಮೋಸವಾಯಿತು?

ಕಡಿದ ಕಲ್ಲಿನ ಕೋಟೆ
ಗುಡುಗುಡಿಸುವ ಗುಂಡು
ಬಿಡದ ಬಾಲ್ಯಗಳ್ಹತ್ತು ಸಾವಿರವು
ಒಡನೆ ಒಲ್ಲಾಳರಾಯ
ದಂಡೆತ್ತಿ ಬರುವಾಗ
ಸಡಗರ ಸಂಪತ್ತು
ಕ್ಷಣದಲ್ಲಿ ಹಾರಿ ಹೋಯಿತಲ್ಲ
ಏನು ಮೋಸವಾಯಿತು
ಮುತ್ತು ರತ್ನ ಚೆಲ್ಲಿ ಹೋಯಿತು

ಮದ್ದು ಗುಂಡುಗಳ . . .
ಸಿರಿ ರಂಗಪಟ್ಟಣ ಗಳಿಗೇಲಿ
ಸೂರೆ ಹೋಯಿತು . . .
ಬಡಗಲ ಬತೇರಿ ಒಳಗೆ
ಬೆಂಕಿನವಾಬ ಬಿದ್ದ
ತೆಂಕಲನವಾಬ ಬಿದ್ದ
ತಂಕಲ ಬತೇರಿ ಒಳಗೆ
ಸೈದುಗಪೂರ ಬಿದ್ದ
ಹಾ! ಹಾರಿ ಕಡಿವ ನಮ್ಮ ಬೆಂಕಿನವಾಬ ಇದ್ದ
ಏನು ಮೋಸವಾಯಿತು
ಮುತ್ತ ರತ್ನ ಚೆಲ್ಲಿ ಹೋಯಿತು
ಸಿರಿರಂಗಪಟ್ಟಣ
ಗಳಿಗೇಲಿ ಸೂರೆ ಹೋಯಿತು
ನಿನ್ನೆಯ ಸೂರೆ ಹೋಯಿತು
ನಿನ್ನೆಯ ಜಿನಕೆ ಪೂರ್ಣಯ್ಯ
ಮನ್ನಣೆ ಒಳಗಿದ್ದ
ಸನ್ನೆ ಇಂದಲಿ ಕೊಟ್ಟ
ನಿನ್ನ ಪಟ್ಟಣಗಳ ಉಪ್ಪಿನ ಋಣಕೆ
ಎರಡು ಬಗೆದ ಕಾರಣದಿಂದ
ಸಂಚು ಕಟ್ಟಿದರೂ ಕೋಟೆ ಬಾಗಿಲ ಒಳಗೆ
ಏನು ಮೋಸವಾಯಿತು
ಮುತ್ತು ರತ್ನ ಚೆಲ್ಲಿ ಹೋಯಿತು

ಹನ್ನೆರಡು ಗಂಟೆ ಹೊತ್ತು
ನಿಂತ ಮಧ್ಯಾಹ್ನದಲ್ಲಿ
ಸಡಗರ ಸಂಪತ್ತಾಕ್ಷಣದಲ್ಲಾಗೋಯ್ತು
ಏನು ಮೋಸಹೋಯಿತು
ಮಾವುತರ ಠಾಣ್ಯ ಬಹಳ

ಮಡಿದು ಹೋಯಿತು
ಏನು ಮೋಸಹೋಯಿತು
ಮುತ್ತು ರತ್ನ ಚೆಲ್ಲಿ ಹೋಯಿತು" [೪]

"ಏನು ಮೋಸವಾಯಿತೋ?

ಏನು ಮೋಸವಾಯಿತೋ – ಸುಲ್ತಾನ್ ದೌಲತ್
ಯಾರ ಪಾಲಿಗೆ ಸೇರಿತೋ ॥ ಪ ॥
ಸುತ್ಮುತ್ ಕಾವೇರಿ ಹೊಳೆ
ನಡುವೆ ಶ್ರೀರಂಗಪಟ್ಣ
ಪಟ್ಟಣದೊಳಗೆಲ್ಲ ನೀನೆಂಬೊ ರಂಗಸ್ವಾಮಿ
ಏನು ಮೋಸವಾಯಿತೋ ॥
ಕೋಟೆ ಮೇಲೆ ನಿಂತುಕೊಂಡು
ಹಸ್ರುಕೊಡೆ ಹಿಡಿದುಕೊಂಡು
ಹೋಗೋ ದಂಡಿಗೆಲ್ಲ ವಸ್ತ್ರವ ಬೀಸಿದ
ರಾಜನ ದೌಲತ್/ಏನು ಮೋಸವಾಯಿತೋ ॥

ಮಟ್ ಮಟ್ ಮಂಗ್ಳಾರಧ್ಡಿವ್ಸ
ಮಧ್ಯಾಹ್ನದ ಹೊತ್ತಿನಲ್ಲಿ
ಹದ್ದು ಹಾರಿದ್ಹಾಂಗೆ ಹಾರಿತಲ್ಲೊ
ರಾಜನ್ ದೌಲತ್ ಹೋಯ್ತು / ಏನು ಮೋಸವಾಯಿತೋ ॥
ಸುಲ್ತಾನನ್ ದೌಲತ್ ಹೋಯ್ತು
ಕುಂಪ್ಲೀಗ್ ದೌಲತ್ತು ಬಂತು
ಹೆಂಗಸರೀಗೆಲ್ಲ ಹೆಚ್ಚೀನ್
ಕಾರ್ಬಾರು ಬಂತು / ಏನು ಮೋಸವಾಯಿತೋ ॥" [೫]

ಮೈಸೂರು ಹುಲಿ ಟಿಪ್ಪುಸುಲ್ತಾನ್‌ನ ಲಾವಣಿ

ದಾಟಿ: ಖಡಿಚಾಲ್

ಭೇಷಕ್ ತಮಾಷಾ ಟೈಗರ್ ನಿಶಾನಾ
ಟಿಪ್ಪು ಸುಲ್ತಾನನ ಬಿರುದಾಯ್ತು ।
ಮಸಲತ್ ಮಾಡಿದ ಮೀರ್ಸಾದಕನಿಗೆ
ದೇಶದ್ರೋಹಿ ಎಂಬ್ಹೆಸರಾಯ್ತು ॥
ಟೀಪೂ ವಂಶದ ಮೊದಲನೆ ಯೋಧನು
ಅಫರಷ ಎಂತೆಂಬವನು ।
ಆ ಪರಿ ಅರಬ್ಬಿ ದೇಶವನುರ್ಜಿಸಿ
ಬಿಜಾಪುರದ ಷಾ ಬಳಿಯಿದ್ದನು ॥
ಟೀಪೂ ತಾತನು ಫತುಲ್ಲಖಾನನು
ಶೀರ್ಯಾದ ನವಾಬನ ಸೇರಿದ್ದನು ।
ಈ ಪರಿ ವೀರನು ಗುಮ್ಮನು ಹಳ್ಳಿಯ
ಜಹಗೀರದಾರಿಯ ಪಡೆದಿದ್ದನು ॥
ಟೀಪೂ ತಂದೆಯು ಹೈದರಾಲಿಯು
ಮೈಸೂರು ಸೈನ್ಯದೊಳಿರುತ್ತಿದ್ದನು ।
ಭೋಪರಿ ಶೌರ್ಯದಿ ದೇವನಹಳ್ಳಿ
ಮೇಣ್ ಚಿತ್ರದುರ್ಗವನ್ನು ಹಿಡಿದಿದ್ದನು ।
ಟೀಪೂ ಪುತ್ರನು ಫತೆ ಹೈದರನು
ಪ್ರಬುದ್ಧ ಮಾನದಿ ಮೆರೆದಿದ್ದನು ।
ಟೀಪು ಸುಲ್ತಾನನು ವೈರಿಯ ಮರ್ದಿಸಿ
ಮೈಸೂರು ಹುಲಿಯೆಂದೆನಿಸಿದ್ದನು ॥”[೭]

ಈ ಲಾವಣಿಯನ್ನು ಮೂಲದಲ್ಲಿ ರಚಿಸಿದವರಾರೆಂಬುದನ್ನು ಊಹಿಸುವುದು ಕಷ್ಟ. ಕ್ರಿ.ಶ.೧೯೩೫ರಲ್ಲಿ ಹಾಗೂ ಅವರು ಕ್ರಿ.ಶ೧೯೪೮ರಲ್ಲಿ ಪ್ರಕಟಿಸಿದ 'ಹೈದರಾಲಿ ಮತ್ತು ಟೀಪುಸುಲ್ತಾನ್ ಲಾವಣಿ'ಯಲ್ಲಿ ಟೀಪುವಿನ ಅಂತ್ಯಕಾಲದ ಸನ್ನಿವೇಶದ ನಿರೂಪಣೆ ಮಾಡಿರುವರೆಂದು ತಿಳಿದುಬರುತ್ತದೆ. ದೇವುಡು ನರಸಿಂಹಶಾಸ್ತ್ರಿಯವರು 'ಕರ್ನಾಟಕ ಸಂಸ್ಕೃತಿ

(ಕ್ರಿ.ಶ.೧೯೩೫) ಎಂಬ ಗ್ರಂಥದಲ್ಲಿ ಲಾವಣಿಯ ಲಕ್ಷಣವನ್ನು ಪ್ರಸ್ತಾಪಿಸಲು ಈ ಲಾವಣಿಯ ಪಲ್ಲವಿಯ ಸಾಲುಗಳನ್ನು ಬಳಸಿಕೊಂಡಿದ್ದಾರೆ.

ಸುಪ್ರಸಿದ್ಧ ಜನಪದ ಕಲಾವಿದ ದಿ.ಮಳವಳ್ಳಿ ರಾಚಯ್ಯನವರು ಈ ಲಾವಣಿಯನ್ನು ಪೂರ್ಣವಾಗಿ ಹಾಡುತ್ತಿದ್ದರು ಎಂದು ತಿಳಿದುಬರುತ್ತದೆ. ಇವರಿಗಿಂತ ಮೊದಲು ನೀಲಕಂಠ ಎಂಬುವವನು ಈ ಲಾವಣಿ ಕಟ್ಟಿ ಹಾಡಿದನೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಮೈಸೂರು ಹುಲಿ ಟಿಪ್ಪು ಸುಲ್ತಾನನ ಲಾವಣಿಯಲ್ಲಿ ಲಾವಣಿಕಾರ ಟಿಪ್ಪು ಮೈಸೂರು ಹುಲಿ ಬಿರುದು ಪಡೆದ ಬಗ್ಗೆ ಹಾಗೂ ಆತನ ಚರಿತ್ರೆಯನ್ನು ತಿಳಿ ಹೇಳಿದ್ದಾನೆ. ಟಿಪ್ಪು ವಂಶದಲ್ಲಿ ಅಫರಷ ಎಂಬುವನು ವಂಶದ ಮೊದಲ ಯೋಧನಾಗಿದ್ದನು. ಈತ ಅರಬ್ಬಿ ದೇಶವನ್ನು ಬಿಟ್ಟು ಬಿಜಾಪುರದ ನವಾಬನ ಬಳಿ ಸೈನಿಕನಾಗಿ ಗುಮ್ಮನ ಹಳ್ಳಿಯನ್ನು ಜಹಗೀರಾಗಿ ಪಡೆದಿದ್ದನು. ಟಿಪ್ಪುವಿನ ತಂದೆ ಹೈದರ್ ಆಲಿಯು ಮೈಸೂರಿನಲ್ಲಿ ಸೈನಿಕನಾಗಿದ್ದು ತನ್ನ ಚಾಣಾಕ್ಷತನ ಶೌರ್ಯದಿಂದ ದೇವನಹಳ್ಳಿ ಮತ್ತು ಚಿತ್ರದುರ್ಗವನ್ನು ಪಡೆದಿದ್ದನು. ಈತನ ಪುತ್ರ ಟಿಪ್ಪು ಸುಲ್ತಾನ್‌ನು ಮೈಸೂರಿನಲ್ಲಿ ವೈರಿಗಳನ್ನು ಜಯಿಸಿ ಮೈಸೂರು ಹುಲಿ ಎಂಬ ಬಿರುದು ಪಡೆದು ರಾಜ್ಯಾಭಾರ ಮಾಡುತ್ತಿದ್ದನು. ಟಿಪ್ಪುವಿನ ವಂಶಸ್ಥರು ಮೂಲತಃ ಸೈನಿಕರಾಗಿದ್ದರು ಎಂಬುದನ್ನು ಈ ಲಾವಣಿ ಪರಿಚಯಿಸುತ್ತದೆ.

ಟಿಪ್ಪುಸುಲ್ತಾನನ ಬೀಳಿನ ಹಾಡು

ಎಷ್ಟು ಬೇಗ ಮಾಯವಯ್ತೊ ಸುಲ್ತಾನನ ದೌಲತ್ತು ।
ಎಷ್ಟು ಬೇಗ ಓಡಿ ಹೋಯ್ತೋ ವೈಭವ ಸಂಪತ್ತು ।
ಎಷ್ಟು ಬೇಗ ಶ್ರೀರಂಗಪಟ್ಟಣದ ಬಾವುಟ ಬಾನಾಡಿ
ಭಾಗ್ಯ ಶಿಖರದಿಂದಲುರುಳಿ ಬಿತ್ತೊ ಹುಡುಗೂಡಿ ।

ಅವನಾಗೆಲ್ ಗುಡಿಸಾಲ್ ತಲೆಯೆತ್ತಿ ಗರ್ವದಿ ಹಾರಿತ್ತು
ಹಗೆಗಳ ಹೃದಯವ ನಡುಗಿಸಿ ಸೇನೆ ಬಂಕದಿ ನಡೆದಿತ್ತು
ಜಗದೀಶ್ವರ ತನ್ ಕೃಪೆಯ ಕಟಾಕ್ಷವ ಹಿಂದೆಗೆದಾ ಒಡನೆ
ಸಿರಿ ವೈಭವ ಜಯ ಸೇನೆಯಲ್ಲಿ ಹೋಯಿತು ದಡಬಡನೆ ।
ಧನ ಜನ ತುಂಬಿದ ಅವನಾ ರಾಜ್ಯ ದೆಸೆದೆಸೆಗಳ ತಬ್ಬಿ
ಕೈಗೊಳಗಾಗಿ ನೂರಾರ್ ಗಾವುದ ಹರಡಿತು ನೆರ ಹಬ್ಬಿ
ರಣಬಲ ಗರ್ವಿಗಳೆದೆದಲ್ಲಣಿಸುತ ಹುಬ್ಬನು ಗಂಟಿಕ್ಕಿ
ನೂರಾರ್ ದುರ್ಗಗಳೆಸೆದವು ಗಿರಿಗಿರಿ ಶಿಖರದಿ ಬಲು ಸೊಕ್ಕಿ

ಕಾಳಗ ಕೈದುವ ಅವನಾ ದಳಗಳೂ ಎಣಿಸಲ್ಕಳವಿಲ್ಲ
ಅವನಾ ಫ್ರೆಂಚರೋ ಕೆಳಕ್ಕೆ ನುಗ್ಗಲು ಮುನ್ನಡೆದು
ಎಲ್ಲಾ ಒಂದೇ ಒಂದು ಕ್ಷಣದಲ್ಲಿ ಹೋಯಿತು ಹುಡಿವಡೆದು
ಅವನಾ ಗುರಿದುರ್ಗಗಳವು ಮೆರೆದವು ಕಗ್ಗಲ್ ಮೈದಳೆದು
ಬೆಟ್ಟ ಬೆಟ್ಟದೊಳುಂಡೆ ಬಂಡೆಯ ಕಡೆದಿಡೆ ಬೆಳೆ ಬೆಳೆದು
ಅಲ್ಲೆರಾಲ್ಲೊ ಉರಿಬಾಣಗಳು ಹಾರಿತು ಹೊಳೆಯುತ್ತ
ಒಡನೆಯ ಸಿಡಿಲಿನ ಪಡೆಯಬ್ಬರಿಸಲು ಘನದನಿದೋರುತ್ತ

ಬೆಳ್ಳಿಯ ಭರ್ಜಿಗಳಾಕಾಶದಲಿ ಹೊಳೆದವು ಕಳೆಯೆರಚಿ
ಗುಬುಟಿನ ಬಾವುಟಗಳು ಪಟಪಟಿಸುತಲೊಲೆದವು ನಲವೆರಚಿ
ಏನಿದ್ದೇನು? ಕಣ್ಣಿವೆ ಮುಚ್ಚಿ ಬಿಡುವಷ್ಟರಲ್ಲೆಲ್ಲ
ರಣ ಸಾಧನದಾ ಗರ್ವವದೆಲ್ಲ ಬರಿದೆ ಹೋಯ್ತಲ್ಲ ।
ಕಾವೇರಿಯ ಹೊಳೆ ಮಂಗಳ ಜಲದಲಿ ಸುತ್ತಲು ಸುತ್ತಿರಲು
ಮೂರು ಸುತ್ತಿನ ಕೋಟೆಯ ಗೋಡೆ ಹೊರ ಹೊರ ಬಳಸಿರಲು
ಕೋಟೆಗಳೆರಡರ ನಡುವೆಡೆಯಲ್ಲಿ ಕಪ್ಪನೆ ಕಳೆಬೀರಿ
ಆಳದ ಅಗಳು ಹಬ್ಬಿತು ಹರಡಿ ಮನಸಿಗೆ ಭಯದೋರಿ
ದಿಡ್ಡೀಬಾಗಿಲ ಮೇಲೆತ್ತರದಲಿ ಬಿರುದನಿ ಬೀರುತ್ತ
ದಿಗಿಲೆರಚುತ ಬಲ್ ಬುರುಜುಗಳದ್ದವು ಸಜ್ಜನು ತೋರುತ್ತ
ಗೋಪುರವಿದ್ದವು ಮರ್ತ್ಯರ ಶಕ್ತಿಗೆ ಮೀರಿದವನೆ ಸುತ್ತ
ಎಲ್ಲಾ ಒಂದೇ ಒಂದು ಕ್ಷಣದಲಿ ಹಾಳಾಗಿ ಹೋಯ್ತುತ್ತ ।
ಗಡಗಡಗಡನೆದೆ ನಡುಗಿಸಿ ಕೂಗಿತು ಆನೆಯ ದಂಡು
ನಡುಗಿ ನೆಲವನು ನಡೆಯಿತು ಕುದುರೆಯ ದಳ ಸಂದಣಿಗೊಂಡು
ಚಿನ್ನದ ರನ್ನದ ಬಗೆ ಬಗೆ ರಾಶಿ ಭಂಡಾರವ ತುಂಬಿ
ನೆಲಮಾಳಗೆಗಳೊಳ್ ಬಲು ಬೆಳೆದಿತ್ತು ಶಾಂತಿಯ ನೆರೆನಂಬಿ
ಅವನೋ ಎಂದರೆ ನಾಯಕ ತಲೆಮಣಿ, ತಾನೆ ಮಹಾಶೂರ ।
ಕಳದೊಳಗೆದುರಿಸಿ ನಿಲ್ಲುವರಿಲ್ಲ ಅವನೇ ರಣಧೀರ ।
ಆದರೇನು? ಕಣ್ಣಿವೆಮುಚ್ಚಿ ಬಿಡುವಷ್ಟರ ಒಳಗೆ
ಭೀತಿಯನರಿಯದ ನಮ್ಮಾ ವೀರನೆ ಮಡಿದುರುಳಿದ ಕೆಳಗೆ ।
ಎಣಿಕೆಗೆ ಮೀರಿದ ನವರತ್ನಗಳು ರಾಶಿ ರಾಶಿಯಲ್ಲೊಟ್ಟಿ
ಥಳಥಳ ಸುತ್ತ ನಸುನಗೆ ಬೀರಿ ಮೆರೆದವು ಸಾಲ್ಗಟ್ಟಿ
ಭೂ ಮಂಡಲದಾ ಸಂಪತ್ತೆಲ್ಲಾ ಒಂದೂ ಬಿಡದಂತೆ

ಸುಂದರ ಮಂದಿರಗಳಲೊಟ್ಟಿದ್ದವು ತವನಿಧಿ ನೆಲೆಯಂತೆ
ದುರ್ಲಭವೆನಿಸಿದ ಮಣಿಭೂಷಣಗಳು ಕೂಡಿದ್ದವು ನೆರೆದು
ಒಪ್ಪುವ ಕೊಟ್ಟು ಪೆಟ್ಟಿಗೆಗಳಲಟ್ಟು ಹೆಮ್ಮೆಯೊಳ್ ನೆರೆ ಮೆರೆದು
ಆ ಕೆಲಸಕೆ ಬೆಲೆಕಟ್ಟಲುಬಹುದೇ? ಹಿಂದೆಂದೂ ಅದನು
ಕಿವಿ ಕೇಳಲ್ಲ, ಕಣ್ ಕಂಡಿಲ್ಲ, ಮಿಗೆ ಸೊಬಗಾ ಹದನು ।

ದೊಡ್ಡ ದೊಡ್ಡ ನೂರಾರು ಕಣಜಗಳದ್ದವು ನಗರದಲಿ
ಹದನೆಂಟೂ ಬಗೆಯುಣವಿನ ಧಾನ್ಯವನೊಳಕೊಂಡವುಗಳಲಿ
ಕಾರೋಡಲಾಯುಧ ಶಾಲೆಗಳಲ್ಲಿ ನೆಲಸಿದವಾದರದಿ
ರಣದ ಭಯಂಕರ ಶಸ್ತ್ರ ಸಮೂಹಗಳುರಿ ಬಾಯ್ ಪರಿಕರಿದಿ

ಸಂಪತ್ತಿನಲೊ ಮೇಲೆನ್ನಿಸಿದಾ ರಣವೈಭವದಲ್ಲೊ
ಹೋಲಿಸಲವನೊಡನೊಳ್ಳೆಯದೃಷ್ಟದ ಮಿಗಿಲೇರಿಕೆಯಲ್ಲೊ
ಸೊಕ್ಕಿನ ದುರ್ಯೋಧನನೈಸಿರಿಯೆಷ್ಟಲ್ಲವೊ ಎನಿಸಿತ್ತು
ಎಲ್ಲಾ ಒಂದೇ ಕ್ಷಣದಲಿ ಕರಗಿ ಹಾಳಾಗಿ ಹೋಯಿತು

ಅಳವಿಲ್ಲದೆ ವಿಖ್ಯಾತಿಯ ನಮ್ಮಾ ದೊರೆಯಿರೆ ಪೀಠದಲಿ
ಬೆಳ್ಳಿ ತುತೂರಿಗಳೆದೆಯನು ಹಿಗ್ಗಿಸಿ ಮೊಳಗಿದವೆದುರಿನಲಿ
ಜಯ ಜಯವೆನ್ನುತ ಬಿರುದುಗ್ಗಡಿಸಲು ವಂದಿಗಳೊಲದಿಂದ
ನೆಲ ನಡುಗಿಸಿದವು ನಗಾರಿ ಸೌಬತ್ ಗುಡುಗಿನ ದನಿಯಿಂದ

ಒಂದೊಂದಾಗಿ ಪರಿವಿಡಿಯಿಂದ ಎಂಟು ಕಾಲಗಳಲ್ಲಿ
ರಾಜರು ಹಲವರು ದಿಜ್ವಿಜಯದಲಿ ಕಪ್ಪವ ಕೈಕೊಂಡು
ಕೂಡಿಸಿದರು ಸಿರಿಯಾತನ ಕೈಗೆ ಸೇರಿತು ಮುದಗೊಂಡು
ಆದರದೆಲ್ಲ ಹಾಳಾಯ್ತಯ್ಯೊ, ಒಂದೇ ಕ್ಷಣದಲ್ಲಿ

ಎಷ್ಟು ಬೇಗ ನಿಷ್ಕರುಣಿ ಮೃತ್ಯು ತಾನೆರೆಗಿದನೊ ಮೇಲೆ
ಎಷ್ಟು ಬೇಗನವ ಧ್ವಂಸ ಮಾಡಿದನೊ ಹೇಳುವರಾರ್ ಕೇಳೆ
ಪದ ಲೋಕದಲಿ ಪುಣ್ಯ ಪಾಪ ವಿಚಾರಣೆ ನಡೆಸುತ್ತ
ಆ ಯಮಧರ್ಮನೆ ನುಡಿಯುವನ ಹುಮ್ಮರಿಗಣ್ ಕಿಡಿಗೆದರುತ್ತ

ನಡು ಮಧ್ಯಾಹ್ನವು ನಡುಗುತ ಬಂದಿತ ಮಂಗಳ ಕಳೆಬೀರಿ
ಸುಲ್ತಾನನ ಹೆಣವುರುಳಿತು ನೆಲದಲಿ ಮೌನವ ನೆರೆ ಸಾರಿ
ಅವನಾ ರಾಜ್ಯವೊ ಇರುಳಲಿ ಕಾಣುವ ಕನಸಿನ ರೀತಿಯಲಿ
ಪೂರ್ತಿಯಾಗಿ ಮಾಯವಾಯಿತು ಮಿಗಿಲಹ ಮೌಲದಲಿ

ಹೇಳು ಹೇಳು ಮತ್ತುರುಳುತಲಿದ್ದ ರಾಜ್ಯ ರಕ್ಷಿಸಲು
ಯಾರು ಯಾರು ಮುನ್ನುಗ್ಗಿ ಕಾದಿದರು ಕೀರ್ತಿಯ ಮುಡಿ ಬರಲು ?
ಸತ್ಯಶಾಲಿಯೆಂದೆನಿಸಿದ ಮಹಿಮಾವಂತನು ಕಮ್ರುದ್ದೀನ್
ನಾಶವನರಿಯದ ಕೀರ್ತಿಯನೊಲಿಸಿದ ಶಿಸ್ತಿನಿ ಆ ಫೇರ್‌ಖಾನ್

ನೆರವಿಗೆ ನಿಂತನು ಮಿಗೆ ವಿಖ್ಯಾತಿಯ ಮೀರ್ ಸಾದಕ ತಾನೂ
ಯಾವನಾದರೂ ಶೂರನಾಯಕನವನಿಗೆ ಸಮವೇನು?
ಮೀರಾ ಹುಸೇನ್ ಅವ ಹೆಂಗಳ ಕಂಗಳಿಗಾನಂದದ ನೆಲೆಯು
ಪುಷ್ಪ ಬಾಣನಹ ಮನ್ಮಥನಂದದಿ ಸೌಂದರ್ಯದ ಖನಿಯು

ಸುಬ್ರಾಯಮೂರ್ತಿ, ಭೀಮ್ರಾವ್ ಒಬ್ಬರ್ ಜಂಗ್ ಬಿರುದಾತನಿಗೆ
ಕಾಳಗದಲ್ಲಿ ಕಠಿಣವೊ ಅಲ್ಲಿ ಅವರೇ ಮುನ್ನೆಲೆಗೆ
ನಿರ್ಭೀತಿಯ ಪೌರುಷದುತ್ಕರ್ಷಕೆ ಗುರುತವರಾ ಹೆಸರು
ದೇಶ ದೇಶದಲಿಹುಟ್ಟಿಹುದವರ ರಣಪಂಡಿತವೆಸರು ।

ಖಾನ್ ಜಿಹಾನ್ ಖಾನ್ ಏಕವೀರನವನಣೆ ಬೇರಾರಿಲ್ಲ
ಸೈಯದ್ ಸಾಹೇಬ್ ನೋಡವನೊಬ್ಬನೆ ದಂಡಿಗೆ ಸಮನೆಲ್ಲ
ಇಂದ್ರನ ಸಿಂಹಾಸನವನು ಬಳಸಿದ ದಿಕ್ಪಾಲಕರಲ್ಲಿ
ಆ ಪೆರಿಯನುಪಮ ವಿಕ್ರಮವನು ನೆರೆ ಕಾಣುವ ಬಗೆಯಲ್ಲಿ?

ಸದ್ಬ್ರಾಹ್ಮಣರ ವಂಶದಲುದಿಸಿದ ದಿವಾನ್ ಪೂರ್ಣಯ್ಯ
ಕದನ ನಿರ್ಭಯನಾತನಿಗೆಣೆಯನು ಕಾಣುವರಾರಯ್ಯ?
ಮಂತ್ರಾಲೋಚನೆಯಲ್ಲಿ ಬೃಹಸ್ಪತಿಯೊಡನೆ ಬಹುದಾತನನು
ಎಂತು ಪಡೆಯಿತೋ ನಮ್ ಸುಲ್ತಾನನ ಪದವಿ ವಿನಾಶವನು

ಆಹಾ ! ಬೇಗನದು ಓಡಿ ಹೋಯಿತು ! ಎಷ್ಟು ಅಲ್ಪವೋ ಆ

ರಂಜಕ ಕಣವದು ! ಗುಂಡನೆಷ್ಟು ಬೇಗೋಡಿಸಿತೋ ಹಾ ! ಹಾ!
ಹಿರಿ ಸಾಮ್ರಾಜ್ಯವನಾ ಕಿರುಕಣ ಧೂಳಿಗೆ ಬೀಳಿಸಿತಲ್ಲ !
ನಮ್ಮ ಶೂರ ಸುಲ್ತಾನನನ್ನೋ ಅದು ಧರೆಗುರುಳಿಸಿತಲ್ಲ !

ಸಿಂಹಾಸನವನು ಕಾಪಿಡಲೆಂದೆಡಬಲಗಳಲೊಗ್ಗೂಡಿ
ನಿಂದವನಾ ಕಲಿ ಮೊಗಲರು ಗರ್ವದಿ ನಡಿವರು ದನಿಗೂಡಿ
ಎಂದಾದರೂ ಈ ಧರೆಯೆಬ್ಬೊಡೆಯನ ನೊಲಿದವಡಗಿತ್ತೆ?
ನಿನ್ನದು, ನಿನ್ನದು ಸಾರ್ವಭೌಮ ಪದಾಧಿಕಾರವು ಮತ್ತೆ

ದುರದೃಷ್ಟವನೊಂದಿನಿತೂ ಗಣಿಸದೆ ಮನದಲಿ ಭಯಪಡದೆ
ಅವನನ್ನು ಸುತ್ತಿ ಹಲವು ಸಾಲಿನಲಿ ಬಳಸಿದರೆಡೆಬಿಡದೆ
ಗಾಳಿಯಂತೆ ಗುರಿಯಿಲ್ಲದೆ ಅಲೆದಾ ಒಂದೇ ಒಂದು ಗುಂಡು
ಅವರೆಲ್ಲರ ನಡುವೆಯ ಸುಲ್ತಾನನ ಕೆಡವಿತು ಬೆಂಗೊಂಡು

ಅಲ್ಲಾ ದೇವರ ಮಿಣಿ ವಿಖ್ಯಾತಿಯ ಬಲವೆಲ್ಲಡಗಿತ್ತು?
ಭಗವತ್ಪ್ರೇರಣೆಯಿತ್ತೆಂದೆಯಲಾ, ಆ ಬಲವೆಲ್ಲಿತ್ತು?
ದುರದೃಷ್ಟವ ನೆರೆಹೊತ್ತು ತಂದ ಆ ದುರ್ಮುಹೂರ್ತದಲ್ಲಿ
ನಿನ್ನ ಕುರಾನಿನ ಪಾವನ ಜ್ಯೋತಿ ಓಡಿ ಹೋದುದೆಲ್ಲಿ?
ವ್ಯರ್ಥವಾಯಿತಾ ಪ್ರಾರ್ಥನೆಯೆಲ್ಲ ಹಿರಿಯ ಹರಕೆಯಲ್ಲ
ರಂಗ ನಿನ್ನ ಕೊನೆಗಾಲವ ವಿಧಿಸಿದ ಕೂಡಲೆ ಬಯಲೆಲ್ಲ ।
ಎಷ್ಟು ಸಣ್ಣ ಬಂದೂಕದ ಗುಂಡು ನಿನ್ನೆದೆಯನು ಕೊರೆಯಿತ್ತೊ ।
ಎಷ್ಟು ಬೇಗ ನಿನ್ನಾ ಸಾಮ್ರಾಜ್ಯ ಹಾಳಾಗಿ ಹೋಯಿತ್ತೋ ।
ರಾಜವಂಶಗಳಲುದಿಸಿದ ತನ್ನ ರಾಣಿಯರ ನಡುವೆ
ರಾಜ ಮನೋಹರ ರೂಪಿನ ದೊರೆಯಡಿಯಿಟ್ಟನು ಸೊಗಸಿನಿಂದ
ರಣವಿಕ್ರಮರೆದುರು ಕಳೆಯೆರಚುವ ತನ್ನ ಮಕ್ಕಳ ನಡುವೆ
ರಣಧೀರನು ಸುಳಿದನು ನೆಲಕಿಳಿದ ದೇವತೆಯಾ ಬೆಡಗಿಂದ
ಬಳಸಿರೆ ಮಿಗಿಲ ಪರಾಕ್ರಮದುನ್ನತ ಧೀರರ ಪರಿವಾರ
ಎಷ್ಟು ಬಿಂಕದಿ ಬೀಗಿತ್ತಾತನ ಸಾಮ್ರಾಜ್ಯಾಧಿಕಾರ ।
ಕದುಲನೆಯನ ತನ್ನ ಮುಗಳ್ ನಗೆಯನು ಹಿಂದೆಗೆದ ಒಡನೆ
ಆ ಸಾಮ್ರಾಜ್ಯದ ವೈಭವವೆಲ್ಲ ಹೋಯಿತು ದಡಬಡನೆ ।

ಕೊಡಗು ಕಡಪ್ ಮೇಣ್ ಕೊಂಕಣವೆಂಬಾ ನಾಡುಗಳಾಳುವರು
ಒಡೆಯರು, ಹಳಮಯ ಕೀರ್ತಿಯ ಕುಡಿಗಳು, ನೃಪಕುಲಭೂಷಣರು
ಕಂಡು ನಿನ್ನ ಕೈ ನೀಡಿದರಾಯುಧವೆಲ್ಲದ ಕೆಳಗಿಟ್ಟು
ಹುಬ್ಬುಗಂಟ ಕಂಡೊಡನೆಯ ಮಣಿದರು ನೆಲದಲಿ ಮೈಯಿಟ್ಟು ।
ಮಲೆನಾಡೋಡೆಯರು ಗರ್ವದ ಗಿರಿಗಳು ಎತ್ತಿದ ನಿಡುಮುಡಿಯ
ಕೆಳತಗ್ಗಿಸಿದರು ಕೇಳಲು ನಿನ್ನಾ ಶಾಸನಗಳ ನುಡಿಯ ।
ಎಷ್ಟು ಬೇಗ ನಿನ್ನಾ ಸಾಮ್ರಾಜ್ಯ ವಿನಾಶವಾಗಿ ಹೋಯ್ತು ।

ಅಡಿಗೆರೆಗುತ ಭಯ ಭಕ್ತಿಯ ತೋರಲು ಭೂಮಂಡಲವೆಲ್ಲ
ಸಾಮ್ರಾಜ್ಯದ ಸಿಂಹಾಸನವೇರಿದ ದಿಲ್ಲೀಶ್ವರ ತಾನು
ಕಟ್ಟಾವದನೂ ಕಾಣದ ಗಣಿಸದ ಮಾರಾಟ ದಳವನೆಲ್ಲ
ತನ್ನೊಂದಾಳ್ಮೆಯ ಕಟ್ಟಲಿ ಕಟ್ಟಿದ ಶ್ರೀಮಂತನು ತಾನು

ಜನಸಂದಣಿಸಿದ ದೇಶ ದೇಶಗಳ ರಾಜರುಗಳು ಎಲ್ಲ
ನಿನ್ನಾ ವಿಜಯ ಪತಾಕೆಯ ಮೇಲೆ ಹಾರುವುದನ್ನು ಕಂಡು
ಮಿಗೆ ದಿಗಿಲಿಂದ ತೊರೆದರು ತಮ್ಮ ನಾಡುಗಳವನೆಲ್ಲ
ಎಷ್ಟು ಬೇಗ ನಿನ್ನ ಸಾಮ್ರಾಜ್ಯ ಹೋಯಿತೋ ಹಾಳ್ಗೊಂಡು ।

ದೂರದಿಂದ ಸಿಂಗಳ ನಾಡಿಂದ ಬಂದರು ತಾವಿಲ್ಲಿ
ಆಂಗ್ಲ ಜಾತಿಯ ಜನರವರೋಡುವುದರಿಯರು ರಣದಲ್ಲಿ
ರಂಗನಾಥನ ಪಾವನ ನಾಮಕೆ ಭಯ ಭಕ್ತಿಯ ತೋರಿ
ಅವರ ರಣಧ್ವಜ ಗಗನದಿ ಹಾರಿತು ಕೆಂಪಿನ ಕಳೆ ಬೀರಿ

ನಮ್ಮುತ್ತರದ ಕೋಟೆ ಕೊತ್ತಳಗಳ ಕೆಡವಿದರವರ್ ನೆಲಕೆ
ತಮ್ಮ ವಿಜಯ ಭೇರಿಗಳ ಬಾಜಿಸಿದರು ನೆಗೆಯಲು ದನಿ ದಿವಕೆ
ಆಗಲೆ ಭೂಮಿಯ ಸೊಗವೊಂದೊಂದೂ ಕರಗಿ ಮಾಯವಾಯ್ತು ।
ಆಗಲೇ ನಮ್ಮ ಶ್ರೀರಂಗಪಟ್ಟಣ ವೈಭವ ಹಾಳಾಯ್ತು ।

ಕದನ ಪಟುಗಳೆಂದೆನಿಸಿದ ನಾಯಕರೆಲ್ಲಿದ್ದರು ಅಂದು?
ದಳವೆಲ್ಲಿದ್ದವು ಭೀಕರ ಕಾಳಗವೊದಗಿ ಬಂದಂದು?
ಆಹಾ! ಕೃಷ್ಣನ ಕೃಪೆಯ ಕಟಾಕ್ಷವು ತೊಲಗಿದಾ ದಡಬಡನೆ ।

ಎಷ್ಟು ವ್ಯರ್ಥವಹ, ಸೊಕ್ಕಿನ ಮನುಜನ ಹೆಮ್ಮೆಯದೊಂದೊಂದೂ ।
ಎಷ್ಟು ಬರಿದೊ ಈ ಧರೆಯಧಿಕಾರದ ವೈಭವೊಂದೊಂದೂ ।
ಸೊಕ್ಕಿನ ಬಲ್ ಗೋಟೆಗಳ್ ಮುರಿದೊರಗಿ ಸೇರುವವೈ ಹುಡಿಗೆ
ಅವುಗಳ ಮೇಲೆ ದುರದೃಷ್ಟದ ಕರಿಮೋಡವಿಳಿಯೆ ಕಡೆಗೆ ।

ಮರಿದೊರಗುವುದರೀ ಧರಣಿಯ ಸಂಪತ್ ಸಿಂಹಾಸನವೆಲ್ಲ ।
ಮರ್ತ್ಯರ ವೈಭವ ನೆರಳ್, ಅದು ಕರಗುತ ಮರೆಯಹುದುಳವಿಲ್ಲ ।
ನಂಬಿಕೆಯಿಡಿ, ಇಡಿ ವಿಷ್ಣುವಿನಾ ಪದಪಂಕಜವೊಂದರೊಳೇ ।
ನಂಬಿಕೆಯಿಡಿ, ಇಡಿ, ನಾಶವನರಿಯದ ಅವನಾ ಶಕ್ತಿಯೊಳೇ ।"[೭]

'ಟಿಪ್ಪು ಸುಲ್ತಾನನ ಬೀಳನ ಹಾಡು' ಎಂಬ ಲಾವಣಿ ಹಾಡನ್ನು ಎಲ್. ಗುಂಡಪ್ಪನವರು ತಮ್ಮ 'ನಾಡಪದಗಳು' ಎಂಬ ಕೃತಿಯಲ್ಲಿ ಸಂಗ್ರಹಿಸಿದ್ದಾರೆ. ಈ ಲಾವಣಿ ಕನ್ನಡ ಭಾಷೆಯಿಂದ ಬೇರೆ ಭಾಷೆಗೆ ತರ್ಜುಮೆಯಾಗಿದೆ. ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ಸಂದರ್ಭದಲ್ಲಿ ಟಿಪ್ಪು ವೀರ ಮರಣ ಹೊಂದಿದ. ಅವನ ಸಾಹಸ, ವೀರತನ ಹಾಗೂ ಅವನ ಅವನತಿಯ ಬಗ್ಗೆ ತಿಳಿಸುತ್ತದೆ. ಅವನು ಮಡಿದ ಸಮಯಕ್ಕೆ ಅವನ ಬಗ್ಗೆ ಅನೇಕ ಲಾವಣಿಗಳು ಹುಟ್ಟಿಕೊಂಡಿರಬಹುದಾಗಿದೆ. ಅವುಗಳಲ್ಲಿ ಈ ಟಿಪ್ಪುಸುಲ್ತಾನನ ಬೀಳನ ಹಾಡು ಎಂಬ ಲಾವಣಿ ಕೂಡ ಒಂದು. ಇದನ್ನು ಜಾನ್‌ಲೇಡನ್ ಎಂಬ ಬ್ರಿಟನ್ ಪ್ರವಾಸಿಗ ಇಂಗ್ಲೀಷ್‌ಗೆ ಕ್ರಿ.ಶ.೧೮೦೫ರಲ್ಲಿ ಅನುವಾದಿಸಿದ್ದಾನೆ.

ಈ ಲಾವಣಿ ಶ್ರೀರಂಗಪಟ್ಟಣದ ವೈಭವವನ್ನು ಅದರ ಏಳು-ಬೀಳನ್ನು ಅವನ ಪರಾಕ್ರಮ, ಸಾಹಸ, ವೀರತ್ವವನ್ನು ಮತ್ತು ಇಲ್ಲಿನ ಜನರು ಅವನ ಮೇಲೆ ಹೊಂದಿದ್ದ. ಪ್ರೀತಿ, ಸ್ವಾಭಿಮಾನ, ಗೌರವ ಹಾಗೂ ಅವನ ವ್ಯಕ್ತಿತ್ವವನ್ನು ವಿಧವಿಧವಾಗಿ ವರ್ಣಿಸುತ್ತದೆ. ಅವನು ಜನಾನುರಾಗಿ ತನ್ನ ಪ್ರಾಣವನ್ನೇ ಪಣತೊಟ್ಟು ಹೋರಾಡಿ ಮಡಿದ ಅವನ ಸಾಹಸಗಾಥೆ ಬಹುಶಃ ಬ್ರಿಟೀಷ್ ಪ್ರವಾಸಿಗ 'ಜಾನ್ ಲೇಡನ್'ಗೂ ಇಷ್ಟವಾಗಿರಬೇಕು. ಆದ್ದರಿಂದಲೇ ಏನೋ ಆತ ಟಿಪ್ಪುವಿನ ಬಗ್ಗೆ ಇಲ್ಲಿನ ಜನಪದರು ಹಾಡುತ್ತಿದ್ದ ಲಾವಣಿಗಳನ್ನು ಸಂಗ್ರಹಿಸತೊಡಗಿದ. ನಂತರ ಇಂಗ್ಲೀಷ್ ಭಾಷೆಗೆ ಭಾಷಾಂತರಿಸಿ ಪ್ರಕಟಿಸಿದ.

ಇದೇ ಲಾವಣಿಯನ್ನು ಎಲ್. ಗುಂಡಪ್ಪನವರು ಕ್ರಿ.ಶ.೧೯೪೩ರಲ್ಲಿ ಇಂಗ್ಲೀಷ್ ಮತ್ತು ಹಿಂದಿ. ಭಾಷೆಗೂ ಅನುವಾದಿಸಿದ್ದಾರೆ. ಟಿಪ್ಪುವಿನ ಜನಪ್ರಿಯತೆಯನ್ನು ಅವನ ಪರಾಕ್ರಮ, ಯುದ್ಧ ಕೌಶಲ್ಯವನ್ನು ಕುರಿತು ಬಣ್ಣಿಸುವ ಇನ್ನೊಂದು ಪ್ರಸಿದ್ಧ ಲಾವಣಿಯನ್ನು ಉತ್ತರ ಕರ್ನಾಟಕದ

ಜನಪದ ತಜ್ಞರು ಡಾ. ನಿಂಗಣ್ಣ ಸಣ್ಣಕ್ಕಿಯವರು ಸಂಪಾದಿಸಿ ಪ್ರಕಟಿಸಿದ್ದಾರೆ. ಉತ್ತರ ಕರ್ನಾಟಕದ ಜನಪದ ತಜ್ಞರು, ಸಾಹಿತಿಗಳು ಟಿಪ್ಪು ಕುರಿತು ಜನಪದ ಸಾಹಿತ್ಯ ರಚಿಸಿದರು. ಆದರೆ ಟಿಪ್ಪು ಕುರಿತು ಜನಪದ ಸಾಹಿತ್ಯ ದಕ್ಷಿಣ ಕರ್ನಾಟಕದ ಸಾಹಿತಿಗಳಿಗೆ ಗೋಚರವಾಗದಿರುವುದು ಒಂದು ವಿಷಾದದ ಸಂಗತಿ ಎನ್ನಬಹುದು.

ಟಿಪ್ಪುವಿನ ಸಾಮ್ರಾಜ್ಯ ಹೇಗೆ ಸಮೃದ್ಧಿಯಿಂದ ಶಾಂತಿಯುತವಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಲಾವಣಿ ಇದೆ.

ಟಿಪ್ಪು ರಾಜ್ಯದೊಳು ಶರಾಬು ಶೇಂಧಿ
ಗಾಂಜಾ, ಅಫೀಮು ಇರಲಿಲ್ಲ
ಟಿಪ್ಪುವಿನ ಕಾಲದೊಳು ಜೂಜಾಟ
ಮೇಣ್ ವ್ಯಭಿಚಾರದ ಸುಳಿವಿಲ್ಲ
ಜ್ಞಾಪಕವಿದ್ದಿತು ಸಬ್ಬಲ್ ರಾಣಿಯ
ದಿಣ್ಣೆಯ ಭೀತಿಯ ಜನಕ್ಕೆಲ್ಲಾ

ಲಾವಣಿಕಾರನು ಈ ಲಾವಣಿಯಲ್ಲಿ ಟಿಪ್ಪು ರಾಜ್ಯದಲ್ಲಿ ಮಧ್ಯಪಾನ, ಗಾಂಜಾ ಆಫೀಮು ಎಂಬ ವ್ಯಸನ ಪದಾರ್ಥಗಳಿಗೆ ಆಸ್ಪದವಿರಲಿಲ್ಲ. ಜೂಜಾಟ, ಸೂಳೆಗಾರಿಕೆಯಂತಹ ವ್ಯಭಿಚಾರದ ಸುಳಿವಿರಲಿಲ್ಲ. ಆದರೆ ಇಲ್ಲಿನ ಜನಪದರಿಗೆ ಭಯ, ಆತಂಕವಿದ್ದದ್ದೂ ಬ್ರಿಟನ್ ರಾಣಿಯ ಅನಿಷ್ಟ ನೀತಿ ಕಾನೂನು. ಆ ಕಾಲದಲ್ಲಿದ್ದ ಬ್ರಿಟೀಷರ ದಬ್ಬಾಳಿಕೆ ನೀತಿ, ಕಾನೂನು, ದರೋಡೆ ಎಷ್ಟರ ಮಟ್ಟಿಗೆ ಆಕ್ರಮಿಸಿ ಭಯ-ಭೀತಿಗೊಳಿಸುತ್ತಿತ್ತು ಎಂಬುದು ವೇದ್ಯವಾಗುತ್ತದೆ.

ಹಾಗೆಯೇ ಬ್ರಿಟೀಷರು ಒಡೆದು ಆಳುವ ನೀತಿಗೆ ಪ್ರಸಿದ್ಧರಾದವರು. ಟಿಪ್ಪುವಿನ ಆಪ್ತರಾಗಿದ್ದ ಮೀರ್ ಸಾದಕ್, ಪೂರ್ಣಯ್ಯ ಮುಂತಾದ ಮುಖಂಡರನ್ನು ತಮ್ಮ ಕಡೆಗೆ ಒಲಿಸಿಕೊಂಡರು. ಆದರೆ ಜನಪದರಿಗೆ ಮೀರ್ ಸಾದಕ್ ದೇಶದ್ರೋಹಿಯಾದರೆ ಟಿಪ್ಪು ಮೈಸೂರು ಹುಲಿ. ತನ್ನವರ ಮೋಸದಿಂದ ಶತ್ರುಸೈನ್ಯದ ಕೋಟೆ ಹೊಕ್ಕಿದ. ತನ್ನ ಸೈನಿಕರ ಹತ್ಯೆ ನಡೆದಿದೆ ಎಂದಾಗ ಜನರಲ್ ಹ್ಯಾರಿಸ್‌ಗೆ ತನ್ನ ರೌದ್ರಾವತಾರ ತೋರಿದುದನ್ನು ಈ ಕೆಳಗಿನ ಲಾವಣಿ ವಿವರಿಸುತ್ತದೆ..

ಹರಾಮ ಕೋರರರ ಕರಾಮತ್ ಅರಿತನು
ಟಿಪ್ಪು ಸುಲ್ತಾನನು ನಿಮಿಷದಲಿ
ಅರೇ ಹಮಾರೆ ನಮಕ್ ಹರಾಮ್

ಕರೇ ಸೋ ತಾನಂದ ಮನಸ್ಸಿನಲಿ
ಸ್ವರಾಜ್ಯ ರಕ್ಷಣೆಗೋಸ್ಕರ ಸುಲ್ತಾನ
ರಣಾಗ್ರ ಹೊರಟನು ನಿಮಿಷದಲಿ
ಫಿರಂಗಿ, ಸೋಲ್ಜರ, ತರಂಗ ಮಧ್ಯದಿ
ತುರಂಗ ಬಿಟ್ಟನು ತ್ವರಿತದಲಿ

ಮೈಸೂರು ರಾಜ್ಯದ ಮೇಲೆ ದಾಳಿ ಮಾಡಲು ಬಂದ ದಾಳಿಕೋರರ ವಂಚನಾ ಕಾರ್ಯವನ್ನು ಅರಿತ ಟಿಪ್ಪು ಸುಲ್ತಾನ್ ಕೇವಲ ತ್ವರಿತವಾಗಿ ನಿಮಿಷದಲ್ಲಿ ರಾಜ್ಯವನ್ನು ರಕ್ಷಿಸುವುದಕ್ಕಾಗಿ ನಮ್ಮ ರಾಜ್ಯ ಅಮರವಾಗಲಿ ರಾಜ್ಯಕ್ಕೆ ಜಯವಾಗಲಿ ಎಂದು ರಾಜ್ಯ ರಕ್ಷಣೆಗೋಸ್ಕರ ಬ್ರಿಟೀಷರೊಂದಿಗೆ ರಣರಂಗದಲ್ಲಿ ಹೋರಾಡಿ ಚಾಣಾಕ್ಷತನ, ಕೌಶಲದಿಂದ ಫಿರಂಗಿ ಸೋಜ್ಜರಗಳಂತಹ ಮದ್ದುಗುಂಡನ್ನು ಸಿಡಿಸಿ ರಣರಂಗದಲ್ಲಿ ವೀರವೇಶದಿಂದ ಹುಲಿಯಂತೆ ಹೋರಾಡಿದ. ಟಿಪ್ಪು ಸುಲ್ತಾನ್‌ನ ದೇಶಭಕ್ತಿ, ಯುದ್ಧ ಮಾಡುವ ದೃಶ್ಯವನ್ನು ಕಂಡ ಲಾವಣಿಕಾರ ಈ ರೀತಿ ಹಾಡಿ ಹೊಗಳಿದ್ದಾನೆ.

ಉತ್ತಮ ಜನರಿಗೆ ಚಿತ್ತ ಚಂಚಲವು
ಜಾತಿ ಚಿಂತೆ ಬಹು ಆಗಿತ್ತು
ಅಜಯ್ ತಮಾಷ ಈಸ್ಟ್ ಇಂಡಿಯಾ ಕಂಪನಿ
ಇಂಗ್ಲೀಷರ ನೆಲೆ ಆದೀತು
ಸುತ್ತ ಕಾವೇರಿ ನಡುವೆ ಶ್ರೀರಂಗಪಟ್ಟಣ
ಸುಲ್ತನಾ ದವಲತ್ತು ಹೋಯಿತ್ತು.

ಟಿಪ್ಪುವಿನ ಕಾಲದಲ್ಲಿ ಜನರಿಗೆ ತಮ್ಮ ಜಾತಿಯ ಚಿಂತೆ ಬಹಳ ಆಗಿತ್ತು. ತಮ್ಮನ್ನು ಜಾತಿ ಭ್ರಷ್ಟರನ್ನಾಗಿ ಮಾಡಿ ಮುಸ್ಲಿಂ ಆಗಿ ಪರಿವರ್ತಿಸುವ ಭಯ ಇತ್ತು. ತಮಾಷೆಯ ಸಂಗತಿ ಎಂದರೆ ಕಾವೇರಿ ಸುತ್ತುವರಿದಿದ್ದ ಶ್ರೀರಂಗಪಟ್ಟಣವು ಈಸ್ಟ್ ಇಂಡಿಯಾ ಕಂಪನಿ ವಶವಾಗಿತ್ತು. ಸುಲ್ತಾನರ ದೌವಲತ್ತು ಅಧಿಕಾರ ನಾಶವಾಯಿತು. ಇಂಗ್ಲೀಷರು ತಮ್ಮ ಜಾತಿ ಉಳಿಸಿ ಕಾಪಾಡಿದರು ಎಂಬುದೇ ಲಾವಣಿಕಾರನ ಸ್ಪಷ್ಟ ಅಭಿಪ್ರಾಯವಾಗಿದೆ.

೫.೭ ಟಿಪ್ಪು ಕುರಿತು ಆಚರಣಾ ಲೋಕ

ಜನಾಂಗವೊಂದರ ವರ್ತನೆಗಳ ಒಟ್ಟು ಮೊತ್ತವಾದ ಸಂಸ್ಕೃತಿಯ ಅನೇಕ ನಡವಳಿಕೆಗಳಲ್ಲಿ ನಂಬಿಕೆಗಳದು ಪ್ರಧಾನವಾದ ಪಾತ್ರ. ಮನುಷ್ಯ ಬದುಕಿನ ವಿಧಾನದ

ಬೆನ್ನೆಲುಬು ಆದ ನಂಬಿಕೆ ವ್ಯಕ್ತಿಯ ಹುಟ್ಟಿನಿಂದ ಮೊದಲುಗೊಂಡು-ಸಾವಿನವರೆಗೂ ಆತನ ಎಲ್ಲಾ ಚಟುವಟಿಕೆಗಳಲ್ಲೂ ನೆರಳಾಗಿ ಹಿಂಬಾಲಿಸಿಕೊಂಡು ಬರುತ್ತದೆ. ಶ್ರದ್ಧೆಯಿಂದ ಕೂಡಿದ ನಂಬಿಕೆಗಳ ಕ್ರಿಯಾ ವಿನ್ಯಾಸವೇ ಆಚರಣೆ ಎನಿಸಿಕೊಳ್ಳುತ್ತದೆ.

ಕನ್ನಡ ಜನಪದ ಸಂದರ್ಭದಲ್ಲಿ ತೀರಾ ಸರಳವಾದ ಅರ್ಥದಲ್ಲಿ ಬಳಸಲ್ಪಡುತ್ತಿರುವ ಪದ್ಧತಿ, ಸಂಪದ್ರಾಯ, ಸಂಸ್ಕಾರ ಆರಾಧನೆ ಇತ್ಯಾದಿ ಪದಗಳಿಗೆ ವಿವರಣೆ ಕೊಡುವುದು ಕಷ್ಟ ಆದರೂ, ಆಚರಣೆ ಎಂದರೆ ತಲೆ-ತಲಾಂತರದಿಂದ ಸಮುದಾಯದ ಅಂಗೀಕಾರ ಪಡೆದು ಬಳಕೆಯಲ್ಲಿರುವ ಮಾಟ ಮತ್ತು ಧಾರ್ಮಿಕ ವಿಧಿಗಳೇ ಆಚರಣೆಗಳೆನ್ನಬಹುದು. ನಂಬಿಕೆಯ ಕ್ರಿಯಾತ್ಮಕ ರೂಪವೇ ಆಚರಣೆ. ನಂಬಿಕೆಯೇ ಆಚರಣೆಯ ಬೆನ್ನೆಲುಬು.

ಆದರೆ ಎಲ್ಲಾ ನಂಬಿಕೆಗಳು ಆಚರಣೆಗಳೆನಿಸುವುದಿಲ್ಲ. ನಂಬಿಕೆಯೊಂದಕ್ಕೆ ಸಮುದಾಯದ ಸಮ್ಮತಿ ಇದ್ದಾಗ ಮಾತ್ರವೇ ಅದು ಆಚರಣೆಯಲ್ಲಿ ನಡೆದುಬರುತ್ತದೆ. ಆಚರಣೆಗಳ ಹುಟ್ಟಿಗೆ ಆರ್ಥಿಕ, ಸಾಮಾಜಿಕ ಭಾವನಾತ್ಮಕವಾದ ಕಾರಣಗಳಿರುತ್ತವೆ. ಒಂದು ಜನಾಂಗದ ಜೀವನ ವಿಧಾನದ ಬೇಡಿಕೆಯ ಅಂಗವಾಗಿ ಆಚರಣೆಗಳು, ಸಂಸ್ಕೃತಿಯನ್ನು ಪೋಷಿಸುವಲ್ಲಿ ಮನುಷ್ಯ ಬದುಕನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಐಕ್ಯತೆಯನ್ನು ಕಾಪಾಡುವ ಮತ್ತು ಸಮುದಾಯದ ಬದುಕನ್ನು ನೈತಿಕ ಮಾರ್ಗದಲ್ಲಿ ಮುನ್ನಡೆಸುವ ಸಾಮರ್ಥ್ಯವನ್ನು ಹೊಂದಿ ಆಚರಣೆಗಳು ಬದುಕಿನ ವಿವಿಧ ಘಟ್ಟಗಳಲ್ಲಿ ಮನುಷ್ಯನ ಮಾನಸಿಕ ಮತ್ತು ದೈಹಿಕ ಸ್ಥಿತಿಗಳಿಗೆ ಸಂಬಂಧಪಟ್ಟವುಗಳಾಗಿವೆ.

ಆಚರಣೆಗಳು ವ್ಯಷ್ಟಿ ಮತ್ತು ಸಮಷ್ಟಿಗಳೆರಡೂ ಪರಂಪರಾಗತವಾಗಿ ಒಪ್ಪಿ ಅನುಸರಿಸಿಕೊಂಡು ಬರುತ್ತಿರುವ ಚಟುವಟಿಕೆಗಳು. ಇಲ್ಲಿ ಬುದ್ಧಿಗಿಂತ ಭಾವನೆಗಳಿಗೆ ಹೆಚ್ಚು ಪ್ರಾಧಾನ್ಯತೆ ಇದೆ. ವೈಚಾರಿಕತೆಗೆ ಹೊರತಾಗಿ ಇವುಗಳೊಂದಿಗೆ ಯಾವುದೇ ತಕರಾರು ಮಾಡಿಕೊಳ್ಳದೆ ರಾಜಿ ಮಾಡಿಕೊಂಡು ಮಾನಸಿಕ ಶಾಂತಿ ನೆಮ್ಮದಿ ಬಯಸಿ ಭದ್ರವಾಗಿ ಪಾಲಿಸಿಕೊಂಡು ಬರಲಾಗುತ್ತಿವೆ. ನಂಬಿಕೆಯೊಂದು ಐತಿಹ್ಯ, ಪುರಾಣ, ಧರ್ಮದೊಂದಿಗೆ ಸಂಬಂಧ ಪಡೆದುಕೊಂಡು ಸಾಮೂಹಿಕ ಶ್ರದ್ಧೆಯ ಸಮರ್ಥನೆ ಪಡೆದುಕೊಂಡಾಗ ಸಂಪ್ರದಾಯ, ಆಚರಣೆಗಳ ಅಂತರ ಸಂಬಂಧ ಮಹತ್ವವಾದುದು. ಇವು ಮೂರು ಒಂದನ್ನು ಬಿಟ್ಟು ಒಂದು ಇರುವುದಿಲ್ಲ. ಸಮಷ್ಟಿ ಬದುಕನ್ನು ರೂಪಿಸುವಲ್ಲಿ ಸಂಸ್ಕೃತಿಯ ನಿರ್ಮಾಣದಲ್ಲಿ ಇವುಗಳ ಪಾತ್ರ ಮುಖ್ಯವಾದುದು.

ಆಚರಣೆಗಳು ಯಾವಾಗ ಹುಟ್ಟಿದವು ಎಂದು ಹೇಳಲು ಬರುವುದಿಲ್ಲ. ನಿಸರ್ಗದ ಅಗೋಚರ ಶಕ್ತಿಯನ್ನು ಪೂಜಿಸಲಾರಂಭಿಸಿದ ದಿನದಿಂದ ಆಚರಣೆಗಳು ಜನ್ಮ ತಾಳಿದವು ಎಂದು ಹೇಳಬಹುದು.

ಆದಿಮಾನವನು ತನ್ನ ಶಕ್ತಿಗೆ ಮೀರಿದ ಅಗೋಚರ ಶಕ್ತಿಗಳನ್ನು ಪೂಜಿಸುವ, ತೃಪ್ತಿ ಪಡಿಸುವ, ವಶೀಕರಿಸಿಕೊಳ್ಳುವ ಹಂತದಲ್ಲಿ ಆಚರಣೆಗಳ ಉಗಮವಾಗಿರಬಹುದು. ಆಚರಣೆಗಳ ಹಿನ್ನೆಲೆಯಲ್ಲಿ ಬುದ್ಧಿ ಪೂರ್ವಕವಾದ ಚರ್ಚೆ, ತರ್ಕಬದ್ಧ ಚಿಂತನೆಗಳಲ್ಲಿ ಜನಪದರ ಮುಗ್ಧತೆ, ಪರಿಮಿತ ತಿಳುವಳಿಕೆ, ಅವೈಜ್ಞಾನಿಕ ಕಲ್ಪನೆಗಳು, ಭಾವವೇಶಗಳು ಆಚರಣೆಗಳ ಹುಟ್ಟಿಗೆ ನಾಂದಿಯಾಗಿರಬಹುದು. ನಂಬಿಕೆಯೊಂದು ಸಮುದಾಯದಲ್ಲಿ ಆಳವಾಗಿ ಬೇರೂರಿದಾಗ ಅದರ ಕಾರಣದಿಂದಾಗಿ ಆಚರಣೆಗಳ ಪರಂಪರೆಯೇ ಹುಟ್ಟಿಕೊಳ್ಳುತ್ತದೆ. ಅನಂತರದಲ್ಲಿ ಅದು ಜಾನಪದೀಯ ಮೌಲ್ಯ ನೆಲೆಗಟ್ಟಿನಲ್ಲಿ ಬೆಳೆಯಲಾರಂಭಿಸುತ್ತದೆ. ಇಂತಹ ಸಂದರ್ಭದಲ್ಲಿ ಆಚರಣೆಗಳನ್ನು ಸ್ಥಿರವಾಗಿ ಬೇರೂರಿಸುವುದಕ್ಕೆ ಮತ್ತು ವ್ಯಾಖ್ಯಾನಿಸುವುದಕ್ಕೆಂದೇ ಪುರಾಣಗಳು ಸೃಷ್ಟಿಯಾಗುತ್ತವೆ.

ಆಚರಣೆಗೆ ಮೂಲವಾದುದು ಸಮಷ್ಟಿ ಮನಸ್ಸು. ಜನಸಮುದಾಯದ ಒಟ್ಟು ಮನಸ್ಥಿತಿ ಆಚರಣೆಯ ಬೆಳವಣಿಗೆಗೆ ಕಾರಣ. ಆಚರಣೆಗಳಿಂದ ಸುಖ, ಶಾಂತಿ, ಸಂತೃಪ್ತಿ, ಸಮೃದ್ಧಿಗಳು ನೆಲೆಸುತ್ತವೆಂದು ನಂಬಿಕೆ. ಆಚರಿಸದಿದ್ದರೆ ಅಗೋಚರ ಶಕ್ತಿಗಳ ಅವಕೃಪೆಗೀಡಾಗಿ ಸಂಕಷ್ಟಗಳಿಗೆ ಒಳಗಾಗುತ್ತದೆ ಎಂಬ ನಂಬಿಕೆ.

ಮುಸ್ಲಿಂ ಜನಾಂಗದವರಲ್ಲಿ ಮಂಗನಿ, ಉರುಸ್, ಛಟ್ಟಿ, ಛಿಲ್ಲ, ಹಕಿಕಾ, ರಸಂ, ಜುಮ್ಮಾಗಿ ಸತ್ವಸ, ಖತ್ನಾ ಇತ್ಯಾದಿ ಆಚರಣೆಗಳು ಎಲ್ಲಾ ಪ್ರದೇಶಗಳಲ್ಲೂ ರೂಡಿಯಲ್ಲಿವೆ.

ಉರುಸ್ ಪದದ ಅರ್ಥ

ಸತ್ತ ಮುಸ್ಲಿಂ ಸಾಧು-ಸಂತರ ನೆನಪಿಗಾಗಿ ಮುಸ್ಲಿಮರು ವರ್ಷಕ್ಕೊಮ್ಮೆ ಆಚರಿಸುವ ಆಚರಣೆಯೇ **ಉರುಸ್**.

ಟಿಪ್ಪುವಿಗೆ ಸಂಬಂಧಿಸಿದ ಉರುಸ್‌ಗಳು

ಟಿಪ್ಪುವಿಗೆ ಸಂಬಂಧಿಸಿದಂತೆ ಇರುವ ಆಚರಣೆಗಳಲ್ಲಿ ಟಿಪ್ಪು ಹೆಸರಿನಲ್ಲಿ ಟ್ಯಾನಿ ರೋಡ್ ಮತ್ತು ಕೋಲಾರದಲ್ಲಿ ವರ್ಷಕ್ಕೊಮ್ಮೆ ನಡೆಯುವ ಉರುಸ್ ಪ್ರಮುಖವಾದದು.

ಉರುಸ್ ಆಚರಣೆಯು ಮೂರು ದಿನಗಳ ಕಾಲ ಬೇರೆ-ಬೇರೆ ಹೆಸರಿನಿಂದ ಊರಿನ ಮುಲ್ಲಾಗಳ ಸಮಾಲೋಚನೆ ಮೂಲಕ ಕೈಗೊಳ್ಳುವರು.

ಸಂದೋಲ್ (ಗಂಧ ಹಚ್ಚುವಿಕೆ)

ಉರುಸ್‌ನ ಮೊದಲ ದಿನ ನಡೆಯುವ ಕಾರ್ಯಕ್ರಮ. ಮಲ್ಲಿಗೆ ಹೂವಿನಿಂದ ಇಡೀ ಊರಿನ ಮಸೀದಿಗಳನ್ನು ಸಿಂಗರಿಸುವರು. ಗಂಡಸರು-ಹೆಂಗಸರು-ಮಕ್ಕಳು ಎನ್ನುವ ಭೇದ-ಭಾವವಿಲ್ಲದೇ ಟಿಪ್ಪುವಿನ ಭಾವಚಿತ್ರ ಎತ್ತಿಕೊಂಡು ಇಡೀ ಊರಿನಲ್ಲಿ ಮೆರವಣಿಗೆ ಮಾಡುವರು. ಇಡೀ ರಾತ್ರಿ ಮೆರವಣಿಗೆ ನಡೆಯುವುದು. ಪಾಲ್ಗೊಂಡ ಎಲ್ಲರಿಗೂ ದಾಲ್, ಖುಷ್ಕಾ, ಮಲೀದಾವನ್ನು ಹಂಚುವರು. ಮೆರವಣಿಗೆಯಲ್ಲಿ ಕುದುರೆ, ಟಿಪ್ಪು ಭಾವಚಿತ್ರ ಬ್ಯಾಂಡ್‌ಸೆಟ್ ಬಳಸಿಕೊಳ್ಳುವರು.

ಉರುಸ್

ಇದು ಎರಡನೇ ದಿನದ ಕಾರ್ಯಕ್ರಮವಾಗಿದ್ದು ಉರುಸ್ ಹೆಸರಿನಿಂದಲೇ ಜಾರಿಗೊಳಿಸುವರು. ರಾತ್ರಿ ೧೨ ಗಂಟೆಯವರೆಗೆ ಪಾಲ್ಗೊಂಡ ಎಲ್ಲರಿಗೂ ಊಟ-ಉಪಚಾರ ಮಾಡವರು.

ಖವ್ವಾಲಿ (ಹಾಡುವಿಕೆ)

ಇದು ಉರುಸ್‌ನ ಕೊನೆಯ ಮತ್ತು ಮೂರನೇ ದಿನದ ಕಾರ್ಯಕ್ರಮ. ಮಸೀದಿಯ ಮುಂಭಾಗವನ್ನು ವೇದಿಕೆಯಾಗಿ ಬಳಸಿಕೊಳ್ಳುವರು. ಇದು ರಾತ್ರಿ ೧೨.೦೦ ಗಂಟೆಯಿಂದ ಬೆಳಗಿನ ಜಾವ ೫.೦೦ ಗಂಟೆಯರೆಗೆ ನಡೆಸಲಾಗುತ್ತದೆ. ಪ್ರಸಿದ್ಧ ಖವ್ವಾಲಿ ಗಾಯಕರನ್ನು ಕರೆಯಿಸಿ. ಸತ್ತ ಸಂತರ ಮತ್ತು ಟಿಪ್ಪು ಕುರಿತು ಖವ್ವಾಲಿಯನ್ನು ಹಾಡಿಸುವರು.

ಶ್ರೀರಂಗಪಟ್ಟಣದಲ್ಲಿ ಉರುಸ್ ಆಚರಣೆ

ಟಿಪ್ಪುವಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಉರುಸ್ ಕೂಡ ಒಂದು. ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದಲ್ಲಿ ವಕ್ಫ್ ಮಂಡಳಿಯವರು ಪ್ರತಿವರ್ಷ ಉರುಸ್ ಆಚರಿಸುತ್ತಾರೆ. ಪ್ರತಿವರ್ಷ ಬಕ್ರೀದ್ ಹಬ್ಬದ ಹಿಂದಿನ ಹತ್ತನೆಯ ದಿನವನ್ನು ಉರುಸ್ ಆಗಿ ಆಚರಿಸುತ್ತಾರೆ. ಈ ಹಬ್ಬವನ್ನು ಆಚರಿಸುವ ಉದ್ದೇಶವೇನೆಂದರೆ ಬಕ್ರೀದ್ ಹಬ್ಬದ ಮುಂಚಿತ ಹತ್ತನೆಯ ದಿನ ಟಿಪ್ಪು ಸುಲ್ತಾನ್ ಮರಣ ಹೊಂದಿದ (ಅರೇಬಿಕ್ ಕ್ಯಾಲೆಂಡರ್ ಪ್ರಕಾರ) ಎಂಬ ನಂಬಿಕೆಯಿಂದ. ಆ ದಿನವನ್ನು

ಟಿಪ್ಪುವಿಗೆ ಸಂಬಂಧಿಸಿದ ನೆನಪಿನ ಉತ್ಸವವನ್ನಾಗಿ ಪ್ರತಿವರ್ಷ ಶ್ರೀರಂಗಪಟ್ಟಣದ ಗುಂಬಜ್ ಸಂಕೀರ್ಣದಲ್ಲಿರುವ ವಕ್ಫ್ ಮಂಡಳಿಯವರು ಆಚರಿಸಿಕೊಂಡು ಬರುತ್ತಿದ್ದಾರೆ.

ಉರುಸ್‌ನ ವೈಶಿಷ್ಟ್ಯತೆಗಳು

- ಮೊದಲಿಗೆ ಶ್ರೀರಂಗಪಟ್ಟಣದ ಜುಮ್ಮಾ ಮಸೀದಿಯಿಂದ ಮಧ್ಯಾಹ್ನ ೩ ಗಂಟೆಗೆ ಗಂಧವನ್ನು ತಂದು ಶ್ರೀರಂಗಪಟ್ಟಣದ ಪ್ರಮುಖ ಬೀದಿಗಳಲ್ಲಿ ಗಂಧದ ಮೆರೆವಣಿಗೆಯನ್ನು ಮಾಡಿ. ತಂದಿರುವ ಗಂಧವನ್ನು ಶ್ರೀರಂಗಪಟ್ಟಣದ ಗುಂಬಜ್‌ನಲ್ಲಿರುವ ಟಿಪ್ಪುವಿನ ಸಮಾಧಿಗೆ ಅರ್ಪಿಸಲಾಗುತ್ತದೆ.
- ಟಿಪ್ಪುವಿನ ಸಮಾಧಿಯ ಸಂಕೀರ್ಣದಲ್ಲಿ ಉರುಸ್ ಪ್ರಯುಕ್ತ ಸಭೆ-ಸಮಾರಂಭಗಳನ್ನು ಏರ್ಪಡಿಸಿರುತ್ತಾರೆ. ಈ ಕಾರ್ಯಕ್ರಮಗಳಲ್ಲಿ ವಕ್ಫ್‌ಮಂಡಳಿಯವರು ರಾಜ್ಯದ ಪ್ರಮುಖ ರಾಜಕಾರಣಿಗಳು, ಸಂಪನ್ಮೂಲ ವ್ಯಕ್ತಿಗಳನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಿ ಅವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ.
- ಸಮಾರಂಭಕ್ಕೆ ಆಗಮಿಸಿದ ಸಭಿಕರಿಗೆ ಉಚಿತ ಊಟದ ವ್ಯವಸ್ಥೆಯನ್ನು ಏರ್ಪಡಿಸಿರುತ್ತಾರೆ.
- ಇದಲ್ಲದೆ ಕವಿಗೋಷ್ಠಿ ಹಾಗೂ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಗುಂಬಜ್ ಸಂಕೀರ್ಣದಲ್ಲಿ ಪ್ರತಿವರ್ಷ ವಕ್ಫ್‌ಮಂಡಳಿಯವರು ಆಚರಿಸಿಕೊಂಡು ಬರುತಿದ್ದಾರೆ, ಈ ಸಮಾರಂಭಕ್ಕೆ ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಮೈಸೂರು, ಮಂಡ್ಯ ಹಾಗೂ ಇನ್ನಿತರ ಪ್ರದೇಶಗಳಿಂದ ಜನರು ಆಗಮಿಸುತ್ತಾರೆ.

ಕಳೆದ ಸೆಪ್ಟೆಂಬರ್-೨೦೧೫ರಲ್ಲಿ ನಡೆದ ಉರುಸ್ ಉತ್ಸವ

ಶ್ರೀರಂಗಪಟ್ಟಣದ ಗುಂಬಜ್-ಎ-ಶಾಹಿ ಗಂಜಾಂ ನಲ್ಲಿ ದಿನಾಂಕ ೧೩-೦೯-೨೦೧೫ನೇ ಭಾನುವಾರ ಟಿಪ್ಪುಸುಲ್ತಾನ್ ಅವರ ೨೨೩ನೇ ಉರುಸ್-ಎ-ಷರೀಫ್ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದ ದಿನ ಮಧ್ಯಾಹ್ನ ೩.೩೦ ಗಂಟೆಗೆ ಗಂಧದ ಮೆರೆವಣಿಗೆಯನ್ನು ಮಸ್ಜೀದ್-ಎ-ಆಲಾ ಶ್ರೀರಂಗಪಟ್ಟಣದಿಂದ ಹೊರಟು ಗುಂಬಜ್-ಎ-ಶಾಹಿಗೆ ೫.೩೦ಕ್ಕೆ ಸೇರಿತು. ಶ್ರೀರಂಗಪಟ್ಟಣದಲ್ಲಿರುವ ಹಜಾರತ್ ಟಿಪ್ಪುಸುಲ್ತಾನ್ ಶಹೀದ್ ವಕ್ಫ್ ಎಸ್ಟೇಟ್‌ನ ಅಧ್ಯಕ್ಷರು ಮತ್ತು ಸದಸ್ಯರು ಈ ದಿನದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಯಲು ನೆರವಾಗಿದ್ದರು. ಆ ದಿನ ಸಂಜೆ ೭ ಗಂಟೆಯ ನಂತರ ಸಾರ್ವಜನಿಕ ಕಾರ್ಯಕ್ರಮಗಳು ರಾತ್ರಿ ೯ ಗಂಟೆಗೆ ದಸ್ತಾರ್ ಬಂದಿ ಕಾರ್ಯಕ್ರಮ. ರಾತ್ರಿ ೧೦ ಗಂಟೆಗೆ ಖವ್ವಾಲಿ ಕಾರ್ಯಕ್ರಮಗಳನ್ನು

ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ರಾಜ್ಯದಾದ್ಯಂತ ರಾಜಕಾರಣಿಗಳು, ಸಾಹಿತಿಗಳು ಕರ್ನಾಟಕ ರಾಜ್ಯ ವಕ್ಫ್ ಮಂಡಳ ಬೆಂಗಳೂರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

೫.೭ ಟಿಪ್ಪು ಜಯಂತಿ

ಸರ್ಕಾರವು ನವೆಂಬರ್ ೧೦, ೨೦೧೫ ರಂದು ಟಿಪ್ಪುವಿನ ೨೬೫ನೇ ಜಯಂತಿಯನ್ನು ಆಚರಿಸಿತು. ಟಿಪ್ಪುವಿನ ಹುಟ್ಟೂರಾದ ದೇವನಹಳ್ಳಿಯಲ್ಲಿ ಬಹಳ ವಿಜೃಂಭಣೆಯಿಂದ ಅಂದಿನ ದಿನದಂದು ಟಿಪ್ಪು ಸಂಘದವರು ಒಂದು ಸಮಾರಂಭವನ್ನು ಏರ್ಪಡಿಸಿ, ಟಿಪ್ಪುವಿನ ಮಹತ್ವವನ್ನು ಸಾರಿದರು. ಆದರೆ ಕೊಡಗು ಮತ್ತು ಮಡಿಕೇರಿಗಳಲ್ಲಿ ಜಯಂತಿಯನ್ನು ವಿರೋಧಿಸಿ ವಿವಿಧ ರಾಜಕೀಯ ಪಕ್ಷಗಳು ಎಬ್ಬಿಸಿದ ಅವಾಂತರದಿಂದ ಗಲಭೆ ಎದ್ದು, ಇಬ್ಬರ ಮರಣಕ್ಕೆ ಕಾರಣವಾಗಿದ್ದು ವಿಪರ್ಯಾಸದ ಸಂಗತಿ.

೫.೮ ಟಿಪ್ಪುವಿನ ಕಾಲಕ್ಕೆ ಸಂಬಂಧಿಸಿದ ಸ್ಥಳನಾಮಗಳು

ಬಹುಶಿಸ್ತೀಯ ಅಧ್ಯಯನದ ನೆಲೆಯಲ್ಲಿ ಸ್ಥಳನಾಮಗಳನ್ನು ವಿಶ್ಲೇಷಿಸುತ್ತಾ ಹೋದಂತೆಲ್ಲಾ ಅವುಗಳ ಸಾಂಸ್ಕೃತಿಕ, ಐತಿಹಾಸಿಕ, ರಾಜಕೀಯ, ಜಾನಪದೀಯ ಹಾಗೂ ಭಾಷಿಕ ಮಹತ್ವಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಪ್ರಸ್ತುತ ಅಧ್ಯಯನ ವಿಷಯವನ್ನು ವೈಜ್ಞಾನಿಕವಾಗಿ, ತರ್ಕಬದ್ಧವಾಗಿ ನಡೆಸಬೇಕಾದ ಅವಶ್ಯಕತೆಯಿದೆ. ಇತ್ತೀಚಿಗೆ ಜನರ ಕುತೂಹಲವನ್ನು ಕೆರಳಿಸಿ ತನ್ನ ಕಡೆಗೆ ಆಕರ್ಷಿಸುತ್ತಿವೆ. ಸ್ಥಳನಾಮಗಳು ಮಾನವನ ಬದುಕಿನಲ್ಲಿ ಒಂದು ಅನಿವಾರ್ಯ ಪ್ರಕ್ರಿಯೆಯಾಗಿದ್ದೂ ಅದನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅಧ್ಯಯನ ನಡೆಸುವುದು ಪ್ರಮುಖ ಉದ್ದೇಶವಾಗಿದೆ.

ಸ್ಥಳನಾಮ ಎಂದರೆ ಊರ ಹೆಸರು ಎಂದರ್ಥ ಇಂಗ್ಲೀಷಿನಲ್ಲಿ ಸ್ಥಳನಾಮಶಾಸ್ತ್ರಕ್ಕೆ 'Topology' ಎಂಬ ಹೆಸರಿದೆ. ಮೂಲತಃ ಗ್ರೀಕ್ ಭಾಷೆಯಿಂದ ಬಂದದ್ದು. Tops ಎಂದರೆ ಸ್ಥಳಗಳು – Place 'nomos' ಎಂದರೆ A study of ಎಂದರ್ಥ. ಹಾಗಾದರೆ Toponomy ಎಂಬುದು ಸ್ಥಳದ, ಕ್ಷೇತ್ರದ ಅಧ್ಯಯನ ಎಂದಾಗಿದೆ. ಇತ್ತೀಚಿಗೆ ಅದೊಂದು ವಿಜ್ಞಾನ ಶಾಖೆಯಾಗಿ ಸುವ್ಯವಸ್ಥಿತ ಶಾಸ್ತ್ರವಾಗಿ ಬೆಳೆದುಬಂದಿದೆ. ಆದ್ದರಿಂದ ಸ್ಥಳನಾಮ ಎಂದರೆ "ಸ್ಥಳಗಳನ್ನು, ಸ್ಥಳನಾಮಗಳನ್ನು ಅಧ್ಯಯನ ಮಾಡುವ ವಿಜ್ಞಾನ" ಎಂದೇ ವ್ಯಾಖ್ಯಾನಿಸಬಹುದು. ಪಾರಿಭಾಷಿಕವಾಗಿ ಪ್ರಾಕೃತಿಕ, ಸಾಂಸ್ಕೃತಿಕ ವೈಲಕ್ಷಣಗಳೆರಡನ್ನು ಇದು ಒಳಗೊಂಡಿದೆ.

ಸ್ಥಳನಾಮಗಳ ಹುಟ್ಟು ನಿನ್ನೆ, ಮೊನ್ನೆಯದಲ್ಲ. ಅವು ಮಾನವನಷ್ಟೆ ಹಳೆಯವು ಹಾಗೂ ಅವು ಪುರಾತನ ಜೀವನ ಸೃಷ್ಟಿಯ ಪಳೆಯುಳಿಕೆಗಳು. ಮಾನವನ ದೈನಂದಿನ ಬದುಕು ಬಹಳ ಗಂಭೀರತೆ ಪಡೆದಂತೆಲಲ್ಲ ಪ್ರಾಕೃತಿಕ, ಐತಿಹಾಸಿಕ ಧಾರ್ಮಿಕ, ಭಾಷಿಕ ಮತ್ತು ಜಾನಪದೀಯ ಅಂಶಗಳ ಮೂಲಕ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಸ್ಥಳನಾಮಗಳು ಹುಟ್ಟಿಕೊಂಡವು.

ರಾಜ್ಯ, ಸಾಮ್ರಾಜ್ಯ, ಪ್ರಾಂತ್ಯದ ಅಧಿಕಾರ ರಾಜ, ಯುವರಾಜ, ಪ್ರಭುಗಳ ವಶದಲ್ಲಿತ್ತು. ಅಲ್ಲದೆ ಪ್ರಾಂತ್ಯದ ಜವಾಬ್ದಾರಿಯುತವಾದ ಆಡಳಿತ ನಿರ್ವಹಣೆಯಲ್ಲಿ ಮಹಾಮಂತ್ರಿ, ಸೇನಾಧಿಪತಿ, ದಂಡನಾಯಕ, ಆಡಳಿತಾಧಿಕಾರಿ, ಸಂಧಿ ವಿಗ್ರಹಿ ಮತ್ತು ಪಶುಪತಿಗಳಿರುತ್ತಿದ್ದರು. ಗ್ರಾಮ, ಹಳ್ಳಿಗಳ ಉಸ್ತುವಾರಿಯನ್ನು ನೋಡುವುದಕ್ಕಾಗಿ ಪಟೇಲ, ದೇಶಿಶೆಟ್ಟಿ, ಗೌಡ, ಶ್ಯಾನುಭೋಗ ಇರುತ್ತಿದ್ದರು. ಈ ಆಡಳಿತ ತಂತ್ರಗಾರಿಕೆಯಲ್ಲಿ ಸಾಮ್ರಾಜ್ಯದ ಪ್ರಭುವಾದವನು ಪ್ರತಿಯೊಬ್ಬರಿಗೂ ಅವರ ಯೋಗ್ಯತೆಗೆ ಅನುಗುಣವಾಗಿ ಕೆಲವು ಗ್ರಾಮ, ನಾಡು, ಪ್ರಾಂತ್ಯಗಳನ್ನು ಅವರ ಹೆಸರಿನಲ್ಲಿ ಬಿಟ್ಟುಕೊಡುತ್ತಿದ್ದನು. ಅದು ಕಾಲಕ್ರಮೇಣ ಅವರ ಹೆಸರಿನಲ್ಲಿ ಚಲಾವಣೆಗೆ ಬಂದವು.

ಪ್ರಪಂಚದಾದ್ಯಂತ ಸ್ಥಳನಾಮಗಳ ಬದಲಾವಣೆ ಅಥವಾ ಪುನರ್ನಾಮಕರಣದ ಪ್ರಕ್ರಿಯೆ ಒಂದಲ್ಲ ಒಂದು ಕಾರಣದಿಂದ ನಡೆದುಕೊಂಡು ಬಂದಿದೆ ಎಂಬ ವಿಚಾರವನ್ನು ಇತಿಹಾಸದಿಂದ ತಿಳಿಯಬಹುದು. ಒಂದು ಸ್ಥಳಕ್ಕೆ ಒಂದು ಹೆಸರಿರಬೇಕಾದರೆ ಆ ಹೆಸರು ಅಲ್ಲಿಯ ಭೌಗೋಳಿಕ ಮತ್ತು ಸಾಂಸ್ಕೃತಿಕಾಂಶಗಳ ಒಡಲಿನಿಂದ ಮೂಡಿ ಬಂದಿರುತ್ತದೆ.

ಇಂತಹ ಸ್ಥಳನಾಮಗಳು ಸ್ಥಳೀಯ ಸಾಂಸ್ಕೃತಿಕ ಪಳೆಯುಳಿಕೆಗಳು. ಆಯಾ ಭಾಷೆಯ ವಿಶಿಷ್ಟ ಪಾರಂಪರಿಕ ಲಕ್ಷಣಗಳಾಗಿವೆ. ಹೀಗೆ ಸ್ಥಳನಾಮಗಳು ಕಾಲಾನುಸಾರವಾಗಿ ಬದಲಾವಣೆ ಹೊಂದಬಹುದು. ಹಳೆಯ ಹೆಸರಿನ ಜಾಗದಲ್ಲಿ ಹೊಸದೊಂದು ಅಂಕಿತ ಬೀಳುತ್ತದೆ. ಅಂತಹ ಬದಲಾವಣೆಗೆ ಸಾಮಾನ್ಯವಾಗಿ ಸಾಮಾಜಿಕ, ಧಾರ್ಮಿಕ, ಭಾಷಿಕ, ರಾಜಕೀಯ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಂಶಗಳು ಕಾರಣವಾಗುತ್ತದೆ.

ಭಾರತ ದೇಶ ಹಲವು ಧರ್ಮ, ಭಾಷೆ, ಜಾತಿ ಜನಾಂಗಗಳಿಂದ ಕೂಡಿರುವ ಗಣರಾಜ್ಯ. ಈ ನಾಡಿನಲ್ಲಿ ಕೆಲವು ರಾಜರುಗಳು ತಮ್ಮ ಅಧಿಕಾರ ಅವಧಿಯಲ್ಲಿ ತಮ್ಮ ಹೆಸರನ್ನು ಚಿರಸ್ಥಾಯಿಗೊಳಿಸುವ ಹಿನ್ನೆಲೆಯಲ್ಲಿ ಹಳೆಯ ಹೆಸರನ್ನು ಬದಲಾಯಿಸಿ ಅದರ ಸ್ಥಾನದಲ್ಲಿ ತಮ್ಮ ಹೆಸರನ್ನು ಆ ಸ್ಥಳಕ್ಕೆ ನಾಮಾಂಕಿತವಾಗಿಡುವುದು ಸರ್ವೇ ಸಾಮಾನ್ಯವಾಗಿತ್ತು. ಇಂತಹ ರಾಜರುಗಳ ಸಾಲಿನಲ್ಲಿ ಟಿಪ್ಪು ಸುಲ್ತಾನ್ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ.

ಮೈಸೂರಿನಲ್ಲಿ ಹೈದರ್ ಮತ್ತು ಟಿಪ್ಪು ಆಡಳಿತದಲ್ಲಿದ್ದಾಗ ಇಸ್ಲಾಂ ಧರ್ಮ ಪ್ರಧಾನವಾಗಿತ್ತು. ಅಂತೆಯೇ ಉರ್ದು, ಅರೇಬಿಕ್ ಭಾಷೆಗಳು ಕನ್ನಡದ ಜೊತೆಗೆ ಆಡಳಿತ ಭಾಷೆಯಾಗಿ ಪ್ರಭಾವ ಬೀರಿದ್ದವು. ಆ ಸಂದರ್ಭದಲ್ಲಿ ಕರ್ನಾಟಕ ಮತ್ತು ದಕ್ಷಿಣ ಭಾರತದ ಹಲವು ಪ್ರಾಂತ್ಯಗಳು ಟಿಪ್ಪುವಿನ ಅಧೀನಕ್ಕೆ ಒಳಪಟ್ಟಿದ್ದವು. ಟಿಪ್ಪು ಜಯಿಸಿದ ಕೆಲವು ಪ್ರದೇಶಗಳಿಗೆ ಹೊಸದಾಗಿ ನಾಮಾಂಕಿತವಿಟ್ಟನು. ಹಲವು ಸ್ಥಳನಾಮಗಳು ಬದಲಾವಣೆ ಹೊಂದಿದವು. ಸ್ಥಳನಾಮಗಳು ಆ ಸ್ಥಳದ ಮತ್ತು ಅದರ ಸುತ್ತಮುತ್ತಲಿನ ಪರಿಸರದ ಇತಿಹಾಸ, ಸಂಸ್ಕೃತಿಯನ್ನು ತಿಳಿಸಲು ಇರುವ ಆಧಾರಗಳಾಗಿವೆ.

ಇಂದಿಗೂ "ಟಿಪ್ಪುವಿಗೆ ಸಂಬಂಧಿಸಿದ ಸ್ಥಳನಾಮಗಳು ಅಂದಿನ ಕಾಲದ ಇತಿಹಾಸವನ್ನು ಆತನಿಗಿದ್ದ ಪರ್ಷಿಯನ್ ಭಾಷೆ ವ್ಯಾಮೋಹವನ್ನು ಹೇಳುತ್ತವೆ. ಅವುಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

೧) ಮೈಸೂರು – ನಜಾರ್‌ಬಾದ್

೨) ಮಡಿಕೇರಿ – ಜಾಫರ್‌ಬಾದ್

೩) ಮಂಗಳೂರು – ಜುಮ್ಮಲಾಬಾದ್

೪) ಧಾರವಾಡ – ಖುರ್ಷಿದ್‌ಸಾವದ್

೫) ಹಾಸನ – ಖರೀಮಬಾದ್

೬) ಕುಂದಾಪುರ – ನಸ್ರುಲಾಬಾದ್

೭) ಭಾಗಮಂಡಲ – ಅಜ್ಜಲಬಾದ್

೮) ಶಿರಾ – ರುಸ್ತುಮಾಬಾದ್

೯) ಮಾಗಡಿ – ಸಾವನಗಡ

೧೦) ನಂದಿಬೆಟ್ಟ – ನಂದಿದುರ್ಗ

೧೧) ಕಲ್ಲಿಕೋಟೆ – ಖಲೀಕ್‌ಬಾದ್

೧೨) ಗುತ್ತಿ – ಇಸ್ಲಾಮಾಬಾದ್

೧೩) ಚಿತ್ರದುರ್ಗ – ಫಯಜ್‌ಹಿಸ್ಸಾರ್

೧೪) ಪಾವಗಡ – ಖರೀಂಗಡ

೧೫) ದೇವನಹಳ್ಳಿ – ಯೂಸುಫಾಬಾದ್

೧೬) ನರಸಿಂಗ ಅಂಗಡಿ – ಜಮಾಲಾಬಾಗ್

– ಫಿರ್‍ರೋ ಕೋಯಬ್ ಹಿಸ್ಸಾರ್

೧೭) ಮೊಳಕಾಲ್ಮೂರ – ಮುಹ್ಮದಾಬಾದ್" ೮

ಅಡಿ ಟಿಪ್ಪಣಿ :

೧) ತಲಕಾಡು ಚಿಕ್ಕರಂಗೇಗೌಡ, ಟಿಪ್ಪುಸುಲ್ತಾನ್ ಕಾಲದ ಪ್ರಸಂಗಗಳು, ಚಂದ್ರಗಿರಿ ಪ್ರಕಾಶನ, ಬೆಂಗಳೂರು, ೨೦೧೩, ಪುಟ ಸಂಖ್ಯೆ ೨೯೯

೨) ಅದೇ ಪುಟ ಸಂಖ್ಯೆ ೨೬೬

೩) ಲಿಂಗದೇವರು ಹಳೆಮನೆ, ಧೀರ ಟಿಪ್ಪುವಿನ ಲಾವಣಿಗಳು, ವಿಸ್ಮಯ ಪ್ರಕಾಶನ, ಮೈಸೂರು, ೨೦೦೩, ಪುಟ ಸಂಖ್ಯೆ ೪೭

೪) ದೇಜಗೌ, ಜಾನಪದ ಅಧ್ಯಯನ, ಚೇತನ ಬುಕ್‌ಹೌಸ್,, ಮೈಸೂರು–೧೯೯೯, ಪುಟ ಸಂಖ್ಯೆ ೬೩

೫) ಲಿಂಗದೇವರು ಹಳೆಮನೆ, ಧೀರ ಟಿಪ್ಪುವಿನ ಲಾವಣಿಗಳು, ವಿಸ್ಮಯ ಪ್ರಕಾಶನ, ಮೈಸೂರು, ೨೦೦೩, ಪುಟ ಸಂಖ್ಯೆ ೨೯

೬) ಅದೇ ಪುಟ ಸಂಖ್ಯೆ ೫೯

೭) ದೇವುಡು ನರಸಿಂಹಶಾಸ್ತ್ರಿ, ಕರ್ನಾಟಕ ಸಂಸ್ಕೃತಿ, ಕಾಮಧೇನು ಪುಸ್ತಕ ಪ್ರಕಾಶನ, ಬೆಂಗಳೂರು, ಪುಟ ಸಂಖ್ಯೆ ೩೧ ಮತ್ತು ೩೨

೮) ಚಿದಾನಂದಮೂರ್ತಿ, ಮೂಲದಾಖಲೆಗಳಲ್ಲಿ ಹುದುಗಿದ್ದ ಟಿಪ್ಪು–ಭಾರತ ವಿಕಾಸ ಪರಿಷತ್, ಬೆಂಗಳೂರು–೨೦೧೩, ಪುಟ ಸಂಖ್ಯೆ ೩೬

ಅಧ್ಯಾಯ– ೬
ವರ್ತಮಾನದಲ್ಲಿ ಟಿಪ್ಪು ಬಗೆಗಿನ ನವಮೌಖಿಕತೆ

ಅಧ್ಯಾಯ – ೬

ವರ್ತಮಾನದಲ್ಲಿ ಟಿಪ್ಪು ಬಗೆಗಿನ ನವಮೌಖಿಕತೆ

೬.೧ ಪೀಠಿಕೆ

ಟಿಪ್ಪು ಸುಲ್ತಾನ್ ನಿಧನಹೊಂದಿದ ನಂತರ ಆತನ ಬಗ್ಗೆ ವರ್ತಮಾನದಲ್ಲಿ ನಡೆಯುವ ಸಭೆ ಸಮಾರಂಭಗಳು, ಟಿಪ್ಪು ಜಯಂತಿ, ಟಿಪ್ಪು ಸುಲ್ತಾನನ ಹೆಸರಿನಲ್ಲಿ ವಿಶ್ವವಿದ್ಯಾಲಯ ಸ್ಥಾಪನೆ ಮುಂತಾದ ಪರಿಕಲ್ಪನೆಗಳು ಟಿಪ್ಪು ಬಗೆಗೆ ನಡೆಯುತ್ತಿವೆ. ಅವುಗಳ ಬಗ್ಗೆ ಪ್ರಸ್ತುತ ನನ್ನ ಸಂಶೋಧನಾ ಪ್ರಬಂಧದಲ್ಲಿ ಕಲೆಹಾಕುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಿದ್ದೇನೆ.

೬.೨ ತಮಿಳುನಾಡಿನಲ್ಲಿ ಹೈದರಾಲಿ, ಟಿಪ್ಪು ಸ್ಮಾರಕ

ತಮಿಳುನಾಡಿನ ದಿಂಡಿಗಲ್ ಜಿಲ್ಲೆಯಲ್ಲಿ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಹಾಗೂ ಹೈದರಾಲಿ ಅವರ ಸ್ಮಾರಕಗಳನ್ನು ಸ್ಥಾಪಿಸಲು ಮುಖ್ಯಮಂತ್ರಿ ಜೆ. ಜಯಲಲಿತಾ ಅವರು ಒಪ್ಪಿಗೆ ಸೂಚಿಸಿದ್ದಾರೆ. ಸದನದಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಅವರು ಸರ್ಕಾರದ ನಿರ್ಧಾರವನ್ನು ಪ್ರಕಟಿಸಿದರು. ತಮಿಳುನಾಡಿನ ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸೇವಕರ ಜೊತೆಗೆ ಟಿಪ್ಪು ಹಾಗೂ ಹೈದರಾಲಿ ಮಣಿ ಮಂಟಪಗಳನ್ನು ಸ್ಥಾಪಿಸಲಾಗುವುದು ಎಂದು ಜಯಲಲಿತಾ ಮಂಡಿಸಿದ ನಿರ್ಣಯಕ್ಕೆ ಸರ್ವಾನುಮತದಿಂದ ಅಂಗೀಕಾರ ಸಿಕ್ಕಿದೆ.

ದಿಂಡಿಗಲ್‌ನಲ್ಲಿ ಬ್ರಿಟೀಷರ ವಿರುದ್ಧ ತಿರುಗಿ ಬಿದ್ದಿದ್ದ ತಮಿಳುನಾಡಿನ ವೀರಯೋಧ, ವೀರ ಮನಗ್ಯೆ ವೆಲುನಾಚಿಯಾರ್ ಹಾಗೂ ಅವನ ಬಂಟ ಕುಯಿಲಿ ಹೋರಾಟಕ್ಕೆ ಮೈಸೂರಿನ ಅರಸ ಟಿಪ್ಪು ಸುಲ್ತಾನ್ ಹಾಗೂ ಹೈದರಾಲಿ ಅವರು ಸಂಪೂರ್ಣ ಬೆಂಬಲ ನೀಡಿದ್ದರು. ಈ ಉಪಕಾರ ಸ್ಮರಣೆಯ ಅಂಗವಾಗಿ ಕನ್ನಡ ನೆಲದ ವೀರ ಅರಸರ ಸ್ಮಾರಕಗಳನ್ನು ತಮಿಳುನಾಡಿನಲ್ಲಿ ಸ್ಥಾಪಿಸಲಾಗಿದೆ. ಈಗಾಗಲೇ ದಿಂಡಿಗಲ್ ಜಿಲ್ಲೆಯಲ್ಲಿ ವೀರ ಮನಗ್ಯೆ ವೆಲುನಾಚಿಯಾರ್ ಸ್ಮಾರಕ ನಿರ್ಮಾಣ ಕಾರ್ಯ ಜಾರಿಯಲ್ಲಿದೆ. ಸಮೀಪದಲ್ಲೇ ಕುಯಿಲಿ ಸ್ಮಾರಕ ಹಾಗೂ ಟಿಪ್ಪುಸುಲ್ತಾನ್ ಮತ್ತು ಹೈದರಾಲಿ ಹೆಸರಿನ ಮಣಿಮಂಟಪಂ ನಿರ್ಮಾಣ ಆರಂಭಗೊಳ್ಳಲಿದೆ.

೬.೩ ಇತಿಹಾಸ ಮರೆಯಲಾರದ ಛಲದಂಕ ಮಲ್ಲ ಟಿಪ್ಪು ಸುಲ್ತಾನ

"ಇತಿಹಾಸ ಮರೆತವರು ಇತಿಹಾಸವನ್ನು ನಿರ್ಮಿಸಲಾರರು" ಎಂದು ಅಂಬೇಡ್ಕರ್‌ರವರು ಹೇಳಿರುವಂತೆ ಮೈಸೂರು ಸಾಮ್ರಾಜ್ಯವನ್ನು ದಕ್ಷಿಣ ಭಾರತದ ಅರ್ಧಭಾಗಕ್ಕೆ ವಿಸ್ತರಿಸಿದ ಹೈದರ್-ಟಿಪ್ಪುರವರ ಸಾಹಸವನ್ನು ಬ್ರಿಟೀಷರು ನೀಡಿರುವ ಚರಿತ್ರೆಯನ್ನು ಹಳದಿ ಕನ್ನಡಕದಿಂದ

ನೋಡದೆ ವಾಸ್ತವಾಂಶಗಳಿಂದ ಸತ್ಯಬೋಧನೆ ಮಾಡಿದಾಗ ನಿಜ ಸಂಗತಿಗಳ ಅರಿವಾಗುತ್ತದೆ. ಕ್ರಿ.ಶ ೧೭೨೧ರಿಂದ ಕ್ರಿ.ಶ.೧೭೮೨ರವರೆಗೆ ಕೇವಲ ಓರ್ವ ಸೈನಿಕನಾಗಿ ಮೈಸೂರ ಅರಸರ ಅರಮನೆ ಸೇರಿ ಇಮ್ಮಡಿ ಕೃಷ್ಣರಾಜ ಒಡೆಯರ ಮಂತ್ರಿಯಾದ ನಂಜರಾಜ ಅರಸರ ವಿಶ್ವಾಸವನ್ನು ಗಳಿಸಿ ದಿಂಡಿಗಲ್ ಅನ್ನು ಗೆದ್ದಮೇಲೆ ಪೌಜುದಾರ್ ಪಟ್ಟವನ್ನು ಗಳಿಸಿ ಸಮಯಾನುಸಾರ ಬಂದ ಎಡರು-ತೊಡರುಗಳನ್ನು ಎದುರಿಸಿ ಕ್ರಿ.ಶ.೧೭೬೨ರ ಸುಮಾರಿಗೆ ಮೈಸೂರ ಅರಸರನ್ನು ನಿಮಿತ್ತ ಮಾತ್ರ ರಾಜರಾಗಿರಿಸುವುದರಲ್ಲಿ ಯಶಸ್ವಿಯಾದ ಹೈದರ್ ರಾಜರಿಂದ 'ಬಹದ್ದೂರ್ ಪಟ್ಟ'ವನ್ನು ಗಳಿಸುವಷ್ಟು ಜನಾನುರಾಗಿಯಾದ.

ಆದರೆ ಅಂದಿನ ಕ್ಲಿಷ್ಟ ಪರಿಸ್ಥಿಯನ್ನು ಎದುರಿಸಿ ನಿಭಾಯಿಸುವಷ್ಟು ಚೈತನ್ಯ ಅಂದಿನ ರಾಜರಿಗೆ ಇರಲಿಲ್ಲ. ಇದರಲ್ಲಿ ವಿಷಯ ಲೋಪತೆಯೂ ಒಂದು. ಆಗ ಮೊಘಲ್ ಸಾಮ್ರಾಜ್ಯದ ವರ್ಚಸ್ಸು ಇಳಿಮುಖವಾಗುತ್ತಿತ್ತು. ಮಾರಾಠರು ಬಲಾಢ್ಯರಾಗುತ್ತಿದ್ದು. ಯರೋಪಿಯನ್ನರು ಅದರಲ್ಲೂ ಬ್ರಿಟೀಷರು ಈಸ್ಟ್ ಇಂಡಿಯಾ ಕಂಪನಿ ಎಂಬ ವ್ಯಾಪಾರಿ ಸಂಸ್ಥೆಯ ಮೂಲಕ ಭಾರತ ಉಪಖಂಡದಲ್ಲಿ ಆಡಳಿತ ನಡೆಸುವ ಹುನ್ನಾರದಲ್ಲಿದ್ದರು ಪೋರ್ಚುಗೀಸರು ಸಹ ತಮ್ಮದೇ ಆದ ರೀತಿಯಲ್ಲಿ ನಮ್ಮ ನೆಲ ಕಬಳಿಸುವುದನ್ನು ಮನಗಂಡ ಹೈದರ್ ಇವರೆಲ್ಲರನ್ನು ಎದುರಿಸಲಾಗದಷ್ಟು ಸಂದಿಗ್ಧ ಪರಿಸ್ಥಿತಿಯಲ್ಲಿದ್ದ.

ಕ್ರಿ.ಶ.೧೭೬೯ರ ಹೊತ್ತಿಗೆ ಹೈದರ್ ಮೈಸೂರು ಸಾಮ್ರಾಜ್ಯವನ್ನು ಉತ್ತರದ ಕೃಷ್ಣಾನದಿ - ದಕ್ಷಿಣದಲ್ಲಿ ಕಾವೇರಿ ನದಿಯವರೆಗೆ, ಪೂರ್ವದ ಬಳ್ಳಾರಿ ಕಡಪ-ಪಶ್ಚಿಮದ ದಕ್ಷಿಣ ಹಾಗೂ ಉತ್ತರ ಕನ್ನಡದವರೆಗೂ ವಿಸ್ತರಿಸಿ ಸಣ್ಣಪುಟ್ಟ ನವಾಬರು, ಬಂಡುಕೋರ ಪಾಳೆಗಾರರನ್ನು ಸದೆಬಡಿದು ಉತ್ತಮ ಮಿಲಿಟರಿ ನೆಲೆಯಾಗಿ ರೂಪಿಸಿದ್ದ. ಅಷ್ಟೇ ಅಲ್ಲದೆ ತನ್ನ ಚಾಕಚಕ್ಯತೆ ಧೈರ್ಯ-ಸ್ಥೈರ್ಯ, ನೈಪುಣ್ಯತೆಗಳಿಂದ ಹೈದರಾಬಾದಿನ ನಿಜಾಮರು, ಮರಾಠರು ಅಷ್ಟೇ ಏಕೆ? ಕ್ರಿ.ಶ.೧೭೬೯ ರ ಮೊದಲನೇ ಆಂಗ್ಲೋ ಮೈಸೂರು ಯದ್ದದಲ್ಲಿ ಗೆದ್ದು ಬ್ರಿಟೀಷರನ್ನು ಸದೆ ಬಡಿದಿದ್ದ.

ಇಷ್ಟನ್ನೆಲ್ಲಾ ಸಾಧಿಸಿದ ಹೈದರ್ ಅರ್ಕಾಟ ನವಾಬನಾಗಿದ್ದ ಮುಹಮ್ಮದ್ ಆಲಿ ಹಾಗೂ ಬ್ರಿಟೀಷ್ ಪಾಳಯದ ವಾರನ್ ಹೇಸ್ಟಿಂಗ್‌ನ ಕುಟಿಲತೆಯ ಪರಣಾಮವಾಗಿ ಇಂದಿನ ಆಂಧ್ರಪ್ರದೇಶದ ಚಿತ್ತೂರು ಬಳಿಯ ನರಸರಾಜಕೋಟೆಯಲ್ಲಿ ನಡೆದ ಎರಡನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಕ್ರಿ.ಶ.೧೭೮೨ ನವೆಂಬರ್ ೭ರಂದು ಸಾವನ್ನಪ್ಪಿದ. ತದನಂತರ ಐದು ತಿಂಗಳುಗಳವರೆಗೆ ಅಂದರೆ ಕ್ರಿ.ಶ.೧೭೮೩ ಮಾರ್ಚ್ ೪ರವರೆಗೆ ಒಂದು ರೀತಿಯ ಸೂತಕದ

ಛಾಯೆ ರಾಜ್ಯದಲ್ಲಿತ್ತು. ಪುರಾವೆ ಎಂಬಂತೆ ಹೈದರ್ ಮರಣದ ನಂತರ ಆತನ ಕಳೇಬರವನ್ನು ಕೋಲಾರದಲ್ಲಿಸಿ ಒಂದು ವಾರದ ನಂತರ ಶ್ರೀರಂಗಪಟ್ಟಣದಲ್ಲಿ ಸಮಾಧಿ ಮಾಡಿದರು.

ಹೈದರ್ ಮರಣದ ಸುದ್ದಿಯನ್ನು ಮಲಬಾರ್‌ನಲ್ಲಿದ್ದ ಟಿಪ್ಪುವಿಗೆ ತಿಳಿಸಲು ಮಿರ್ಜಾ ಖಾನ್ ಮೂಲಕ ರಹಸ್ಯವಾಗಿ ತಿಳಿಸಿ ಚಾಕಚಕ್ಯತೆಯಿಂದ ಪರಿಸ್ಥಿತಿಯನ್ನು ನಿಬಾಯಿಸಿದ ಕೀರ್ತಿ ಅರ್ಥಮಂತ್ರಿ ಪೂರ್ಣಯ್ಯನವರಿಗೆ ಸಲ್ಲುತ್ತದೆ. ಟಿಪ್ಪು ಸುಲ್ತಾನ ತನ್ನ ಜೀವನದುದ್ದಕ್ಕೂ ಸಂಘರ್ಷವನ್ನೇ ಎದುರಿಸಿದ ಮಹಾನ್ ವ್ಯಕ್ತಿ. ಕ್ರಿ.ಶ.೧೭೯೯ ಮೇ ೪ರಂದು ರಣರಂಗದಲ್ಲೇ ಹೋರಾಡುತ್ತಾ ವೀರಮರಣವನ್ನು ಅಪ್ಪಿದ ಟಿಪ್ಪು ಸುಲ್ತಾನ್ ವಿಶ್ವದ ಇತಿಹಾಸದಲ್ಲಿ ಯುದ್ಧರಂಗದಲ್ಲಿ ಮರಣ ಹೊಂದಿದ ಪ್ರಥಮ ದೊರೆಯಾಗಿದ್ದು ಇಲ್ಲಿಯವರೆಗೂ ಯಾರೂ ಈ ದಾಖಲೆಯನ್ನು ಮುರಿದಿಲ್ಲ.

ಕಾಲಾನುಸಾರವಾಗಿ ನಡೆದ ಆಂಗ್ಲೋ-ಮೈಸೂರು ಯುದ್ಧಗಳು, ಮೂರನೇ ಯುದ್ಧದಲ್ಲಿ (ಕ್ರಿ.ಶ.೧೭೯೦-೯೨) ಆಂಗ್ಲರೊಡನೆ ನಡೆದ ಒಡಂಬಡಿಕೆಯಂತೆ ತನ್ನ ಹತ್ತು ವರುಷದ ಮಗನಾದ ಅಬ್ದುಲ್ ಖಾಲಿಕ್ ಮತ್ತು ಎಂಟು ವರ್ಷದ ಮಗ ಮೊಯ್ಜುದ್ದಿನ್ ಅವರುಗಳನ್ನು ಬ್ರಿಟೀಷರಿಗೆ ಒತ್ತೆ ಆಳುಗಳಾಗಿರಿಸಿ ಯುದ್ಧದ ಖರ್ಚನ್ನು ನೀಡಿದ. ಜನತೆಯ ಮೇಲೆ ಹೆಚ್ಚು ತೆರಿಗೆಯನ್ನು ಹಾಕಲು ಬಯಸದೆ ವರ್ಷಗಟ್ಟಲೆ ಒತ್ತೆ ಇಟ್ಟ ಪ್ರಕರಣ ದೇಶದ ಇತಿಹಾಸದಲ್ಲಿ ಇನ್ನೆಂದೂ ಕಾಣಸಿಗದು. ಇಲ್ಲಿ ಲಾರ್ಡ್ ಕಾರ್ನ್‌ವಾಲೀಸ್‌ನೊಡನೆ ನಮ್ಮವರೇ ಆದ ಹೈದರಾಬಾದಿನ ನಿಜಾಮ ಹಾಗೂ ಮರಾಠರು ಹೂಡಿದ ಸಂಚಿನ ಸಮಯದಲ್ಲಿ ಧಾರ್ಮಿಕ ಸಮಚಿತ್ತತೆಯನ್ನು ಕಾಪಾಡಿಕೊಂಡ ಟಿಪ್ಪು ಸುಲ್ತಾನ್ ಶ್ರೀರಂಗನಾಥಸ್ವಾಮಿ ದೇವಾಲಯದಿಂದ ಬರುವ ಘಂಟಾನಾದ ಮಸೀದಿಯ ಪ್ರಾರ್ಥನೆ ತನ್ನ ಎರಡೂ ಕಿವಿಗಳಿಗೆ ಮುಟ್ಟಲು ಶ್ರೀರಂಗಪಟ್ಟಣದ ಅರಮನೆಯಲ್ಲಿ ವಾಸ್ತವ್ಯ ಹೂಡಿದ.

ನಂಜನಗೂಡಿನ ದೇವಾಲಯದಲ್ಲಿ ಬೆಲೆ ಕಟ್ಟಲಾಗದ 'ಪಚ್ಚಲಿಂಗ' ಸ್ಥಾಪನೆ. ದೇವನಹಳ್ಳಿಯ ಕೋಟೆಯ ವೇಣುಗೋಪಾಲ ಸ್ವಾಮಿಗೆ ನೀಡಿರುವ ಅಪಾರ ದೇಣಿಗೆ. ತಮಿಳುನಾಡಿನ ನಾಮಕಲ್ ಕೋಟೆಯಲ್ಲಿರುವ ರಂಗನಾಥಸ್ವಾಮಿ ಮತ್ತು ನರಸಿಂಹಸ್ವಾಮಿ. ಬಾದಾಮಿ ವಾತಾಪಿ, ಇಲ್ವಲ ಬೆಟ್ಟದ ಮೇಲಿನ ಕೋಟೆ. ಬೆಂಗಳೂರು ಕೋಟೆಯೊಳಗಿನ ಗಣೇಶನ ದೇವಾಲಯ. ಕೋಟೆ ವೆಂಕಟರಮಣ ಸ್ವಾಮಿ ಪಕ್ಕದಲ್ಲೇ ನಿರ್ಮಿಸಿರುವ 'ಟಿಪ್ಪು ಸುಲ್ತಾನನ ಅರಮನೆ' ಆತನ ಕಾಲದಲ್ಲಿದ್ದ ನಾಣ್ಯದ ಮೇಲೆ ತ್ರಿಶೂಲ ಹಾಗೂ ಲಕ್ಷ್ಮಿದೇವಿಯ ಕೆತ್ತನೆ ಇವೆಲ್ಲಾ ಸುಲ್ತಾನನ ಜಾತ್ಯಾತೀತ ಮನೋಭಾವದ ಸಂಕೇತಗಳಲ್ಲವೇ?

ಪಾನನಿಷೇಧದ ಬಗ್ಗೆ ಟಿಪ್ಪುವಿನ ಕಠಿಣ ನಿಲುವು ಹೀಗಿತ್ತು.

For the Social economic and moral good of the people there shall be total prohibition on distilling and selling of liquor. Licenses shall be issued for limited quantities strictly for the sale of Foreigners.

(From the Tipu's revenue regulations of 1787 page 307 Secret correspondence of Tipusultan)

ಇಷ್ಟೆಲ್ಲಾ ಐತಿಹಾಸಿಕ ಪುರಾವೆಗಳಿದ್ದರೂ ಟಿಪ್ಪು ಸುಲ್ತಾನನ್ನು ತಪ್ಪು-ತಪ್ಪಾಗಿ ವ್ಯಾಖ್ಯಾನಿಸುವ ಒಂದು ರೀತಿಯ ನವ ವ್ಯಾಖ್ಯಾನವನ್ನು ಪಂಡಿತರು ಮಾಡುತ್ತಿದ್ದಾರೆ.

೬.೪ ಟಿಪ್ಪುವಿನ ನೆನಪಿಗೆ ಮೂಕಾಂಬಿಕೆಗೆ 'ಸಲಾಂ' ಮಂಗಳಾರತಿ

(ಆಧಾರ : ಕ್ಷೇತ್ರ ಕಾರ್ಯ, ಉಡುಪಿ)

ಸಲಾಂ ಪೂಜೆ ಮಾಡುವವರನ್ನು ಸಲಾಂ ಅಡಿಗಳು ಎಂದೇ ಕರೆಯಲಾಗುತ್ತದೆ. ಅರ್ಚಕರ ಮೂಲಕ ಬಂದ ಪರಂಪರೆ ಕ್ಷೇತ್ರದ ಇತಿಹಾಸದಲ್ಲೂ ದಾಖಲಾಗಿದೆ. ಕರಾವಳಿ, ಮೈಸೂರಿನ ದೇವಾಲಯಗಳಿಗೆ (ಮಧೂರು ಹೊರತು) ಟಿಪ್ಪು ಹಾನಿ ಮಾಡಿದ ಆರೋಪವಿಲ್ಲ. ನಂಜನಗೂಡಿನ ಕಳಲೆಯ ಲಕ್ಷ್ಮೀಕಾಂತ, ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿ, ಶ್ರೀ ಕಂಠೇಶ್ವರ ದೇವಾಲಯಕ್ಕೆ ಅಪೂರ್ವ ಕಾಣಿಕೆ ಸಲ್ಲಿಸಿದ ದಾಖಲೆಗಳಿವೆ. ಶ್ರೀ ರಂಗಪಟ್ಟಣದ ರಂಗನಾಥ ದೇವಾಲಯ ಕೂಗಳತೆಯ ದೂರದಲ್ಲಿತ್ತು. ಮಸೀದಿಯ ಪ್ರಾರ್ಥನಾ ಕರೆ ಮತ್ತು ದೇವಾಲಯದ ಘಂಟೆ ಕರೆಯನ್ನು ಸಮಾನ ಗೌರವದಿಂದ ಟಿಪ್ಪು ಆಲಿಸುತ್ತಿದ್ದ. ಅರಮನೆ ಸಮೀಪ ನರಸಿಂಹ ಗಂಗಾಧರೇಶ್ವರ ದೇವಾಲಯಗಳಿದ್ದವು. ಇವುಗಳಿಗೆ ಯಾವುದೇ ತೊಂದರೆ ಮಾಡಿಲ್ಲ. ಹಂಪಿ ವಿ.ವಿ ಪ್ರಕಟಿತ ಕರ್ನಾಟಕ ಚರಿತ್ರೆ ಸಂಪುಟ:೫ (೧೭೬೦ ರಿಂದ ೧೮೦೦) ದಾಖಲಾದ ಇತಿಹಾಸದ ಪ್ರಕಾರ ಟಿಪ್ಪು ಶೃಂಗೇರಿ ಸ್ವಾಮಿಗಳಿಗೆ ಬರೆದ ಪತ್ರಗಳನ್ನು ಕ್ರಿ.ಶ.೧೯೭೧ರಲ್ಲಿ ಆರ್. ನರಸಿಂಹಾಚಾರ್ ಪತ್ತೆ ಮಾಡಿದರು. ಇದರಲ್ಲಿ ಟಿಪ್ಪುವಿಗೆ ಹಿಂದೂ ಧರ್ಮದ ಬಗ್ಗೆ ಇದ್ದ ಅಪಾರ ಗೌರವ ಭಾವನೆಗಳು ವ್ಯಕ್ತವಾಗಿವೆ.

ಆದಿ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಕೊಲ್ಲೂರು ಮೂಕಾಂಬಿಕೆ ಬಗ್ಗೆ ಟಿಪ್ಪು ಸುಲ್ತಾನನಿಗೆ ಗೌರವ ಹೆಚ್ಚಲು ಶೃಂಗೇರಿಯೊಂದಿಗಿನ ಆತನ ಸಂಬಂಧ ಕಾರಣ ಎನ್ನಲಾಗಿದೆ. ಶೃಂಗೇರಿ ಮಠವೂ ಆದಿ ಶಂಕರರಿಂದ ಸ್ಥಾಪನೆಗೊಂಡಿದ್ದಾಗಿದೆ. ಮರಾಠರ ಪರಶುರಾಮ ಭಾವು

ಶೃಂಗೇರಿಯ ಮೇಲೆ ದಾಳಿ ಮಾಡಿ ಹಾನಿ ಎಸಗಿದಾಗ ಟಿಪ್ಪು ದೇವಾಲಯದ ಮೂರ್ತಿಯೊಂದರ ಪ್ರತಿಷ್ಠಾಪನೆಗೆ ಧನ ಸಹಾಯವನ್ನು ಮಾಡಿದ್ದ. ಮೂರ್ತಿ ಪ್ರತಿಷ್ಠಾಪನೆ ಬಳಿಕ ಸ್ವಾಮೀಜಿ ಪ್ರಸಾದ, ಶಾಲು ಕಳುಹಿಸಿದ ದಾಖಲೆಯಿದೆ. (ಇತಿಹಾಸದಲ್ಲಿ ದೇವಿಗೆ, ಸ್ವಾಮಿಗೆ ಒಂದು ಜೋಡಿ ಶಾಲು, ಎರಡು ಪಲ್ಲಕ್ಕಿ ಕಳುಹಿಸಿದ ದಾಖಲೆಯಿದೆ) ಮದ್ದೂರು ಮಹಾಗಣಪತಿ ದೇವಸ್ಥಾನದಲ್ಲಿ ಟಿಪ್ಪು ಕತ್ತಿಯಲ್ಲಿ ಕಡಿದ ಕುರುಹುಗಳಿವೆ. ಕೆಳದಿ ಸಂಸ್ಥಾನದವರಿಗೆ ಸೇರಿದ ಕೊಲ್ಲೂರು ದೇವಾಲಯಕ್ಕೆ ಟಿಪ್ಪು ಬಂದಾಗ ಅರ್ಧವಾಗಿದ್ದ ಮಂಗಳಾರತಿಯನ್ನು ಆತ ಹೋದ ಬಳಿಕ ಪೂರ್ಣಗೊಳಿಸಿದ್ದೇ ಸಲಾಂ ಮಂಗಳಾರತಿ ಎಂದಾಗಿರಬಹುದು.

ಆದರೆ ಈ ನಿಟ್ಟಿನಲ್ಲಿ ಶಾಸನ, ತಾಮ್ರ ಪತ್ರಗಳಲ್ಲಿ ಶಂಕರನಾರಾಯಣ ದೇವಸ್ಥಾನದಲ್ಲಿ ಟಿಪ್ಪು ಕೊಟ್ಟ ದೊಡ್ಡ ಗಂಟೆಯಿದೆ, ದಾಖಲೆಯೂ ಇದೆ. ಕೊಲ್ಲೂರಿಗೆ ಭೇಟಿ ಕೊಟ್ಟ ಹಿನ್ನೆಲೆಯಲ್ಲಿ ಟಿಪ್ಪು ಉಂಬಳಿ ಕೊಟ್ಟಿದ್ದನು.

೬.೫ ಟಿಪ್ಪು ಸುಲ್ತಾನ್ ದಿನಾಚರಣೆ ಅಂಗವಾಗಿ ಮೂವರಿಗೆ ಪ್ರಶಸ್ತಿ

(ಆಧಾರ ೧೬.೧೧.೨೦೧೩ ಟಿಪ್ಪು ೨೬೩ನೇ ಜನ್ಮ ದಿನಾಚರಣೆ ಸಮಾರಂಭ, ಬೆಂಗಳೂರು)

ಬೆಂಗಳೂರು: ಟಿಪ್ಪು ಸುಲ್ತಾನ್ ಸಂಯುಕ್ತ ರಂಗವು ಟಿಪ್ಪುಸುಲ್ತಾನ್ ೨೬೩ನೇ ಜನ್ಮದಿನೋತ್ಸವ ಅಂಗವಾಗಿ ನವೆಂಬರ್ ೧೮ರಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಯು.ಆರ್. ಅನಂತಮೂರ್ತಿ, ಅಹಿಂದ ಕಾರ್ಯಕಾರಿ ರಾಜ್ಯಾಧ್ಯಕ್ಷ ಪ್ರೊ. ಎನ್. ವಿ. ನರಸಿಂಹಯ್ಯ ಹಾಗೂ ಸಮಾಜ ಸೇವಕ ಪ್ರೊ. ನಾಜನೀನ್ ಬೇಗಂ ಅವರಿಗೆ 'ಟಿಪ್ಪು ಸುಲ್ತಾನ್ ರಾಷ್ಟ್ರೀಯ ಪ್ರಶಸ್ತಿ' ಪ್ರಧಾನ ಮಾಡಿದರು. ಪುರಸ್ಕೃತರಿಗೆ ತಲಾ ೨೫ ಸಾವಿರ ರೂ. ನಗದು ಹಾಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಸಮಾರಂಭವನ್ನು ಕೇಂದ್ರ ಮಾಜಿ ಸಚಿವರಾದ ಸಿ.ಕೆ. ಜಾಫ್‌ರ್ ಷರೀಫ್ ಉದ್ಘಾಟಿಸಿದರು.

೬.೬ ಟಿಪ್ಪು ಹಿಂದೂ ದೇವಾಲಯಗಳಿಗೆ ನೀಡಿದ–ದಾನ ದತ್ತಿಗಳು

ಕರ್ನಾಟಕವನ್ನು ಆಳ್ವಿಕೆ ಮಾಡಿದ ಪ್ರತಿಯೊಂದು ರಾಜ ಮನೆತನವೂ ಅವರವರ ಧಾರ್ಮಿಕ ಮನೋಭಾವನೆಗೆ ಸಂಬಂಧಿಸಿದಂತೆ ಆಯಾ ದೇವಾಲಯಗಳಿಗೆ ದಾನ–ದತ್ತಿಯನ್ನು ನೀಡುವುದರ ಮೂಲಕ ದೇವಾಲಯಗಳ ಜೀರ್ಣೋದ್ಧಾರ ಮಾಡಿ ಇತಿಹಾಸದಲ್ಲಿ ತಮ್ಮ ಹೆಸರನ್ನು ಅಜರಾಮರಗೊಳಿಸಿದ್ದಾರೆ. ಇವರ ಸಾಲಿನಲ್ಲೇ ನಿಲ್ಲುವ ಮತ್ತೊಬ್ಬ ಇತಿಹಾಸ ಪುರುಷ

ಮುಸಲ್ಮಾನ ರಾಜ. ಮೈಸೂರಿನ ರಾಜ "ಮೈಸೂರು ಹುಲಿ" ಎಂದೇ ಪ್ರಖ್ಯಾತಿ ಪಡೆದ ವೀರ ಟಿಪ್ಪು ಸುಲ್ತಾನ್. ಟಿಪ್ಪು ಸುಲ್ತಾನ್ ತಾನು ಮುಸಲ್ಮಾನ್ ಎಂಬುದನ್ನು ಮರೆತು ಹಿಂದೂ ದೇವಾಲಯಗಳ ಮೇಲಿನ ತನ್ನ ಅಪಾರವಾದ ನಂಬಿಕೆಗಳಿಂದ ಶೃಂಗೇರಿ ಮತ್ತು ನಂಜನಗೂಡು ಮತ್ತು ಇತರೆ ದೇವಾಲಯಗಳಿಗೆ ನೀಡಿದ ದಾನ-ದತ್ತಿಯನ್ನು ಕನ್ನಡಿಗರು ಯಾರು ಮರೆಯುವಂತಿಲ್ಲ.

೬.೭ ಶೃಂಗೇರಿ ಶಾರದಾ ಪೀಠ ಮತ್ತು ಟಿಪ್ಪು

ಶೃಂಗೇರಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪಶ್ಚಿಮ ಘಟ್ಟಗಳ ಮಡಿಲಿನಲ್ಲಿರುವ ಒಂದು ಪಟ್ಟಣ, ಎಂಟನೇ ಶತಮಾನದಲ್ಲಿ ಅದ್ವೈತ ವೇದಾಂತದ ಪ್ರತಿಪಾದಕರಾದ ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಪ್ರಮುಖ ಮಠಗಳಲ್ಲಿ ಶೃಂಗೇರಿ ಮಠವು ಒಂದು.

ಶೃಂಗೇರಿ ಪೌರಾಣಿಕ ಹಿನ್ನೆಲೆ

ಶೃಂಗೇರಿ ಎಂಬ ಹೆಸರು ಋಷ್ಯ ಶೃಂಗೇರಿ ಎಂಬ ಹೆಸರಿನಿಂದ ಬಂದಿದೆ. ಇದು ಸಮೀಪದಲ್ಲೇ ಇರುವ ಒಂದು ಬೆಟ್ಟದ ಹೆಸರು. ಪ್ರತೀತಿಗನುಸಾರವಾಗಿ ಈ ಬೆಟ್ಟದಲ್ಲೇ ಋಷಿ ವಿಭಾಂಡಕ ಮತ್ತು ಅವನ ಮಗ ಋಷಿಶೃಂಗ ಇದ್ದದ್ದು. ಋಷ್ಯಶೃಂಗನ ಪ್ರಸ್ತಾಪ ರಾಮಾಯಣದ ಬಾಲಕಾಂಡದಲ್ಲಿ ಕಂಡು ಬರುತ್ತದೆ. ವಸಿಷ್ಠ ತಿಳಿಸುವ ಉಪಕಥೆಗಳಲ್ಲಿ ಋಷ್ಯಶೃಂಗ ರೋಮಪಾದ ರಾಜ್ಯದಲ್ಲಿ ಮಳೆ ತರಿಸುವ ಕಥೆ ಇದೆ.

ಖ್ಯಾತ ಸಂಶೋಧಕರಾದ ರಾವ್ ಬಹದ್ದೂರ್ ಆರ್. ನರಸಿಂಹಚಾರ್ಯರು ಕ್ರಿ.ಶ.೧೯೪೬ರಲ್ಲಿ ಶೃಂಗೇರಿ ಮಠದಲ್ಲಿ ಸಂಗ್ರಹಿಸಿದ ಪುರಾತನ ಪತ್ರಗಳ ಸಂಗ್ರಹದಲ್ಲಿದ್ದ ೨೯ ಪತ್ರಗಳು ಟಿಪ್ಪು ಸುಲ್ತಾನನಿಗೆ ಸಂಬಂಧಪಟ್ಟವು. ಅವುಗಳಲ್ಲಿ ಹೆಚ್ಚಿನವು ಟಿಪ್ಪು ಸುಲ್ತಾನನೇ ಶೃಂಗೇರಿಯ ಸ್ವಾಮೀಜಿಯವರಿಗೆ ಕ್ರಿ.ಶ.೧೭೯೧ ಮತ್ತು ಕ್ರಿ.ಶ.೧೭೯೮ರ ಅವಧಿಯ ಒಳಗೆ ಬರೆದಿದ್ದ ಪತ್ರಗಳಾಗಿದ್ದವು. ಈ ಪತ್ರಗಳ ಅಧ್ಯಯನದಿಂದ ಹಲವು ವಿಶಿಷ್ಟ ವಿಷಯಗಳು ತಿಳಿದು ಬರುತ್ತವೆ. ಕ್ರಿ.ಶ೧೭೯೧ರಲ್ಲಿ ಮರಾಠ ರಘುನಾಥರಾವ್ ಅಶ್ವಸೈನಾಧಿಕಾರಿಯೊಬ್ಬನು ಶೃಂಗೇರಿಯ ಮೇಲೆ ದಾಳಿ ಮಾಡಿದ. ಬ್ರಾಹ್ಮಣ ಸಮೇತರಾಗಿ ಹಲವಾರು ಜನ ನಿರಪರಾಧಿಗಳನ್ನು ಕೊಂದು. ಶೃಂಗೇರಿ ಮಠವನ್ನು ಕೊಳ್ಳೆ ಹೊಡೆದೆ. ಅಷ್ಟೇ ಅಲ್ಲದೇ ಶೃಂಗೇರಿಯ ಶ್ರೀ ಶಾರದಾಂಬೆಯ ಮೂರ್ತಿಯನ್ನು ಕಿತ್ತೊಗೆದೆ. ಈ ದುಷ್ಕೃತ್ಯಗಳಿಂದ ಭೀತರಾದ ಶೃಂಗೇರಿಯ ಸ್ವಾಮಿಗಳಾದ ಮೂರನೇ ಸಚ್ಚಿದಾನಂದ ಭಾರತೀ ಸ್ವಾಮಿಗಳು ಟಿಪ್ಪುವಿಗೆ ಈ ವಿಷಯವನ್ನು ತಿಳಿಸಿದರು.

ಹಿಂದೂಗಳ ಈ ಅಮಾನುಷ ಕೃತ್ಯಗಳಿಂದ ಕೋಪಾವಿಷ್ಠನಾದ ಟಿಪ್ಪು ಆ ಧರ್ಮಪೀಠಕ್ಕೊದಗಿದ ದುಸ್ಥಿತಿಗಾಗಿ ದು:ಖಿಸಿ ಜಗದ್ಗುರುಗಳಿಗೆ ಒಂದು ಪತ್ರವನ್ನು ಬರೆದು ಸಮಾಧಾನಗೊಳಿಸಿದ. ಆ ಪತ್ರದಲ್ಲಿನ ಒಂದು ಸಂಸ್ಕೃತ ವಾಕ್ಯವು ಈ ರೀತಿ ಇದೆ.

"ಹಸದಬೀ ಕ್ರಿಯತೇ

ಕರ್ಮ ರುದರ್ಬರನು ಭೂಯತೇ"

(ಜನರು ನಗಾಡುತ್ತಾ ತಪ್ಪುಗಳನ್ನು ಮಾಡುತ್ತಾರೆ. ಆದರೆ ಅದರ ಪರಿಣಾಮವನ್ನು ಅಳುತ್ತಾ ಅನುಭವಿಸುತ್ತಾರೆ)

ಟಿಪ್ಪು ಸುಲ್ತಾನನು ಶೃಂಗೇರಿ ಬಳಿ ಇದ್ದ ತನ್ನ ಬಿದನೂರಿನ ಅಧಿಕಾರಿಗೆ ಆದೇಶಕೊಟ್ಟು ತತ್‌ಕ್ಷಣ ಸ್ವಾಮೀಜಿಯವರಿಗೆ ೨೦೦ ಚಿನ್ನದ ನಾಣ್ಯಗಳನ್ನು ಕೊಡಿಸಿದನು. ಕೆಲವು ದಿನಗಳವರೆಗೆ ಖರ್ಚಿಗೆ ಬೇಕಾಗುವಷ್ಟು ಧಾನ್ಯವನ್ನು ಇತರ ಸಾಮಾನುಗಳನ್ನು ಕೊಡಿಸಿದ.

ಕಿತ್ತೊಗೆಯಲ್ಪಟ್ಟಿದ್ದ ಶ್ರೀ ಶಾರದಾಂಬೆಯ ಮೂರ್ತಿಯನ್ನು ಶಾಸ್ತ್ರೋಕ್ತವಾದ ರೀತಿಯಲ್ಲಿ ವೈದಿಕರ ಸಹಾಯದಿಂದ ಪುನರ್ ಪ್ರತಿಷ್ಠಾಪಿಸಿದ. ಈ ಕಾರ್ಯಕ್ರಮದ ಸಂಬಂಧ ದಾನ ಸಂತರ್ಪಣೆಗಳನ್ನು ಮಾಡಿಸಿ, ಸ್ವತ: ಸ್ವಾಮಿಗಳು ತನ್ನ ಮೈಸೂರು ರಾಜ್ಯದಲ್ಲಿ ಸುಭಿಕ್ಷೆಯುಂಟಾಗುವಂತೆ ಪ್ರಾರ್ಥನೆ ನಡೆಸಬೇಕಾಗಿ ಕೇಳಿಕೊಂಡ. ಈ ಕಾರ್ಯಕ್ರಮದ ನಂತರ ಶೃಂಗೇರಿ ಮಠದಿಂದ ಸುಲ್ತಾನನಿಗೆ ಪ್ರಸಾದವನ್ನು, ಶಾಲನ್ನು ಗೌರವಯುಕ್ತವಾಗಿ ಕೊಡಲಾಯಿತು. ಇದಕ್ಕೆ ಪ್ರತಿಯಾಗಿ ಟಿಪ್ಪು ಸುಲ್ತಾನರು ಶ್ರೀ ಶಾರದಾಂಬೆಗೆ ಸೀರೆಯನ್ನು, ಸ್ವಾಮಿಗಳಿಗೆ ಶಾಲುಗಳನ್ನು ಕಳುಹಿಸಿಕೊಟ್ಟ.

ಟಿಪ್ಪು ಸುಲ್ತಾನನ ಇನ್ನೊಂದು ಪತ್ರವು ಕ್ರಿ.ಶ.೧೭೯೧ರಲ್ಲಿ ಶೃಂಗೇರಿಯಲ್ಲಿ ನಡೆಯಲಿದ್ದ ಶತಚಂಡಿಯಾಗ ಮತ್ತು ಸಹಸ್ರ ಚಂಡಿಯಾಗ ಎಂಬೆರಡು ಧಾರ್ಮಿಕ ಸಮಾರಂಭಗಳಿಗೆ ತಗಲುವ ವೆಚ್ಚದ ಕುರಿತಾಗಿ ಶೃಂಗೇರಿ ಮಠವು ಕಳುಹಿಸಿದ್ದ ವರದಿಗೆ ಟಿಪ್ಪು ತನ್ನ ಒಪ್ಪಿಗೆ ಸೂಚಿಸಿದುದನ್ನು ತಿಳಿಸುತ್ತದೆ.

ಅದೇ ಪತ್ರದಲ್ಲಿ ತನ್ನ ಪ್ರಜೆಗಳ ಕಲ್ಯಾಣಕ್ಕಾಗಿ ನಡೆಯಲ್ಲಿದ್ದ ಈ ಎರಡು ಸಮಾರಂಭಗಳ ಬಗ್ಗೆ ತನ್ನ ಆನಂದವನ್ನು ವ್ಯಕ್ತಪಡಿಸಿದ್ದ. ಅದರಂತೆ ಈ ಕಾರ್ಯಗಳನ್ನು ನಡೆಸುವ ಶೃಂಗೇರಿ ಸ್ವಾಮಿಗಳು ಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಡಬೇಕೆಂದೂ, ದಿನವಹಿ ಒಂದು ಸಾವಿರ ಜನರಿಗೆ ಊಟವನ್ನು ಹಾಕಬೇಕೆಂದು ತಿಳಿಸಿದ್ದ. ಇದಕ್ಕೆ ಬೇಕಾಗಿದ್ದ ಸಕಲ ವಸ್ತುಗಳನ್ನು, ಹಣವನ್ನು ತನ್ನ

ಅಧಿಕಾರಿಗಳಿಂದ ಕೊಡಿಸಿದ್ದ ಇದರ ನಂತರ ಶೃಂಗೇರಿಗೆ ಬರೆದ ಇನ್ನೊಂದು ಪತ್ರದಲ್ಲಿ ತಾನು ಬಿದನೂರಿನ ಅಧಿಕಾರಿಗೆ ಶ್ರೀ ಶಾರದಂಬೆಗಾಗಿ ಒಂದು ಪಲ್ಲಕ್ಕಿಯನ್ನು ಕಳುಹಿಸುತ್ತಿರುವುದಾಗಿಯೂ ತಿಳಿಸಲಾಗಿತ್ತು. ಕ್ರಿ.ಶ.೧೭೯೨ರಲ್ಲಿ ಬರೆದಿದ್ದ ಇನ್ನೊಂದು ಪತ್ರದಲ್ಲಿ ತಾನು ಸ್ವಾಮಿಗಳ ಉಪಯೋಗಕ್ಕಾಗಿ ಬೆಳ್ಳಿಯ ಹಿಡಿಗಳಿರುವ ಎರಡು ಗಾಳಿ ಬೀಸುವ ಚೌರಿಗೆಗಳನ್ನು ಕಳುಹಿಸುತ್ತಿರುವುದಾಗಿ ಟಿಪ್ಪು ಸುಲ್ತಾನನು ಬರೆದಿದ್ದಾನೆ.

ಈ ಎಲ್ಲಾ ಪತ್ರಗಳನ್ನು ಬರೆಯಲು ಬಳಸಿರುವ ಸುಂದರವಾದ ಹಾಗೂ ಗೌರವ ಸೂಚಕವಾದ ಭಾಷೆಯನ್ನು ಗಮನಿಸಿದರೆ ಟಿಪ್ಪು ಸುಲ್ತಾನ ಮತಾಂಧನೆಂಬ ಅಥವಾ ಹಿಂದೂ ದ್ವೇಷಿ ಎಂಬ ಅಸಂಗತ ನಾಮ ವಿಶೇಷವನ್ನು ತೊಡೆದು ಹಾಕಬೇಕಾಗುತ್ತದೆ. ತನ್ನ ಅಧೀನ ರಾಜ್ಯದಲ್ಲಿದ್ದ ಶೃಂಗೇರಿ ಸ್ವಾಮಿಗಳನ್ನು ಜಗದ್ಗುರು ಎಂಬುದಾಗಿ ಸಂಬೋಧಿಸಿರುವುದು ಅವನು ಅವರಿಗೆ ಕೊಡುತ್ತಿದ್ದ ಗೌರವವನ್ನು ಅವನ ಹಿಂದೂ ಪ್ರಿಯತೆಯನ್ನು ಸೂಚಿಸುತ್ತದೆ.

ಟಿಪ್ಪು ಸುಲ್ತಾನನು ಕ್ರಿ.ಶ.೧೭೯೯ರಲ್ಲಿ ಮರಣ ಹೊಂದುವವರೆಗೂ ಮುಂದುವರಿದಿತ್ತು. ಅವರೆಗಿನ ಕಾಲದಲ್ಲಿ ಆಗಾಗ ಸ್ವಾಮಿಗಳ ಆರೋಗ್ಯ ಹಾಗೂ ಶೃಂಗೇರಿಯ ಸ್ಥಿತಿ-ಗತಿಗಳ ಕುರಿತಾಗಿ ವಿಚಾರಿಸುತ್ತಾ ಪತ್ರಗಳನ್ನು ಬರೆದಿದ್ದಾನೆ. ಕ್ರಿ.ಶ.೧೭೯೩ರ ಶಾಂತಿಯ ಕಾಲದಲ್ಲಿ ಸ್ವಾಮೀಜಿಯವರು ತೀರ್ಥಯಾತ್ರೆಗೆ ಹೋಗಿದ್ದಾಗ ಅವರಿಗೆ ಬರೆದ ಪತ್ರದಲ್ಲಿ ಟಿಪ್ಪು ಈ ರೀತಿ ಬರೆದಿದ್ದ.

"ಜಗದ್ಗುರುಗಳು ನೀವು. ಜಗತ್ತಿನ ಜನರು ಸಂತೋಷದಿಂದ ಇರುವುದಕ್ಕಾಗಿಯೂ, ಇಡೀ ಜಗತ್ತೇ ಸಮೃದ್ಧವಾಗಿರುವುದಕ್ಕಾಗಿಯೂ ತಪಸ್ಸು ಮಾಡುತ್ತಿರುವವರು. ನಮ್ಮ ಶ್ರೇಯೋಭಿವೃದ್ಧಿಗಾಗಿ ದಯವಿಟ್ಟು ಪ್ರಾರ್ಥಿಸಿರಿ. ನಿಮ್ಮಂತಹ ಪವಿತ್ರ ಜೀವಿಗಳು ಯಾವ ದೇಶದಲ್ಲಿದ್ದರೂ ಆ ದೇಶವು ಮಳೆ-ಬೆಳೆಗಳಿಂದಾಗಿ ಸಮೃದ್ಧವಾಗಿರುತ್ತದೆ" ಎಂದು ಪತ್ರದಲ್ಲಿ ಬರೆದಿದ್ದಾನೆ.

ಸ್ವಾಮಿಗಳು ಒಮ್ಮೆ ಸಂಚಾರ ಹೊರಟರು. ಅವರಿಗೆ ಶರೀರಾಯಾಸದಿಂದ ಸ್ವಲ್ಪ ಅಸ್ವಸ್ಥತೆಯುಂಟಾಗುತ್ತದೆ. ಈ ಸಮಾಚಾರವು ಟಿಪ್ಪುವಿನ ಕಿವಿಗೆ ಬಿದ್ದಕೂಡಲೇ ತಮಗೆ ಮೈ ಲಘುವಿಲ್ಲವೆಂದು ಕೇಳಿ ಬಂದೆ. ಕ್ಷಿಪ್ರದಲ್ಲೇ ದೇವರ ದಯೆಯಿಂದ ತಮಗೆ ಗುಣವಾದೀತೆಂದು ನಂಬುತ್ತೇನೆ ಎಂಬುದಾಗಿ ಸ್ವಾಮಿಗಳಿಗೆ ಬರೆದುದಲ್ಲದೆ, "ಪರಸ್ಥಳದಲ್ಲಿ ಬಹಳ ದಿವಸ ತಾವು ಏಕೆ ಇರಬೇಕು? ಹೋದ ಕೆಲಸವನ್ನು ಕ್ಷಿಪ್ರದಲ್ಲಿ ಅನುಕೂಲಪಡಿಸಿಕೊಂಡು ಸ್ಥಳಕ್ಕೆ ಹಿಂದಿರುಗುವುದು" ಎಂಬುದಾಗಿ ಬರೆದನು.

೩.೮ ನಂಜನಗೂಡಿನ ಶ್ರೀ ಕಂಠೇಶ್ವರ ದೇವಾಲಯ ಮತ್ತು ಟಿಪ್ಪು

ನಂಜನಗೂಡು ಮೈಸೂರು ಜಿಲ್ಲೆಯ ತಾಲ್ಲೂಕು. ನಂಜನಗೂಡು ಕಪಿಲ ನದಿಯ ದಂಡೆಯಲ್ಲಿರುವ ಧಾರ್ಮಿಕ ಹಾಗೂ ಐತಿಹಾಸಿಕ ಪಟ್ಟಣ. ಇಲ್ಲಿರುವ ಶ್ರೀ ಕಂಠೇಶ್ವರ ದೇವಾಲಯವು ಒಂದು ಪ್ರಸಿದ್ಧ ಧಾರ್ಮಿಕ ಕೇಂದ್ರ. ನಂಜನಗೂಡು ದಕ್ಷಿಣ ಕಾಶಿ ಎಂದು ಪ್ರಖ್ಯಾತಿ ಪಡೆದಿದೆ. ನಂಜನಗೂಡು ತಾಲ್ಲೂಕಿನ ಮುಖ್ಯ ಕಾರ್ಯಾಲಯ ಆಗಿರುವ ಈ ನಗರವು Temple Town ಎಂದೇ ಪ್ರಸಿದ್ಧಿ.

ಪೌರಾಣಿಕ ಹಿನ್ನೆಲೆ

೧. ಕಪಿಲ–ಕೌಂಡಿನ್ಯ ನದಿಗಳ ಸಂಗಮ ಸ್ಥಳದ ದಂಡಕಾರಣ್ಯಗಳಲ್ಲಿ ವಾಸಿಸುತ್ತಿದ್ದ ಒಬ್ಬ ರಾಕ್ಷಸನ ಸಂಹಾರದೊಂದಿಗೆ ಈ ಕ್ಷೇತ್ರಕ್ಕೆ ಶಿವನ ಅಗಮನವಾಗಿ ವಾಸವಾಗಿದ್ದರಿಂದ ಗರಳಪುರಿ ಎಂದೂ ಕರೆಯುವರು.

೨. ಪರಶುರಾಮನು ತನ್ನ ತಾಯಿಯನ್ನು ಹತ್ಯಗೈದು ಪಾಪ ಪರಿಹಾರಕ್ಕಾಗಿ ತಂದೆಯ ಮಾರ್ಗದರ್ಶನದಂತೆ ಈ ಸ್ಥಳಕ್ಕೆ ಬಂದು, ತಪಸ್ಸು ಮಾಡಿದ್ದರಿಂದ ಪರಶುರಾಮ ಕ್ಷೇತ್ರ ಎಂದೂ ಕರೆಯುವರು.

೩. ಅಹಲ್ಯಾದೇವಿಯ ಪತಿಯಾದ ಗೌತಮರು ದೇವಸ್ಥಾನ ಸ್ಥಾಪಿಸಿ, ತಪಸ್ಸು ಮಾಡಿದ್ದರಿಂದ ಈ ಸ್ಥಳಕ್ಕೆ ಗೌತಮಪುರಿ ಎಂದೂ ಕರೆಯುವರು.

೪. ನಂಜನ್ನು ಉಂಡವ–ಶಿವ, ಶಿವನ ವಾಸಸ್ಥಾನವಾಗಿರುವುದರಿಂದ ನಂಜನಗೂಡು ಎಂಬ ಹೆಸರು ಬಂದಿದೆ.

ನಂಜನಗೂಡಿನ 'ಹಕೀಂ ನಂಜುಂಡ':

ಟಿಪ್ಪು ನಂಜನಗೂಡಿನ ಶ್ರೀ ಕಂಠೇಶ್ವರ ದೇವಾಲಯಕ್ಕೂ ದಾನ–ದತ್ತಿಯನ್ನು ನೀಡಿರುವುದರ ಹಿನ್ನೆಲೆಯಾಗಿ ಜನಪದರಲ್ಲಿ ಹಲವಾರು ಕಥೆಗಳಿವೆ. – ಅವುಗಳಲ್ಲಿ

ಕ್ರಿ.ಶ.೧೭೯೧ರ ಟಿಪ್ಪುವಿನ ಪಟ್ಟದ ಆನೆ ರುಸ್ತುಂಗೆ ಕಣ್ಣು ಬೇನೆ ಬಂದಿತ್ತು. ನಂಜುಂಡೇಶ್ವರ ಮಹಿಮೆಯನ್ನು ಕೇಳಿದ ಟಿಪ್ಪು ಹರಕೆಯನ್ನು ಹೊತ್ತು, ಸತತ ೪೦ ದಿನಗಳ ಕಾಲ ಕಾವೇರಿ ನದಿಯ ತೀರ್ಥವನ್ನು ಪಟ್ಟದಾನೆಯ ಕಣ್ಣಿಗೆ ಹಾಕತೊಡಗಿದ. ತನ್ನ ಹರಕೆಯಂತೆ ೪೦ನೇ ದಿನ ಆತನ ಪಟ್ಟದ ಆನೆಗೆ ಕಣ್ಣು ಬಂದಿತು. ಇದರಿಂದ ಸಂತೃಪ್ತನಾದ

ಟಿಪ್ಪು ನಂಜುಂಡೇಶ್ವರನನ್ನು ಅಪಾರವಾಗಿ ನಂಬಿ, ನಂಜುಂಡೇಶ್ವರನ್ನು 'ಹಕೀಂ ನಂಜುಂಡ' ಎಂದು ಕರೆದ.

ಟಿಪ್ಪು ಪಚ್ಚೆ ಲಿಂಗವನ್ನು ಕಾಣಿಕೆಯಾಗಿ ನೀಡಿ, ಪಾರ್ವತಿದೇವಿಯನ್ನು ಪಕ್ಕದಲ್ಲಿರಿಸಿ, ನಿತ್ಯ ಪೂಜೆ ಸಲ್ಲುವಂತೆ ಮಾಡಿದ. ದುಬಾರಿ ಬೆಲೆ ಹೊಂದಿದ ಕಂಠೀಹಾರವನ್ನು ಕಾಣಿಕೆಯಾಗಿ ನಂಜುಂಡೇಶ್ವರನಿಗೆ ನೀಡಿದ್ದನು. ಈ ಕಂಠೀಹಾರವನ್ನು ನಂಜುಂಡೇಶ್ವರನಿಗೆ ಹಾಕಿ ನಂಜನಗೂಡಿನ ಜಾತ್ರೆಯ ದಿನ ಮೆರಣಿಗೆ ಮಾಡಿಸುವರು. ಇದನ್ನು ಸಾರುವ ಐತಿಹಾಸಿಕ ದಾಖಲೆಯು ಪ್ರಸ್ತುತ ದೇವಾಲಯದಲ್ಲಿದೆ.

೭.೯ ಇತರೆ ದೇವಾಲಯಗಳು ಮತ್ತು ಟಿಪ್ಪು

ಟಿಪ್ಪು ಸುಲ್ತಾನನ ಈ ಉದಾರ ಭಾವನೆ ಹಾಗೂ ಹಿಂದೂ ಮೈತ್ರಿ ಕೇವಲ ಶೃಂಗೇರಿ ಪೀಠಕ್ಕೆ ಸೀಮಿತವಾಗಿರಲಿಲ್ಲ. ತನ್ನ ರಾಜ್ಯದಲ್ಲಿದ್ದ ಬೇರೆ ಬೇರೆ ದೇವಾಲಯಗಳಿಗೆ ವಿವಿಧ ರೀತಿಯ ದಾನಗಳನ್ನು ಕೊಟ್ಟಿದ್ದ.

ಟಿಪ್ಪುವಿನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ಕೋಟೆಯೊಳಗೆ ಅರಮನೆಯಿಂದ ಸುಮಾರು ೧೦೦ಮಿ. ದೂರದಲ್ಲಿದ್ದ ಶ್ರೀ ರಂಗನಾಥ ಸ್ವಾಮಿ ದೇವಾಲಯದಿಂದ ಕೇಳುತ್ತಿದ್ದ ಘಂಟಾನಾದವನ್ನು, ಮಂತ್ರಘೋಷವನ್ನು ಬಹು ಗೌರವದಿಂದ ಆಲಿಸುತ್ತಿದ್ದ. ಆ ದೇವಾಲಯಗಳಿಗೆ ಏನು ಹಾನಿ ಉಂಟುಮಾಡಲಿಲ್ಲ. ದೇವಾಲಯದಲ್ಲಿ ನಡೆಯುತ್ತಿದ್ದ ಪೂಜೆಯ ಸಮಯದಲ್ಲಿ ಮೌನವಾಗಿರುತ್ತಿದ್ದ. ಈ ದೇವಾಲಯದ ನಿತ್ಯ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಯಾವುದೇ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಅರಮನೆಗೆ ಇನ್ನೂ ಹತ್ತಿರವಿದ್ದ ಶ್ರೀ ನರಸಿಂಹ ಸ್ವಾಮಿ ಮತ್ತು ಶ್ರೀ ಗಂಗಾಧರೇಶ್ವರ ದೇವಾಲಯಗಳಲ್ಲಿ ಯಾವುದೇ ನ್ಯೂನಾತಿರೇಕಗಳಿಲ್ಲದೆ ನಿತ್ಯ ನೈಮಿತ್ತಿಕಗಳು ನೆಡೆಯುತ್ತಿದ್ದವು. ಆ ದೇವಾಲಯಗಳಲ್ಲಿ ನಡೆಯುತ್ತಿದ್ದ ವಿಶೇಷ ಪೂಜಾ ಸಮಾರಂಭಗಳಿಗೆ ಕಾಣಿಕೆಯನ್ನು ಕೊಡುತ್ತಿದ್ದ. ಅವುಗಳನ್ನು ನಡೆಸುತ್ತಿದ್ದ ವೈದಿಕರಿಗೂ ಸಾಕಷ್ಟು ಸಂಭಾವನೆಯನ್ನೀಯುತ್ತಿದ್ದ. ಆಂಧ್ರಪ್ರದೇಶದ ಕಡಪ ಜಿಲ್ಲೆಯ ಪುಲ್ಲಿವೆಂಡ್ಲ ಎಂಬಲ್ಲಿದ್ದ ಶ್ರೀ ಆಂಜನೇಯ ದೇವಸ್ಥಾನ ಮತ್ತು ವೆಂಕಟಾಚಲಪತಿ ದೇವಸ್ಥಾನಗಳಲ್ಲಿ ಪೂಜೆಯು ನಿಂತು ಹೋಗಿದ್ದಾಗ ಅವುಗಳು ಪುನರಾರಂಭವಾಗುವಂತೆ ಮಾಡಿ, ಅದಕ್ಕೆ ಬೇಕಾದ ದಾನ-ದತ್ತಿಗಳನ್ನು ಕೊಟ್ಟು ಅಲ್ಲಿಯ ಧಾರ್ಮಿಕ ಕಾರ್ಯಗಳು ಪುನಃ ಪ್ರಾರಂಭವಾಗುವಂತೆ ಮಾಡಿದ್ದ.

ಟಿಪ್ಪು ಸುಲ್ತಾನನು ಹಿಂದೂ ದೇವಾಲಯವನ್ನು ಕಟ್ಟಿಸಿದ ಉದಾಹರಣೆಯೂ ಇದೆ. ಕ್ರಿ.ಶ.೧೭೮೦ರಲ್ಲಿ ಕಂಚಿಯನ್ನು ಈತನ ತಂದೆ ಹೈದರಾಲಿಯು ಮುತ್ತಿಗೆ ಹಾಕಿದಾಗ ಅಲ್ಲೊಂದು

ದೇವಾಲಯದ ಗೋಪುರ ನಿರ್ಮಾಣಕ್ಕೆ ಅಸ್ತಿಭಾರವನ್ನು ಹಾಕಿದ್ದ. ಟಿಪ್ಪು ಸುಲ್ತಾನನು ಕ್ರಿ.ಶ.೧೭೯೨ರಲ್ಲಿ ಆ ಕಡೆಗೆ ಪ್ರಯಾಣ ಬೆಳೆಸಿದ್ದಾಗ ಆ ದೇವಾಲಯದ ರಚನೆಯ ಎಲ್ಲಾ ಕಾರ್ಯಗಳು ಪೂರ್ಣವಾದ ನಂತರ ಅಲ್ಲಿ ನಡೆದ ರಥೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ.

ಟಿಪ್ಪು ಸುಲ್ತಾನನು ಮಲಬಾರಿನ ನಾಯರ್ ಜನರನ್ನು ಮತಾಂತರಗೊಳಿಸಿದ ಎಂಬಷ್ಟೇ ಪ್ರಬಲವಾದ ರೀತಿಯಲ್ಲಿ ಅವನ ಹಿಂದೂ ಮೈತ್ರಿಯನ್ನು ತೋರಿಸಿದ ಉದಾಹರಣೆಗಳಿವೆ. ಕೇರಳದ ಪ್ರೊಫೆಸರ್ ಮೊಹಿದ್ದೀನ್ ಶಾಹಾ ಹೇಳುವಂತೆ “ಟಿಪ್ಪು ಸುಲ್ತಾನ ಮಲಬಾರಿನಲ್ಲಿ ಬ್ರಾಹ್ಮಣರಿಗೂ ಆಶ್ರಯವನ್ನು ನೀಡಿದ್ದನು. ಕ್ರಿ.ಶ.೧೭೮೯ನೆಯ ಡಿಸೆಂಬರ್ ತಿಂಗಳಲ್ಲಿ ಟಿಪ್ಪುವು ತಿರುವಾಂಕೂರಿನ ಮುಖಾಂತರ ಹಾದು ಹೋಗುವಾಗ ‘ಒಡಕ್ಕುನಾಥನ್’ ದೇವಾಲಯದಿಂದ ತನ್ನ ಊಟ ತಯಾರಿಕೆಗೆ ಬೇಕಾದ ಪಾತ್ರೆಗಳನ್ನು ಎರವಲು ತಂದು, ಅವನ್ನು ಹಿಂತಿರುಗಿಸುವಾಗ ಅವುಗಳೊಡನೆ ದೇವಾಲಯಕ್ಕೆ ‘ಕಂಚಿನ ದೀಪ’ವೊಂದನ್ನು ಕಾಣಿಕೆಯಾಗಿ ಕೊಟ್ಟ. ಈ ಪ್ರದೇಶದ ವಿವಿಧ ದೇವಾಲಯಗಳ ದಾಖಲೆಗಳು ಟಿಪ್ಪು ಸುಲ್ತಾನರು ಕೊಟ್ಟಿದ್ದ ವಿವಿಧ ದಾನ-ದತ್ತಿಗಳ ಕುರಿತು ವಿವರಗಳನ್ನೀಡುತ್ತವೆ.

೬.೧೦ ಟಿಪ್ಪು ಮತ್ತು ಭೂದಾನ

ಕೆಲವು ಇತಿಹಾಸಕಾರರು ಟಿಪ್ಪು ಸುಲ್ತಾನ ಹಲವಾರು ದೇವಾಲಯಗಳ ಹಾಗೂ ಧಾರ್ಮಿಕ ಸಂಸ್ಥೆಗಳ ಭೂಮಿಯನ್ನು ಅವರಿಂದ ತಪ್ಪಿಸಿ ಸ್ವಾಧೀನ ಪಡಿಸಿಕೊಂಡಿದ್ದಾನೆಂದು ಟೀಕಿಸಿರುವರು. ನಿಜವಾಗಿಯೂ ಯಾವುದೇ ಅಧಿಕೃತ ದಾಖಲೆಗಳಿಲ್ಲದಿದ್ದ ಭೂಮಿಯನ್ನು ಅನುಭೋಗಿಸಿಕೊಂಡು ಬರುತ್ತಿದ್ದ ಭೂಮಾಲೀಕರಿಂದ ಅದೇ ಸಂದರ್ಭಗಳಲ್ಲಿ ಆತನು ವೈದಿಕರಿಗೆ ಹೊಸದಾಗಿ ಭೂಮಿಯನ್ನು ದಾನ ಕೊಟ್ಟ ಉದಾಹರಣೆಗಳಿವೆ. ತನ್ನ ರಾಜ್ಯದ ಈಶಾನ್ಯ ಮೂಲೆಯಲ್ಲಿದ್ದ ಪುಷ್ಪಗಿರಿ ಮಠಕ್ಕೆ, ತೊಂಗಪಳ್ಳಿ ಮತ್ತು ಗೊಲ್ಲಪಳ್ಳಿ ಎಂಬ ಎರಡು ಗ್ರಾಮಗಳಿಂದ ಬೊಕ್ಕಸಕ್ಕೆ ಬರುತ್ತಿದ್ದ ಉತ್ಪತ್ತಿಯನ್ನು ಕೊಡುವಂತೆ ತನ್ನ ಕಂದಾಯದ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದ. ಅದರಂತೆ ಕಡಪ ಜಿಲ್ಲೆಯ ಕೊತನುಪಾಳ ಗ್ರಾಮವನ್ನು ರಾಮಚಂದ್ರನೆಂಬ ಒಬ್ಬ ವೈದಿಕನಿಗೆ ಆ ಗ್ರಾಮದ ಬಳಿಯಿದ್ದ ಗಂಚಿಕೋಟೆಯ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಪೂಜೆ ನಡೆಸುವುದಕ್ಕಾಗಿ ಕೊಡಲಾಗಿತ್ತು. ಬಳ್ಳಾರಿ ಜಿಲ್ಲೆಯಲ್ಲಿರುವ ಕಮಾಲಾಪುರದ ಕೆಲವು ಜಮೀನುಗಳನ್ನು ವೈದಿಕ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟಿದ್ದ. ಕ್ರಿ.ಶ.೧೭೯೪ರಲ್ಲಿ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿದ್ದ ಮಹಾರಾಜ ಹರಿಪ ಎಂಬ ಬ್ರಾಹ್ಮಣನಿಗೆ ಒಂದು ಸ್ಥಳದ ದತ್ತಿಯನ್ನು ಕೊಟ್ಟಿದ್ದನೆಂದು ತಿಳಿದು ಬರುತ್ತದೆ.

ಕ್ರಿ.ಶ.೧೭೯೪ರಲ್ಲಿ ತನ್ನ ಕಂದಾಯದ ಅಧಿಕಾರಿಯಾಗಿದ್ದ ಹರಿದಾಸಯ್ಯ ಎಂಬುವನಿಗೆ ದೇವಾಲಯದ ಆದಾಯ ಮತ್ತು ಬ್ರಹ್ಮಾದಾಯವೆಂಬ ಭೂಕಂದಾಯ ಬರುವ ದೇವಾಲಯ ಮತ್ತು ಬ್ರಾಹ್ಮಣರ ಭೂಮಿಯ ಹೊರತು ಇತರ ಎಲ್ಲಾ ಅನಧಿಕೃತ ಭೂಮಿಗಳನ್ನು ಸರಕಾರದ ಸ್ವಾಧೀನ ತಂದುಕೊಳ್ಳಬೇಕೆಂಬ ಆಜ್ಞೆಯನ್ನು ಕೊಟ್ಟಿದ್ದ. ಧರ್ಮಪುರಿ ಎಂಬಲ್ಲಿದ್ದ ನರಸಿಂಹ ಜೋಶಿ ಎಂಬ ವೈದಿಕನಿಗೆ ಪ್ರತಿ ವರ್ಷ ೧೦ ಪಗೋಡ ಎಂಬ ಚಿನ್ನದ ನಾಣ್ಯಗಳನ್ನು ಕೊಡುವಂತೆಯೂ ಟಿಪ್ಪು ಸುಲ್ತಾನ್ ಆದೇಶವನ್ನು ಕೊಟ್ಟಿದ್ದ.

ಪ್ರಸಿದ್ಧವಾದ ಗುರುವಾಯೂರು ವೈಷ್ಣವ ದೇವಾಲಯಕ್ಕೆ ಟಿಪ್ಪು ಸುಲ್ತಾನನು ತನ್ನ ರಾಜ್ಯದಿಂದ ೫೦೪ ಎಕರೆ ಜಮೀನನ್ನು ಉಂಬಳಿಯಾಗಿ ಬಿಟ್ಟಿದ್ದ. ಅದರಂತೆ ಪೂನ್ನಾನಿ ತಾಲ್ಲೂಕಿನ ವೈಲತ್ತೂರಿನ ಬಳಿಯಿರುವ ತರುವಂಚಿ ಕುಲಂನಲ್ಲಿರುವ ಶಿವಾಲಯಕ್ಕೆ ೨೧೨ ಎಕರೆ ಜಮೀನನ್ನು ತನ್ನ ರಾಜ್ಯದಿಂದ ಉಂಬಳಿ ಕೊಟ್ಟ. ಅದೇ ಪೂನ್ನಾನಿ ತಾಲ್ಲೂಕಿನ ಕದಿಕಾರ್ ಎಂಬಲ್ಲಿದ್ದ ಪ್ರಸಿದ್ಧ ವೈದಿಕ ಶ್ರೀಕುಮಾರನ್ ನಂಬೂದರಿಪಾಡ್ ಎಂಬವನಿಗೆ ೨೦ ಎಕರೆ ಭೂಮಿಯನ್ನು ಕೊಟ್ಟ.

ತನ್ನ ರಾಜ್ಯದಲ್ಲಿ ಹಿಂದುಗಳೇ ಬಹಳ ಸಂಖ್ಯೆಯಲ್ಲಿರುವಾಗ ಅವರನ್ನು ಸಂತೃಪ್ತಿಯಲ್ಲಿಟ್ಟು ಕೊಳ್ಳಬೇಕೆಂದು, ಅವರ ಸಹಕಾರಗಳು ತನ್ನ ಸುಸೂತ್ರ ಆಳ್ವಿಕೆಗೆ ಅಗತ್ಯವೆಂಬುದು ಆಡಳಿತಗಾರನಾಗಿದ್ದ ಟಿಪ್ಪು ಸುಲ್ತಾನನು ಅರಿತಿದ್ದನು. ಬ್ರಾಹ್ಮಣ ವರ್ಗಕ್ಕೆ ಸೇರಿದ್ದ ಪೂರ್ಣಯ್ಯನವರನ್ನು ದಿವಾನ ಹುದ್ದೆಯಲ್ಲಿರಿಸಿಕೊಂಡು ನಿಕಟವರ್ತಿಯನ್ನಾಗಿ ಮಾಡಿಕೊಂಡಿದ್ದ.

ಟಿಪ್ಪು ಸುಲ್ತಾನನ ಆಡಳಿತದಲ್ಲಿ ಕಂಡುಬರುವ ಹಿಂದೂ ಅಧಿಕಾರಿಗಳು

ಹಿಂದೂ ಅಧಿಕಾರಿಗಳು		**ಅವರ ಹುದ್ದೆಗಳು**
ದಿವಾನ್ ಪುರ್ಣಯ್ಯ	:	ದಿವಾನ, ಪ್ರಧಾನಿ
ಕೃಷ್ಣರಾವ್	:	ಖಜಾನೆ
ಶಾಮಯ್ಯ ಅಯ್ಯಂಗಾರ್	:	ಅಂಚೆ ಮತ್ತು ಪೋಲೀಸ್ ವಿಭಾಗ
ಹರಿದಾಸಯ್ಯ	:	ಕಂದಾಯ
ಮೂಲ್ ಚಂದ್, ಸುಜ್ಜನ್ ರಾವ್	:	ಮೊಘಲ್ ಆಸ್ಥಾನದಲ್ಲಿ ಟಿಪ್ಪು

ಮುಕುಂದ ರಾವ್	:	ಸುಲ್ತಾನನ ರಾಜಪ್ರತಿನಿಧಿಗಳು
ರಂಗ ಅಯ್ಯಂಗಾರ್	:	ಅರಮನೆ ಜವಾಬ್ದಾರಿ
ನರಸಿಂಗ ರಾವ್	:	ಇತರೆ ಹುದ್ದೆಗಳು
ನಾಗಪಯ್ಯ	:	ಕೊಡಗಿನ ಸೈನ್ಯಾಧಿಕಾರಿ
ರಾಮ ರಾವ್	:	ಅಶ್ವಸೈನ್ಯ ಮುಖ್ಯಸ್ಥ
ಹರಿಸಿಂಗ್	:	ಅಶ್ವಸೈನ್ಯದ ಹಿರಿಯ ಅಧಿಕಾರಿ
ಶ್ರೀಪತಿ ರಾವ್	:	ಹಿರಿಯ ಸೈನ್ಯಾಧಿಕಾರಿ
ಶಿವಾಜಿ	:	ಮರಾಠಿ ಸೈನ್ಯದ ಅಧಿಕಾರಿ
ನರಸಯ್ಯ ಮುನ್ಷಿ, ಸಂಗಣ್ಣ ನಾಯ್ಕ	:	ಸೈನ್ಯದ ಇತರ ಹಿರಿಯ ಅಧಿಕಾರಿಗಳು

ಈ ರೀತಿಯಾಗಿ ಟಿಪ್ಪುವಿನ ಕಾಲದ ದಾಖಲೆಗಳು ಅವನ ಕುರಿತಾದ ಸ್ಪಷ್ಟವಾದ ಚಿತ್ರಣವನ್ನು ಕೊಡಲು ಸಮರ್ಥವಾಗಿವೆ. ಈ ದಾಖಲೆ ಹಾಳಾಗುವುದನ್ನು ಗಮನಿಸಿದಾಗ ರಾಜಕೀಯದಲ್ಲಿ ತಮಗೆ ವಿರೋಧಿಯಾಗಿದ್ದ ಟಿಪ್ಪುವನ್ನು ತಮ್ಮ ಮನಬಂದಂತೆ ಬ್ರಿಟೀಷರು ಇತಿಹಾಸಕಾರರು ಚಿತ್ರಿಸಿದ್ದಾರೆ. ಅವರ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಟಿಪ್ಪುವಿನ ಇತಿಹಾಸವನ್ನು ಅಧ್ಯಯನ ಮಾಡಿದ ಭಾರತೀಯ ಇತಿಹಾಸ ಕಾರರು ಹೆಚ್ಚು-ಕಡಿಮೆ ಅದೇ ರೀತಿಯಲ್ಲಿ ವಿವರಿಸಿದ್ದಾರೆ. ಆರ್. ನರಸಿಂಹಚಾರ್ಯರವರು ಆ ಕಾಲದ ದಾಖಲೆಗಳನ್ನು, ಆ ಕಾಲದ ಶಾಸನಗಳನ್ನು ಕರ್ನಾಟಕ ಹಾಗೂ ಇಂಡಿಯನ್ ಹಿಸ್ಟರಿಯಲ್ಲಿ ವ್ಯಾಪಕ ಶೋಧನೆ ನಡೆಸಿ ಬೆಳಕಿಗೆ ತಂದ ವಿವರಗಳು ಟಿಪ್ಪುವಿನ ಕುರಿತಾಗಿ ಸರಿಯಾಗಿ ವಿವರಗಳನ್ನು ಕೊಡುತ್ತವೆ.

೬.೧೧ ಟಿಪ್ಪುವಿನ ಮತಾಂತರ

ಟಿಪ್ಪುಸುಲ್ತಾನ್ ಮೈಸೂರಿನ ಹುಲಿ ಮತಾಂಧನಾದ ಟಿಪ್ಪು ತನ್ನ ರಾಜಕೀಯ ಅಧಿಕಾರವನ್ನು ತನ್ನ ಮತ ಪ್ರಚಾರಕ್ಕೂ, ಬಲಾತ್ಕಾರಕ್ಕೂ ಬಳಸಿಕೊಂಡ. ಹಿಂದೂ ಪ್ರಜೆಗಳ ಮೇಲೆ ಎಷ್ಟೇ ಕನಿಕರವುಳ್ಳವನಾಗಿದ್ದರೂ ಮಲಬಾರಿನ ನಾಯರ್‌ಗಳ ಮೇಲೆ, ಮಂಗಳೂರಿನ ಕ್ರೈಸ್ತರ ಮೇಲೆ ಹಾಗೂ ಕೊಡಗಿನ ಹಿಂದೂಗಳ ಮೇಲೆ ಆತ ಎಸಗಿದ ದೌರ್ಜನ್ಯವನ್ನು

ಮರೆಯುವಂತಿಲ್ಲ ಎಂಬುದು ಒಂದು ವರ್ಗದ ಇತಿಹಾಸಕಾರರ ವಾದ. ಟಿಪ್ಪುವಿನ ರಾಜಧಾನಿಯಾದ ಶ್ರೀರಂಗಪಟ್ಟಣದಲ್ಲಿ ಅರಮನೆಯ ಬಳಿಯೇ ಇದ್ದ ಶ್ರೀರಂಗನಾಥ ಸ್ವಾಮಿ. ಶ್ರೀನರಸಿಂಹ ಸ್ವಾಮಿ ಹಾಗೂ ಗಂಗಾಧರೇಶ್ವರ ದೇವಾಲಯಗಳು ಉತ್ತಮ ಸ್ಥಿತಿಯಲ್ಲಿದ್ದವು. ಟಿಪ್ಪು ಶೃಂಗೇರಿ ಸ್ವಾಮಿಗಳೊಡನೆ ಉತ್ತಮ ಸ್ನೇಹ-ಸಂಬಂಧ ಇರಿಸಿಕೊಂಡಿದ್ದ. ಹಲವಾರು ದೇವಾಲಯಗಳಿಗೆ ದಾನ-ದತ್ತಿ ಕೊಟ್ಟಿದ್ದ ಎಂಬುದು ಇನ್ನೊಂದು ಇತಿಹಾಸಕಾರರ ವಾದ.

ಟಿಪ್ಪುಸುಲ್ತಾನ್ ಕರ್ನಾಟಕದ ಒಬ್ಬ ಸಮರ್ಥ ಪರಾಕ್ರಮಿ. ಸ್ವಾಭಿಮಾನಿ ಮುಸ್ಲಿಂ ಅರಸ. ತನ್ನ ತಂದೆಯಿಂದ ಪಡೆದ ರಾಜ್ಯವನ್ನು ಇನ್ನಷ್ಟು ವಿಸ್ತರಿಸಿ, ಅದನ್ನು ಸುಭದ್ರವಾಗಿ ಕಟ್ಟಿ, ಅದಕ್ಕೆ ವಿದೇಶಿಯರಾದ ಆಂಗ್ಲರಿಂದ ಯಾವುದೇ ಅಪಾಯಗಳು ಬಾರದಂತೆ ರಕ್ಷಿಸಬೇಕೆಂದು ಪಣತೊಟ್ಟು, ಅದಕ್ಕೆ ಹೋರಾಡಿದ ಒಬ್ಬ ಧೀರ, ಧೀಮಂತ ಆಡಳಿತಗಾರ ತನ್ನ ಯೋಜನೆ ಹಾಗೂ ಕಾರ್ಯಾಚರಣೆಗಳಿಗೆ ಎದುರು ಬಂದ ಯಾರೇ ಅದರೂ ಸಹಿಸುತ್ತಿರಲಿಲ್ಲ. ಮೈಸೂರು ರಾಜ್ಯದಲ್ಲಿ ಬಹುಸಂಖ್ಯೆಯಲ್ಲಿದ್ದ ಹಿಂದೂಗಳಾಗಲೀ ಇಡೀ ಭಾರತದ ಅರ್ಧಭಾಗವನ್ನೇ ಕಬಳಿಸಿ ಅದರ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ ಆಂಗ್ಲರಿಗಾಗಲೀ, ಭಾರತದ ವಿಭಿನ್ನ ಭಾಗಗಳನ್ನು ಆಳುತ್ತಿದ್ದ ಯಾವುದೇ ಮುಸ್ಲಿಂ ಅರಸನಿಗಾಗಲೀ ಟಿಪ್ಪುಸುಲ್ತಾನನು ಹೆದರುತ್ತಿರಲಿಲ್ಲ.

ಟಿಪ್ಪುವಿಗೆ ತನ್ನ ರಾಜ್ಯದ ರಕ್ಷಣೆಯೇ ಒಂದು ಪ್ರಬಲ ಸಮಸ್ಯೆಯಾಗಿತ್ತು. ಅದಕ್ಕೆ ಹಾನಿಯೊಡ್ಡುವ ಆಂಗ್ಲರನ್ನು ಭಾರತದಿಂದ ಓಡಿಸಲೇಬೇಕೆಂದು ನಿರ್ಧರಿಸಿದ್ದ, ಅದಕ್ಕಾಗಿ ವಿವಿಧ ಉಪಾಯಗಳನ್ನು ಹೂಡಿದ್ದ. ಮರಾಠರೊಡನೆ, ಹೈದರಾಬಾದಿನ ನಿಜಾಮರೊಡನೆ ಹಾಗೂ ಹಿಂದೂ ರಾಜರೊಡನೆ ಒಪ್ಪಂದಗಳನ್ನು ಮಾಡಿಕೊಂಡಿದ್ದ.

ಆ ಕಾಲದಲ್ಲಿ ಭಾರತದಲ್ಲಿ ಇನ್ನೊಂದು ಯೂರೋಪಿನ ಶಕ್ತಿಯಾಗಿ ಬೆಳೆದಿದ್ದ ಫ್ರೆಂಚರ ಸಹಾಯ ಪಡೆಯಲಿಕ್ಕಾಗಿ ಫ್ರಾನ್ಸ್ ದೇಶದಲ್ಲಿ ಪ್ರಬಲ ಶಕ್ತಿಯೊಂದಿಗೆ ಉದಯೋನ್ಮುಖನಾಗಿದ್ದ ನೆಪೋಲಿಯನ್‌ನೊಡನೆ ಪತ್ರ ವ್ಯವಹಾರ ಮಾಡತೊಡಗಿದ ನೆಪೋಲಿಯನ್ ತಾನು ಮೈಸೂರಿಗೆ ಬಂದು ಆಂಗ್ಲರ ವಿರುದ್ಧವಾಗಿ ಸಹಾಯ ಮಾಡುವುದಾಗಿ ತಿಳಿಸಿದ್ದ ಆ ಮಾತಿನಂತೆ ಎಲ್ಲಾ ಸಿದ್ಧತೆ ಮಾಡಿಕೊಂಡು ನೆಪೋಲಿಯನ್ನರ ದಂಡಾಧಿಕಾರಿಯೊಬ್ಬನು ತನ್ನ ಸೈನ್ಯದೊಂದಿಗೆ ಭಾರತಕ್ಕೆ ಬರುವ ಪ್ರಯಾಣದಲ್ಲಿ ಪರ್ಷಿಯಾದವರೆಗೆ ಬಂದಿದ್ದ (ಕ್ರಿ.ಶ.೧೭೯೮).

ಅಪಘಾನಿಸ್ಥಾನದ ಚಕ್ರವರ್ತಿ ಶಹ ಝಮಾನ್‌ನನ್ನು ಭಾರತಕ್ಕೆ ಬರುವಂತೆಯೂ, ಇಲ್ಲಿಗೆ ಬಂದು ದಿಲ್ಲಿಯಲ್ಲಿದ್ದ ಮೊಘಲ್ ಚಕ್ರವರ್ತಿಯನ್ನು ಬ್ರಿಟೀಷರ ಕಪಿಮುಷ್ಠಿಯಿಂದ

ಬಿಡಿಸುವಂತೆಯೂ ಟಿಪ್ಪು ಕೇಳಿಕೊಂಡಿದ್ದ. ಶಹ ಝಮಾನನು ಕ್ರಿ.ಶ.೧೭೯೮ರಲ್ಲಿ ಕಾಬೂಲನ್ನು ಬಿಟ್ಟು ಲಾಹೋರ್ ತಲುಪಿದ್ದ.

ಟಿಪ್ಪುವಿನ ಈ ಕಾರ್ಯಚರಣೆಗಳು ಆಂಗ್ಲರಲ್ಲಿ ಇನ್ನಷ್ಟು ದ್ವೇಷವನ್ನು ಹೆಚ್ಚಿಸಿದವು. "ಭಾರತವನ್ನು ಛಿದ್ರಗೈಯಲು ಫ್ರೆಂಚರೆಂಬ ಇನ್ನೊಂದು ಶಕ್ತಿಯನ್ನು ಆಫ್ಘಾನರನ್ನು ಭಾರತಕ್ಕೆ ಬರಮಾಡಿಕೊಂಡು ಇಲ್ಲಿಯ ಹಿಂದೂ ದ್ವೇಷಿಗಳಿಗೆ ಇನ್ನಷ್ಟು ಅಶಾಂತಿ-ಅನಿಶ್ಚತತೆ-ಅಪಾಯಗಳು ಉಂಟಾಗುವಂತೆ ಮಾಡಿದ" ಎಂಬ ಅಪಾದನೆಯನ್ನು ಹೊರಿಸಿದರು.

ಆತನೊಬ್ಬ ಹಿಂದೂ ದ್ವೇಷಿಯೆಂದೂ, ಮತಾಂಧನೆಂದೂ ಚಿತ್ರಿಸಿದರು. ಸಮಾಕಾಲೀನರಾದ ಬ್ರಿಟೀಷ್ ಅಧಿಕಾರಿಗಳು ದಾಖಲಿಸಿಕೊಂಡಿರುವಂತೆ ತನ್ನನ್ನು ವಿರೋಧಿಸಿ ಸೋತ ರಾಜರಿಗಾಗಲಿ, ಸೈನಿಕರಿಗಾಗಲೀ ಟಿಪ್ಪು ತೀವ್ರವಾದ ಶಿಕ್ಷೆಯನ್ನು ಕೊಡುತ್ತಿದ್ದ. ಶ್ರೀರಂಗಪಟ್ಟಣದಲ್ಲಿ ವಿಶೇಷವಾದ ನೆಲಮಾಳಿಗೆಯಲ್ಲಿ ಸೋತ ಸೈನಿಕರ ಕೈ-ಕಾಲು ಕಟ್ಟಿ ಆನೆಗಳ ಸಹಾಯದಿಂದ ದೊರಗು ನೆಲದ ಮೇಲೆ ಎಳೆಸಿ ಅವರು ಕೊನೆಗಾಣುವುದನ್ನು ನೋಡುತ್ತಿದ್ದ. ಕೆಲವರನ್ನು ಹುಲಿ ಪಂಜರಗಳಲ್ಲಿ ಅವುಗಳ ಆಹಾರವಾಗಿ ಎಸೆಯುತ್ತಿದ್ದ.

ಆದುದರಿಂದಲೇ ವಿಲ್ಕ್ಸ್ ಎಂಬ ಇತಿಹಾಸಕಾರನು ತನ್ನ ಮೈಸೂರಿನ ಇತಿಹಾಸ ಎಂಬ ಕೃತಿಯಲ್ಲಿ ಟಿಪ್ಪುವಿನ ಮತಾಂತರದ ಯತ್ನಗಳನ್ನು ಬಹುವಿಧವಾಗಿ ವರ್ಣಿಸುತ್ತಾ, ಕೊನೆಯಲ್ಲಿ ಆತನು "ಒಬ್ಬ ಪರಮತ ಅಹಿಷ್ಣುವಾದ ಮತಾಂಧ, ಧಾರ್ಮಿಕ ಕೊಲೆಗಳು ಕೇವಲ ಇತಿಹಾಸದಲ್ಲಿ ಮಾತ್ರ ಉಳಿದಿದ್ದಾಗ ತನ್ನ ಕಾಲದಲ್ಲಿ ಅತ್ಯಂತ ಭೀಕರವಾದ ಧಾರ್ಮಿಕ ಕೊಲೆಗಳನ್ನು ಮಾಡಿಸಿದ" ಎಂದು ಹೇಳಿದ್ದಾನೆ.

ಕ್ರಿ.ಶ.೧೭೮೫ರಲ್ಲಿ ಟಿಪ್ಪು ಮೊಘಲ್ ಚಕ್ರವರ್ತಿಗೆ ಬರೆದ ಒಂದು ಪತ್ರದಲ್ಲಿ ಈ ರೀತಿ ಬರೆದಿದ್ದ. "ದೈವ ಸಹಾಯದಿಂದ ಮತ್ತು ದೇವರ ಆಶೀರ್ವಾದದಿಂದ ನಮ್ಮ ಮತದ ಶತ್ರುಗಳನ್ನು ಪೂರ್ಣವಾಗಿ ಕೊನೆಗೊಳಿಸಿ ನಾಶಗೊಳಿಸುವುದನ್ನು ಪ್ರಾರಂಭಿಸುವುದು ಈಗಿನ ನನ್ನ ಇನ್ನೊಂದು ಬಾರಿಯ ಸಾವಧಾನ ನಿರ್ಧಾರ" ಎಂದು ಬರೆದಿದ್ದಾನೆ.

ಕ್ರಿ.ಶ.೧೭೮೮ರಲ್ಲಿ ನರಗುಂದದ ದೇಸಾಯಿಗಳ ಮೇಲೆ ಟಿಪ್ಪುವಿನ ಸೈನ್ಯವು ಪ್ರಬಲವಾದ ಮುತ್ತಿಗೆ ಹಾಕಿ, ಅದು ಸ್ವಾಧೀನವಾಗದಿದ್ದಾಗ ಟಿಪ್ಪು ಅಲ್ಲಿಯ ಸೈನ್ಯಾಧಿಕಾರಿಗಳಿಗೆ ಬರೆದ ಪತ್ರದ ಮುಖ್ಯಾಂಶವೆಂದರೆ "ನರಗುಂದ ಧೂಳೀಪಟ ಮಾಡುವ ಸನ್ನಿವೇಶ ನಿಮಗೆ ಒದಗಿ ಬಂದಾಗ ಅಲ್ಲಿರುವ ಪ್ರತಿಯೊಂದು ಜೀವಿಯನ್ನು-ಹೆಣ್ಣಾಗಲೀ-ಮುದಿಯಾಗಲೀ-ತರುಣನಾಗಲೀ,

ಮಗು-ನಾಯಿ-ಬೆಕ್ಕು ಅಥವಾ ಬೇರೆಯಾವುದೇ ಆಗಲೀ ಕಾಲ ಪಂಡಿತ ಒಬ್ಬನನ್ನು ಬಿಟ್ಟು, ಖಡ್ಗಕ್ಕೆ ಬಲಿ ಕೊಡಬೇಕು" ಎಂದು ಹೇಳಿದ್ದಾನೆ.

ಟಿಪ್ಪು ನಿಸ್ಸಹಾಯಕನಾದಾಗ ತನ್ನ ಸೈನ್ಯದ ಭದ್ರತೆಗಾಗಿ ಯಾವಾಗಲೂ ಮೈಸೂರು ರಾಜ್ಯದ ಹಾಗೂ ನೆರೆ ರಾಜ್ಯಗಳ ಸಹಾಯವನ್ನು ಅಪೇಕ್ಷಿಸುತ್ತಿದ್ದ. ಬ್ರಿಟೀಷರ ಭೀತಿಯಿಂದ ಅವರ ಪಕ್ಷವಹಿಸುತ್ತಿದ್ದ ಅನೇಕ ರಾಜರು ಟಿಪ್ಪುವಿನ ಪಕ್ಷಕ್ಕೆ ಬರಲು ಒಪ್ಪುತ್ತಿರಲಿಲ್ಲ. ಇದನ್ನು ಟಿಪ್ಪು ಸಹಿಸುತ್ತಿರಲಿಲ್ಲ. ತನ್ನ ಅಧಿಕಾರದ ಕೊನೆಗಳಿಗೆಯವರೆಗೂ ಅವರೊಡನೆ ಯುದ್ಧ ಮಾಡಲು ನಿಶ್ಚಯಿಸಿದ್ದ.

೧೮ನೇ ಶತಮಾನದ ಮಧ್ಯಭಾಗದ ನಂತರ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಇವರುಗಳು ಕೇರಳವನ್ನು ದಂಡಯಾತ್ರೆ ಮಾಡಿದಾಗ ಆ ರಾಜ್ಯದ ಮೇಲೆ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಅಪಾರವಾದ ಪ್ರಭಾವವನ್ನು ಬೀರಿದರು. ಈ ದಂಡಯಾತ್ರೆಯನ್ನು 'ಪಾದಯೋತ್ತಮ್' ಎಂದು ಕರೆಯಲಾಗಿದೆ. ಈ ಪ್ರಭಾವವನ್ನು ಈಗಲೂ ಕಾಣಬಹುದು. ಎಂತಹ ಪ್ರಭಾವವಾಯಿತು ಎಂಬುದನ್ನು ಮುಖ್ಯವಾಗಿ ಸಿರಿಯನ್ ಕ್ರಿಶ್ಚಿಯನ್ ಪಂಗಡದ ಮೇಲೆ ಯಾವ ರೀತಿಯ ಪರಿಣಾಮವಾಯಿತು ಎಂಬುದನ್ನು ಕ್ರಿ.ಶ.೧೭೬೬-ಕ್ರಿ.ಶ.೧೭೯೦ರವರಗೆ ಅಂದು ನಡೆದ ಘಟನೆಗಳನ್ನು ಅವಲೋಕಿಸಿದರೆ ತಿಳಿಯುತ್ತದೆ.

೧೦-೦೨-೧೭೬೬ರಲ್ಲಿ ಹೈದರಾಲಿ ಮತ್ತು ಅವನ ಸೈನ್ಯವನ್ನು ಕಣ್ಣನೂರಿನ ಆಲಿ ರಾಜಾ ಸ್ವಾಗತಿಸಿದನು. ಆಲಿ ರಾಜಾ ಮತ್ತು ಈತನ ತಮ್ಮನ ಸಹಾಯದಿಂದ ಚರಕಲ್ಲಲ್ಲಿ ಕೊಲ್ಹತಿರಿ ರಾಜನ ಅರಮನೆಯನ್ನು ಜಪ್ತಿ ಮಾಡಲಾಯಿತು. ಬ್ರಿಟೀಷರ ವ್ಯಾಪಾರ ಕೇಂದ್ರವಾದ ತಲಚೇರಿಯಲ್ಲಿ ಆಶ್ರಮ ಪಡೆಯಲು ಕೋಲ್ಹತಿರಿ ರಾಜ ಮತ್ತು ಆತನ ಕುಟುಂಬವು ದಕ್ಷಿಣದ ಕಡೆಗೆ ಓಡಿ ಹೋಯಿತು.

೧೫-೦೩-೧೭೬೬ರಲ್ಲಿ ಉತ್ತರ ಕೇರಳದಲ್ಲಿರುವ ಕೊಟ್ಟಯಮ್‌ನ ರಾಜನ ನಾಡಿಗೆ ಮೈಸೂರಿನ ಸೇನೆಯು ನುಗ್ಗಿತು. ಇಲ್ಲಿನ ಜನ ಈ ರಾಜನನ್ನು ತೊರೆದು ಮೈಸೂರಿನ ಸೇನೆಯನ್ನು ಸೇರಿದರು. ಕಾದಾತನಾಡಿನ ಸೈನಿಕರನ್ನು ಮೈಸೂರಿನ ಸೈನಿಕರು ಸೋಲಿಸಿ ಅದನ್ನು ವಶಪಡಿಸಿಕೊಂಡರು.

ಕಾಲಿಕಟ್‌ನಲ್ಲಿ ಜಾಮರಿನನನ್ನು ಹೈದರಾಲಿ ಭೇಟಿ ಮಾಡಿದ. ಆತ ಸೋತಿದ್ದರಿಂದ ಒಂದು ಕೋಟಿ ಚಿನ್ನದ ಮೊಹರ್‌ಗಳನ್ನು ನೀಡಬೇಕೆಂದು ಬೇಡಿಕೆ ಇಟ್ಟ. ಆತ ನಿರಾಕರಿಸಿದ.

ತೀವ್ರವಾಗಿ ನೊಂದ ಈ ದೊರೆಯು ಆತ್ಮಹತ್ಯೆ ಮಾಡಿಕೊಂಡನು. ಇದರಿಂದ ಕಾಲಿಕಟ್‌ನಲ್ಲಿದ್ದ ಎಲ್ಲಾ ಐಶ್ವರ್ಯವನ್ನು ಹೈದರಾಲಿ ವಶಪಡಿಸಿಕೊಂಡ.

ಕೊಚ್ಚಿನ್ ಮತ್ತು ತಿರುವಾಂಕೂರ್‌ನ ರಾಜರುಗಳು ವಿಧೇಯರಾಗಬೇಕೆಂದು ಹೇಳಿ ಸಂದೇಶವನ್ನಿತ್ತ. ಕೊಚ್ಚಿನ್ ವರ್ಷಕ್ಕೆ ಎರಡು ಲಕ್ಷ ರೂಪಾಯಿ ಮತ್ತು ಎಂಟು ಆನೆಗಳನ್ನು ನೀಡಲು ಒಪ್ಪಿತು. ತಿರುವಾಂಕೂರ್ ರಾಜ ಅವಿಧೇಯತೆ ತೋರಿದ. ಹೈದರಾಲಿ ಮುತ್ತಿಗೆ ಹಾಕಲು ಯೋಜಿಸಿದ. ಆದರೆ ಇದಕ್ಕೆ ತದ್ವಿರುದ್ಧವಾಗಿ ಮಾನ್ಸೂನ್ ಪ್ರಾರಂಭವಾಯಿತು.

ಟಿಪ್ಪು ಸುಲ್ತಾನ್ ಗುರುವಯೂರ್ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಅತಿಕ್ರಮಣ ಮಾಡಿದನು. ದೇವಾಲಯಗಳನ್ನು ಮತ್ತು ಚರ್ಚ್‌ಗಳನ್ನು ಲೂಟಿ ಮಾಡಲಾಯಿತು. ಈ ಕಾರಣದಿಂದ ರೆವರೆಂಡ್ ಪುಲಿಕೊಟ್ಟ ಜೋಸೆಫ್ ಕಾತನೂರ, ಇವನ ನೇತೃತ್ವದಲ್ಲಿ ದೊಡ್ಡ ಸಂಖ್ಯೆಯ ನಿರಾಶ್ರಿತರು ಕುನ್ನಕುಲಂಗೆ ಹೊರಟು ಹೋದರು. ಕುನ್ನಕುಲಂ ಅಗಾಧ ಸಂಖ್ಯೆಯ ಸಿರಿಯನ್ ಕ್ರಿಶ್ಚಿಯನ್ ನಿರಾಶ್ರಿತರು ಕುನ್ನಾಕುಲಂನಲ್ಲಿ ತಳವೂರಿದರು.

ಕಂಜೂರು ಚರ್ಚ್ ಒಂದು ರೂಪಕವಾಗಿದೆ. ಟಿಪ್ಪು ಸುಲ್ತಾನ ಸೈನ್ಯ ಒಂದು ಕಡೆ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯನ್ನು ಎದುರಿಸುತ್ತಿದ್ದರೆ, ಮತ್ತೊಂದು ಕಡೆ ಸ್ಥಳೀಯರಾದ ಮಲಬಾರ್ ಸಿಪಾಯಿಗಳು ಈಸ್ಟ್ ಇಂಡಿಯಾ ಕಂಪನಿಗೆ ಯುದ್ದದಲ್ಲಿ ಸಹಾಯ ಮಾಡುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ. ಸಿರಿಯನ್ ಕ್ರಿಶ್ಚಿಯನ್ ಸಮುದಾಯಕ್ಕೆ ಮೈಸೂರಿನ ಸೈನಿಕರು ತಾವು ದಂಗೆ ಮಾಡಿ ಅವರ ಸಂಸ್ಥೆಗಳನ್ನು ಹಾಳು ಮಾಡಿದುದಲ್ಲದೇ ಅವರ ತೆಂಗು, ಅಡಕೆ, ಮೆಣಸು, ಗೋಡಂಬಿಯ ಪ್ಲಾಂಟೇಷನ್‌ಗಳನ್ನು ಹಾಳು ಮಾಡಿದರು. ಬಹುತೇಕ ಸಿರಿಯನ್ ಕ್ರಿಶ್ಚಿಯನ್ನರು ಭೂ ಹಿಡುವಳಿ ಹೊಂದಿದ ರೈತರಾಗಿದ್ದರು. ಅವರ ಬಹುತೇಕ ಅಭಿವೃದ್ಧಿ ಅವರು ಉಳುವ ಭೂಮಿಯನ್ನು ಅವಲಂಬಿಸಿತ್ತು. ಟಿಪ್ಪು ತನ್ನ ಮತದವರೇ ಆದರೂ, ತನ್ನ ರಾಜಕೀಯ ತತ್ವಕ್ಕೆ ಒಪ್ಪದಿದ್ದರೆ ಅಂಥಹವರ ಮೇಲೆ ಯುದ್ಧ ಸಾರಿ ಶಿಕ್ಷಿಸುತ್ತಿದ್ದ. ಉದಾ: ಮಲಬಾರಿನ ಮಾಪಿಳ್ಳೆಗಳು, ಕಡಪ, ಕರ್ನೂಲ್ ಮತ್ತು ಸವಣೂರಿನ ನವಾಬರ ಮೇಲಿನ ಯುದ್ಧಗಳು. ಆದ್ದರಿಂದ ಈತನ ಯುದ್ದಗಳು ಹಾಗೂ ಶಿಕ್ಷೆಗಳು ಧಾರ್ಮಿಕ ತಳಹದಿಯ ಮೇಲೆ ಅವಲಂಬಿತವಾಗಿರದೆ ರಾಜಕೀಯ ಹಿನ್ನೆಲೆಯಲ್ಲಿ ನಿರ್ಧರಿಸಲ್ಪಡುತ್ತಿದ್ದವು.

“ಜಶ-ಜನಗಳಿಗೂ-ಹಾಶಂ ಜನಗಳಿಗೂ ನವಾಯಿಯಾನೆ ಬಾಣ ಬಿಡುವ ಜನಗಳಿಗೆ ತೋಪಗಳು ಉಡಾಯಿಸುವ ಜನಗಳಿಗೂ ಮತು ಖಲಾಶಿ ವಗೈರ ಛಿ ಪಿರಕೆ ವಾರ ಜನಗಳನ್ನು ಕರೆಸಿ ನೋಡಿದಲ್ಲದೆ ಸವಾರಗಳ ಚರಾಯಿಗೋಸ್ಕರ ಅಲ್ಲಲ್ಲಿ ರವಾನೆ ಮಾಡಿದ್ದಲ್ಲದೆ, ಇನ್ನು ಹೊಸವಾರಗಳಿಗೂ ಕೆಲಸಗಳಿದ್ದವು. ಕೊಡಗ ಮತು ಕೊಡಗಿ ಜನಗಳಿಗೂ ಅವರ ಕುಟುಂಬ

ಮಕ್ಕಳು ಸಮೇತ ಹಿಡಿದು. ಕ್ರಿಸ್ತನ ಜನಗಳಿಗೂ-ನಾಯರ ಜನಗಳಿಗೂ ಕುಟುಂಬ ಸಮೇತ ಹಿಡಿದು ಮುಸಲ್ಮಾನರ ಮತಕ್ಕೆ ಸೇರಿದ್ದು ಆಗ ಸುಲ್ತಾನ್‌ರವರು ತಮ್ಮ ಫೌಜು ಸಮೇತ ಸಂಗಡ ಕರೆದುಕೊಂಡು ಎರಡು ಮೂರು ತಕ್ಕಡಿಗಳು ಮಾಡಿ ಕೊಡಗು ದೇಶದಲ್ಲಿ ಎರಡು ಮೂರು ಕಡೆಯಿಂದ ಪ್ರವೇಶ ಮಾಡಿದರು. ತಾವು ಕೊಡಗು ಸೀಮಾ ಬಂದೋಬಸ್ತು ಮಾಡಿ ಪಟ್ಟಣಕ್ಕೆ ಬಂದು ತಲುಪಿದರು.

ಆ ಎರಡು ಮತಸ್ಥರ ಹೆಂಗಸರು, ಮಕ್ಕಳು ಸುಮಾರು ಐವತ್ತು ಸಾವಿರ ಜನದವರಿಗೂ ಜಮ ಆದರು. ಆಗ ಎಲ್ಲ ಜನಗಳಿಗೂ ಕಕಲಮ ಶಾಸ್ತ್ರ ಓದಿಸಿ, ಒಂದೇ ದಿವಸದಲ್ಲಿ ಮುಂಜಿ ಮಾಡ್ಸಿ ಮುಸಲ್ಮಾನರ ಮತಕ್ಕೆ ಸೇರಿದರು. ಒಳ್ಳೇ ಮೇಷ್ಟ್ರಗಳನ್ನು ಇಟ್ಟು, ಹೆಂಗಸರು, ಮಕ್ಕಳನ್ನು ಸಹ ಮಥರ ಶಾಸ್ತ್ರ ಖುರಾನು ಬೋಧಿಸಿದ್ದಲ್ಲದೆ ಲೆಕ್ಕವು ಜನಗಳಿಗೆ ಹಿಂದಿ, ಫಾರ್ಸಿ ಕನ್ನಡ ವಿದ್ಯಾಭ್ಯಾಸ ಮಾಡಿಸಿದರು. ಮುಸಲ್ಮಾನ ಮತಕ್ಕೆ ಸೇರುವುದಾದರೆ ಪ್ರತಿ ಮುನುಷ್ಯನಿಗೆ ಐವತ್ತು ರೂಪಾಯಿ ಕೊಟ್ಟ. ಟಿಪ್ಪು ಕೊಡಗು ಪ್ರದೇಶದ ಹಿಂದೂ, ಕ್ರಿಶ್ಚಿಯನ್, ಗಂಡಸರು-ಹೆಂಗಸರು-ಮಕ್ಕಳನ್ನು ಶ್ರೀರಂಗಪಟ್ಟಣಕ್ಕೆ ತಂದು, ಅವರನ್ನು ಮತಾಂತರಿಸಿದ ಎಂದು ಈಚೀನ ಕೃತಿಯಾದರೂ ಹಿಂದಿನ ಸತ್ಯಸಂಗತಿಯನ್ನೇ ಹೇಳುತ್ತದೆ. ಅವರಿಗೆ ಖುರಾನ್ ಹೇಳಿಕೊಟ್ಟ. ಹಿಂದಿ, ಫಾರ್ಸಿ, ಕನ್ನಡ ವಿದ್ಯೆಗೆ ಏರ್ಪಾಟು ಮಾಡಿದ ಮತ್ತು ಮತಾಂತರಗೊಂಡ ಎಲ್ಲರಿಗೂ ತಲಾ ಐವತ್ತು ರೂಪಾಯಿಗಳನ್ನು ಖಾಜಿ ಸಮ್ಮುಖದಲ್ಲಿ ನೀಡಿದ. ಯಾರಿಗಾದರೂ ಸಾಲವಿದ್ದರೆ ಅದನ್ನು ವಜಾ ಮಾಡಿದ".[೧]

"ಕ್ರಿ.ಶ.೧೭೮೨ರಲ್ಲಿ ಹೈದರಾಲಿ ಆಂಗ್ಲರ ಮೇಲೆ ಯುದ್ಧಕ್ಕಾಗಿ ಆರ್ಕಾಟಿಗೆ ಹೋಗುವಾಗ ಕೊಡಗಿನ ಅಮಲನು ಕೊಡಗಿನ ಕರಣಿಕನಾಗಿದ್ದ ಸುಬ್ಬರಸಯ್ಯನೆಂಬ ಬ್ರಾಹ್ಮಣನಿಗೆ ಕೊಟ್ಟುಹೋದನು. ಆದರೆ ಕೊಡಗರು ಬ್ರಾಹ್ಮಣನ ಕೈ ಕೆಳಗೆ ಇರಲು ಇಷ್ಟಪಡದೆ. ದಂಗೆ ಎದ್ದರು. ಸುಬ್ಬರಸಯ್ಯನು ಮೈಸೂರು ದೇಶದ ದುರ್ಗದ ತಾಲ್ಲೂಕು ಗೂರೂರಿನಲ್ಲಿಡಲು ಅಪ್ಪಣೆ ಮಾಡಿದನು. ಅದೇ ರೀತಿ ಸುಬ್ಬರಸಯ್ಯ ದೊರೆ-ಮಕ್ಕಳನ್ನು ಗೂರೂರಿನಲ್ಲಿಟ್ಟನು. ಈ ಸಂಗತಿಯನ್ನು ತಿಳಿದು, ಕೊಡಗರು ಪುನಾ ದಂಗೆಯೆದ್ದು, ತುರುಕರ ಸೈನ್ಯವನ್ನು ಓಡಿಸಿಬಿಟ್ಟರು. ಆ ಮೇಲೆ ರೈತರೇ ರಾಜ್ಯವಾಳಲು ಮುಂದಾದರು. ಕ್ರಿ.ಶ.೧೭೮೨ರಲ್ಲಿ ಹೈದರಾಲಿ ಮೃತನಾದನು. ಹೈದರಾಲಿ ಮರಣಾನಂತರ ಟಿಪ್ಪು ಕೊಡಗಿನ ರಾಜನನ್ನು ಪಿರಿಯಾಪಟ್ಟಣದಲ್ಲಿ ಸೆರೆಯಿಟ್ಟನು. ಇವರಲ್ಲಿ ಕೆಲವರು ಸಿಡಬಿನಿಂದ, ಅನ್ನ-ನೀರಿಲ್ಲದ ಮೃತರಾದರು. ಕ್ರಿ.ಶ.೧೭೮೪ರಲ್ಲಿ ಟಿಪ್ಪು ಕೊಡವರೊಡನೆ ಒಪ್ಪಂದ ಮಾಡಿಕೊಂಡು ಶ್ರೀರಂಗಪಟ್ಟಣಕ್ಕೆ ಹೊರಟು ಹೋದನು. ಕ್ರಿ.ಶ.೧೭೮೫ರಲ್ಲಿ ಕೊಡವರು ಮತ್ತೆ ದಂಗೆಯೆದ್ದರು".[೨]

ಟಿಪ್ಪು ಕೊಡಗಿನ ಮೇಲೆ ದಾಳಿ ಮಾಡುವ ಮುನ್ನ ಅವರಿಗೆ ಚೆನ್ನಾಗಿ ಆಳುವೆನೆಂದು ಸುಳ್ಳು ಭರವಸೆ ಕೊಟ್ಟಿದ್ದ. ಅವನು ಕ್ರಿ.ಶ.೧೭೮೫ರಲ್ಲಿ "ಸುಮಾರು ೮೦ ಸಾವಿರ ಗಂಡಸರು-ಹೆಂಗಸರು-ಮಕ್ಕಳನ್ನು ಹಿಡಿದು ತರಲ್ಪಟ್ಟನು" ಎಂದು ಟಿಪ್ಪುವಿನ ಆ ಸ್ಥಾನದ ಚರಿತ್ರೆಕಾರ ಕೀರ್ಮಾಣಿ ಬರೆಯುತ್ತಾನೆ. "ಶ್ರೀರಂಗಪಟ್ಟಣದಲ್ಲಿ ಸುಲ್ತಾನನು ಕೊಡಗಿನಿಂದ ಸೆರೆಹಿಡಿದು ತರಲ್ಪಟ್ಟವರನ್ನು ಮತಾಂತರಗೊಳಿಸಿ, ತನ್ನ ರಾಜ್ಯದ ಬೇರೆ-ಬೇರೆ ಗಡಿ ಸೀಮೆಗಳಲ್ಲಿ ವಾಸಿಸುವಂತೆ ಆಜ್ಞೆ ಮಾಡಿದ. ಹೀಗೆ ಮತಾಂತರಗೊಂಡ ಕೊಡಗು ಜನರು ಮಹಮ್ಮದೀಯರು ಎಂದು ಕರೆಯಲ್ಪಟ್ಟರು. ಕೊಡಗಿನಿಂದ ಸೆರೆಯಿಡಿದ ೮೫ ಸಾವಿರ ಜನರನ್ನು ಬಲಾತ್ಕಾರವಾಗಿ ಇಸ್ಲಾಂ ಮತಕ್ಕೆ ಸೇರಿಸಿದ ಪವಿತ್ರ ದಿನದಲ್ಲಿ ಸುಲ್ತಾನನು ಬಾದಷಹ ಎಂಬ ಬಿರುದನ್ನು ಧರಿಸಿದ. ಮೊಘಲ್ ಬಾದಷಹನ ಅಧಿಕಾರದಿಂದ ಮುಕ್ತನಾಗಿ, ತಾನು ಸ್ವತಂತ್ರನೆಂದು ಸಾರಿಕೊಂಡನು".[೩]

"ಜೇಮ್ಸ್ (ಟಿಪ್ಪುವಿನ ಸೆರೆಯಲ್ಲಿದ್ದವ) ಇಂಗ್ಲೇಡಿನವನು ಅವನನ್ನು ಫಿರಂಗಿ ದಳಕ್ಕೆ ಸೇರಿಸಲಾಯಿತು. ಟಿಪ್ಪು ಕಡೆಯವರು ಯುದ್ದದಲ್ಲಿ ನಿರತನಾದ ಅವನ ಶಿಶ್ನಚ್ಛೇಧ ಮಾಡಿ, ಹಲವರ ಯುರೋಪಿನ್ನವರ ಜೊತೆ ಇವನನ್ನು ಮತಾಂತರ ಮಾಡಲಾಯಿತು. ಕ್ರಿ.ಶ.೧೭೮೪ರಲ್ಲಿ ೪೦.೦೦೦ ಸಾವಿರ ಕ್ರಿ.ಶ್ಚಿಯನ್ ಗಂಡಸರು-ಹೆಂಗಸರನ್ನು ಮಹಮ್ಮದೀಯ ಮತಕ್ಕೆ ಸೇರಿಸಲಾಯಿತು. ಮತಾಂತರ ಪ್ರತಿಭಟಿಸಿದವರನ್ನು ಕೊಲ್ಲಲಾಯಿತು. ಒಬ್ಬನ ಮೂಗು, ಕಿವಿ ಕತ್ತರಿಸಿ ಕತ್ತೆಯ ಮೇಲೆ ಹಿಮ್ಮುಖವಾಗಿ ಕೂರಿಸಿ, ಶ್ರೀರಂಗಪಟ್ಟಣದಲ್ಲಿ ಮೆರವಣಿಗೆ ಮಾಡಲಾಯಿತು. ಹಿಂದೂಗಳನ್ನು ಹಿಂಸಿಸುವುದು, ಅವರ ದೇವಾಲಯಗಳನ್ನು ಧ್ವಂಸ ಮಾಡುವುದು ಅವನಿಗೆ ಪ್ರಿಯವಾದ ಕೆಲಸವಾಗಿತ್ತು. ದೇವರುಗಳ ಮುಂದೆ, ಗೋವುಗಳನ್ನು ಕಡಿಯುತ್ತಿದ್ದ, ಹಿಂದೂಗಳನ್ನು ಕಂಡರೆ ದ್ವೇಷಿಸುತ್ತಿದ್ದ.

ಟಿಪ್ಪು ಕಡೆಯವರು ಕೆಲವು ವರ್ತಕರನ್ನು ಬೆಳಗ್ಗೆ-ಸಂಜೆತನಕ ನೆಲದಲ್ಲಿ ಮಲಗಿಸಿ. ಕೈ-ಕಾಲುಗಳಿಗೆ ಗೂಟ ಹೊಡೆದು, ಒಂದೇ ಸಮನೆ ಚೂಪಾದ ದಬ್ಬಳಗಳಿಂದ ಚುಚ್ಚುತ್ತಿದ್ದರು. ಟಿಪ್ಪು ಮಲಬಾರ್ ಪ್ರದೇಶದ ೩೦.೦೦೦ ಜನರನ್ನು ಬಲಾತ್ಕಾರದಿಂದ ಮತಾಂತರಗೊಳಿಸಿದ. ಒಂಬತ್ತು ಹುಲಿ ಬೋನುಗಳನ್ನು ಇರಿಸಿ, ಹಲವರನ್ನು ಆ ಬೋನುಗಳಿಗೆ ದೂಡಿ. ಹುಲಿಗಳಿಗೆ ಆಹಾರ ಒದಗಿಸುತ್ತಿದ್ದ. ಹಲವರ ಮೂಗು-ಕಿವಿ ಕತ್ತರಿಸಿ, ಬಜಾರಿನಲ್ಲಿ ಪ್ರದರ್ಶಿಸುತ್ತಿದ್ದ."[೪]

೬.೧೩ ಟಿಪ್ಪುವಿನ ಮತಾಂತರಕ್ಕೆ ಪ್ರಮುಖ ಕಾರಣಗಳು

ಟಿಪ್ಪು ಸುಲ್ತಾನನು ರಾಷ್ಟ್ರೀಯ ಇತಿಹಾಸಕಾರರ ತೀವ್ರ ಟೀಕೆಗೆ ಗುರಿಯಾಗಿರುವುದು ಆತನು ಮಲಬಾರ್, ಮಂಗಳೂರು ಮತ್ತು ಕೊಡಗುಗಳಲ್ಲಿ ನಡೆಸಿದ ಮತಾಂತರ ಕಾರ್ಯಾಚರಣೆಗಾಗಿ. ಕ್ರಿ.ಶ.೧೭೮೪ರಲ್ಲಿ ಮಂಗಳೂರನ್ನು ಎರಡನೇ ಬಾರಿಗೆ ವಶಪಡಿಸಿಕೊಂಡ

ನಂತರ, ಮಂಗಳೂರಿನಲ್ಲಿ ವಾಸಿಸಿಕೊಂಡಿದ್ದ ಸುಮಾರು ೩೦ ಸಾವಿರ ಕ್ರೈಸ್ತರನ್ನು ಬಂಧಿಸಿ ಮೈಸೂರಿಗೆ ಕಳುಹಿಸಿದ. ಏಕೆಂದರೆ ಆತನೇ ಹೇಳುವಂತೆ, ಈ ಕ್ರೈಸ್ತರು ಪಶ್ಚಿಮ ಕರಾವಳಿಯುದ್ಧಕ್ಕೂ ಹರಡಿದ್ದ, ಮಂಗಳೂರು ಮತ್ತು ನೆರೆಯ ಊರುಗಳಲ್ಲಿದ್ದ ಮುಸ್ಲಿಂರಿಗೆ ತಮ್ಮ ಮತವನ್ನು ನಿರ್ಭೀತಿಯಿಂದ ಅನುಸರಿಸಿಕೊಂಡು ಬರಲು ಬಿಡುತ್ತಿರಲಿಲ್ಲ. ಇದೇ ಸಮಯದಲ್ಲಿ ಮಂಗಳೂರಿನಲ್ಲಿ ಉಳಿದಿದ್ದ ಹಿಂದೂಗಳನ್ನು ಇಸ್ಲಾಂ ಮತಕ್ಕೆ ಮತಾಂತರಿಸಲಾಯಿತು.

೬.೧೩ ಮತಾಂತರ ಉದ್ದೇಶಗಳು

ಟಿಪ್ಪು ಮಲಬಾರ್, ಕೊಡಗು ಮತ್ತು ಮಂಗಳೂರಿನಲ್ಲಿ ನಡೆಸಿದ ಮತಾಂತರದ ಉದ್ದೇಶಗಳನ್ನು ಈ ಕೆಳಕಂಡಂತೆ ಗುರ್ತಿಸಬಹುದು.

೧. ತನ್ನ ಎದುರಾಳಿಗಳನ್ನು ಮತಾಂತರಗೊಳಿಸುವ ಮೂಲಕ ಶಿಕ್ಷಿಸುವುದಕ್ಕೆ
೨. ತನ್ನ ಮತಕ್ಕೆ ಸೇರಿಸುವುದರಿಂದ, ಆ ಜನರ ವಿಧೇಯತೆ, ಸಹಕಾರ ಪಡೆಯಬಹುದೆಂದು.
೩. ತನ್ನ ಮತಕ್ಕೆ ಸೇರಿಸುವ ಮೂಲಕ ತನ್ನ ಮತದ ಅನುಯಾಯಿಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ.

ಟಿಪ್ಪು ತನ್ನ ಉಳಿವಿಗಾಗಿ, ತನ್ನ ರಾಜ್ಯದ ವಿಸ್ತರಣೆ ಮತ್ತು ಬ್ರಿಟೀಷರನ್ನು ಭಾರತದಿಂದ ಓಡಿಸುವ ಸಲುವಾಗಿ, ರಾಜಕೀಯ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ಮತಾಂತರ ಮಾಡಿರಬಹುದು.

೬.೧೩ ಟಿಪ್ಪು ವಿ..ವಿ.ಗೆ.ಒತ್ತಾಯ

ಸಂವಿಧಾನದ ೧೫(ಅ),೧೬(ಅ) ಕಲಂಗಳ ಅನ್ವಯ ಸಂಸತ್ತಿನ ಕಾಯ್ದೆಯೊಂದರ ಮೂಲಕ ಟಿಪ್ಪು ವಿಶ್ವವಿದ್ಯಾಲಯವನ್ನು ಶ್ರೀ ರಂಗಪಟ್ಟಣದಲ್ಲಿ ಸ್ಥಾಪಿಸುವಂತೆ ಪ್ರೊ. ಸುಖದೇವ್ ಥೋರಟ್ ಸಮಿತಿಯು ತನ್ನ ಶಿಫಾರಸ್ಸಿನಲ್ಲಿ ತಿಳಿಸಿದೆ.

ಅಲ್ಪಸಂಖ್ಯಾತರ ಶಿಕ್ಷಣಕ್ಕೆ ಒತ್ತು ನೀಡಲು, ಅಲ್ಪಸಂಖ್ಯಾತ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅವಕಾಶ ಒದಗಿಸಲು ಟಿಪ್ಪು ವಿಶ್ವವಿದ್ಯಾಲಯ ಸ್ಥಾಪಿಸಲು ಸರ್ದಾರ್ ಅಹಮದ್ ಖುರೇಶಿ, ಸ್ವಾಮಿ ವಿವೇಕಾನಂದ ವಿಚಾರ ವೇದಿಕೆಯ ಸಂಚಾಲಕರಾದ ರವಿಚಂದ್ರರವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಅಡಿ ಟಿಪ್ಪಣಿ:

೧. ಶ್ರೀನಿವಾಸಮೂರ್ತಿ, ಎಸ್.ಎಲ್ ಮತ್ತು ವಸಂತ ಶ್ರೀ, ಜಂಗ್ ನಾಮಾ, ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ (ರಿ), ಮಾಸ್ತಿ ಮನೆ, ಬೆಂಗಳೂರು-೨೦೧೧. ಪು.ಸಂ.೬೩

೨. ನರಿಕೇರಿಯಂಡ ಚೆಣ್ಣಪ್ಪ, ಪಟ್ಟೋಲೆ ಪಳಮೆ ,ಪ್ರಸರಾಂಗ, ಮೈಸೂರು- ೧೯೭೫. ಪು.ಸಂ.೪೩

೩. ಕೃಷ್ಣಯ್ಯ ಡಿ.ಎನ್, ಕೊಡಗಿನ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು- ೧೯೭೪, ಪು.ಸಂ.೧೫೩

೪. ನಾಗೇಗೌಡ, ಹೆಚ್.ಎಲ್ ಟಿಪ್ಪುವಿನ ಖೈದಿಗಳು (ಸಂಪುಟ-೮), ಐ.ಬಿ.ಎಚ್.ಪ್ರಕಾಶನ, ಬೆಂಗಳೂರು- ೨೦೦೮, ಪು.ಸಂಖ್ಯೆ-೧೧೩.

ಅಧ್ಯಾಯ – ೨

ಟಿಪ್ಪು ಕುರಿತು ವಿದ್ವಾಂಸರ ದೃಷ್ಟಿಕೋನ ಹಾಗೂ ಜನಪದರ ಅಭಿಪ್ರಾಯಗಳು

ಅಧ್ಯಾಯ – ೭

ಟಿಪ್ಪು ಕುರಿತು ವಿದ್ವಾಂಸರ ದೃಷ್ಟಿಕೋನ ಹಾಗೂ ಜನಪದರ ಅಭಿಪ್ರಾಯಗಳು

೭.೧ ಹದಿನೆಂಟನೇ ಶತಮಾನದ ಭಾರತದ ಸ್ಥಿತಿಗತಿ

ಭಾರತದ ಇತಿಹಾಸದಲ್ಲಿ ೧೮ನೆಯ ಶತಮಾನ ಒಂದು ಸಂಕ್ರಮಣದ ಕಾಲ. ಇದು ಮಧ್ಯಯುಗ ಹಾಗೂ ಆಧುನಿಕ ಯಗಕ್ಕೆ ಸಂಬಂಧವನ್ನು ಕಲ್ಪಿಸುವ ಸೇತುವೆ ಎನ್ನಬಹುದು. ಈ ಶತಮಾನದಲ್ಲಿ ಉಂಟಾದ ರಾಜಕೀಯ ಸಂಕ್ಷೋಭೆ ಇಡೀ ಭಾರತವನ್ನು ಒಂದು ಕಂಪನಕ್ಕೆ ಒಳಗು ಮಾಡಿತು. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಪಾರ ಬದಲಾವಣೆಗಳು ಕಂಡು ಬಂದವು. ಇತ್ತ ಮರಾಠರ ಉಪಟಳದಿಂದ ದಿಲ್ಲಿಯ ಮೊಘಲ್ ಸಾಮ್ರಾಜ್ಯ ತತ್ತರಿಸಿ ಹೋಯಿತು. ಆದರೂ ಅಧಿಕಾರದ ಶಿಖರಕ್ಕೇರಿದ ಮರಾಠರು ಕೂಡ ಮುಂದುವರೆಯಲು ಸಾಧ್ಯವಾಗಲಿಲ್ಲ. ವಿದೇಶಿಯರ ಪ್ರಚಂಡ ಅಕ್ರಮಣಕ್ಕೆ ತುತ್ತಾಗಿ ಅವರು ನಿಸ್ತೇಜರಾದರು. ಆ ವಿದೇಶಿ ಅಕ್ರಮಣಕಾರರು ಮೋಸ, ವಂಚನೆ ಇಬ್ಬಂದಿ ತನದಿಂದ ಬಹುಬೇಗ ಮೇಲೆ ಬಂದು ಬಿಟ್ಟರು. ಕೃಷಿ ಹಾಗೂ ನೇಕಾರಿಕೆಯ ಕ್ಷೇತ್ರಗಳಲ್ಲಿ ಸಾಂಪ್ರಾದಾಯಿಕ ಪದ್ಧತಿಗಳು ಹಿಂದೆ ಸರಿದು ಯಾಂತ್ರಿಕ ಸುಧಾರಣೆಗಳು ಕಾಣಿಸಿಕೊಂಡವು. ಯಂತ್ರ ಕೈಗಾರಿಕೆಗಳ ಪರಿಣಾಮವಾಗಿ ನಗರೀಕರಣ, ಬ್ಯಾಂಕಿಂಗ್ ವ್ಯವಸ್ಥೆ ಹಾಗೂ ಔದ್ಯೋಗಿಕರಣ ಇವು ಕೂಡ ಬಂಡವಾಳಕ್ಕೆ ದಾರಿ ಮಾಡಿಕೊಟ್ಟವು. ಸಾಮಾಜಿಕ ಕ್ಷೇತ್ರದಲ್ಲಿ ಹಳೆಯ ಪದ್ಧತಿಗಳು ತಲೆಕೆಳಗಾದವು. ಅದರೊಟ್ಟಿಗೆ ಆಧುನಿಕ ಭಾರತದ ಹೊಸ ಸಾಮಾಜಿಕ ವ್ಯವಸ್ಥೆಯೊಂದು ರೂಪು ತಳೆಯಿತು. ರಾಜಕೀಯ ರಂಗದಲ್ಲಿ ಮೊಘಲ್ ಬಾದಷಹರು ಸ್ಥಾಪಿಸಿದ್ದ ಊಳಗಮಾನ್ಯ ಪದ್ಧತಿ ಮನ್‌ಸಬ್ದಾರಿ ವ್ಯವಸ್ಥೆಯ ಬದಲಿಗೆ ಒಂದು ಕೇಂದ್ರೀಕೃತ ನಿರಂಕುಶ ಆಡಳಿತವು ಏರ್ಪಟ್ಟಿತು. ಯುರೋಪಿನ ರಾಷ್ಟ್ರಗಳತ್ತ ದೇಶದ ಸಂಪತ್ತು ಹರಿಯಲಾರಂಭಿಸಿತು. ಇನ್ನೂ ಹೇಳಬೇಕೆಂದರೆ ಅದು ಅವಕಾಶ ಮತ್ತು ಗೊಂದಲಗಳ ಶತಮಾನ. ದುರಾಸೆ ಪೀಡಿತರು, ಶಕ್ತರು ಆಗಿದ್ದವರಿಗೆ ಅದು ಅವಕಾಶಗಳನ್ನು ತಂದುಕೊಟ್ಟ ಅವಧಿ. ಲಕ್ಷಾಂತರ ಜನ ಸಮುದಾಯಕ್ಕೆ ಗೊಂದಲದ ಅನಾಯಕತ್ವದ ಅವಧಿ. ಎಲ್ಲಾ ಶೋಷಣೆಗಳಿಗೂ ಅಸಹಾಯಕರಾಗಿ ಬಲಿಯಾದವರು ಶ್ರೀಸಾಮಾನ್ಯರೆ. (ಪ್ರೋ ಬಿ.ಶೇಕ್ ಅಲಿ. ಕರ್ನಾಟಕ ಚರಿತ್ರೆ, ಸಂಪುಟ ೫. ಪುಟ ೧) ೧೮ನೆಯ ಶತಮಾನದ ಕರ್ನಾಟಕವು ಕೂಡ ಮೇಲೆ ಹೇಳಿದ ಎಲ್ಲಾ ಲಕ್ಷಣಗಳಿಂದ ತುಂಬಿಹೋಗಿತ್ತು. ರಾಜಕಾರಣದಲ್ಲಿ ಅಧಿಕಾರವನ್ನು ಹಂಚಿಕೊಂಡು ಆಳುವ ಹೊಸತೊಂದು ವಿಧಾನ ಜಾರಿಗೆ ಬಂದಿತು. ನಾಮಕಾವಸ್ಥೆಗಾಗಿ ಅಧಿಕಾರ ಚಲಾಯಿಸುವವರ ವಶದಲ್ಲಿದ್ದರೂ, ವಾಸ್ತವವಾಗಿ ಅದನ್ನು ಅನುಭವಿಸುತ್ತಿದ್ದ ವ್ಯಕ್ತಿಯೇ

ಬೇರೆ. ಈ ಬಗೆಯ ಹೊಸ ವ್ಯವಸ್ಥೆಯೊಂದು ಜಾರಿಗೆ ಬಂದಿತು. ಮೈಸೂರು ಒಡೆಯರ ರಾಜ ಮನೆತನದ ಹೆಸರನ್ನು ಹಿಂದಿಕ್ಕಿ, ಅವರ ಮಂತ್ರಿಗಳು ಮತ್ತು ದಳವಾಯಿಗಳು ಅಧಿಕಾರವನ್ನು ಕಸಿದುಕೊಳ್ಳತೊಡಗಿದರು. ಹೀಗೆ ಅಧಿಕಾರವನ್ನು ಕಬಳಿಸಿಕೊಂಡು ಆಳುವ ಒಂದು ವಿಧಾನ ೧೮ನೆಯ ಶತಮಾನದಲ್ಲಿ ಎಲ್ಲಾ ಕಡೆಗೆ ರೂಪುಗೊಂಡಿತು. ಮೊಘಲ್ ಬಾದಷಹರೂ, ಮರಾಠ ಸರದಾರರು ಕೂಡ ಈ ವ್ಯವಸ್ಥೆಗೆ ಹೊರತಾಗಲಿಲ್ಲ. ವಿದೇಶಿ ಆಕ್ರಮಣಕಾರರಾದ ಫ್ರೆಂಚ್ ಮತ್ತು ಇಂಗ್ಲೀಷರೂ ಸಹ ಈ ವ್ಯವಸ್ಥೆಯ ದುರ್ಲಾಭವನ್ನು ಪಡೆದರು. ಈ ಹೊಸ ತಾತ್ವಿಕತೆಯ ಮಹತ್ವವನ್ನು ತೋರಿಸಲು ಒಂದೆರಡು ನಿದರ್ಶನಗಳನ್ನು ಹೇಳುವುದು ಸೂಕ್ತ. ಮೊದಲನೆಯದಾಗಿ ಶಾ-ಅಲಂ ದೆಹಲಿಯ ಚಕ್ರವರ್ತಿಯಾಗಿದ್ದು ಮರಾಠ ಸಾಮ್ರಾಜ್ಯದ ಮುಖ್ಯಸ್ಥನಾಗಿದ್ದ ಸಿಂಧ್ಯಾನ ಕೈವಶದಲ್ಲಿದ್ದನು. ಆದರೆ ಸಿಂಧ್ಯಾನು ಕೂಡ ಪೇಶ್ವೆಯ ಕೈಕೆಳಗಿನ ಅಧಿಕಾರಿಯಾಗಿದ್ದನು. ಮೊಘಲ್ ಆಸ್ಥಾನಕ್ಕೆ ಪರಮ ಪ್ರಭುತ್ವದ ಗೌರವಾದರಗಳು ಸಲ್ಲುತ್ತಿದ್ದವು. ಪುಣೆಯಲ್ಲಿ ಶಿವಾಜಿ ವಂಶದ ರಾಜರು ಅರಮನೆಗಳಲ್ಲಿದ್ದುಕೊಂಡು ವೇತನ ಪಡೆಯುವ ಪೆನ್ಷನ್‌ದಾರರಂತಿದ್ದರು. ಕ್ರಮೇಣ ರಾಜರಿಂದ ಅಧಿಕಾರವನ್ನು ಕಸಿದುಕೊಂಡು, ಪೇಶ್ವೆಗಳನ್ನು ಅವರ ದಳವಾಯಿಗಳೇ ಮೂಲೆಗೊತ್ತಿ ಸರ್ವಶಕ್ತರಾಗಿಬಿಟ್ಟರು. ಅಧಿಕಾರವು ಕೈಯಿಂದ-ಕೈಗೆ ಜಾರುತ್ತ, ಕಡೆಯಲ್ಲಿ ಸಮರ್ಥನಾದ ವ್ಯಕ್ತಿ ಯಾರೋ ಅವನ ಕೈಯಲ್ಲಿ ಕೇಂದ್ರೀಕೃತವಾಗುತ್ತಿತ್ತು.

ಈ ತತ್ವ ಮೈಸೂರು ರಾಜ್ಯದಲ್ಲಿಯೂ ಸಹ ಕಂಡುಬಂದಿತು. ಮೈಸೂರು ಒಡೆಯರ ವಂಶದ ರಾಜರು ದುರ್ಬಲರಾದಾಗ ಅಧಿಕಾರವನ್ನು ನಂಜರಾಜಯ್ಯ ಮತ್ತು ದೇವರಾಜಯ್ಯ ಎಂಬ ದಳವಾಯಿಗಳು ಕಸಿದುಕೊಂಡಿದ್ದರು. ಆದರೆ ಅವರೂ ದುರ್ಬಲರಾಗಿ ಮಾರ್ಪಾಟ್ಟಾಗ, ಅದು ಒಬ್ಬ ಸಿಪಾಯಿಯಾಗಿದ್ದ ಹೈದರಾಲಿಯ ಕೈಗೆ ಹರಿದುಬಂದಿತು.

೧೮ನೇ ಶತಮಾನವು ಹೊಸತೊಂದು ರಾಜಕೀಯ ನೀತಿ ಶಾಸ್ತ್ರವನ್ನೇ ಹುಟ್ಟು ಹಾಕಿದ ಸಂಕ್ರಮಣ ಕಾಲ ಎನ್ನಬಹುದು. ಮಹಾತ್ವಾಕಾಂಕ್ಷಿಯಾದ ವ್ಯಕ್ತಿಗೆ ಅಧಿಕಾರವು ಬಹು ಶೀಘ್ರವಾಗಿ ಒಲಿದುಬರುತ್ತಿತ್ತು. ಒಳಜಗಳಗಳಿಂದಲೂ, ಅನೈತಿಕ ರಾಜಕಾರಣದಿಂದಲೂ ದೇಶ ಅಲ್ಲೋಲ-ಕಲ್ಲೋಲವಾಗುತ್ತಿದ್ದ ಕಾಲವದು. ವಿಪರ್ಯಾಸವೆಂದರೆ ರಾಜ್ಯಾಧಿಕಾರ ಪೇಶ್ವೆ, ದಳವಾಯಿ, ಮಂತ್ರಿಗಳ ಕೈವಶದಲ್ಲಿದ್ದರೂ, ಆತ ತನ್ನ ಅಧಿಕಾರವನ್ನು ರಾಜಮುದ್ರೆಯ ಅಂಕಿತದಲ್ಲಿಯೇ ನಿರ್ವಹಿಸುತ್ತಿದ್ದನು. ಈ ವ್ಯಕ್ತಿ ಅರಸು ಮನೆತನಕ್ಕೆ ಗೌರವ ಸಲ್ಲಿಸುತ್ತಾ ರಾಜ ನಿರ್ಮಾಪಕನಾಗಿರುತ್ತಿದ್ದನೇ ಹೊರತು ತಾನೇ ರಾಜನಾಗುತ್ತಿರಲಿಲ್ಲ. ಅವನತಿ ಹೊಂದುತ್ತಿದ್ದ ದುರ್ಬಲ ರಾಜ ವಂಶಜರು ಸಿಂಹಾಸನದ ಹಕ್ಕುದಾರರಾಗಿರುತ್ತಿದ್ದರೂ ಅವರು ತಮ್ಮ ಸರ್ಕಾರದ ಮೇಲೆ ಯಾವ ನಿಯಂತ್ರಣವನ್ನೂ ಹೊಂದದವರಾಗಿದ್ದರು. ಒಟ್ಟಾರೆ ರಾಜನು ತನ್ನ

ಸಿಂಹಾಸನಕ್ಕೆ ಮಾತ್ರ ತೃಪ್ತಿಪಟ್ಟರೆ ಆಳುತ್ತಿದ್ದನು ಸರ್ವಾಧಿಕಾರವೇ ಸಾಕೆಂದು ತೃಪ್ತನಾಗುತ್ತಿದ್ದನು. ಈ ತತ್ವಕ್ಕೆ ಯಾವ ಜಾತಿ, ಜನಾಂಗ ಅಥವಾ ದೇಶ ಪ್ರೇಮ ಯಾವುದೂ ತಡೆಯಾಗುತ್ತಿರಲಿಲ್ಲ. ಇಂಥ ಒಂದು ಸಂದರ್ಭದಲ್ಲಿಯೇ ಹೈದರಾಲಿ, ಡೂಪ್ಲೇ, ರಾಬರ್ಟ್ ಕ್ಲೈವ್ ಮುಂತಾದವರು ಅಧಿಕಾರ ಹಿಡಿದರು.

೧೮ನೇ ಶತಮಾನದ ರಾಜಕೀಯ ಪೈಪೋಟಿ ಹಲವು ಹತ್ತು ಮುಖಗಳಿಂದ ವಿಶಿಷ್ಟವಾಗಿ ಕಂಡುಬರುತ್ತದೆ. ಮರಾಠ ಸಾಮ್ರಾಜ್ಯದ ವಿಸ್ತರಣೆಯೊಂದಿಗೆ ಹುಟ್ಟಿಕೊಂಡ ಆಂತರಿಕ ಭಿನ್ನಾಭಿಪ್ರಾಯಗಳು, ಫ್ರೆಂಚ್ ಹಾಗೂ ಆಂಗ್ಲ ವಸಾಹತುಕಾರರ ತಂತ್ರ-ಪ್ರತಿತಂತ್ರಗಳು, ಹೈದರಾಬಾದಿನ ನಿಜಾಮ ಹಾಗೂ ಕರ್ನಾಟಕ (ಆರ್ಕಾಟ್)ದ ನವಾಬ ಮೊದಲಾದವರ ಅತಿಯಾಸೆ ಆಕಾಂಕ್ಷೆಗಳು ಸೈನ್ಯ ಶಕ್ತಿಯಲ್ಲಿ ದುರ್ಬಲರಾಗಿದ್ದರೂ ರಾಜಕೀಯ ಚದುರಂಗದಾಟದಲ್ಲಿ ನಿಪುಣರಾಗಿದ್ದರು. ಇಂಥ ಸಂದರ್ಭದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ತಮ್ಮ ಸೈನ್ಯ ಶಕ್ತಿಯನ್ನು ಕೂಡಿಸಿಕೊಂಡು, ವಿದೇಶಿ ಆಕ್ರಮಣಕಾರರನ್ನು ಎದುರಿಸಿದ್ದು ಭಾರತೀಯ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲು, ಈ ಹಿನ್ನೆಲೆಯಲ್ಲಿ ೧೮ನೇ ಶತಮಾನವು ಕರ್ನಾಟಕದ ಇತಿಹಾಸದಲ್ಲಿ ವಿಶಿಷ್ಟವಾಗಿ ಕಂಡು ಬರುತ್ತದೆ.

ಈ ಕಾಲ ಘಟ್ಟದಲ್ಲಿ ಅಖಂಡ ಭರತಖಂಡವು ಕದನ, ಕೋಲಾಹಲಗಳಿಂದಲೂ, ಯುದ್ಧ ಸಂಘರ್ಷಗಳಿಂದಲೂ ಕುದಿಯುತ್ತಿತ್ತು. ಆ ಕಾಲದ ರಾಜಕೀಯಕ್ಕೆ ಮೂಲ ಆಧಾರವೆಂದರೆ ಯುದ್ಧ ವಿಜಯಗಳಿಂದ ದೊರಕುತ್ತಿದ್ದ ಸುಲಿಗೆಗಳು. ಇದರಲ್ಲಿ ಇಂಗ್ಲೀಷರು, ಫ್ರೆಂಚರು, ಮರಾಠರು, ನಿಜಾಮ, ಹೈದರಾಲಿ ಮುಂತಾಗಿ ಎಂದು ಭಿನ್ನ-ಭೇದವಿಲ್ಲ. ಇವರೆಲ್ಲರ ವರಮಾನದ ಮೂಲವೆಂದರೆ ಲೂಟಿ, ಅಕ್ರಮಣಗಳೇ ಆಗಿದ್ದವು. ಶಾಂತಿಯಿಂದ ತಮ್ಮ ಪಾಡಿಗೆ ತಾವು ಬದುಕುವ ಸಾಮಾನ್ಯರಿಗೂ ಆಗ ಉಳಿಗಾಲವಿರಲಿಲ್ಲ. ಅಧಿಕಾರಕ್ಕಾಗಿ ಕಿತ್ತಾಟ ಹಾಗೂ ಕೊಳ್ಳೆ ಸುಲಿಗೆಗಳ ಸಂಕ್ಷೋಭಿತ ಕಾಲವದು. ಯುದ್ಧ ಮತ್ತು ದಂಗೆಗಳು ದಿನ ನಿತ್ಯದ ವ್ಯಾಪಾರವಾಗಿತ್ತು. ಇಡೀ ಶತಮಾನ ಬೇಗುದಿಯಲ್ಲಿ ಸಾಗುತ್ತಿತ್ತು.

ಈ ಬೇಗುದಿಯ ಕಿಡಿಗಳು ೧೭ನೇ ಶತಮಾನದಲ್ಲಿ ಆರಂಭದಲ್ಲಿಯೇ ಕಂಡು ಬಂದಿದ್ದವು. ಆಗ ಮರಾಠರಿಗೂ, ಮೊಘಲರಿಗೂ ಭೀಕರ ಕಾಳಗಗಳು ಜರುಗಿದ್ದವು. ಮರಾಠರ ಅಭ್ಯುದಯ ಈ ಶತಮಾನದ ಒಂದು ರೋಮಾಂಚನ ಅಧ್ಯಾಯ. ಸಾಮ್ರಾಟ ಶಿವಾಜಿಯ ನಂತರ ಬಂದ ಪೇಶ್ವೆಗಳು ಅದ್ವಿತೀಯ ಬುದ್ಧಿವಂತರಾಗಿದ್ದರು. ಕ್ರಿ.ಶ.೧೭೬೧ರ ಪಾಣಿಪತ್ ಕದನದ ವೇಳೆಗೆ ಅವರ ಸಾಮ್ರಾಜ್ಯವು ಉತ್ತರದ ಬಹುಭಾಗವನ್ನು ಆಕ್ರಮಿಸಿಕೊಂಡಿತ್ತು. ಆದರೆ ಈ ಕದನದಲ್ಲಿ ಸೋತದ್ದು ಅವರ ಆಂತರಿಕ ಒಳಜಗಳಗಳು ಹಾಗೂ ಮಹಾಸಮರ್ಥನಾದ

ಪೇಶ್ವೆ ಸದಾಶಿವರಾಯನು ಅಕಾಲ ಮೃತ್ಯುವಿಗೆ ತುತ್ತಾದದ್ದು ಇತ್ಯಾದಿ ಎಲ್ಲವೂ ಮರಾಠರ ಹಿನ್ನೆಡೆಗೆ ಕಾರಣವಾಗಿ ಬಿಟ್ಟವು.

ಮರಾಠಿಗರ ಯುದ್ಧವೆಂದರೆ ಲೂಟಿ. ಅವರಿಗೆ ಯುದ್ಧಗಳೇ ಆದಾಯದ ಮೂಲಗಳಾಗಿದ್ದವು. ಯಾಕೆಂದರೆ ಮಹಾರಾಷ್ಟ್ರದ ವಿಸ್ತಾರವಾದ ಭೂ ಪ್ರದೇಶವು ದಖನ್ ಪ್ರಸ್ಥಭೂಮಿಯ ಕಲ್ಲುಬಂಡೆಗಳಿಂದ ತುಂಬಿರುವ ಬಂಜರು ಭೂಮಿ. ಅವರ ವರಮಾನವೇನಿದ್ದರೂ ಸಮೃದ್ಧ ಪ್ರದೇಶಗಳಿಂದ ಬಂದ ಕೊಳ್ಳೆಯನ್ನೇ ಅವಲಂಬಿಸಿದ್ದಿತು. ದಕ್ಷಿಣದಲ್ಲಿ ತಂಜಾವೂರು. ಉತ್ತರದಲ್ಲಿ ದೆಹಲಿ, ಪೂರ್ವದಲ್ಲಿ ಬಂಗಾಳ, ಪಶ್ಚಿಮದಲ್ಲಿ ರಜಪುತಾಣ ಅವರ ಸಾಮ್ರಾಜ್ಯದ ಗಡಿ ರೇಖೆಗಳಾಗಿದ್ದವು. ಆದರೆ ಶಿವಾಜಿಯ ನಂತರ ಅಷ್ಟೇ ತ್ವರಿತವಾಗಿ ಅವು ಕೈಬಿಟ್ಟು ಹೋಗಲಾರಂಭಿಸಿದವು. ಆದ್ದರಿಂದ ಈ ಹಿಂದೂ ಬಾದಶಾಹಿ ಬಹುಬೇಗ ಅವನತಿಗೀಡಾಯಿತು. ಕೇಂದ್ರಾಡಳಿತ ಅಳಿದು ಹೋಗಿ ಗ್ವಾಲಿಯರ್‌ನಲ್ಲಿ ಸಿಂಧ್ಯಾ, ಇಂದೂರಿನಲ್ಲಿ ಹೋಳ್ಕರ್, ನಾಗಪುರದಲ್ಲಿ ಬೌನ್ಸ್ಲೆ, ಬರೋಡದಲ್ಲಿ ಗಾಯಕ್‌ವಾಡ ಮತ್ತು ಪುಣೆಯಲ್ಲಿ ನಾನಾ ಪಡ್ನವೀಸ್ ಹೀಗೆ ಮರಾಠ ಸಾಮ್ರಾಜ್ಯ ಹೋಳು ಹೋಳಾಗಿ ಪಂಚಪಾಡಾಯಿತು. ಹೀಗಿರುತ್ತಾ ಕರ್ನಾಟಕದ ಸಮೃದ್ಧಿಯ ಮೇಲೆ ಮರಾಠಿಗರ ಕಣ್ಣು ಮೊದಲಿನಿಂದಲೂ ಇತ್ತು. ಮೈಸೂರು ಸಂಸ್ಥಾನವನ್ನು ಅವರು ಮಹಾರಾಷ್ಟ್ರದ ಕಣಜವೆಂದೇ ಭಾವಿಸಿದ್ದರು. ಹಿಂದೆ ಅವರು ಬಂದಾಗಲೆಲ್ಲ ಮೈಸೂರಿನ ದುರ್ಬಲ ರಾಜರು ಅವರು ಕೇಳಿದಷ್ಟು ಹಣ ಕೊಟ್ಟು ಹಿಂದಕ್ಕೆ ಕಳುಹಿಸುತ್ತಿದ್ದರು. ಆದರಿಂದ ರುಚಿ ಕಂಡ ಅವರು ವರ್ಷಕ್ಕೊಮ್ಮೆ ಆಕ್ರಮಣ ನಡೆಸದೇ ಬಿಡುತ್ತಿರಲಿಲ್ಲ. ಹೀಗಾಗಿ ಅವರ ಸುಲಿಗೆ ಲೂಟಿಗಳಿಗೆ ಕೊನೆಯೇ ಇರುತ್ತಿರಲಿಲ್ಲ. ಕಡೆಗೆ ಶೃಂಗೇರಿ ಮಠದ ಅಪಾರ ಸಂಪತ್ತನ್ನು ಕೊಳ್ಳೆ ಹೊಡೆದರು. ಪಾಣಿಪತ್ ಕದನದ ತರುವಾಯ ಅವರ ಗಮನವೆಲ್ಲ ದಕ್ಷಿಣ ಭಾರತದತ್ತ ತಿರುಗಿತು. ಆದರೆ ಅವರ ಆರ್ಥಿಕ ಹಾಗೂ ರಾಜಕೀಯ ದುರ್ಲಾಭಕ್ಕೆ ಹೈದರಾಲಿಯು ಯಶಸ್ವಿ ಕಡಿವಾಣ ಹಾಕಿಬಿಟ್ಟನು. ಆದ್ದರಿಂದ ಮರಾಠಿಗರು ಅವನನ್ನು ಬಗ್ಗು ಬಡಿಯಲು ಸಮಯ ಕಾಯತ್ತಿದ್ದರು.

ಟಿಪ್ಪು ಸುಲ್ತಾನನು ಅಧಿಕಾರಕ್ಕೆ ಬಂದ ಮೇಲೆ ಅವರು ಮತ್ತಷ್ಟು ಕಸಿವಿಸಿಗೊಂಡರು. ಟಿಪ್ಪು ಆಂಗ್ಲರೊಡನೆ ಏಕಾಂಗಿಯಾಗಿ ಕಾದಾಡಿ ಮಂಗಳೂರು ಒಪ್ಪಂದವನ್ನು ಮಾಡಿಕೊಂಡಿದ್ದನು. ಇದು ಕೇವಲ ನಾಚಿಕೆಗೇಡಿನ ಶಾಂತಿ ಸಂಧಾನವೆಂದು ವಾರ್ನ್ ಹೇಸ್ಟಿಂಗ್ಸ್ ಉದ್ವಿಗ್ನನಾಗಿದ್ದನು. ನಿಜಾಮನೊಂದಿಗೆ ಕೂಡಿಕೊಂಡು ಕ್ರಿ.ಶ.೧೭೮೭ರಲ್ಲಿ ಮರಾಠರ ಆಕ್ರಮಣವನ್ನೂ ತಡೆಗಟ್ಟಿದರು. ಈ ಎಲ್ಲಾ ಸಂಗತಿಗಳೂ ಮರಾಠಿಗರನ್ನು ರೊಚ್ಚಿಗೇಳಿಸಿದ್ದವು.

ಈ ತಂದೆ ಮಕ್ಕಳನ್ನು ಹತ್ತಿಕ್ಕುವ ಸಮಯವನ್ನೇ ಅವರು ಸಾಧಿಸುತ್ತಿದ್ದರು. ಒಟ್ಟಾರೆ ಮೈಸೂರು ಬಲಿಷ್ಠರಾಷ್ಟ್ರವಾಗಿ ಬೆಳೆಯುವುದು ಅವರ ಅಸಹನೆಗೆ ಕಾರಣವಾಯಿತು.

ಅಂತೂ ಮರಾಠಿಗರು ೧೮ನೆಯ ಶತಮಾನದಲ್ಲಿ ತಮಗೆ ಲಾಭದಾಯಕವೂ ಇತರರಿಗೆ ಹಾನಿಕಾರಕವೂ ಆದ ರಾಜಕಾರಣವನ್ನು ಮಾಡುತ್ತಾ ಬಂದರು. ಅವರ ಈ ಬಗೆಯ ದೇಶಿ ರಾಜರೊಂದಿಗಿನ ಅಸಹನೆ ಹಾಗೂ ಒಳಜಗಳಗಳು ಅವರನ್ನು ವಿದೇಶಿ ಆಕ್ರಮಣಕಾರರೊಂದಿಗೆ ಸಂಬಂಧವನ್ನು ಬೆಳೆಸಲು ಅನುವು ಮಾಡಿಕೊಟ್ಟವು. ಏಕೆಂದರೆ ಮೂರನೆಯ ಮೈಸೂರು ಯುದ್ಧದಲ್ಲಿ ಕೊನೆಯ ಪಕ್ಷ ಮರಾಠರು ಇಂಗ್ಲಿಷರು ನೆರವಿಗೆ ಬಾರದೆ ತೆಪ್ಪಗಿದ್ದರೂ ಸಹ ಟಿಪ್ಪೂವಿಗೆ ತನ್ನ ಅರ್ಧ ರಾಜ್ಯವನ್ನೂ, ಇಬ್ಬರು ಮಕ್ಕಳನ್ನೂ ಒತ್ತೆಯಿಡುವ ದುಸ್ಥಿತಿ ಒದಗಿ ಬರುತ್ತಿರಲಿಲ್ಲ. ಶ್ರೀರಂಗಪಟ್ಟಣದ ಪತನ (ಕ್ರಿ.ಶ.೧೭೯೯)ದ ನಂತರ ನಾನಾ ಫಡ್ನವೀಸ್ ಮುಂದಿನ ಬಲಿ ಪುಣೆ ಎಂದು ಉದ್ಗರಿಸಿದುದು ಔಚಿತ್ಯ ಪೂರ್ಣವಾಗಿತ್ತು. ಆದರೆ ಅಷ್ಟರಲ್ಲಿ ಕೈ ಮಿಂಚಿಹೋಗಿತ್ತು. ಆಮೇಲೆ ಬಹುಬೇಗ ಮರಾಠ ಸಾಮ್ರಾಜ್ಯವು ಬ್ರಿಟೀಷರ ಪದತಲದಲ್ಲಿ ಬಿದ್ದುಬಿಟ್ಟಿತ್ತು.

ಈ ಶತಮಾನದ ಮತ್ತೊಂದು ಶಕ್ತಿಯೆಂದರೆ ಹೈದರಾಬಾದಿನ ನಿಜಾಮ. ಕ್ರಿ.ಶ.೧೭೪೮ರಲ್ಲಿ ಅಸಫ್ ಝಾ-೧ ಮರಣ ಹೊಂದಿದಾಗ ಅಲ್ಲಿ ದಂಗೆಗಳು ಪ್ರಾರಂಭಗೊಂಡವು. ಆ ಕಾಲಕ್ಕೆ ಯೂರೋಪಿನ ವಾಣಿಜ್ಯೋದ್ಯಮ ಕಂಪನಿಗಳು ಇತ್ತ ಧಾವಿಸುತ್ತಿದ್ದವು. ಫ್ರೆಂಚರ ಡೂಪ್ಲೇ ಮತ್ತು ಇಂಗ್ಲೀಷರ ರಾಬರ್ಟ ಕ್ಲೈವ್ ಹೈದರಾಬಾದಿನ ರಾಜಕೀಯದಲ್ಲಿ ವಿಶೇಷ ಪಾತ್ರ ವಹಿಸಿದರು. ತನ್ನ ಸಹೋದರರೊಂದಿಗಿನ ರಾಜಕೀಯ ಮೇಲಾಟದಲ್ಲಿ ಗೆದ್ದ ನಿಜಾಮ್ ಅಲಿ ಖಾನ್ ಅಧಿಕಾರಕ್ಕೆ ಬರಲು ಈ ವಿದೇಶಿಯರೇ ಕಾರಣ. ಆದರೆ ರಾಜ್ಯಾಧಿಕಾರಕ್ಕೆ ಈ ನಿಜಾಮ ಅಸಂಗತ ಪಾತ್ರವಾಗಿದ್ದ. ಈತ ಗರ್ವ, ಸ್ವಾರ್ಥ, ದುರಾಸೆ ತುಂಬಿದ ವ್ಯಕ್ತಿ. ಪ್ಲಾಸಿ ಕದನದ ತರುವಾಯ ಭಾರತದ ರಾಜಕರಾಣದ ದಿಕ್ಕು-ದೆಸೆ ಸಂಪೂರ್ಣವಾಗಿರಲಿಲ್ಲ. ಮೋಸ, ಕುತಂತ್ರ, ಕುಯುಕ್ತಿಗಳಿಂದ ಅಧಿಕಾರಕ್ಕೆ ಬಂದಿದ್ದ ಈತನಿಗೆ ತಾನು ಕಳ್ಳ, ಪರರನ್ನು ನಂಬ ಎಂಬ ದುರ್ಗುಣ. ಮೊದಲಿಗೆ ಹೈದರನ ವಿರುದ್ಧ ಇಂಗ್ಲೀಷರನ್ನು ಕೂಡಿಕೊಂಡಿದ್ದನು. ಮತ್ತೆ ವಾರನ್ ಹೇಸ್ಟಿಂಗ್ಸ್‌ನು ಗುಂಟೂರು ಒತ್ತುವರಿಯನ್ನು ಕೈಬಿಡಲಾಗುವುದು ಎಂದ ಕೂಡಲೇ ದೇಶಿ ಮಿತ್ರಕೂಟವನ್ನು ತೊರೆದು ಹೊರಬಿದ್ದನು. ಮೂರು ಮತ್ತು ನಾಲ್ಕನೆಯ ಮೈಸೂರು ಯುದ್ಧಗಳಲ್ಲಿ ಇಂಗ್ಲೀಷರೊಂದಿಗೆ ಮೈತ್ರಿ ಬೆಳೆಸಿದನು. ಹೀಗೆ ಹೊತ್ತು ಬಂದತ್ತ ಛತ್ರಿ ಹಿಡಿಯುವುದು ನಿಜಾಮನ ಸ್ವಭಾವ. ವೆಲ್ಲೆಸ್ಲಿಯು ಜಾರಿಗೆ ತಂದ ಸಹಾಯಕ ಸೈನ್ಯ ಪದ್ಧತಿಗೆ ಮೊದಲು ಬಲಿ ಬಿದ್ದವನು ಇವನೇ. ಆತ್ಮ ಗೌರವಾಗಲೀ, ಸೂಕ್ಷ್ಮ

ಸಂವೇದನೆಯಾಗಲೀ ಎಳ್ಳಷ್ಟೂ ಇವನಲ್ಲಿ ಕಂಡುಬರುವುದಿಲ್ಲ. ವಿದೇಶಿಯರ ಪಾಲಾಗುತ್ತಿದ್ದ ಭಾರತದ ಬಗ್ಗೆ ಅವನು ಎಂದೂ ಮುಂದಾಲೋಚನೆ ಮಾಡಿದವನೇ ಅಲ್ಲ.

ಮರಾಠರು ಮತ್ತು ನಿಜಾಮನಲ್ಲದೆ ದಕ್ಷಿಣ ಇಂಡಿಯಾದ ಇತಿಹಾಸದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದವರು ಹೈದರಾಲಿ ಖಾನ್ ಮತ್ತು ಟಿಪ್ಪು ಸುಲ್ತಾನ್. ಇವರು ಮೊಘಲರ ಸಾಮ್ರಾಜ್ಯ ಅವನತಿಯ ಅಂಚಿನಲ್ಲಿದ್ದಾಗ ರಂಗದ ಮೇಲೆ ಕಾಣಿಸಿಕೊಂಡರು. ೧೮ನೆಯ ಶತಮಾನವೆಂದರೆ ಮೊಘಲರ, ಮರಾಠಿಗರ ಹಾಗೂ ಯುರೋಪಿಯನ್ನರ ಸಂಘರ್ಷದ ಕಾಲ. ಮೊಘಲರು ಕ್ಷೀಣಿಸುತ್ತಿದ್ದರೆ, ಮರಾಠರು ವೃದ್ಧಿಗೊಳ್ಳುತ್ತಿದ್ದರು. ಈ ಮಧ್ಯೆ ವಿದೇಶಿಯರು ಮೇಲೇರಲು ತವಕಿಸುತ್ತಿದ್ದರು. ಈ ಪರಿಸರವು ಮಹತ್ವಾಕಾಂಕ್ಷಿಯಾದ ವ್ಯಕ್ತಿಗೆ ಮೇಲೇರಲು ಸದಾವಕಾಶವಾಗಿತ್ತು. ಈಗಾಗಲೇ ಹೇಳಿರುವಂತೆ ಮರಾಠ ನಾಯಕರೂ, ಬಂಗಾಳದ ಅಲಿವರ್ದಿಖಾನ್ ಅವಧ್‌ನ ಶುಜಾ-ಉದ್-ದೌಲ, ಹೈದರಾಬಾದಿನ ನಿಜಾಮ, ಮೈಸೂರಿನ ಹೈದರ್ ಹಾಗೂ ಟಿಪ್ಪು ಹೀಗೆ ಮುಖ್ಯ ಪಾತ್ರದಾರಿಗಳಾದರು. ಇವರಲ್ಲಿ ಬ್ರಿಟೀಷರು ಎದುರಿಸಬೇಕಾಗಿ ಬಂದ ಬಹುದೊಡ್ಡ ಶಕ್ತಿಗಳೆಂದರೆ ಕೊನೆಯವರಾದ ಹೈದರ್ ಮತ್ತು ಟಿಪ್ಪು ಇಬ್ಬರನ್ನು ಮಾತ್ರ.

ಈ ಇಬ್ಬರೂ ತಂದೆ ಮಕ್ಕಳ ಆಳ್ವಿಕೆಗಳು ಯುದ್ಧಗಳಿಂದಲೇ ಆರಂಭವಾಗಿ-ಯುದ್ಧಗಳಿಂದಲೇ ಮುಕ್ತಾಯವಾದವು. ಕ್ರಿ.ಶ.೧೭೬೭ರಲ್ಲಿ ಹೈದರ್ ಮತ್ತು ಇಂಗ್ಲೀಷರೊಂದಿಗೆ ಆರಂಭಗೊಂಡ ಯುದ್ಧಗಳು ಕ್ರಿ.ಶ.೧೭೯೯ರಲ್ಲಿ ಟಿಪ್ಪುವಿನ ಅವಸಾನದೊಂದಿಗೆ ಮುಗಿದವು. ೧೮ನೆಯ ಶತಮಾನದ ಉತ್ತರಾರ್ಧದಲ್ಲಿ ಇವರಿಬ್ಬರೂ ವಹಿಸಿದ ಪಾತ್ರ ಅತ್ಯಂತ ಸ್ಮರಣೀಯ. ಒಂದು ಪುಟ್ಟ ಸಂಸ್ಥಾನದಂತಿದ್ದ ಮೈಸೂರು ರಾಜ್ಯವನ್ನು ಭಾರತೀಯ ರಾಜಕೀಯ ನಕ್ಷೆಯಲ್ಲಿ ಒಂದು ಗಣ್ಯ ಸ್ಥಾನ ಪಡೆದುಕೊಳ್ಳುವಂತೆ ಅವರು ಪ್ರಯತ್ನಿಸಿದರು. ಒಂಬತ್ತನೆಯ ಶತಮಾನದಲ್ಲಿದ್ದ ಕವಿರಾಜಮಾರ್ಗಕಾರ (೯೮೦) ಬಿಡಿಸಿ ತೋರಿಸಿದ್ದ ನೀಲಿ ನಕ್ಷೆ ಕಾವೇರಿಯಿಂದ ಗೋದಾವರಿವರೆಗಿನ ಕನ್ನಡ ನಾಡಿನ ಗಡಿ ಸೀಮೆಗಳನ್ನು ದಾಟಿ, ಇವರ ರಾಜ್ಯ ವಿಸ್ತರಣೆಗೊಂಡಿತ್ತು ಎಂದರೆ ಉತ್ಪ್ರೇಕ್ಷೆಯೇನಲ್ಲ. ಅಲ್ಲದೆ ತಮ್ಮ ಸುತ್ತಲಿನ ಜಾಗತಿಕ ಜಗತ್ತಿನೊಡನೆ ಸಂಬಂಧವನ್ನು ಕಲ್ಪಿಸಿಕೊಳ್ಳುವುದರಲ್ಲಿಯೂ ಅದು ಸಫಲಗೊಂಡಿತ್ತು. ಇದರೊಟ್ಟಿಗೆ ವಿದೇಶಿ ಸಾಮ್ರಾಜ್ಯಶಾಹಿಗಳ ಎದುರು ಈ ತಂದೆ ಮಕ್ಕಳು ಪ್ರಾಣವನ್ನೂ ಪಣವಾಗಿಟ್ಟು ಹೋರಾಡಿದರು. ಹೈದರ್ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಲಂಡನ್ ನಗರದ ಈಸ್ಟ್ ಇಂಡಿಯಾ ಕಂಪನಿಯ ಕೇಂದ್ರ ಕಛೇರಿಯಿದ್ದ ಲೀಡನ್ ಹಾಲ್ ಬೀದಿಯಲ್ಲಿ ನೆಮ್ಮದಿಯೆಂಬುದೇ ಇರಲಿಲ್ಲ. ಮೈಸೂರು ಎಂದರೆ ಆ ಬೀದಿ ಬೆಚ್ಚಿ ಬೀಳುತ್ತಿತ್ತು.

ಹೈದರ್ ನಾಯಕತ್ವದಲ್ಲಿ ಪಾಶ್ಚಾತ್ಯ ಮಾದರಿಯ ತರಬೇತಿ ಪಡೆದ ಸುಸಜ್ಜಿತ ಸೇನೆಯಿತ್ತು. ಇದಕ್ಕೆ ಫ್ರೆಂಚರ ತರಬೇತಿ ಲಭಿಸಿತ್ತು. ಆದ್ದರಿಂದ ಮೈಸೂರು ಸೇನೆ ಎಂದರೆ ಮಿಲಿಟರಿ ವಿಜ್ಞಾನದಲ್ಲಿ ಸಮಗ್ರ ಭಾರತಕ್ಕೆ ತರಬೇತಿ ನೀಡುವ ಶಾಲೆಯಂತಿತ್ತು ಎಂಬ ಖ್ಯಾತಿಗೆ ಭಾಜನವಾಗಿತ್ತು. ವಿದೇಶಿ ಸೈನಿಕ ದಾಳಿಯಾಗಲೀ, ಅವರ ಪ್ರಾಬಲ್ಯವಾಗಲೀ, ಹೈದರನಿಗೆ ಯಾವತ್ತೂ ಭಯಾಶ್ಚರ್ಯಗಳನ್ನುಂಟು ಮಾಡುತ್ತಿರಲಿಲ್ಲ. ಅಲೆಗ್ಸಾಂಡರ್ ಡೋವ್ ಎಂಬ ಸಮಕಾಲೀನ ಚರಿತ್ರೆಕಾರ ಬಣ್ಣಿಸಿರುವ ಪ್ರಕಾರ ರೆಕ್ಕೆಗಳನ್ನು ಕಟ್ಟಿಕೊಂಡ ಅವನ ಅಶ್ವಗಳು ನಮ್ಮ ಕೋಟೆ ಗೋಡೆಗಳ ಮೇಲೆ ಹಾರುತ್ತಿದ್ದವು ಎಂಬಷ್ಟರ ಮಟ್ಟಿಗೆ ದಿಗ್ಭ್ರಮೆಯಾಗುತ್ತಿತ್ತು. ಟಿಪ್ಪುವಂತು ತಂದೆಗಿಂತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಹೊರ ಪ್ರಪಂಚದೊಂದಿಗೆ ಅದರಲ್ಲೂ ಫ್ರೆಂಚರೊಡನೆ ನಿಕಟ ಸಂಪರ್ಕವನ್ನು ಸಾಧಿಸಿಕೊಂಡಿದ್ದ. ಕೊನೆಯವರೆಗೂ ಅವರ ಮಗ್ಗಲು ಮುರಿಯಲು ಶತಾಯಗತಾಯ ಪ್ರಯತ್ನ ಮಾಡುತ್ತಲೇ ಇದ್ದನು.

ಹೈದರನು ರಾಜಕೀಯ ರಂಗದಲ್ಲಿ ಪ್ರವೇಶಿಸುವ ಕಾಲಕ್ಕೆ ಮೈಸೂರು ದೇಶ ಕೇವಲ ಒಂದು ಚಿಕ್ಕ ಸಂಸ್ಥಾನವಾಗಿತ್ತು. ಕ್ರಿ.ಶ.೧೭೬೧ರ ಮೂರನೆಯ ಪಾಣಿಪತ್ ಕದನದ ನಂತರ ಮರಾಠರು ತಮ್ಮ ವರಮಾನಕ್ಕಾಗಿ ಗತ್ಯಂತರವಿಲ್ಲದೆ ದಕ್ಷಿಣದತ್ತ ತಿರುಗಿದರಷ್ಟೆ. ಅವರ ಸೈನಿಕ ಕಾರ್ಯಾಚರಣೆಗಳಿಂದ ಮೈಸೂರು ತತ್ತರಿಸುತ್ತಿತ್ತು. ಅಲ್ಲದೆ ಹೈದರಾಬಾದಿನ ನಿಜಾಮನೂ, ಫ್ರೆಂಚರೂ ಮತ್ತು ಬ್ರಿಟೀಷರೂ ಈ ಪ್ರದೇಶದ ರಾಜಕೀಯ ರಂಗದಲ್ಲಿ ಪ್ರಭಾವಿ ಶಕ್ತಿಗಳಾಗಿ ತಲೆದೋರಿದರು. ಇದರಿಂದ ದಕ್ಷಿಣ ಭಾರತದ ರಾಜಕೀಯದ ಸಮತೋಲನಕ್ಕೆ ಅಡ್ಡಿಯುಂಟಾಯಿತು. ಕ್ರಿ.ಶ.೧೭೬೨ ರಿಂದ ಕ್ರಿ.ಶ.೧೭೭೮ರವರೆಗೆ ಮರಾಠರ ದಾಳಿಯಿಂದ ಮೈಸೂರನ್ನು ರಕ್ಷಿಸಿದ್ದು ಹೈದರನ ಒಂದು ದೊಡ್ಡ ಸಾಹಸ. ಅವರ ಯುದ್ಧ ಕೌಶಲ್ಯ, ತಾಂತ್ರಿಕ ಚಾತುರ್ಯ ಅದ್ಭುತವಾಗಿತ್ತು. ಎಂಥದೇ ಕಠಿಣ ಪರಿಸ್ಥಿತಿಯನ್ನಾದರೂ ತನ್ನ ಅನುಕೂಲಕ್ಕಾಗಿ ಬಳಸಿಕೊಳ್ಳುವ ಸಾಮರ್ಥ್ಯ ಅವನಲ್ಲಿದ್ದಿತು.

ವಿಧಾನಗಳನ್ನೆಲ್ಲಾ ಹತೋಟಿಗೆ ತಂದುಕೊಳ್ಳುವುದು ಮತ್ತು ಯಾವ ಕಾರಣಕ್ಕೂ ಇಲ್ಲಿ ಜನರು ಐಕ್ಯ ಹೋರಾಟ ಮಾಡದಂತೆ ಒಡೆದು ಆಳುವ ನೀತಿಯನ್ನು ಜಾರಿಗೊಳಿಸುವುದು. ವಸಾಹತುಶಾಹಿ ಆಡಳಿತವು ಜನರನ್ನು ವಿವಿಧ ವರ್ಗ ಮತ್ತು ಜಾತಿಗಳಾಗಿ ಛಿದ್ರ ವಿಚ್ಛಿದ್ರಗೊಳಿಸುತ್ತದೆ. ಬ್ರಿಟೀಷ್ ಪೋಲೀಸರೆಂದರೆ ಜನ ಬೀತಿ ಪಡುತ್ತಿದ್ದರೆಂದು ಕಂಡವರು ಹೇಳುತ್ತಾರೆ. ಭಾರತದಲ್ಲಿ ತಲೆಯೆತ್ತಿದ ವಸಾಹತ ಶಾಯಿಯ ಮೊಘಲರ ಆಳ್ವಿಕೆಗೆ ಬದಲಾಗಿ ಬ್ರಿಟೀಷರು ಎಂದಲ್ಲ. ಆ ಬಂಡವಾಳಶಾಹಿಗೆ ಪೂರ್ಣ ಗುಲಾಮಗಿರಿಯಾಗಿತ್ತು. ಅದೊಂದು ಜಾಗತಿಕ ವಿದ್ಯಮಾನ. ಇಂಗ್ಲೆಂಡಿನಲ್ಲಿ ಕುಳಿತು ಭಾರತದ ಭವಿಷ್ಯವನ್ನು ತಿದ್ದುವ ನಿರ್ಣಯಗಳು

ಜಾರಿಯಾಗುತ್ತಿದ್ದವು. ಇಲ್ಲಿನ ಅರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ವಿದ್ಯಮಾನಗಳನ್ನು ಬುಡಮೇಲು ಮಾಡಿ ನಮ್ಮ ಪ್ರಾಚೀನ ಪದ್ಧತಿಯ ಉತ್ಪಾದನೆಯ ವಿಧಾನಗಳನ್ನು ಬಿಟ್ಟು ಹೊಸ ಗೇಣಿ ಪದ್ಧತಿಯೊಂದನ್ನು ಜಾರಿಗೆ ತಂದರು. ಆದ್ದರಿಂದ ಹೊಸ ಜಮೀನ್ದಾರಿ ವರ್ಗವು ಉದ್ಭವಿಸಿತು. ಇದು ಬಂಡವಾಳಶಾಹಿ ತೆಕ್ಕೆಗೆ ಬೀಳಲಾಗಿ, ವಿಶ್ವ ಬಂಡವಾಳಶಾಹಿಗೆ ಭಾರತವನ್ನು ಕೂಡಿಸಿಕೊಂಡಿತು. ಹೀಗಾಗಿ ದೇಶ ಬ್ರಿಟೀಷ್ ವಸಾಹತುಶಾಹಿಯ ಒಂದು ಅವಿಭಾಜ್ಯ ಅಂಗವಾಗಿ ಹೋಯಿತು. ಭಾರತೀಯ ರೈತರ ಹಾಗೂ ಶ್ರಮಿಕರ ರಕ್ತ ಹೀರಲ್ಪಟ್ಟಿತು.

ಈ ಕಾಲ ಘಟ್ಟದಲ್ಲಿ ನಮ್ಮ ಸಾಂಪ್ರಾದಾಯಿಕ ರಾಷ್ಟ್ರ ಜೀವನದಲ್ಲಿ ಕೆಲವು ಮೂಲಭೂತ ಬದಲಾವಣೆಗಳು ಕಾಣಿಸಿಕೊಂಡವು. ಅವುಗಳಲ್ಲಿ ಕೆಲವು ಹೀಗಿವೆ; ವಿಶ್ವ ವಾಣಿಜ್ಯ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ದಾಸ್ತಾನಿಗೆ ಹೆಚ್ಚು ಪ್ರಾಮುಖ್ಯತೆ ದೊರೆತದ್ದು, ಇಲ್ಲಿನ ಕರಕುಶಲ ನೇಕಾರರಿಗೆ ನಿರ್ಬಂಧ. ಈ ನಿಟ್ಟಿನಲ್ಲಿ ಢಾಕಾದ ಜಗತ್ ಶ್ರೇಷ್ಠ ಮಸ್ಲಿನ್ ವಸ್ತ್ರ ನೇಕಾರರ ಬೆರಳನ್ನೇ ಕತ್ತರಿಸಿದ್ದು; ಬ್ಯಾಂಕಿಂಗ್ ವ್ಯವಸ್ಥೆಯಿಂದಾಗಿ ವಸ್ತು ವಿನಿಮಯ ಪದ್ಧತಿಗೆ ಹೆಚ್ಚು ತಡೆ ಬಿದ್ದದ್ದು; ಕಂದಾಯದಿಂದ ಬಂದ ರಾಜಾದಾಯವು ಅಭಿವೃದ್ಧಿಗೆ ಬಳಸಲ್ಪಡದೆ ಹೆಚ್ಚುವರಿ ಸೈನ್ಯ ಹಾಗೂ ಸಿಬ್ಬಂದಿ ವರ್ಗದವರ ಸಂಬಳ ಸಾರಿಗೆಗಳಿಗೆ ವ್ಯಯಮಾಡಿದ್ದು, ಸಾರ್ವಜನಿಕ ಆರೋಗ್ಯ, ಶಿಕ್ಷಣ ರಸ್ತೆ ಮುಂತಾದವುಗಳನ್ನು ಕಡೆಗಣಿಸಿ ಪೋಲೀಸ್ ವ್ಯವಸ್ಥೆಯನ್ನು ಬಲಪಡಿಸಿತ್ತು. ಕಚ್ಛಾ ವಸ್ತುಗಳ ರಫ್ತು ಮತ್ತು ಆಮದು ವಸ್ತುಗಳ ಕಟ್ಟು ನಿಟ್ಟಿನ ಕಾಯಿದೆಯಿಂದ ಗ್ರಾಹಕನ ಮೇಲೆ ಹೆಚ್ಚಿನ ತೆರಿಗೆ ಬಿದ್ದು, ವಿದೇಶಿ ಉನ್ನತಾಧಿಕಾರಿಗಳಿಗೆ ದೇಶ ಹಾಗೂ ಭಾಷೆಯ ಮೇಲೆ ಹೆಚ್ಚಿನ ಅಭಿಮಾನ ಬೆಳೆಯದೆ ಹೋದದ್ದು; ಕಡ್ಡಾಯ ಶಿಕ್ಷಣ ಜಾರಿಗೊಳ್ಳದೆ ದಲಿತ, ಶೂದ್ರವರ್ಗ ಶಿಕ್ಷಣದಿಂದ ಯಥಾಪ್ರಕಾರ ದೂರವೇ ಉಳಿದದ್ದು; ಇಂಗ್ಲಿಷ್ ಶಿಕ್ಷಣ ಪಡೆದ ಮೇಲ್ಜಾತಿ ಬ್ರಾಹ್ಮಣವರ್ಗ ಮತ್ತಷ್ಟು ಮೇಲರಿಮೆಗೆ ಏರಿದ್ದು, ಇಷ್ಟಾಗಿಯೂ ದೊರೆತ ಅಲ್ಪಸ್ವಲ್ಪ ಆಂಗ್ಲಶಿಕ್ಷಣದ ಮೂಲಕವಾಗಿಯೇ ಇಲ್ಲಿ ಸ್ವಲ್ಪ ವೈಚಾರಿಕತೆ ಜಾಗೃತಿಗೆ ಕಾರಣವಾದದ್ದು ಇತ್ಯಾದಿ. ಅಂತೂ ಗುಮಾಸ್ತರಿಗೆಂದೇ ಅವರು ಕೊಟ್ಟ ಆಂಗ್ಲ ಶಿಕ್ಷಣವೇ ನಮ್ಮವರಲ್ಲಿ ಸ್ವಾತಂತ್ರದ ಕಿಡಿಹಾರಲು ಪ್ರೇರಣೆ ಒದಗಿದ್ದು ಒಂದು ಗುಣಾತ್ಮಕ ಅಂಶ.

ಈ ಮೇಲೆ ಹೇಳಿರುವ ಪ್ರಕಾರ ವಸಾಹತುಶಾಹಿಯೆಂದರೆ ಒಂದು ಜನವರ್ಗವನ್ನು ಇನ್ನೊಂದು ಜನವರ್ಗವು ತುಳಿದು ಆಳುವುದು ಎಂದೇ ಅರ್ಥ. ಒಟ್ಟಾರೆ ಇಡೀ ರಾಷ್ಟ್ರವನ್ನು ಗುಲಾಮಗಿರಿಗೆ ಒಗ್ಗಿಸುವುದೇ ವಸಾಹತುಶಾಯಿಯ ಲಕ್ಷಣ.

ಈ ಕಾಲದ ಜಾಗತಿಕ ವಿದ್ಯಮಾನಗಳನ್ನು ನೋಡಿದರೆ ಇಂಗ್ಲೀಷರು ಫ್ರೆಂಚರನ್ನು ಸಹಿಸಬಾರದು. ವಸಾಹತು ಕೊಳ್ಳೆಕಾರರಲ್ಲಿ ಇದ್ದಂತಹ ಪೈಪೋಟಿಯೇ ಇದಕ್ಕೆ ಕಾರಣ. ಇದಕ್ಕೂ

ಮೊದಲು ಅಮೇರಿಕದಲ್ಲಿದ್ದ ಫ್ರೆಂಚರ ವಾಣಿಜ್ಯೋದ್ಯಮವನ್ನು ಇಂಗ್ಲೀಷರು ಮಟ್ಟ ಹಾಕಿದ್ದರು. ಅದೇ ಪ್ರಕಾರ ಇಂಡಿಯಾದಲ್ಲಿ ಬಂದು ಬೇರೂರುತ್ತಿದ್ದ ಅವರನ್ನು ಹತ್ತಿಕ್ಕುವುದು ಅವರ ಉದ್ದೇಶವಾಗಿತ್ತು. ಆಗ ಫ್ರೆಂಚರು ಇಂಗ್ಲೀಷರನ್ನು ಹಿಮ್ಮೆಟ್ಟಿಸಲು ಹೈದರನ ಸ್ನೇಹವನ್ನು ಬಯಸಿದ್ದು ಸ್ವಾಭಾವಿಕ. ಹಾಗೆಯೇ ಹೈದರ್ ಕೂಡ ಫ್ರೆಂಚರಿಂದ ಸೈನ್ಯಕ್ಕೆ ಯೂರೋಪಿನ ಮಾದರಿ ತರಬೇತಿಯನ್ನು ಕೊಡಿಸಲು ಮುಂದಾದನು. ಒಟ್ಟಾರೆ ಹೈದರ್ ಮತ್ತು ಫ್ರೆಂಚರು ಇಂಗ್ಲೀಷರನ್ನು ಸಮಾನ ಶತ್ರುಗಳೆಂದೇ ಪರಿಗಣಿಸಿದ್ದರು.

ಆದರೂ ಭಾರತದಿಂದ ಇಂಗ್ಲೀಷರನ್ನು ಹೊರಹಾಕಿ, ಫ್ರೆಂಚರನ್ನು ಸ್ವಾಗತಿಸುವುದು ಹೈದರನ ಉದ್ದೇಶವಾಗಿರಲಿಲ್ಲ. ಏನೇ ಆಗಲಿ ಫ್ರೆಂಚರು ಮತ್ತು ಇಂಗ್ಲೀಷರು ಇಬ್ಬರೂ ಹೊರಗಿನವರು ತಾನೆ? ಆದರೆ ಅವನ ಹಿತಾಸಕ್ತಿಗೆ ವಿರೋಧ ಮಾಡದವರ ಸ್ನೇಹವನ್ನು ಮಾತ್ರ ಅವನು ಬಯಸಿದನು. ವಿದೇಶಿಯರ ಬಗೆಗೆ ಅವನ ನೀತಿ ನಿರ್ಧಾರಾತ್ಮಕವಾಗಿತ್ತು. ಅವರಲ್ಲಿ ಒಬ್ಬರನ್ನೊಬ್ಬರಿಗೆ ತಡೆಗೋಡೆಯಂತೆ ಏರ್ಪಡಿಸುವುದು, ಅವರಿಂದ ಸೈನಿಕ ಪರಿಕರಗಳನ್ನು ಪಡೆಯುವುದು. ಅಗತ್ಯವಾದಲ್ಲಿ ಮಾತ್ರ ಅವರಿಂದ ಸೈನಿಕ ನೆರವು ಪಡೆಯುವುದು ಇತ್ಯಾದಿ. ಈ ದೃಷ್ಟಿಯಿಂದ ಹೈದರ್‌ಗೆ ವಿದೇಶಿಯರೆಲ್ಲರೂ ಸಮಾನ ಸ್ನೇಹಿತರು ಇಲ್ಲವೆ ಸಮಾನ ಶತ್ರುಗಳೇ ಆಗಿದ್ದರು. ಅವರು ಮೊದಲು ಇಂಗ್ಲೀಷರೊಂದಿಗೆ ಸ್ನೇಹ ಬೆಳೆಸಲು ಇಷ್ಟ ಪಟ್ಟರಾದರೂ, ಅವರು ಉತ್ಸಾಹ ತೋರಿಸಲಿಲ್ಲ. ಹಾಗೆಯೇ ಫ್ರೆಂಚರೂ ಸಹ ಹೈದರನ ವಿಷಯದಲ್ಲಿ ಹಾಗೆ ಹೇಳಿಕೊಳ್ಳುವಂತಹ ಉತ್ಸಾಹವನ್ನೇನು ತೋರಿಸಲಿಲ್ಲ.

ಒಟ್ಟಾರೆ ೧೮ನೇ ಶತಮಾನವು ಭಾರತದಲ್ಲಿ ವಸಾಹತುಶಾಹಿ ಯುಗವನ್ನು ನಿಚ್ಚಳವಾಗಿ ತೆರೆಯಿತು. ಪ್ರೋ ಬಿ.ಷೇಕ್ ಅಲಿಯವರು ಹೇಳಿರುವಂತೆ "ಒಂದು ಜನವರ್ಗವು ಬೇರೆ ನಾಡಿನಿಂದ ಬಂದು ಇನ್ನೊಂದು ಜನವರ್ಗದ ಮೇಲೆ ಪ್ರಭುತ್ವವನ್ನು ಸಾಧಿಸಿ, ಅವರನ್ನು ದಮನ ಮಾಡುವುದೇ ವಸಾಹತುಶಾಹಿ". (ಕರ್ನಾಟಕ ಚರಿತ್ರೆ, ಸಂಪುಟ-೫, ಪುಟ ೧೩) ಇದೊಂದು ವ್ಯವಸ್ಥಿತ ಅನಧಿಕೃತ ಶೋಷಣೆ. ಇಲ್ಲಿನ ಏಕಮಾತ್ರ ತತ್ವವೆಂದರೆ ಯಾವುದೇ ದೇಶವು ಹೊರಗಿನಿಂದ ಬಂದ ಶೋಷಕ ಬಂಡವಾಳಗಾರಿಕೆಯ ಹಿತಾಸಕ್ತಿಗಳನ್ನು ನೆರವೇರಿಸಲು ಪೂರ್ಣವಾಗಿ ಸಹಕರಿಸುವುದು ಎಂದರೆ ಕೊಳ್ಳೆಗೆ ಈಡಾಗಿ, ಅದರ ದಾಸ್ಯವನ್ನು ಅಂಗೀಕರಿಸುವುದು. ಅದು ತನ್ನ ರಾಜಕೀಯ ನಿಲುವನ್ನು ಇವರ ಮೇಲೆ ಹೇರಲು ತನ್ನೆಲ್ಲ ಶಕ್ತಿ-ಸಾಮರ್ಥ್ಯಗಳನ್ನು ಬಳಸಿಕೊಳ್ಳುತ್ತದೆ. ಅದರ ಮುಂಚೂಣಿಯ ಪ್ರಚಾರವೆಂದರೆ ಮೊದಲಿಗೆ ವಸಾಹತು ಪ್ರದೇಶ ನಾಗರಿಕವಾಗಿ ಹಿಂದುಳಿದಿದೆ. ಅದನ್ನು ನಾಗರಿಕಗೊಳಿಸಲಾಗುತ್ತಿದೆ ಎಂದು ಸಾರುವುದು. ಎರಡನೆಯದಾಗಿ ಪ್ರಜಾತಂತ್ರವನ್ನು ನೆಲೆಗೊಳಿಸಲಾಗುತ್ತಿದೆ ಎಂದು ಪ್ರಚಾರ

ಮಾಡುವುದು. ಕಡೆಗೆ ಧಾರ್ಮಿಕ ಭಾವನೆಗಳನ್ನು ಬಂಡವಾಳವನ್ನಾಗಿ ಮಾಡಿಕೊಂಡು ತಮ್ಮ ಬರುವಿಕೆಗೆ ದೈವ ಸಮ್ಮತಿಯಿದೆಯೆಂದು ಸಾರುವುದು ಇತ್ಯಾದಿ. ಹೀಗೆ ಸ್ಥಳೀಯ ಸರ್ಕಾರವನ್ನು ತನ್ನ ವಶಕ್ಕೆ ತೆಗೆದುಕೊಂಡು, ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನಲ್ಲದೆ, ಮಾನವ ಶತ್ರುವನ್ನೂ ತನ್ನ ಪ್ರಯೋಜನಕ್ಕೆ ಬಳಸಿಕೊಳ್ಳುವುದು. ತನ್ನವರ ಅಭ್ಯುದಯಕ್ಕಾಗಿ ಇಲ್ಲಿನ ಉತ್ಪಾದನೆಯನ್ನು ಉಪಯೋಗಿಸುವುದು.

ಆದರೆ ಇಂಥ ಭ್ರಷ್ಟ ಆಡಳಿತದ ಗರ್ಭದಿಂದಲೇ ಕೆಲವೊಮ್ಮೆ ಪ್ರಗತಿಪರ ಚಳುವಳಿಗಳು ಮೂಡಿ ಬರುತ್ತವೆ, ಜನರ ಸಹನೆಗೂ ಮಿತಿ ಇರುತ್ತದೆಯಲ್ಲವೆ? "ಮಿತಿಯ ಗೆರೆ ಮೀರಿದರೆ ಸಮುದ್ರವೂ ಮೇರೆ ತಪ್ಪುವಂತೆ" ಜನ ಮೇರೆ ಮುರಿಯುತ್ತಾರೆ. ಸರ್ಕಾರದ ದಮನಕಾರಿ ನೀತಿಗಳು, ಚಳುವಳಿಗಳನ್ನು ಇನ್ನೂ ಗಟ್ಟಿಗೊಳಿಸುತ್ತವೆ. ಎಂತಹ ಆಲೋಚನೆಯೂ ಬಹುಬೇಗ ಬಿಕ್ಕಟ್ಟಿಗೆ ಸಿಲುಕುತ್ತದೆ. ವಸಾಹತು ವಿರೋಧಿ ಚಳುವಳಿಗಳು ಆಗ ಹುಟ್ಟಿಕೊಳ್ಳುತ್ತವೆ. ಸ್ವಾತಂತ್ರ್ಯದ ಅಭಿಲಾಷೆ ಮೊಳೆಯುತ್ತದೆ. ಆಗ ಸರ್ಕಾರವು ಅದನ್ನು ಹತ್ತಿಕ್ಕಲು ಸರ್ವ ಪ್ರಯತ್ನ ಮಾಡುತ್ತದೆ. ಕೆಲವೊಮ್ಮೆ ಆರ್ಥಿಕ ರಿಯಾಯಿತಿಗಳ ಪ್ಯಾಕೇಜುಗಳನ್ನು ನೀಡಿ, ಜನರನ್ನು ಮರಳು ಮಾಡಲು ಯತ್ನಿಸುತ್ತದೆ. ಪ್ರಜಾಪ್ರಭುತ್ವ ನೆಲೆಗೊಳ್ಳಲು ಈ ದೇಶ ಇನ್ನೂ ಪ್ರಬುದ್ಧಗೊಂಡಿಲ್ಲವೆಂದು ಸುಳ್ಳು ಪ್ರಚಾರವನ್ನು ಮಾಡುವುದು. ಅಲ್ಲಿರುವ ಜಾತಿ, ಮತ, ಬುಡಕಟ್ಟು, ವರ್ಗ, ವರ್ಣಗಳ ತಾರತಮ್ಯವನ್ನು ಬೊಟ್ಟು ಮಾಡಿ ತೋರಿ ಒಡೆದು ಆಳುವ ನೀತಿಯನ್ನು ಅನುಸರಿಸುತ್ತದೆ. ಒಟ್ಟಾರೆ ವಸಾಹತುಶಾಹಿಯೆಂದರೆ ಆಳುವ ಮತ್ತು ಆಳುವವರ ಅಧಿಕಾರಕ್ಕೆ ಬಲಿಯಾಗುವ ಜನರ ನಡುವಿನ ಮೇಲು-ಕೀಳಿನ ಸಂಬಂಧ. ಅದರ ಮೂಲಕ ಇಲ್ಲಿನ ಜನರ ಸಂಪತ್ತನ್ನು ದೋಚುವುದೇ ಮುಖ್ಯ ಉದ್ದೇಶ. ಇಲ್ಲವಾಗಿದ್ದರೆ ವಸಾಹತುಶಾಹಿಗೆ ಇಲ್ಲಿಯವರೆಗೂ ಬರುವ ಅಗತ್ಯವಾದರೂ ಏನಿತ್ತು?

೧೮ನೇ ಶತಮಾನವೆಂದರೆ ಇಂಡಿಯಾದ ಇತಿಹಾಸದಲ್ಲಿ ಬಹುಮಟ್ಟಿಗೆ ಮೈಸೂರು ಸಂಸ್ಥಾನದ ಇತಿಹಾಸವೇ ಆಗಿದೆ. ಹೈದರಾಲಿಯ ಏಳಿಗೆ ಹಾಗೂ ಅಧಿಕಾರ ಸ್ವೀಕಾರ ಮತ್ತು ಟಿಪ್ಪುವಿನ ಛಲಭರಿತ ಹೋರಾಟ, ಅವರ ವೀರಾವೇಶದ ಅಂತ್ಯವು ಸೇರಿಕೊಳ್ಳುತ್ತದೆ.

೭.೩ ಟಿಪ್ಪುವಿನ ರಾಷ್ಟ್ರೀಯತೆ

ಇತ್ತೀಚಿನ ಕೆಲವು ಸಂಶೋಧನೆಗಳು ಟಿಪ್ಪು ಯಾವತ್ತು ಜಾತಿ, ಜನಾಂಗ, ಪಂಗಡಗಳ ನೆಲೆಯಲ್ಲಿ ಪಕ್ಷಪಾತ ಮಾಡಲಿಲ್ಲ ಎಂಬುದನ್ನು ಸಾದರಪಡಿಸುತ್ತವೆ. ಅವನ ನ್ಯಾಯ ಸಂಹಿತೆ ಹೀಗೆ ಹೇಳುತ್ತದೆ.

"ನಮ್ಮ ಪ್ರಜೆಗಳೊಂದಿಗೆ ಜಗಳವಾಡುವುದೆಂದರೆ ನಮ್ಮೊಂದಿಗೆ ನಾವು ಯುದ್ಧ ಮಾಡಿದ ಹಾಗೆ. ಅವರು ನಮ್ಮನ್ನು ರಕ್ಷಿಸುವ ಗುರಾಣಿಗಳಿದ್ದ ಹಾಗೆ. ನಮಗೆ ಬೇಕಾದುದೆಲ್ಲವನ್ನು ಒದಗಿಸಿ ಕಾದಿರಿಸಿಕೊಂಡಿರುತ್ತಾರೆ"

ಟಿಪ್ಪು ಮಹಾತ್ವಾಕಾಂಕ್ಷಿ ದೊರೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅದು ತನ್ನ ರಾಜ್ಯವನ್ನು ತಂದೆಯ ನಂತರ ಇನ್ನಷ್ಟು ವಿಸ್ತರಿಸಬೇಕೆಂಬುದಾಗಿರಲಿಲ್ಲ. ಹಾಗಿದ್ದೂ ಅವನು ಕೇವಲ ಶಾಂತಿ ಮಂತ್ರ ಜಪಿಸುತ್ತಾ ಕುಳಿತವನೂ ಅಲ್ಲ. ಅವಕಾಶ ಸಿಕ್ಕಾಗ ಇನ್ನಷ್ಟು ಮುನ್ನುಗ್ಗುವ ಸ್ವಭಾವ ಅವನದು. ಆದರೆ ಅವನು ಮಾಡಿದ ಯಾವುದೇ ಯುದ್ದಗಳಿಗೆ ಅವನು ಕಾರಣನಲ್ಲ. ಬದಲಿಗೆ ಅವನು ಮಾಡಿದ ಯುದ್ದಗಳೆಲ್ಲವೂ ಆತ್ಮ ರಕ್ಷಣೆಯ ಯುದ್ಧಗಳಾಗಿದ್ದವು. ಯುದ್ಧಕ್ಕಿಂತ ಅವನು ಶಾಂತಿಯನ್ನೇ ಬಯಸುತ್ತಿದ್ದನು. ಈ ನಿಟ್ಟಿನಲ್ಲಿ ಆತ ಶ್ರೇಷ್ಠ ಭಾರತೀಯ ರಾಜರ ಸಾಲಿಗೆ ನಿಲ್ಲುತ್ತಾನೆ. ಟಿಪ್ಪು ತಪ್ಪು ಮಾಡಿದ್ದು ನಿಜ. ಹಸನ್ ಅವರು ವ್ಯಾಖ್ಯಾನಿಸಿರುವಂತೆ "ತನ್ನ ರಾಜ್ಯವನ್ನು ಮೇಲಿಂದ ಮೇಲೆ ಪ್ರಾಂತ್ರ್ಯಗಳನ್ನಾಗಿ ವಿಂಗಡಿಸಿದ್ದು, ತನ್ನ ಅಶ್ವಪಡೆಯನ್ನು ತಗ್ಗಿಸಿದುದು" ಇತ್ಯಾದಿ. ಒಮ್ಮೊಮ್ಮೆ ಅವನ ಅಧಿಕಾರಿಗಳು ಅವನ ಅಣತಿಯನ್ನು ಪಾಲಿಸುತ್ತಿರಲಿಲ್ಲ. ಆದರೂ ಸುಭದ್ರ ಸರ್ಕಾರವನ್ನು ರಚಿಸಿ ತನ್ನ ಪ್ರಜೆಗಳ ಕ್ಷೇಮಾಭಿವೃದ್ಧಿಯನ್ನು ಮಾಡುವುದರಲ್ಲಿ ಅವನು ಹಿಂದೆ ಬೀಳಲಿಲ್ಲ. ಕರೆಸಿ, ವಿವೇಕ ಹೇಳುವ ಮೂಲಕ, ಆಡಳಿತ ನ್ಯೂನತೆಗಳನ್ನು, ತಿದ್ದುವ ಮೂಲಕ, ವೈಯಕ್ತಿಕ ತನಿಖೆಗಳ ಮೂಲಕ ಹಣದ ದುರುಪಯೋಗವನ್ನು ಆತ ನಿಲ್ಲಿಸಿದನು.

ಬೇಸಾಯಕ್ಕೆ ಆದ್ಯತೆ ನೀಡಿದನು. ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಉತ್ತೇಜನ ಕೊಟ್ಟನು. ರಸ್ತೆಗಳನ್ನು ನಿರ್ಮಿಸಿದನು. ಆಕ್ರಮವಾದ ಉಂಬಳಿಗಳನ್ನು ರದ್ದುಪಡಿಸಿದನು. ದಳ್ಳಾಳಿ ವರ್ಗವನ್ನು ಹತ್ತಿಕ್ಕಿದನು. ಇಂಥ ಕೆಲಸಗಳನ್ನು ಬ್ರಿಟೀಷ್ ಇತಿಹಾಸಕಾರರಾದ ಮನ್ರೋ, ಡಿರೋಮ್ ಮುಂತಾದವರೂ ಪ್ರಾಸಂಗಿಕವಾಗಿ ಶ್ಲಾಘಿಸಿದ್ದಾರೆ. ಮೂರನೇ ಮೈಸೂರು ಯುದ್ಧದಲ್ಲಿ ಟಿಪ್ಪು ಸೋತು ಬೊಕ್ಕಸದ ಹಣವನ್ನೂ, ಅರ್ಧ ರಾಜ್ಯವನ್ನೂ ಕಳೆದುಕೊಂಡಿದ್ದಾಗ್ಯೂ ಸಹ ದೃತಿಗೆಡದೆ ಅತಿ ವೇಗದಿಂದ ರಾಜ್ಯ ಅಭಿವೃದ್ಧಿಯನ್ನು ಸಾಧಿಸಲು ಹೊರಟನು. ಆದ್ದರಿಂದ ಸರ್ ಜಾನ್ ಶೋರರು ಒಪ್ಪಿಕೊಂಡಿರುವಂತೆ ಅವನ ರಾಜ್ಯ ಮತ್ತೆ ಪ್ರಗತಿಯನ್ನು ಕಂಡಿತು. ಅದಕ್ಕೆ ಕಾರಣ ಸರ್ಕಾರದ ಪ್ರತಿಯೊಂದು ವಿವರಗಳನ್ನೂ ತಾನೇ ಖುದ್ದಾಗಿ ಗಮನಿಸಿ ನಿರ್ವಹಿಸುತ್ತಿದ್ದನು. ಅವನ ಕೃಷಿಕರು ರಕ್ಷಿತರಾಗಿದ್ದರು. ಅವರ ಗೇಯ್ಮೆಗೆ ಒಳ್ಳೆಯ ಪ್ರೋತ್ಸಾಹವಿತ್ತು ಮತ್ತು ಬಹುಮಾನವು ಇತ್ತು. ಕ್ರಿ.ಶ.೧೭೯೯ರಲ್ಲಿ ಇಂಗ್ಲೀಷರು

ಅಜೇಯರೆಂದು ಬೀಗುತ್ತಿದ್ದರು. ಆದ್ದರಿಂದ ಟಿಪ್ಪು ಆಂಗ್ಲರೊಂದಿಗೆ ಯುದ್ಧಗಳನ್ನು ಕೈಗೊಳ್ಳಲು ಸಾಧ್ಯವಾಯಿತೆಂದು ತೋರುತ್ತದೆ.

ಟಿಪ್ಪುವನ್ನು "ದಕ್ಷಿಣದ ಅಕ್ಬರ್ ಬಾದಶಹ" ಎನ್ನಬಹುದು. ಏಕೆಂದರೆ ಹೊಸದನ್ನು ತರುವ ಉತ್ಸಾಹ ಅವನಲ್ಲಿ ಅಷ್ಟೊಂದು ಅದಮ್ಯವಾಗಿತ್ತು. ಹೊಸ ಪಂಚಾಂಗ, ಹೊಸ ನಾಣ್ಯ ಪದ್ಧತಿ, ಹೊಸ ತೂಕ ಮತ್ತು ಅಳತೆಯ ಪ್ರಮಾಣಗಳು ಹೊಸ ಭೂಕಂದಾಯ ನಿಗಧಿ ಹಾಗೂ ಸುಂಕ ಪದ್ಧತಿ ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು. ಆದರೂ ಹಲವು ವೇಳೆ ಅವನ ಈ ಬದಲಾವಣೆಗಳಲ್ಲಿ ಕೆಲವು ಅನವಶ್ಯಕವಾಗಿದ್ದವು ಎನ್ನದೇ ವಿಧಿಯಿಲ್ಲ. ಉದಾಹರಣೆಗೆ ಹೊಸ ಪಂಚಾಂಗ, ಕೋಟೆ-ಕೊತ್ತಲುಗಳಿಗೆ, ಊರು-ಕೇರಿಗಳಿಗೆ ಹೊಸ ಹೆಸರುಗಳನ್ನು ಇಟ್ಟದ್ದು ಇತ್ಯಾದಿ".[೧]

ಟಿಪ್ಪು ಅತ್ಯಂತ ಚಾರಿತ್ರ್ಯಶೀಲ ವ್ಯಕ್ತಿಯಾದುದರಿಂದ ತನ್ನ ಪ್ರಜಾರಾಜ್ಯವು ಹಾಗೇ ಇರಬೇಕೆಂದು ಆತ ಬಹುವಾಗಿ ಅಪೇಕ್ಷೆ ಪಟ್ಟವನು. ಅದಕ್ಕಾಗಿ ವೇಶ್ಯಾಪದ್ಧತಿ ಹಾಗೂ ಮಾದಕ ವಸ್ತುಗಳ ನಿಷೇಧ ಕಾಯ್ದೆಗಳನ್ನು ಜಾರಿಗೆ ತಂದನು. ಆ ಕಾರಣಕ್ಕಾಗಿ ಅಫೀಮು, ಗಾಂಜಾ ಮುಂತಾದ ಬೆಳೆ ಬೆಳೆಯುವುದನ್ನು ನಿಷೇಧಿಸಿದನು. ಟಿಪ್ಪು ತನ್ನ ರಾಜ್ಯಾಡಳಿತವನ್ನು ಪಾಶ್ಚಾತ್ಯ ಮಾದರಿಯಲ್ಲಿ ಇರಬೇಕೆಂದು ಬಯಸಿ ಜಾರಿಗೆ ತಂದ ಮೊದಲ ಭಾರತೀಯ ರಾಜ. ಪಾಶ್ಚಾತ್ಯ ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಆತನಿಗೆ ಎಲ್ಲಿಲ್ಲದ ಆಸಕ್ತಿಯಿತ್ತು. ತನ್ನ ರಾಜ್ಯದ ಪ್ರಗತಿಗೆ ಅದನ್ನು ಅಳವಡಿಸಿಕೊಳ್ಳುವಲ್ಲಿ ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದನು. ರಾಜ್ಯದ ಕುಶಲ ಕಲೆಗಳಿಗೆ, ಗೃಹ ಕೈಗಾರಿಕೆಗಳಿಗೆ ಉತ್ತೇಜಿಸುತ್ತಿದ್ದ. ಟಿಪ್ಪು ರಾಜ್ಯದಲ್ಲಿಯೇ ತಯಾರಿಸುತ್ತಿದ್ದ ವಸ್ತುಗಳನ್ನೇ ತನ್ನ ಅಧಿಕಾರಿಗಳೂ ಸಹ ಬಳಸಬೇಕೆಂದು ಕಡ್ಡಾಯಗೊಳಿಸಿದ್ದನ್ನು ನೋಡಿದರೆ ಅವನು ಪ್ರಥಮ ಸ್ವದೇಶಿ ಆಂದೋಲನಕಾರನೆನ್ನಬಹುದು.

ತನ್ನ ಮಕ್ಕಳಿಗೆ ಪಾಶ್ಚಾತ್ಯ ಶಿಕ್ಷಣವನ್ನು ಕೊಡಿಸಬೇಕೆಂಬ ಆಸೆ ಹೊಂದಿದ್ದ ಭಾರತೀಯ ರಾಜರಲ್ಲಿ ಟಿಪ್ಪುವೇ ಮೊದಲಿಗನು. ಫ್ರಾನ್ಸಿಗೆ ತನ್ನ ಒಬ್ಬ ಮಗನನ್ನು ಓದಲಿಕ್ಕಾಗಿ ಕಳುಹಿಸುವ ಏರ್ಪಾಡು ಕೂಡ ಮಾಡಿದ್ದನು. ಆದರೆ ಅಷ್ಟರಲ್ಲಿ ಮೂರನೇ ಮೈಸೂರು ಯುದ್ಧವು ಸಂಭವಿಸಿ, ಅವನ ಅರ್ಧ ರಾಜ್ಯವೇ ಕೈಬಿಟ್ಟು ಹೋಯಿತು. ಆದ್ದರಿಂದ ಆರ್ಥಿಕ ನಷ್ಟವಾಗಿ ವಿದೇಶದಲ್ಲಿ ಮಕ್ಕಳನ್ನು ಓದಿಸಲಾರದೇ ಹೋದನು. ಬದಲಿಗೆ ಒತ್ತೆಯಾಳುಗಳಾದ ಆಂಗ್ಲರ ಶಿಬಿರಕ್ಕೆ ಕಳುಹಿಸಿಕೊಡಬೇಕಾದ ಪ್ರಸಂಗ ಒದಗಿ ಬಂದಿತು. ಟಿಪ್ಪು ಸುಲ್ತಾನನು ಸುನ್ನಿ ಪಂಗಡಕ್ಕೆ ಸೇರಿದವನಾಗಿದ್ದರೂ ಷಿಯಾ ತತ್ವದಲ್ಲಿ ಒಲವುಳ್ಳವನಾಗಿದ್ದನು. ಧರ್ಮನಿಷ್ಠ ಮುಸ್ಲಿಂ ದೊರೆಯಾಗಿದ್ದರೂ ಆತ ಧರ್ಮಾಂಧನಾಗಿರಲಿಲ್ಲ. ಈಗಾಗಲೇ ಹೇಳಿರುವಂತೆ ಟಿಪ್ಪು ತನ್ನ

ರಾಜ್ಯವನ್ನು ಸಲ್ತನತೆ ಖುದಾದದ್ (ದೇವರು ಕೊಟ್ಟ ರಾಜ್ಯ) ಎಂಬ ಅರ್ಪಣಾ ಭಾವದಿಂದಲೇ ಆಳಿದವನು. ಆತ ದಿನಕ್ಕೆ ಐದು ಬಾರಿ ನಮಾಜು ಮಾಡುತ್ತಿದ್ದ. ರಂಜಾನ್ ಉಪವಾಸಗಳನ್ನೂ ತಪ್ಪದೇ ಆಚರಿಸುತ್ತಿದ್ದ. ಅಪಸ್ವರವಂತೂ ಸದಾ ಅವನ ಕೈಯಲ್ಲೇ ಇರುತ್ತಿತ್ತು. ಹುಸೇನ್ ಆಲಿ ಅವನಿಗೆ ಅಪ್ರತಿಮ ಗೌರವಾದರದ ವ್ಯಕ್ತಿ. ತನ್ನ ಶಸ್ತ್ರಾಸ್ತ್ರಗಳ ಮೇಲೂ ಹಸದುಲ್ಲಾ ಹುಲ್ ಗಾಲೀಬ್ ಎಂದು ಕೆತ್ತಿಸಿದ್ದನೆಂದು ಬೀಟ್ಸನ್ ಹೇಳುತ್ತಾನೆ. ಫಾತಿಮಾ, ಹಸನ್, ಹುಸೇನ್ ರಾಜ್ಯಕ್ಕೆ ಹೋಗಿದ್ದಾಗ ಅಲ್ಲಿರುವ ನದಾಫ್ ಮತ್ತು ಕರ್ಬಾಲದ ದರ್ಗಾಗಳಿಗೆ ತನ್ನ ಪರವಾಗಿ ಗೌರವ ಅರ್ಪಿಸಲು ಹೇಳಿ ಕಳುಹಿಸಿದ್ದನು.

ಸೂಫಿ ಸಿದ್ಧಾಂತ ಹಾಗೂ ತತ್ವಗಳ ಬಗ್ಗೆ ಟಿಪ್ಪುವಿಗೆ ವಿಶೇಷ ಆಸಕ್ತಿ ಇದ್ದಿತು. ಆ ವಿಷಯವಾಗಿ ವಿದ್ವಾಂಸರಿಂದ ಸಂಶೋಧನಾ ಗ್ರಂಥಗಳನ್ನು ಬರೆಯಿಸಿದನು. ತಂದೆ ಹೈದರನಂತೆಯೇ ಈತನೂ ಸೂಫಿ ಸಂತರನ್ನು ಭಕ್ತಿಯಿಂದ ಕಾಣುವುದು, ಅವರ ದರ್ಗಾಗಳಿಗೆ ಉಂಬಳಿಗಳನ್ನು ಬಿಟ್ಟುಕೊಡುವುದೂ ಮಾಡುತ್ತಿದ್ದನು. ಹಿಂದೂ ಸಾಧುಸಂತರು, ಸನ್ಯಾಸಿ, ಪುರೋಹಿತ ಹಾಗೂ ದೇವರುಗಳಿಗೆ ಆತ ಹೆಚ್ಚಿನ ಗೌರವಗಳನ್ನು ಸಲ್ಲಿಸಿಯೇ ಇರುವನು. ಅಲ್ಲದೆ ಹೈದರನಂತೆಯೇ ಇವನು ಕೂಡ ಕೊಂಚ ಮೂಢ ಭಕ್ತಿಯನ್ನು ಹೊಂದಿದ್ದನು, ಕೆಲವು ಆಚರಣೆಗಳಿಂದ ಆಪತ್ತುಗಳನ್ನು ನಿವಾರಿಸಿಕೊಳ್ಳಬಹುದೆಂದು ಬಗೆದಿದ್ದನು. ಉದಾಹರಣೆಗೆ: ಇಂಗ್ಲೀಷರು ಕೋಟೆಯನ್ನು ಒಡಕು ಮಾಡಿದ ಕ್ರಿ.ಶ.೧೭೯೯ ಮೇ ೪ ರ ಬೆಳಗ್ಗೆ ಈತ ದಾನ, ದಕ್ಷಿಣೆ, ಶಾಸ್ತ್ರ ಸಂಬಂಧ ಇತ್ಯಾದಿಗಳಲ್ಲಿ ತೊಡಗಿದ್ದುದನ್ನು ಇಲ್ಲಿ ಸ್ಮರಿಸಬಹುದು.

ಪ್ರತಿನಿತ್ಯವೂ ಆಸ್ಥಾನದ ಜ್ಯೋತಿಷ್ಯರಿಂದ ತನ್ನ ಗ್ರಹಗತಿಯನ್ನು ಕೇಳಿಕೊಳ್ಳುತ್ತಿದ್ದನು. ತನಗೆ ಜಯ ದೊರಕಲೆಂದು ಹಿಂದೂ ಧರ್ಮಾಚರಣೆಗಳನ್ನೂ ಮಾಡಿಸುತ್ತಾ, ಬ್ರಾಹ್ಮಣರಿಗೆ ಅನ್ನ ಸಂತರ್ಪಣೆ ಮಾಡಿಸುತ್ತಿದ್ದನು. ಸಾರಸಂಗ್ರಹಿಯೂ, ಉದಾರ ಚರಿತನೂ, ಸುಸಂಪನ್ನ ಮನಸ್ಸಿನವನೂ, ವಿಶಾಲ ಮನೋಭಾವವುಳ್ಳವನೂ ಆದ ಟಿಪ್ಪುವಿನಲ್ಲಿ ಧಾರ್ಮಿಕ ದುರುದ್ದೇಶಗಳಿದ್ದುವೆಂದು ಭಾವಿಸುವುದು ತಪ್ಪಾಗುತ್ತದೆ. ನಿಷ್ಠಾವಂತ ಮುಸ್ಲಿಮನೆಂದರೆ ಅನ್ಯಧರ್ಮ ಸಹಿಷ್ಣುವೂ ಆಗಿರುತ್ತಾನೆ. ಅದಕ್ಕೆ ಒಳ್ಳೆಯ ನಿದರ್ಶನ ಟಿಪ್ಪು.

ಅವನು ಕೊಡವರನ್ನೂ, ಮಲಬಾರಿನ ನಾಯರುಗಳನ್ನೂ, ಮಾಪಿಳ್ಳೆಗಳನ್ನೂ, ಮಂಗಳೂರಿನ ಕ್ರೈಸ್ತರನ್ನೂ ದಮನ ಮಾಡಿದ್ದು ನಿಜ. ಆದರೆ ಅದು ರಾಜಕೀಯ ಉದ್ದೇಶಗಳಿಗಾಗಿಯೂ, ಇತರರಿಗೆ ಎಚ್ಚರಿಕೆ ನೀಡುವುದಕ್ಕಾಗಿಯೂ ಕೈಗೊಂಡ ಕಠಿಣ ಕ್ರಮಗಳಾಗಿದ್ದವು. ಟಿಪ್ಪುವಿಗೆ ಮೊಘಲ್ ಚಕ್ರವರ್ತಿಯಿಂದ ತನ್ನ ಸ್ಥಾನಕ್ಕೆ ಶಾಸನ ಬದ್ಧ ಒಪ್ಪಿಗೆ ದೊರೆಯಲಿಲ್ಲವಾದ ಕಾರಣ ಅವನು ಆಟೋಮನ್ ಸುಲ್ತಾನನಿಗೆ ನಿಯೋಗವನ್ನು

ಕಳುಹಿಸಿದ್ದನು. ಆದ್ದರಿಂದ ಅದು ಕೇವಲ ಧಾರ್ಮಿಕ ಭಾವನೆಯಿಂದಾಗಿರದೆ ರಾಜಕೀಯ ಹಿತಾಸಕ್ತಿಗಳಿಗೂ, ಸೈನ್ಯ ಸಹಾಯಕ್ಕೂ, ಕೈಗಾರಿಕೆಗಳ ಅಭಿವೃದ್ಧಿ ಹಾಗೂ ವ್ಯಾಪಾರ ವಾಣಿಜ್ಯಗಳಿಗೆ ಅನುಕೂಲವಾಗಲೆಂದೂ ಬಯಸಿದ್ದನು. ಫ್ರಾನ್ಸ್ ಚಕ್ರವರ್ತಿಯ ಬಳಿಗೂ ನಿಯೋಗವನ್ನು ಕಳುಹಿಸಿದ್ದನು. ಆತ ಮಲಬಾರಿನ ರಾಜರುಗಳ ಮೇಲೆ, ಮರಾಠಿಯರ ಮೇಲೆ ಹೇಗೆ ಯುದ್ಧ ಮಾಡಿದನೋ ಹಾಗೆಯೇ ನಿಜಾಮನ ಮೇಲೆ, ಸವಣೂರು, ಕರ್ನೂಲು, ಅದವಾನಿ ಹಾಗೂ ಆರ್ಕಾಟಿನ ನವಾಬರ ಮೇಲೂ ಯುದ್ದ ಮಾಡಿದನು.

ಮೊಹಿಬ್ಬುಲ್ ಹಸನ್ ಅವರು ತರ್ಕಿಸಿರುವಂತೆ ಟಿಪ್ಪುವಿನ ಮತೀಯ ಒಲವು ಅವನ ರಾಜ್ಯ ನೀತಿಯ ಮೇಲೆ ಪ್ರಭಾವ ಬೀರಲಿಲ್ಲವಾದರೂ, ತನ್ನ ಉದ್ದೇಶ ಸಾಧನೆಗಾಗಿ ಅಲ್ಲಿಂದೇನಾದರೂ ಸಹಾಯ ಸಿಕ್ಕುವುದಾದರೆ ಅದನ್ನೂ ಹಿಂಪಡೆದುಕೊಳ್ಳಲು ಆತ ಪ್ರಯತ್ನಿಸಿದ. ಈ ವಿಚಾರದಲ್ಲಿ ನಿಜಾಮನನ್ನು ತನ್ನತ್ತ ತಿರುಗಿಸಿಕೊಳ್ಳಲು ಪ್ರಯತ್ನಿಸಿದ, ಅದಾಗಲಿಲ್ಲ. ಆಟೋಮನ್ ಸುಲ್ತಾನನ ಬೆಂಬಲ ಪಡೆಯಲು ನೋಡಿದ ಅದೂ ಆಗಲಿಲ್ಲ. ಹಾಗೆಯೇ ಆಫ್ಘಾನಿಸ್ತಾನದ ಜಮಾಲ್ ಷಾಗೂ ಮನವಿ ಮಾಡಿಕೊಂಡ. ಆದರೆ ಇಂಗ್ಲೀಷರ ನಿಮಿತ್ತದಿಂದ ಅದೂ ಕೈಗೂಡಲಿಲ್ಲ, ಟಿಪ್ಪು ಫ್ರೆಂಚರಿಗೆ ನೆರವು ನೀಡಿ ಎಂದು ಮನವಿ ಸಲ್ಲಿಸಿದಂತೆಯೇ ಮುಸ್ಲಿಂ ಜಗತ್ತಿಗೂ ಮನವಿ ಸಲ್ಲಿಸಿದ್ದನು. ಆದರೆ ಇಂಗ್ಲೀಷರ ಹಂಗಿನಲ್ಲಿದ್ದ ಅಥವಾ ರಾಜಕೀಯ ಒತ್ತಡದಲ್ಲಿದ್ದ ಅವರ್ಯಾರೂ ಇವನಿಗೆ ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಇಂಥದೇ ಮನವಿಯನ್ನು ಮರಾಠರಿಗೂ ಮಾಡಿಕೊಂಡಿದ್ದನಲ್ಲದೇ ಅವರ ರಾಷ್ಟ್ರ ಪ್ರೇಮವನ್ನು ಎಚ್ಚರಿಸಿಯೂ ನೋಡಿದನು. ಆದರೆ ಈ ಯಾವೂವೂ ಸಫಲವಾಗಲಿಲ್ಲ.

ಎಲ್ಲಾ ಸರ್ವಾಧಿಕಾರಿಗಳಂತೆ ಟಿಪ್ಪು ಕೂಡ ತನ್ನ ವಿಜಯೋತ್ಸವಗಳನ್ನು ಹಾಡಿ ಹೊಗಳುತ್ತಿದ್ದ. ಆಸ್ಥಾನ ಕವಿಗಳ ಹೊಗಳಿಕೆಯನ್ನು ಕೇಳಿ ಹಿಗ್ಗುತ್ತಿದ್ದನು. ಆದರೆ ಅವನು ಸುಸಂಸ್ಕೃತ ಮನಸ್ಸು ಹಾಗೂ ಸರ್ವತೋಮುಖವುಳ್ಳ ಪ್ರತಿಭೆ. ಆತ ಕನ್ನಡ ಮತ್ತು ಹಿಂದುಸ್ತಾನಿ ಮಾತನಾಡುತ್ತಿದ್ದರೂ ಅವನ ಶಿಕ್ಷಣ ಮಾಧ್ಯಮವಾಗಿದ್ದ ಫಾರ್ಸಿಯಲ್ಲಿಯೇ ಹೆಚ್ಚು ವ್ಯವಹರಿಸುತ್ತಿದ್ದನು. ಟಿಪ್ಪುವಿಗೆ ವಿಜ್ಞಾನ, ವೈದ್ಯ, ವಾಸ್ತುಶಿಲ್ಪಗಳಲ್ಲಿ ಆಸಕ್ತಿ ಹೆಚ್ಚಾಗಿದ್ದರೂ ಅವನಿಗೆ ಇನ್ನೂ ಹೆಚ್ಚು ಪ್ರಿಯವೆನಿಸುತ್ತಿದ್ದುದು ದೇವತಾಶಾಸ್ತ್ರ ಹಾಗೂ ಸೂಫಿ ತತ್ವ. ಅನೇಕ ಸೂಫಿ ವಿದ್ವಾಂಸರೂ, ಕವಿಗಳು ಅವನ ಆಸ್ಥಾನದಲ್ಲಿದ್ದರು. ಆ ವಿಷಯಗಳ ಬಗ್ಗೆ ಆತ ಚರ್ಚಿಸಬಲ್ಲವನಾಗಿದ್ದ. ಅಂದವಾದ ಬರವಣಿಗೆ ಅವನಿಗೆ ತುಂಬಾ ಇಷ್ಟ ಆ ಬಗ್ಗೆ ಅವನೊಂದು ಅನ್ವೇಷಣಾ ಪ್ರಬಂಧವನ್ನೇ ಬರೆದಿರುವನು. ಟಿಪ್ಪು ಅತ್ಯುತ್ತಮ ಕಲಾಭಿರುಚಿಯುಳ್ಳ ವ್ಯಕ್ತಿ. ಅವನಲ್ಲಿದ್ದ ಹಸ್ತ ಪ್ರತಿಗಳ ಕೈ ಬರಹ ಸುಂದರವಾಗಿದೆ. ಅವನ ನಾಣ್ಯಗಳ ಛಾಪು

ಆಕರ್ಷಕವಾಗಿದೆ. ಅವನು ತನ್ನ ಪುಸ್ತಕಗಳನ್ನು ಒಪ್ಪ-ಓರಣ ಉಚಿತಾಲಂಕಾರಗಳಿಂದ ಜೋಡಿಸಿದ್ದನು. ಆತನ ವ್ಯಾಘ್ರಾಸನವು ಎದ್ದು ಕಾಣುವ ಚೆಲುವಿನಿಂದ ವೈಭವಯುಕ್ತವಾಗಿದ್ದಿತು. ಬುಖಾನನ್ ಅದನ್ನು ವರ್ಣಿಸಿ ದಾಖಲಿಸಿರುವಂತೆ ಅದು ಆ ಕಾಲಕ್ಕೆ ೧೩೦೦ ಗಿನಿ ಬೆಲೆ ಬಾಳುತ್ತಿತ್ತಂತೆ.

೭.೩ ಟಿಪ್ಪುವಿನ ಜಾತ್ಯಾತೀತತೆ

ಜಗತ್ತಿನಲ್ಲಿ ಇಂಗ್ಲೀಷರು ಯಾರಿಗೂ ಮಣಿಯುವವರಲ್ಲ ಎಂಬ ಪ್ರತಿಜ್ಞೆಯನ್ನು ಹೈದರ್ ಟಿಪ್ಪು ಇಲ್ಲವಾಗಿಸಲು ಪ್ರಯತ್ನಿಸಿದಾಗ ಅವರು ಕಸಿವಿಸಿಗೊಂಡರು. ಸಾಮಾಜಿಕ ಜೀವನದಲ್ಲಿ ಧರ್ಮವೆಂಬುದು ಅತಿ ಸೂಕ್ಷ್ಮವಾದ ಆಯುಧವಾಗಿರುತ್ತದೆ. ಇಂಗ್ಲೀಷರು ಅದನ್ನು ತಮ್ಮ ಆಕ್ರಮಣ ನೀತಿಗೆ ಅನುಕೂಲಕರವಾಗಿ ಬಳಸಲು ಮೊದಲು ಮಾಡಿದರು. ಆದ್ದರಿಂದ ಹಿಂದೂ ರಾಜವಂಶಕ್ಕೆ ಸೇರಿದ್ದ ಒಡೆಯರ್ ಸಂತಾನವನ್ನು ಗದ್ದುಗೆಗೇರಿಸಿ ಅವರ ಕೃತಜ್ಞತೆಗೆ ಪಾತ್ರಾಗಿದ್ದರು. ಬ್ರಿಟೀಷ್ ಚರಿತ್ರೆಕಾರರು ಮರೆತಿರುವ ಒಂದು ಅಂಶವೆಂದರೆ ಮಲಬಾರ್, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಟಿಪ್ಪು ಅಷ್ಟೊಂದು ಕ್ರೂರವಾಗಿ ನಿರ್ದಯವಾಗಿ ನಡೆದುಕೊಂಡುದು ರಾಜಕೀಯ ಕಾರಣಗಳಿಗಾಗಿ ಅವನು ಎಂಥ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲು ಹೇಸುತ್ತಿರಲಿಲ್ಲ. ದೇಶಕ್ಕಾಗಿ ತನ್ನ ಮಕ್ಕಳನ್ನು ಬೇಕಾದರೆ ಒತ್ತೆಯಾಳಾಗಿ ಇಡಲು ಆತ ಹಿಂದೆ ಮುಂದೆ ನೋಡಿದವನಲ್ಲ. ಅಂದ ಮೇಲೆ ರಾಜಕೀಯ ವಿದ್ರೋಹಿಗಳನ್ನು ಮೆದುವಾಗಿ ನಡೆಸಿಕೊಳ್ಳುತ್ತಾನೆಂದು ನಂಬುವುದಾದರೂ ಹೇಗೆ?

ಮೊಹಿಬಲ್ ಹಸನ್ ತಮ್ಮ ಟಿಪ್ಪು ಸುಲ್ತಾನನ ಇತಿಹಾಸದಲ್ಲಿ ಹೀಗೆ ಹೇಳುತ್ತಾರೆ. "ಇದಕ್ಕೆ ನಿಜವಾದ ವಿವರಣೆಯೆಂದರೆ ಅದು ಧಾರ್ಮಿಕ ಕಾರಣದಿಂದ ಅಲ್ಲ. ಅದರ ಉದ್ದೇಶ ರಾಜಕೀಯವಾದುದಾಗಿತ್ತು. ಮಹಮದೀಯೇತರ ಪ್ರಜೆಗಳು ಆಗಾಗ ದಂಗೆಯೆದ್ದು ತಪ್ಪಿತಸ್ಥರಾಗಿದ್ದುದರಿಂದ ಈ ಪರಿವರ್ತನೆಯು ಒಂದು ವಿಧವಾದ ಶಿಕ್ಷೆಯೆಂದು ಭಾವಿಸಿದ್ದನು. ಅದರಂತೆ ಅವನು ಕೊಡಗು ಮತ್ತು ಮಲಬಾರಿನ ಜನರು ತಮ್ಮ ದಂಗೆಕೋರ ಪ್ರವೃತ್ತಿಯನ್ನು ಬಿಡುವುದಾದರೆ ಅವರನ್ನು ಮತಾಂತರಗೊಳಿಸಬೇಕೆಂದು ಅಪ್ಪಣೆ ಕೊಟ್ಟನು. ಅವರು ಆರು ಸಾರಿ ದಂಗೆಯೆದ್ದರು. ಅವನು ಆರು ಬಾರಿಯೂ ಅವರನ್ನು ಮನ್ನಿಸಿದ. ಆದರೆ ಅವರು ಟಿಪ್ಪುವಿನ ಮನ್ನಣೆಯನ್ನು ತಿರಸ್ಕರಿಸಿ. ೭ನೇ ಬಾರಿ ದಂಗೆ ಎದ್ದಾಗ ಮತಾಂತರವನ್ನೇ ಒಂದು ಪರಮಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿದ. ಅಲ್ಲದೆ ಮಲಬಾರಿನ ನಾಯರ್‌ಗಳು ಮಂಗಳೂರು ಕಡೆಯಿಂದ ಬ್ರಿಟೀಷರು ಕೊಡಗಿಗೆ ಬರಲು ಅವಕಾಶ ಮಾಡಿಕೊಟ್ಟಿದ್ದರು. ಇತ್ತ ಟಿಪ್ಪು ಮರಾಠರೊಂದಿಗೆ ಮತ್ತು ಇಂಗ್ಲೀಷ್‌ರೊಂದಿಗೆ ಯುದ್ಧದಲ್ಲಿ ನಿರತನಾಗಿದ್ದಾಗ, ಅತ್ತ

ನಾಯರ್‌ಗಳು ದಂಗೆಯೆದ್ದು ಮತ್ತೆ-ಮತ್ತೆ ಕಿರುಕುಳ ಕೊಡುತ್ತಿದ್ದರು. ಇದೆಲ್ಲದರ ಪರಿಣಾಮವಾಗಿ ಟಿಪ್ಪು ನಿರ್ದಯವಾಗಿ ನಡೆದುಕೊಂಡ. ಇದೂ ಅಲ್ಲದೆ ಈ ವಿಚಾರದಲ್ಲಿನ ಟೀಕೆಗಳೆಲ್ಲ ಏನಿದ್ದರೂ ಟಿಪ್ಪುವಿನ ಯುದ್ಧ ಖೈದಿಗಳು ಸೆರಮನೆಯಲ್ಲಿ ನೀಡಿದ ಹೇಳಿಕೆಗಳಾಗಿವೆ. ಟಿಪ್ಪುವಿನ ಧಾರ್ಮಿಕ ನೀತಿಯನ್ನು ಕೇವಲ ಮಲಬಾರಿನ ನಾಯರ್‌ಗಳು, ಕೊಡಗಿನ ರಾಜರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತರು ಇವರ ಹೇಳಿಕೆಗಳ ಆಧಾರದಿಂದ ಮತ್ತು ಧೋರಣೆಯಿಂದ ಮಾತ್ರವೇ ಟೀಕಿಸಲಾಗುತ್ತದೆ.

ರಾಜ್ಯದ ಇನ್ನಿತರ ಭಾಗಗಳ ಜನಾಭಿಪ್ರಾಯಗಳು ಎಲ್ಲಿಯೂ ಹೀಗೆ ಕಂಡುಬರುವುದಿಲ್ಲ. ಟಿಪ್ಪು ಅಷ್ಟು ಕಂಟಕನಾದ ದೊರೆಯಾಗಿದ್ದರೆ ಈ ಕಡೆಯ ಜನಾಭಿಪ್ರಾಯ ಏಕೆ ಅದಕ್ಕೆ ತದ್ವಿರುದ್ಧವಾಗಿದೆ? ಬಯಲು ಸೀಮೆಯ ಕಥನ ಗೀತೆಗಳಲ್ಲಿ ಅವನನ್ನು ಮೈಸೂರು ಹುಲಿ ಎಂದು ಏಕೆ ಕರೆಯಲಾಗಿದೆ? ಈ ಕೊಂಡಾಟಕ್ಕೆ ಟಿಪ್ಪುವಿನ ಪಾತ್ರ ಸಮರ್ಥವಾಗಿದ್ದರೂ ಬ್ರಿಟೀಷ್ ಚರಿತ್ರೆಕಾರರು ತೇಲಿಸಿ ಬಿಡುತ್ತಾರೆ ಏಕೆ? ಬ್ರಿಟೀಷರೊಂದಿಗೆ ಶಾಮೀಲಾಗಿರುತ್ತಿದ್ದ ರಾಜದ್ರೋಹಿಗಳನ್ನು ಟಿಪ್ಪು ಕಠೋರವಾಗಿ ದಂಡಿಸಿದ್ದಾನೆ. ಅವನಲ್ಲಿದ್ದುದು ಕೇವಲ ಎರಡು ನೀತಿಗಳು ಮಾತ್ರ. ಒಂದು ಸ್ವದೇಶಿ; ಇನ್ನೊಂದು ವಿದೇಶಿ. ಮೊದಲನೆದರಿಂದ ತನ್ನ ರಾಜ್ಯವನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯುವುದು, ಎರಡನೆಯದು ಅದಕ್ಕೆ ಕಂಟಕವಾದ ವಸಾಹತುಗಾರರನ್ನು ಆಚೆ ಅಟ್ಟುವುದು.

ಟಿಪ್ಪುವಿನ ಎಲ್ಲಾ ಸುಧಾರಣಾ ಕ್ರಮಗಳ ಹಿಂದಿದ್ದ ಉದ್ದೇಶ ಎಂದರೆ ತನ್ನ ಎಲ್ಲಾ ಪ್ರಜೆಗಳು ಜಾತಿ, ಮತ, ವರ್ಗ, ಲಿಂಗ ತಾರತಮ್ಯವಿಲ್ಲದೆ ಸಂತೋಷವಾಗಿ, ಸಂಪದ್ಭರಿತವಾಗಿ ಇರಬೇಕು ಎಂಬುದಾಗಿತ್ತು. ಅವನ ಸುಧಾರಣಾ ಫಲಗಳು ಕೇವಲ ಮುಸ್ಲಿಮರಿಗೆ ಮಾತ್ರ ತಲುಪಿ ಅವು ಹಿಂದೂಗಳಿಗೆ ತಲುಪಬಾರದು ಎಂಬ ಮನೋಧರ್ಮದಿಂದ ಕೂಡಿರಲಿಲ್ಲ.

ರೈತರನ್ನು ಉದ್ಧರಿಸಲು ಆತ ಕೈಗೊಂಡಿರುವ ಸುಧಾರಣಾ ಕ್ರಮಗಳನ್ನು ನೋಡಿದರೆ ನಾವು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಾಗುತ್ತದೆ. ರೈತರಲ್ಲಿ ಬಹುಸಂಖ್ಯಾತರಾಗಿದ್ದವರು ಹಿಂದೂಗಳೇ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ರೈತ ಮಿತ್ರನಾದ ಟಿಪ್ಪು ಅವರ ಉದ್ಧಾರಕ್ಕೆಂದು ಪದೇ-ಪದೇ ಕಟ್ಟಾಜ್ಞೆಗಳನ್ನು ಹೊರಡಿಸುತ್ತಿದ್ದ. ಟಿಪ್ಪುವಿಗೆ ಇವರು ಹಿಂದೂ ರೈತರು, ಇವರು ಮುಸ್ಲಿಂ ರೈತರು ಎಂಬ ಭಿನ್ನ-ಭೇದ ಎಂದೂ ಸುಳಿಯಲಿಲ್ಲ. ಅದು ಅವನ ತಂದೆಯಿಂದ ದತ್ತವಾಗಿ ಬಂದಿದ್ದ ಹಿಂದು ಸದ್ಗುಣ. ಹೈದರ್ ತಮಿಳುನಾಡಿನ ಬರ ಪ್ರದೇಶದಿಂದ ನೂರಾರು ರೈತ ಕುಟುಂಬಗಳನ್ನು ಕರೆತಂದು ಕೊಳ್ಳೇಗಾಲ ಪ್ರಾಂತ್ಯದಲ್ಲಿ ನೆಲೆಗೊಳಿಸಿದ್ದನು. ಒಬ್ಬ ರಾಜನ ಉನ್ನತ ಆದರ್ಶಗಳು ಯಾವುವು? ಎಂಬುದನ್ನು ಟಿಪ್ಪು ಕಂಡುಕೊಂಡಿದ್ದನು. ತನ್ನ

ಪ್ರಜೆಗಳಿಗೆ ಪಕ್ಷಪಾತ ಮಾಡಿ, ಭಗವಂತನ ಅಸಮಾಧಾನಕ್ಕೆ ಪಾತ್ರನಾಗಬಾರದೆಂದು ಮುಸ್ಲಿಂ ಧರ್ಮದ ಬಗ್ಗೆ ಪ್ರತ್ಯೇಕತೆಯ ನೀತಿಯೂ ಇರಲಿಲ್ಲ. ಹಿಂದೂ, ಮುಸಲ್ಮಾನ, ಕ್ರೈಸ್ತ ಮುಂತಾಗಿ ಎಲ್ಲರನ್ನೂ ಸಮಾನ ಭಾವನೆಯಿಂದ ಗೌರವಿಸಿ ಅವರ ಹಿತರಕ್ಷಣೆಯಾಗಬೇಕೆಂದು ಆತ ಬಯಸಿದನು.

ಟಿಪ್ಪು ಬರೆದ ಆರನೇ ಪತ್ರ

"ರಾಜ್ಯಕ್ಷೋಭೆ ಪರಿಹಾರವಾಗಿ ಪ್ರಜೆಗಳು ಸ್ವಸ್ಥಳದಲ್ಲಿ ಇರುವ ಬಗ್ಗೆ ಸರಕಾರದ ಶ್ರೇಯೋಭಿವೃದ್ಧಿಯಾಗಿ, ಶತ್ರುನಾಶ ಆಗಬೇಕೆಂದು ತಮ್ಮ ಚಿತ್ತಕ್ಕೆ ತಂದು, ಸಹಸ್ರ ಚಂಡಿಜಪ ಮಾಡಿಸಬೇಕೆಂದು ಬರೆಸಿ ಕಳುಹಿಸಿದ್ದು ನೋಡಿ ಸಂತೋಷವಾಯಿತು. ಅದೇ ಪ್ರಕಾರ ಜಪ ಮಾಡತಕ್ಕ ಬಗ್ಗೆ ಬೇಕಾದ ಸಾಮಾನು ತರಿಸಿಕೊಡುವ ಹಾಗೆ ಹುಕುಂನಾಮೆ ಬರೆಸಿ, ಖಾಸ್‌ದಸ್ತಕತ್ ಮೊಹರು ಮಾಡಿ ಅಸಫನ ಬಳಿಗೆ ಕಳುಹಿಸಿದ್ದು."

ಟಿಪ್ಪು ಬರೆದ ಇಪ್ಪತ್ತನೇ ಪತ್ರ

ಟಿಪ್ಪುವಿನ ಇಪ್ಪತ್ತನೆಯ ಪತ್ರ ಈ ರೀತಿ ಇದೆ. "ನಮ್ಮ ಮನಸ್ಸಿನಲ್ಲಿ ಮೂರು ಬಲದ ಅಹಂಕಾರ ಇದೆ. ಅದು ಏನು ಎಂದರೆ ಮೊದಲು ಈಶ್ವರ ದಯಪೂರ್ಣವಾಗಿ ಇರುವುದು ಒಂದು. ಎರಡನೆಯದು ನಿಮ್ಮಂಥ ಗುರುಗಳ ಆಶೀರ್ವಾದ ಇರುವುದು. ಮೂರನೆಯದು ಆಯುಧಗಳು ಇರುವುದು. ಈ ಮೂರರಲ್ಲಿ ಈಶ್ವರ ಜಯ ಕೊಡಬೇಕಾದರೆ ನಿಮ್ಮಂಥ ದೊಡ್ಡವರ ಆಶೀರ್ವಾದದಿಂದಲೇ ಜಯವಾಗಬೇಕು. ಈ ಎಲ್ಲಾ ಪತ್ರಗಳು ಮೈಸೂರು ಪ್ರಾಚ್ಯಾಗಾರದ ವರದಿ ಕ್ರಿ.ಶ.೧೯೧೬ರಲ್ಲಿ ಅಡಕವಾಗಿದೆ.

ಟಿಪ್ಪು ಸುಲ್ತಾನ್ ತನ್ನ ರಾಜ್ಯದ ಬಹುಸಂಖ್ಯಾತ ಪ್ರಜೆಗಳ ಧಾರ್ಮಿಕ ಭಾವನೆಗಳಿಗೆ ಮನ್ನಣೆ ನೀಡಿ, ಅವರ ಪ್ರೀತ್ಯಾದರಗಳನ್ನು ಗಳಿಸುತ್ತಾನೆ. ತನ್ನ ರಾಜ್ಯದಲ್ಲಿ ಹಿಂದೂಗಳಿಗೆ ಪ್ರಮುಖವಾದ ಸ್ಥಾನಗಳನ್ನು ನೀಡಿರುತ್ತಾನೆ. ಪೂರ್ಣಯ್ಯನು ಮೀರ್ ಆಸಫ್ ಅಥವಾ ಪ್ರಧಾನ ಮಂತ್ರಿಯ ಸ್ಥಾನದಲ್ಲಿದ್ದನು. ಕೃಷ್ಣರಾಯನು ಅರ್ಥಮಂತ್ರಿಯಾಗಿದ್ದನು. ಶಾಮಯ್ಯ ಅಯ್ಯಂಗಾರನು ಅಂಚೆ ಗೃಹಮಂತ್ರಿಯಾಗಿದ್ದನು. ಈತನ ತಮ್ಮಂದಿರಾದ ರಂಗ ಅಯ್ಯಂಗಾರ್ ಮತ್ತು ನರಸಿಂಹರಾಯರು ಶ್ರೀರಂಗಪಟ್ಟಣದಲ್ಲಿ ದೊಡ್ಡ ಹುದ್ದೆಯಲ್ಲಿದ್ದರು.

ಶ್ರೀನಿವಾಸರಾಯ ಮತ್ತು ಅಪ್ಪಾಜಿರಾಮರವರು ಟಿಪ್ಪುವಿನ ಅಂತರಂಗದ ಗೆಳೆಯರಾಗಿದ್ದು, ಬಹುಮುಖ್ಯ ರಾಯಭಾರಗಳನ್ನು ವಹಿಸುತ್ತಿದ್ದರು. ಮೂಲ್‌ಚಂದ್ ಮತ್ತು ಸುಜ್ಞನರಾಯರು ಮೊಘಲ್ ಆಸ್ಥಾನದಲ್ಲಿ ಟಿಪ್ಪುವಿನ ನಿಯೋಗಿಗಳಾಗಿದ್ದರು. ನರಸಯ್ಯನು

ಟಿಪ್ಪುವಿನ ಮುನ್ಷಿಯಾಗಿದ್ದನು. ಪತ್ರ ವ್ಯವಹಾರಗಳ ಹೊಣೆ ಈತನದ್ದೇ ಆಗಿತ್ತು. ನಾಗಪ್ಪಯ್ಯ ಕೊಡಗಿನ ಫೌಜುದಾರನಾಗಿದ್ದನು. ಹರಿಸಿಂಗ್ ಅಶ್ವದಳದ ರಿಸಾಲ್ದಾರನಾಗಿದ್ದನು. ಶ್ರೀಪತಿರಾಯ್, ಶಿವಾಜಿರಾಯ ಹಾಗೂ ಅಶ್ವದಳದ ದಳಪತಿ ರಾಮರಾಯರು ಟಿಪ್ಪುವಿನ ಸೈನ್ಯದಲ್ಲಿ ಪ್ರಮುಖರು. ಟಿಪ್ಪುವಿನ ಧಾರ್ಮಿಕ ನೀತಿ ಹೇಗಿತ್ತೆಂಬುದಕ್ಕೆ ಇವು ಕೆಲವು ಉದಾರಣೆಗಳವೆ

ಟಿಪ್ಪುವಿನ ಬಗೆಗಿನ ವಿದ್ವಾಂಸರ ಅಭಿಪ್ರಾಯಗಳು

ಟಿಪ್ಪುವಿನ ಸ್ವಭಾವ ಮತ್ತು ವ್ಯಕ್ತಿತ್ವದ ಬಗ್ಗೆ ಚಿಂತನೆ ಮಾಡಿರುವ ಪ್ರಮುಖ ಲೇಖಕರ ಕೃತಿಗಳಿಂದ ಆಯ್ದ ಭಾಗಗಳನ್ನು ವಿವರಿಸಬಹುದು.

ಜಿ.ಎ.ಕಿರ್ಕ್‌ಪ್ಯಾಟ್ರಿಕ್–Asiatic Annual Register

"ಅವನ (ಟಿಪ್ಪುವಿನ) ಮನೋಧರ್ಮ ಸ್ವಾಭಾವಿಕವಾಗಿಯೇ ಕ್ರೂರವಾದುದಾಗಿತು, ಅವನ ಮಾನಸಿಕ ಪ್ರಕೃತಿ ಭಾವಾವೇಶಪೂರ್ಣವೂ, ಸೇಡಿನ ಸ್ವಭಾವದ್ದೂ ಆಗಿತ್ತು. ಅವನು ಬಯ್ಗಳ ಭಾಷೆಗೆ ಇಳಿಯುವಂಥವನು. ಅವನ ಮಾತುಗಳಲ್ಲಿ ಸುಳ್ಳೂ ತುಂಬಿತ್ತು. ಅವು ಬೂಟಾಟಿಕೆಯಾಗಿರುತ್ತಿದ್ದವು ತನ್ನ ಉದ್ದೇಶಕ್ಕೆ ಹೊಂದುವಂತೆ.

ಹನ್ನೆರಡು ಮಂದಿ ಪ್ರವಾದಿಗಳಲ್ಲಿ ತಾನು ಒಬ್ಬ ಪ್ರವಾದಿಯ ನಾಯಿಬ್(ಸಹಾಯಕ) ಎಂದು ಹೇಳಿಕೊಳ್ಳುತ್ತಿದ್ದ. ಈ ನಾಯಿಬರು ಇನ್ನೂ ಬರಬೇಕಾಗಿದೆ ಎಂದು ಮುಸ್ಲಿಮರು ನಂಬಿದ್ದಾರೆ. ಇತರ ಎಲ್ಲಾ ಜಾತಿಗಳವರನ್ನೂ ಅವನು ಹಿಂಸಿಸುತ್ತಾನೆ, ಅನೇಕರನ್ನು ಮುಸಲ್ಮಾನರಾಗುವಂತೆ ಒತ್ತಾಯಿಸುತ್ತಾನೆ. ತನ್ನ ತಂದೆಗೆ ಅಚ್ಚುಮೆಚ್ಚಾಗಿದ್ದಂಥವರ ವಿಷಯದಲ್ಲಿ ಅವನಿಗೆ ಅಸೂಯೆ ಇದೆ, ಪೂರ್ವಗ್ರಹ ಇದೆ. ಅವರಲ್ಲಿ ಬಹುಪಾಲಿನವರನ್ನು ಅವರ ಹುದ್ದೆಗಳಿಂದ ಅವನು ತೆಗೆದುಹಾಕಿದ್ದ, ಕೆಲವರಿಗೆ ಕೆಳಗಿನ ಹುದ್ದೆಗಳನ್ನು ನೀಡಿದ್ದ."

ಡಾಡ್‌ವೆಲ್ – 'Cambridge History of India'ದಲ್ಲಿ

"ಅವನು (ಟಿಪ್ಪು) ಕ್ರೂರ ಭಾವೋದ್ರೇಕಗಳ ಹಾಗೂ ಗಗನಗಾಮಿ ಮಹತ್ವಾಕಾಂಕ್ಷೆಗಳ ವ್ಯಕ್ತಿಯಾಗಿದ್ದ. ತನ್ನ ಅಧಿಕಾರ ಬಲದ ಬಗೆಗಿನ ತನ್ನದೇ ಆದ ಅಂದಾಜುಗಳಿಗೆ ಅವನ ಸಾಮರ್ಥ್ಯಗಳು ಸರಿದೋರಣೆಯಾಗಿರಲಿಲ್ಲ. ಅವನು ದೃಢವಾದ ನಂಬಿಕೆಯ ಮುಸಲ್ಮಾನನಾಗಿ, ಹಿಂದೂಗಳ ಜನಸಮುದಾಯದ ಮೇಲೆ ಆಳ್ವಿಕೆಯನ್ನು ನಡೆಸಿದ. ಅವರ ಸಾರ್ವಭೌಮರನ್ನು ಅವನ ತಂದೆ ಅಧಿಕಾರ ವಂಚಿತರನ್ನಾಗಿಸಿದ್ದ. ಅವರನ್ನು (ಅಂದರೆ ಆ

ಹಿಂದೂ ಸಮುದಾಯವನ್ನು) ಅವನು ಕ್ರೂರವಾಗಿ ಹಿಂಸಿಸಿದ್ದ. ಮೈಸೂರಿನ ಸುತ್ತ-ಮುತ್ತಲಿನ ಪ್ರದೇಶದ ಜನರು ಅವನ ವಿಷಯದಲ್ಲಿ ಅಸಹ್ಯಪಟ್ಟುಕೊಳ್ಳುತ್ತಿದ್ದರು. ಅವನ ರಾಜ್ಯದಲ್ಲಿ ಬ್ರಿಟೀಷರು ಸಮೃದ್ಧಿಯ ಲಕ್ಷಣಗಳನ್ನು ಕಂಡಿದ್ದರಾದರೂ, ಅವು ಖಂಡಿತವಾಗಿಯೂ ಅವನ ಪ್ರೇರಣೆಯ ಫಲವಾಗಿ ಆದಂಥವೇನೂ ಆಗಿರಲಿಲ್ಲ. ಅವನ ತಂದೆ ಬುದ್ಧಿವಂತನೂ (ಧರ್ಮ) ಸಹಿಷ್ಣುತೆಯ ಗುಣವನ್ನುಳ್ಳವನೂ ಆಗಿದ್ದ. ಇವನ ಸ್ವಭಾವ ಅವನಿಗೆ ತದ್ವಿರುದ್ಧವಾದುದಾಗಿತ್ತು".

ಲೆಫ್ಟಿನೆಂಟ್-ಕರ್ನಲ್ ಮಾರ್ಕ ವಿಲ್ಕ್ಸ್ (ತನ್ನ ವೈಯಕ್ತಿಕ ಅನುಭವದ ಆಧಾರದ ಮೇಲೆ)

"ಕರಾಳವೂ, ಅಸಹಿಷ್ಣುವೂ ಆದ ಧರ್ಮಾಂಧತೆ ನಿಜವಾದ ಆಸ್ತಿಕರನ್ನು ಹೊರತುಪಡಿಸಿ, ಉಳಿದವರೆಲ್ಲರನ್ನೂ ಟಿಪ್ಪುವಿನ ಆಯ್ಕೆಯಿಂದ ಹೊರಗುಳಿಸಿತು. ಮಿತಿಯೇ ಇಲ್ಲದ ಹಿಂಸಾಚಾರ ಅವನ ಆಳ್ವಿಕೆಯ ಬಗೆಗಿನ ಜಿಗುಪ್ಸೆಯಲ್ಲಿತ್ತು. ಅವನ ಪ್ರಾಂತ್ಯದಲ್ಲಿನ ಎಲ್ಲಾ ಹಿಂದುಗಳನ್ನೂ ಒಂದುಗೂಡಿಸಿತು. ಹಿಂದೂಗಳು ಎಷ್ಟೇ ಪ್ರತಿಭಾವಂತರಾಗಿದ್ದರೂ ಅವನ ಕೃಪೆಗೆ ಅದು ರಹದಾರಿಯಾಗುತ್ತಿರಲಿಲ್ಲ. ಮುಸಲ್ಮಾನರು ಯಾವುದೇ ಅಪರಾಧವನ್ನೆಸಗಿದರೂ, ಅವನ ಅವಕೃಪೆ, ಅಸಂತೋಷಗಳಿಗೆ ಪಾತ್ರರಾಗುತ್ತಿರಲಿಲ್ಲ. ಹೈದರನಲ್ಲಿ ಏನೇ ಅರೆ-ಕೊರೆಗಳಿದ್ದರೂ, ಯಾವುದೇ ಧರ್ಮದ ಅನುಯಾಯಿಯಾದರೂ ಅವನನ್ನು (ಧಾರ್ಮಿಕ) ಸಹಿಷ್ಣುತೆಯ ಒಂದು ಮಾದರಿಯನ್ನಾಗಿ ಪರಿಗಣಿಸಬಹುದಾಗಿತ್ತು. ಇತಿಹಾಸದಲ್ಲಿ ಹಿಂಸಾಚಾರ ಮಾತ್ರವೇ ಉಳಿದುಕೊಂಡಿದ್ದಂಥ ಅವಧಿಯಲ್ಲಿ, ಟಿಪ್ಪು ಅದರ ಅತ್ಯಂತ ಘೋರ-ಸ್ವರೂಪ ಪುನರುಜ್ಜೀವನಗೊಳ್ಳುವಂತೆ ಮಾಡಿದ, ಉತ್ತಮ ಭಾವನೆ ಬೀಡು ಬಿಟ್ಟಿದ್ದಂಥ ಸುದೀರ್ಘ ಅವಧಿಯ ಅನಂತರದಲ್ಲಿ ಕಾಣಿಸಿಕೊಂಡು, ಕತ್ತಿಯ ಅಲುಗಿನ ಆಧಾರದ ಮೇಲೆ ಧರ್ಮಪ್ರಸಾರ ಮಾಡಿದ ಕಟ್ಟಕಡೆಯ ಮುಸ್ಲಿಮ್ ರಾಜಕುಮಾರ ಅವನಾಗಿದ್ದ".

ಹುಸ್ಸೇನ್ ಅಲಿಖಾನ್ ಕೀರ್ಮಾನಿ

(ಟಿಪ್ಪುವಿನ ಸಮಕಾಲೀನ, ಈತನ ದೃಷ್ಟಿಯಲ್ಲಿ ಟಿಪ್ಪು ಪರಮ ವೀರನೇ ಆಗಿದ್ದ)

"ಅವನ ಮಾತುಕತೆ ಮತ್ತು ರೀತಿ-ನೀತಿಗಳು ಸಂತೋಷಕರವಾಗಿದ್ದವು. ವಿದ್ವಾಂಸರ ಸ್ವಭಾವವನ್ನು ಅಳೆದುನೋಡುವಲ್ಲಿ ಅವನು ತುಂಬ ವಿಲಕ್ಷಣನಾಗಿದ್ದ. ಮುಸಲ್ಮಾನರ ಸಮುದಾಯಕ್ಕೆ ಪ್ರೋತ್ಸಾಹ ಮತ್ತು ತಿಳುವಳಿಕೆ ನೀಡುವ ಸಲುವಾಗಿ ಅವನು ತುಂಬ ಶ್ರದ್ಧೆಯಿಂದ ದುಡಿದ. ಆದರೆ ಇತರ ಧರ್ಮಗಳಿಗೆ ಸೇರಿದ ವ್ಯಕ್ತಿಗಳ ವಿಷಯದಲ್ಲಿ ಅವನಿಗೆ ಪ್ರೀತಿ ಇರಲಿಲ್ಲ ಅಥವಾ ಅಸಹ್ಯ ಭಾವನೆಯೇ ಇತ್ತು. ಇಸ್ಲಾಮ್ ಧರ್ಮಕ್ಕೆ ಹಾಗೂ ಸುನ್ನಿ ಸಂಪ್ರದಾಯದ ಧಾರ್ಮಿಕ ಸೂತ್ರಗಳಿಗೆ ಅಥವಾ ಕಟ್ಟು-ಪಾಡುಗಳಿಗೆ ಪ್ರೋತ್ಸಾಹ ಮತ್ತು ರಕ್ಷಣೆ

ನೀಡುವುದೇ ಅವನ ಮುಖ್ಯ ಗುರಿ ಮತ್ತು ಧ್ಯೇಯ ಆಗಿತ್ತು. ನಿಷೇಧಿತ ಆಚರಣೆಗಳಿಂದ ಸ್ವತಃ ಅವನು ಹಿಂದೆ ಸರಿದಿರುವುದು ಮಾತ್ರವಲ್ಲ, ಅಂಥ ಕಾರ್ಯಗಳನ್ನು ಎಸಗದಂತೆ ತನ್ನ ಸೇವಕರಿಗೆ ಅವನು ಕಟ್ಟಪ್ಪಣೆ ಮಾಡಿದ್ದ".

ಸಿ.ಹಯವದನರಾವ್ (History of Mysore)

"ತನಗೆ ಶರಣು ಬಂದವರೊಡನೆ ಏರ್ಪಡಿಸಿಕೊಂಡಿದ್ದ ಕರಾರು ನಾಮೆಗಳ ಮತ್ತು ಗಂಭೀರವಾದ ಸಂಧಿಯ ಷರತ್ತುಗಳನ್ನು ಟಿಪ್ಪು ವ್ಯವಸ್ಥಿತವಾಗಿ ಉಲ್ಲಂಘಿಸುತ್ತ ಬಂದಿದ್ದು ಉನ್ನತ ರಾಜಕೀಯ ಮತ್ತು ನೈತಿಕ ಸಹಜ ಪ್ರವೃತಿಗಳಿಗೆ ಅಸಹ್ಯವನ್ನುಂಟು ಮಾಡುವ ವಿಚಾರವೇ ಆಗಿದೆ. ಅವನ ಧಾರ್ಮಿಕ ದುರಭಿಮಾನ ಹಾಗೂ ಧರ್ಮದ ಹೆಸರಿನಲ್ಲಿ ಮೈಸೂರಿನಲ್ಲಿ ಮತ್ತು ಇತರ ಪ್ರದೇಶಗಳಲ್ಲಿ ವಿಶೇಷವಾಗಿ ಮಲಬಾರಿನಲ್ಲಿ, ಅದರಲ್ಲಿಯೂ ಕೊಡಗಿನಲ್ಲಿ ಅವನು ಎಸಗಿದ ಅತ್ಯಾಚಾರಗಳು ಎಂದೆಂದಿಗೂ ನಿಂದ್ಯವಾಗಿಯೇ ಉಳಿಯುತ್ತವೆ. ಇಷ್ಟರ ಮಟ್ಟಿನ ಛೀಮಾರಿಗಿಂತಲೂ ಹೆಚ್ಚಿನ ಛೀಮಾರಿ ಅಗತ್ಯವಾಗಿರುವಂಥ ಬೇರಾವುದೇ ಮುಖ ಅವನ ಸ್ವಭಾವದಲ್ಲಿ ಇಲ್ಲ. ಅವನ ಧರ್ಮಾಂಧತೆ ಅದೆಷ್ಟು ತೀವ್ರವಾಗಿದ್ದಿತೆಂದರೆ ಅದು ಧಾರ್ಮಿಕ ಅಥವಾ ಸಾಮಾಜಿಕ ವಿಚಾರಗಳಲ್ಲಿ ಇತರರ ಭಾವನೆಗಳ ಬಗೆಗೆ ಸಹಿಷ್ಣುತೆಯನ್ನು ತೋರುವ ಎಲ್ಲಾ ಆಲೋಚನೆಗಳನ್ನೂ ಹೊರಗಿಟ್ಟು ಬಿಟ್ಟಿತು. ಅವನು ಶೃಂಗೇರಿಯ ಗುರುಗಳ ಜೊತೆಯಲ್ಲಿ ಪತ್ರವ್ಯವಹಾರವನ್ನು ಮುಂದುವರಿಸಿಕೊಂಡುಬಂದಿದ್ದ. ಅದು ಅವರಿಗೆ ತಮ್ಮ ಧಾರ್ಮಿಕ ಚಟುವಟಿಕೆಗಳನ್ನು ಕಿರುಕುಳವಲ್ಲದೆ ಮುಕ್ತವಾಗಿ ನಡೆಸಿಕೊಂಡು ಹೋಗಲು ಅವಕಾಶ ಮಾಡಿಕೊಡುವುದಕ್ಕಿಂತಲೂ ಹೆಚ್ಚಾಗಿ, ಅದರಿಂದ ತನಗೆ ಲಾಭ ಲಭಿಸಬಹುದೆಂದು ಅವನು ನಿರೀಕ್ಷಿಸಿದ್ದ ಯಾವುದೇ ಕಾಲದಲ್ಲಿ ಇಂಥ ಇನ್ನೊಂದು ನಿದರ್ಶನ ಇತಿಹಾಸದಲ್ಲಿ ದಾಖಲಾಗಿಲ್ಲ.

ರಾಜ್ಯದ ಯಾವ ಕಾನೂನುಬದ್ಧ ಪ್ರಭುಗಳಿಗೆ ತಾವು ವಿಧೇಯ ಸೇವಕರೆಂದು ಹೇಳಿಕೊಳ್ಳುವ ನಾಟಕವನ್ನು ಅವನು ಮತ್ತು ಅವನ ತಂದೆ ಆಡುತ್ತ ಬಂದಿದ್ದರೋ, ಆ ರಾಜನ ವಿಷಯದಲ್ಲಿ ಟಿಪ್ಪು ನಡೆದುಕೊಂಡ ರೀತಿಯೂ ಅಷ್ಟೇ ಕ್ರೂರವಾದುದಾಗಿತ್ತು. ಅರಮನೆಯನ್ನು ಅವನು ಮತ್ತೆ-ಮತ್ತೆ ಕೊಳ್ಳೆಹೊಡೆದದ್ದು ಹಾಗೂ ರಾಜಮನೆತನದ ಸದಸ್ಯರನ್ನು ಅಪಮಾನಗಳಿಗೆ ಗುರಿಯಾಗಿಸಿದ್ದು – ಇವು ಅವನಲ್ಲಿದ್ದ ನೀತಿಯ ಎಳೆ ದುರ್ಬಲಗೊಳ್ಳುತ್ತ ಹೋಗಿತ್ತು ಎಂಬುದನ್ನೇ ಸೂಚಿಸುತ್ತದೆ. ಯಾವುದೇ ಹುದ್ದೆ ಮತ್ತು ಸ್ಥಾನಮಾನಗಳನ್ನು ತಾನೇ ಪಡೆದುಕೊಳ್ಳಲು ಅವನು ಪ್ರಯತ್ನಿಸುತ್ತಿದ್ದನೋ ಅದರ ಬಗೆಗಿನ ಅವನ ಈ ವರ್ತನೆ ಅದಕ್ಕೆ ತಗ್ಗುವಂಥದಾಗಿರಲಿಲ್ಲ. ಈ ಒಂದು ಅಪರಾಧ ಪಡೆದುಕೊಂಡ ಕುಖ್ಯಾತಿ ಜನರ ಮನಸ್ಸಿನ

ಮೇಲೆ ಎಂಥ ಪ್ರಭಾವವನ್ನು ಬೀರಿತೆಂದರೆ ಅವನು ಹೊರಿಸಿದ್ದ ಆ ಭಯಂಕರ ನೊಗವನ್ನು ಕಿತ್ತೊಗೆಯಲು ಜನರು ಮತ್ತೆ-ಮತ್ತೆ ಅನೇಕ ಪ್ರಯತ್ನಗಳನ್ನು ನಡೆಸಿದರು. ಈ ಪ್ರಯತ್ನಗಳಲ್ಲಿ ಹಿಂದೂಗಳಂತೆಯೇ ಮುಸ್ಲಿಮರೂ ಮುಂಚೂಣಿಯಲ್ಲಿದ್ದರು ಎಂಬುದನ್ನು ವಿಹಿತ ರೀತಿಯಲ್ಲಿ ಒಪ್ಪಿಕೊಳ್ಳಬೇಕಾಗಿದೆ. ಟಿಪ್ಪುವಿನ ಸಾವಿನ ಬಳಿಕ, ಅವನಿಗೆ ಪ್ರಿಯವಾಗಿದ್ದ ಆ ಕಾರ್ಯದ ಸೌಧ ಸಂಪೂರ್ಣವಾಗಿ ಕುಸಿದು-ಬಿತ್ತು. ತನ್ನ ಸಹಧರ್ಮಿಯರ ಮೇಲಾಗಲೀ ತಾನು ಸತತವಾಗಿ ಕ್ರೌರ್ಯಕ್ಕೆ ಗುರಿಯಾಗಿಸಿದ್ದ ಹಿಂದೂಗಳ ಮೇಲಾಗಲೀ ಅವನಿಗೆ ಯಾವುದೇ ಹಿಡಿತ ಇರಲಿಲ್ಲವೆಂಬುದನ್ನು ಈ ಪ್ರಸಂಗ ತೋರಿಸಿಕೊಡುತ್ತದೆ. ತನ್ನ ಪ್ರಜೆಗಳ ಮನಸ್ಸಿನಲ್ಲಿ ನೈತಿಕ ಜವಾಬ್ದಾರಿಯ ಯಾವುದೇ ಎಳೆಯಿಂದ ಬಂಧಿತನಾಗಿರುವ ಅನುಭವ ಅವನಿಗೆ ಆಗಿರಲಿಲ್ಲ. ತಾವು ಅವನಿಗೆ ವಿಧೇಯರಾಗಿರಬೇಕು ಎಂಬ ಭಾವನೆಯೂ ಪ್ರಜೆಗಳ ಮನಸ್ಸಿನಲ್ಲಿ ಮೂಡಿರಲಿಲ್ಲ. ಅವನ ಮತ್ತು ಮೈಸೂರಿನ ಜನಗಳ ನಡುವೆ ರಾಜ ಮತ್ತು ಪ್ರಜೆಗಳ ನಡುವಣ ಹಾಗೂ ಅವುಗಳಿಂದಾಗುವ ಅಸಹನೀಯ ಕ್ಲೇಶ ಸಂಕಟಗಳಲ್ಲಿ ಸಿಲುಕಿಸಿದನೋ, ಮನಬಂದಂತೆ ಯಾರನ್ನು ಬಿಡಿ-ಬಿಡಿಯಾಗಿಯೂ ಕೊಳ್ಳೆಹೊಡೆದನೋ, ಅದುವರೆಗೆ ಆ ನಾಡಿನಲ್ಲಿ ಯಾರೂ ಕಂಡುಕೇಳರದಿದ್ದಂಥ ಅ ನ್ಯಾಯ, ಅಪಮಾನಗಳಿಗೆ ಅಕಾರಣವಾಗಿ ಅಥವಾ ಅನುಚಿತವಾಗಿ, ಯಾರನ್ನು ಗುರಿಪಡಿಸಿದನೋ ಆ ಪ್ರಜೆಗಳ ವಿಷಯದಲ್ಲಿ ತಾನು ನಿರ್ವಹಿಸಬೇಕಾಗಿರುವ ಜವಾಬ್ದಾರಿಯೂ ಇವೆ ಎಂದು ಟಿಪ್ಪು ಎಂದೂ ಯೋಚಿಸಲೇ ಇಲ್ಲ.

ಟಿಪ್ಪುವಿನ ಸ್ವಭಾವದಲ್ಲಿ ಇದ್ದ ಇನ್ನೊಂದು ದೌರ್ಬಲ್ಯವೆಂದರೆ ಆಡಳಿತಾತ್ಮಕ ವಿಚಾರಗಳಲ್ಲಿ ಸ್ಥಿರವಾದಂಥ ನಿಲುವೇ ಇಲ್ಲದೆ ಹೋದುದು. ತನ್ನ ಸೇನಾಪತಿಗಳ ವಿಷಯದಲ್ಲಿನ ಅಪನಂಬಿಕೆ, ಮಾನವ ಸ್ವಭಾವದ ಬಗೆಗಿನ ಅರಿವು ಇಲ್ಲವೆ ಇದ್ದುದು ಮತ್ತು ಅವನ ಅಪರಿಪೂರ್ಣ ರಾಜಕೀಯ ವಿವೇಕ- ಇವು ಅವನ ಸ್ವಭಾವದಲ್ಲಿದ್ದ ಮೂಲಭೂತ ದೋಷಗಳು. ಇವುಗಳಿಂದಾಗಿ ಸನ್ನಿವೇಶದ ಮೂಲಾಂಶಗಳನ್ನು ಗ್ರಹಿಸುವ ವಿಚಾರದಲ್ಲಿ ಅವನು ಸಂಪೂರ್ಣವಾಗಿ ಅಸಮರ್ಥನೇ ಆಗಿಬಿಟ್ಟಿದ್ದ. ಅವನ ಒಣ ಹೆಮ್ಮೆ, ಅವನ. ಬಡಾಯಿ ಕೊಚ್ಚಿಕೊಳ್ಳುವ ಪ್ರವೃತ್ತಿ, ಸಂದಿಗ್ಧ ಸನ್ನಿವೇಶಗಳನ್ನು ಎದುರಿಸಬೇಕಾದ ಕ್ಷಣಗಳಲ್ಲಿ ಅವನು ತೋರುತ್ತಿದ್ದ ಅಸಿದ್ಧತೆ ಅಥವಾ ಅಂಜುಕುಳಿತ್ವ ಇವು ಅವನ ಸ್ವಭಾವದ ಇತರ ವೈಲಕ್ಷಣಗಳಾಗಿದ್ದವು ಹಾಗೂ ಉಲ್ಲೇಖ ಯೋಗ್ಯವಾಗಿರುವಂಥ ಸಂಗತಿಗಳು ಆಗಿದ್ದವು.

ಇಷ್ಟಾಗಿಯೂ ಇವುಗಳಲ್ಲೆಲ್ಲ ಅತ್ಯಂತ ಹೀನಾಯವಾಗಿದ್ದ ದೋಷವೆಂದರೆ ಸತ್ಯದ ಬಗೆಗಿನ ಉಪೇಕ್ಷೆ. ಅವನು ಹೇಳಿದ್ದು ಒಂದಾದರೆ, ಮಾಡಿದ್ದು ಇನ್ನೊಂದಾಗಿರುತ್ತಿತ್ತು. ಬ್ರಿಟೀಷರ ವಿಷಯದಲ್ಲಿ ಅವನು ಅನುಸರಿಸಿದ ವಂಚನೆಯ ರೀತಿ ಹಾಗೂ ನರಗುಂದದ ವಿಷಯದಲ್ಲಿ

ಅವನು ನಡೆದುಕೊಂಡ ಬಗ್ಗೆ-ಇವು ಅವನ ಸ್ವಭಾವದ ಈ ವೈಲಕ್ಷಣ್ಯಗಳನ್ನು ನಿದರ್ಶಿಸುತ್ತವೆ. ಇದು ಮೂಲಭೂತವಾದ ದೋಷವಾಗಿತ್ತು. ಮಿತ್ರಪಕ್ಷವಾಗಿ ಅಪ್ರಮಾಣಿಕ ನೆರೆಯವನಾಗಿ ಅವಿಶ್ವಾಸಾರ್ಹ ಹಾಗೂ ಯುದ್ಧದಲ್ಲಿ ನಂಬಲಾಗದವನು ಎಂಬ ಮುದ್ರೆಯನ್ನು ಇದು ಅವನ ವ್ಯಕ್ತಿತ್ವದ ಮೇಲೆ ಒತ್ತಿಬಿಟ್ಟಿತು.

ಟಿಪ್ಪುವಿನ ಸ್ವಭಾವದ ಉದ್ಧಾರಕ ಲಕ್ಷಣಗಳಲ್ಲಿ ಟಿಪ್ಪುವಿನ ದಣಿವರಿಯದ ಚೈತನ್ಯವೂ ಒಂದಾಗಿದೆ ಎಂಬುದನ್ನು ಹಯವದನರಾವ್ ಎತ್ತಿತೋರಿಸಿದ್ದಾರೆ. ಇದು ಕ್ರಿ.ಶ.೧೭೯೨ರ ಅಪಜಯಗಳಿಗೆ ಮುನ್ನ ಅವನು ಅವಿಶ್ರಾಂತವಾಗಿ ಒಂದು ವಿಜಯದಿಂದ-ಇನ್ನೊಂದು ವಿಜಯ ಹಾಗೂ ಒಂದು ರಣರಂಗದಿಂದ-ಇನ್ನೊಂದು ರಣರಂಗಕ್ಕೆ ಮುನ್ನಡೆಯುವಂತೆ ಮಾಡುತ್ತಿತ್ತು ಅವನ ಸ್ವಭಾವದ ಇನ್ನೊಂದು ಇತ್ಯಾತ್ಮಕ ಲಕ್ಷಣವೆಂದರೆ ತನ್ನ ತಾಯಿಯ ಬಗ್ಗೆ ಇರಿಸಿಕೊಂಡಿದ್ದ ಗೌರವ. ತಾನು ಇರಿಸಿಕೊಂಡಿದ್ದ ದೃಷ್ಟಿಕೋನಕ್ಕೆ ವಿರುದ್ಧವಾಗಿದ್ದರೂ ಅವನು ಆಕೆಯ ಸಲಹೆಯನ್ನೆಂದೂ ಅಗೌರವಿಸುತ್ತಿರಲಿಲ್ಲ. ಇಸ್ಲಾಮ್ ಧರ್ಮದ ಬಗೆಗಿನ ಅವನ ಹಠೋತ್ಸಾಹವನ್ನು ಮಾತ್ರ ಅವಳು ಬದಲಾಯಿಸಲಾರದೆ ಹೋದಳು. ಇದಕ್ಕೆ ಅವನು ಬಾರಿ ಬೆಲೆಯನ್ನೇ ತೆರಬೇಕಾಯಿತು. ಕಣ್ಣಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಸಂದರ್ಭದಲ್ಲಿ ಅವನ ತಾಯಿ ಅವನನ್ನು ಗಂಭೀರವಾಗಿ ತರಾಟೆಗೆ ತೆಗೆದುಕೊಂಡಿದ್ದರಿಂದ, ಅವನು ಈ ಪ್ರಕರಣದ ಬಗ್ಗೆ ಕೊಟ್ಟ ಕೊನೆಯ ಕ್ರಮಗಳನ್ನು ಕೈಗೊಳ್ಳಲಿಲ್ಲ".

ಲೆವಿನ್ ಬಿ.ಬೌರಿಂಗ್- Haider Ali and Tippu Sulthan

"ಧಾರ್ಮಿಕ ಅಂಧಾಭಿಮಾನ, ಅಂತರಾಳದ ಕ್ರೌರ್ಯ ಮತ್ತು ನಿರಂಕುಶ ಪ್ರಭುತ್ವ ಇವುಗಳ ಒತ್ತಡಕ್ಕೊಳಗಾಗಿ, ತನ್ನ ಉಜ್ವಲ ಉತ್ಸಾಹ ಮತ್ತು ಸೇಡಿನ ಭಾವನೆಗಳಿಗಾಗಿ, ಸಾವಿರಾರು ಜೀವಗಳನ್ನು ಬಲಿಗೊಡುವ ಬಗ್ಗೆ ಅಷ್ಟಾಗಿ ಯೋಚಿಸದೆ ಹೋದ ದೊರೆಯ ಸ್ವಭಾವನ್ನು ತೋರಿಸುವ ಸಲುವಾಗಿ ಸಾಕಷ್ಟು ಮಾತುಗಳನ್ನು ಹೇಳಲಾಗಿದೆ. ಈ ವಿಷಯದಲ್ಲಿ ಅವನು ಘಜ್ನಿ ಮಹಮ್ಮದ್, ನಾದಿರ್ ಶಾ ಮತ್ತು ಖೂನಿ (ಕೊಲೆಗಾರ) ಎಂಬ ಉಪನಾಮವನ್ನೇ ಹೊಂದಿದ್ದ. ದೆಹಲಿಯ ಪಠಾಣ ಚಕ್ರವರ್ತಿ ಅಲ್ಲಾ-ಉದ್-ದೀನ್ ಅವರಿಗೆ ಪ್ರತಿಸ್ಪರ್ಧಿಯೇ ಆಗಿದ್ದ. ಇವರೆಲ್ಲರೂ ತಮ್ಮ ಅಪ್ಪಣೆಯಂತೆ ನಡೆಸಲಾದ ನಾಸ್ತಿಕರ ಕಗ್ಗೊಲೆಯ ಸಂಖ್ಯೆಯಿಂದಾಗಿ ಪ್ರಸಿದ್ಧರಾಗಿದ್ದಾರೆ. ಅವನು ನಡೆಸಿದ ಹಿಂಸಾಚಾರಗಳ ಫಲವಾಗಿ ಉಂಟಾದ ಕ್ರೌರ್ಯವೇನೇ ಆಗಿರಲಿ, ಧರ್ಮಕ್ಕಾಗಿ ತೋರಿದ ಈ ಅತ್ಯುತ್ಸಾಹಕ್ಕಾಗಿ ದಕ್ಷಿಣ ಭಾರತದಲ್ಲಿನ ಅವನ ಸಹಧರ್ಮಿಯರು ಟಿಪ್ಪು ಸುಲ್ತಾನನ ಹೆಸರನ್ನು ಬಹುಕಾಲದಿಂದಲೂ ಗೌರವದಿಂದ ಸ್ಮರಿಸುತ್ತಾ ಇದ್ದಾರೆ. ತಮ್ಮ ಚೀತ್ಕಾರದಿಂದ ಗಗನವನ್ನೇ ತುಂಬಿರುವಂಥ ಅಪರಾಧಗಳನ್ನೂ

ತಾನು ನಂಬಿರುವ ಧರ್ಮವನ್ನು ಪ್ರಸಾರ ಮಾಡುವ ಪ್ರಾಮಾಣಿಕ ಅಭೀಪ್ಸೆಯಿಂದ ಚೋದಿತನಾಗಿ ಆ ವ್ಯಕ್ತಿ ಅಂತ ಅಪರಾಧಗಳನ್ನೆಸಗಿರಬಹುದೆಂಬ ಭಾವನೆಯಿಂದ ಅದೆಷ್ಟು ಸುಲಭವಾಗಿ ಕ್ಷಮಿಸಿಬಿಡಲಾಗುತ್ತದೆ ಎಂಬುದಕ್ಕೆ ಇದು ಇನ್ನೊಂದು ಸಾಕ್ಷ್ಯಾಧಾರವಾಗಿದೆ".

=ಪ್ರೋ ಬಿ.ಶೇಖ್ ಅಲಿ

"ಜಾತ್ಯಾತೀತ ನೀತಿ, ಆತನ ಮತ್ತೊಂದು ವಿಶಿಷ್ಟ ಗುಣ. ಟಿಪ್ಪು ಹಿಂದೂ-ಮುಸ್ಲಿಂ ಮೈತ್ರಿಯ ಪ್ರತಿರೂಪ ಎಂದು ಗಾಂಧೀಜಿ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆದರು. ಶೃಂಗೇರಿ ಮಠಕ್ಕೆ ಟಿಪ್ಪು ಬರೆದ ಪತ್ರಗಳಲ್ಲಿ ಆತ ಹಿಂದೂ ಧಾರ್ಮಿಕ ಸಂಸ್ಥೆಗಳ ಬಗ್ಗೆ ತಾಳಿದ್ದ ಗೌರವ ಭಾವವನ್ನು ಎತ್ತಿ ಹಿಡಿಯುತ್ತದೆ. ಚಿಂತನೆ ಮತ್ತು ಕ್ರಿಯೆಯಲ್ಲಿ ಟಿಪ್ಪು ಕ್ರಾಂತಿಕಾರಿಯಾಗಿದ್ದ. ಆತನ ವಿರೋಧಿಗಳು ಆತನಿಗಿದ್ದ ದಾರ್ಶನಿಕ ಗುಣಗಳನ್ನು ಕೊಂಡಾಡಿದ್ದಾರೆ".

ಡಾ:ಕೆ.ಕೆ.ರೈ

"ನವಾಬ್ ಹೈದರ್ ಆಲಿಯು ಹೇಗೆ ಪರಮತ ಸಹಿಷ್ಣುವಾಗಿದ್ದರೋ ಅದೇ ರೀತಿಯಾಗಿ ಟಿಪ್ಪು ಸುಲ್ತಾನರ ಹೃದಯದಲ್ಲಿಯೂ ಪ್ರತಿಯೊಂದು ಧರ್ಮ ಮತ್ತು ಜನಾಂಗಕ್ಕೆ ಗೌರವವಿದ್ದಿತು. ಇದಕ್ಕೆ ದ್ಯೋತಕವಾಗಿ ಕರ್ನಾಟಕ ರಾಜ್ಯದ ಎಲ್ಲಾ ದೇವಾಲಯಗಳು ಮೂಕಸಾಕ್ಷಿಯಾಗಿ ನಿಂತಿವೆ.

ಮೈಸೂರನ್ನು ಮುಸ್ಲಿಂ ಮತೀಯ ಸುಲ್ತಾನರು ಆಳುತ್ತಿದ್ದ ಕಾಲದಲ್ಲಿ ಹಿಂದೂ ಮತೀಯರಿಗೆ, ಅದರಲ್ಲೂ ರಾಜ್ಯದಲ್ಲಿ ಅಧಿಕ ಸಂಖ್ಯಾತರಾದ ಕನ್ನಡಿಗರಿಗೆ ಅನ್ಯಾಯ ಮಾಡಲಿಲ್ಲವೆಂಬುದಕ್ಕೆ ಶ್ರೀರಂಗಪಟ್ಟಣದ ಒಂದು ಅತ್ಯುತ್ತಮ ದೃಶ್ಯವೇ ಸಾಕ್ಷಿಯಾಗಿದೆ. ಅಲ್ಲಿನ ಪ್ರಾಚೀನ ರಂಗನಾಥ ದೇವಾಲಯ ಹಿಂದೂಗಳಿಗೆ ಅತ್ಯಂತ ಪವಿತ್ರ ಸ್ಥಳ. ಟಿಪ್ಪು ಆ ದೇವಾಲಯಕ್ಕೆ ಎದುರಾಗಿ ಒಂದು ಸುಂದ ಭವನ ಕಟ್ಟಿಸಿ, ಅಲ್ಲಿ ವಿಶ್ರಾಂತಿ ಪಡೆಯಲು ಹೋಗುತ್ತಿದ್ದ. ಇಂದಿಗೂ ಅದು ಆಕರ್ಷಕವಾಗಿದೆ".

ಸಿ.ಜಿ.ಕೃಷ್ಣಸ್ವಾಮಿ

"ಆತನ ವೀರ ಮರಣವೂ ಕೂಡ ಗಾಂಧೀಜಿಯ ಮರಣದಂತೆ ದೇಶದ್ರೋಹಿಗಳನ್ನು ಬೆನ್ನು ಹತ್ತುತ್ತಲೇ ಇದೆ. ಟಿಪ್ಪು ಬ್ರಿಟೀಷರ ವಿರುದ್ಧ ಬಂಡೆದ್ದವನು. ಹಾಗೆಯೇ ತನ್ನ ಮಣ್ಣಿನ ಋಣ ತೀರಿಸಲು ಸ್ವತಃ ತನ್ನ ಮಕ್ಕಳನ್ನೇ ಅಡವಿಟ್ಟನು. ಅವರನ್ನು ಬಿಡಿಸಿಕೊಳ್ಳಲು ಪಾನ

ನಿಷೇಧದ ಬಗ್ಗೆ ಮಂತ್ರಿ ಮೀರ್ ಸಾದಿಕ್ ಸಭೆಯಲ್ಲಿ ಒಪ್ಪಿಗೆ ಸೂಚಿಸಿದಾಗ, ಟಿಪ್ಪು ಕಿಡಿಯಾಗಿ ನನ್ನ ಮಕ್ಕಳಿಗೋಸ್ಕರ ಬೇರೆಯವರ ಜೀವ ಹಿಂಡಲಾರೆ ಎಂದು ಹೇಳಿದ್ದನ್ನು ಯಾವ ಚರಿತ್ರೆಕಾರನು ಮರೆಯುವಂತಿಲ್ಲ. ತನ್ನ ಸುತ್ತಲಿನ ಕೋಟೆ ಕುಸಿಯುತ್ತಿದೆ ಎಂದು ಆತ ತಿಳಿದಾಗ ಬ್ರಿಟೀಷರ ಜೊತೆ ರಾಜಿಗೆ ಒಪ್ಪದೆ ಕತ್ತಿ ಹಿಡಿದು ತನ್ನನ್ನೇ ತಾನು ಶ್ರೀರಂಗಪಟ್ಟಣಕ್ಕೆ ಪಣವಾಗಿಟ್ಟನು. ಫ್ರೆಂಚ್ ಕ್ರಾಂತಿಯನ್ನು ತನ್ನದೇ ಕ್ರಾಂತಿಯೆಂದು ತಿಳಿದು, ಆ ಕ್ರಾಂತಿಯ ಹೆಸರಿನಲ್ಲಿ ಅನೇಕ ಮರಗಳನ್ನು ನೆಟ್ಟು, ಸ್ವಾತಂತ್ರ್ಯ, ಸೋದರತೆ, ಸಮಾನತೆಯೆಂದು ಸಂತಸಪಟ್ಟನು".

ಎಚ್.ಎಲ್.ನಾಗೇಗೌಡ

"ಟಿಪ್ಪು ಎಷ್ಟು ಕ್ರೂರಿಯೋ ಅಷ್ಟೇ ದಯಾಳು ಆಗಿದ್ದ. ಶಿಕ್ಷೆಗೊಳಗಾದ ಕ್ರೈಸ್ತರ ಗೋಳನ್ನು ನೋಡಿ, ಆತನ ಮನಸ್ಸು ಕರಗುತ್ತಿತ್ತು. ಅಯ್ಯೋ! ಎಂದು ಅಳುತ್ತಿದ್ದ. ತಾನೇ ವಿಧಿಸಿದ ಶಿಕ್ಷೆಗೆ ಸಂಕಟಪಡುತ್ತಿದ್ದ. ಅಯ್ಯೋ! ನನ್ನ ಮಕ್ಕಳೇ! ಎಂದು ವ್ಯಸನ ಪಡುತ್ತಿದ್ದ. ಸೆರೆ ಹಿಡಿದವರನ್ನು ಒಳ್ಳೊಳ್ಳೆ ಕೆಲಸಗಳಿಗೆ ನೇಮಿಸಿದ".

ಕ್ಷೇತ್ರ ಕಾರ್ಯವನ್ನು ಕೈಗೊಂಡು ವಿದ್ವಾಂಸರನ್ನು ಭೇಟಿಯಾದಾಗ. ಅವರು ಟಿಪ್ಪುವಿನ ಬಗ್ಗೆ ನೀಡಿರುವ ಅಭಿಪ್ರಾಯಗಳನ್ನು ಮುದ್ರಿಸಲಾಗಿದೆ.

ಬಂಜಗೆರೆ ಜಯಪ್ರಕಾಶ್

"ಗಂಜಾಂ, ಹಳೆಯ ಮೈಸೂರು ಸಂಸ್ಥಾನ, ದಲಿತ ಸಮುದಾಯ, ರೈತಾಪಿ ಜನ ಸಮುದಾಯಗಳು ವಿವಿಧ ರೀತಿಯಲ್ಲಿ ಟಿಪ್ಪುವನ್ನು ಬಣ್ಣಿಸುವರು. ಟಿಪ್ಪು ನೆಲಮಂಗಲದ ಕಬ್ಬಾಳಮ್ಮನ ಗುಡ್ಡದ ಕೋಟೆಯಲ್ಲಿ ಶತ್ರುಗಳನ್ನು ಇರಿಸುತ್ತಿದ್ದ. ಟಿಪ್ಪು ಹಣವು ಸಾಲದೇ ಬಂದಾಗ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಳಾಗಿ ಇಟ್ಟನು. ಆಗ ಹಿಂದೂ ಅಧಿಕಾರಿಗಳು ತೆರಿಗೆಯನ್ನು ಹೆಚ್ಚಿಸಿ ಎಂದು ಟಿಪ್ಪುವನ್ನು ಕೇಳಿದರೂ, ಹೆಚ್ಚಿಸಲಿಲ್ಲ. ಅಂತಹ ಸಂದರ್ಭದಲ್ಲಿ ಶ್ರೀರಂಗಪಟ್ಟಣದ ಜನತೆ ತಮ್ಮ-ತಮ್ಮ ಮನೆಗಳಲ್ಲಿನ ಬಂಗಾರ, ಬೆಳ್ಳಿ ತಂದು ಅರಮನೆಯ ಮುಂದೆ ಸುರಿದರು. ಆದ್ದರಿಂದಲೇ ಟಿಪ್ಪು ಇಂದಿಗೂ ಜನನಾಯಕ" ಎಂದೆನಿಸಿದ್ದಾನೆ.

ನಂಜಯ್ಯ ಹೊಂಗನೂರು

"ಜಾಗತಿಕ ಮಟ್ಟದ ಚರಿತ್ರೆಯಲ್ಲಿ ಟಿಪ್ಪು ಅತ್ಯಂತ ಹೆಸರುವಾಸಿ. ಮುಸಲ್ಮಾನ ರಾಜರಲ್ಲಿ ಟಿಪ್ಪು ನೀಡಿದ ಕೊಡುಗೆಯಷ್ಟು ಬೇರೆ ಯಾವ ರಾಜನು ನೀಡಿಲ್ಲ. ಮಹಮ್ಮದ್ ಘಜ್ನಿ,

ಮಹಮ್ಮದ್-ಬಿನ್-ತೊಘಲಕ್‌ನಂಥ ಅರಸರು ದೇಶವನ್ನು ಕೊಳ್ಳೇ ಹೊಡೆದರೇ ವಿನಾ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿಲ್ಲ. ಯುದ್ಧಗಳ ಸಂದರ್ಭದಲ್ಲಿ ಮೇಲುಕೋಟೆ ಚೆಲುವ ನಾರಾಯಣ ಸ್ವಾಮಿಗೆ ಪ್ರಾರ್ಥಿಸುತ್ತಿದ್ದ. ಈತ ವಿದೇಶಿಯರೊಂದಿಗೆ ಸಂಬಂಧ ಹೊಂದಿರುವುದರ ಜೊತೆಗೆ, ತಮಿಳುನಾಡಿನ ಹೊಗೇನಕಲ್ ಬಳಿ ರಹಸ್ಯ ಸ್ಥಳವನ್ನು ಹೊಂದಿದ್ದ. ದೇಶೀಯ ರಾಜರು ಟಿಪ್ಪುವಿಗೆ ಬೆಂಬಲಿಸದ ಕಾರಣ, ಟಿಪ್ಪು ವೀರ ಮರಣವನ್ನಪ್ಪಬೇಕಾಯಿತು. ಟಿಪ್ಪು ರಾಷ್ಟ್ರೀಯವಾದಿಯಾಗಿ, ಜಾತ್ಯಾತೀತವಾದಿಯಾಗಿ ಮೈಸೂರಿನ ಜನರಲ್ಲಿ ಸದಾ ನೆಲೆಸಿದ್ದಾನೆ".

ಫರೀದ್ ಅಹಮದ್ ಖಾನ್

"ಟಿಪ್ಪುವಿನ ತಾತ ಫತೇ ಮಹಮ್ಮದ್ ಶಿರಾದಲ್ಲಿ ನೆಲೆಸಿದ್ದರು. ಬ್ರಿಟೀಷರೊಂದಿಗೆ ಕೈ ಜೋಡಿಸದ ಏಕ ಮಾತ್ರ ವ್ಯಕ್ತಿ ಟಿಪ್ಪು ಆಗಿದ್ದಾನೆ. ಟಿಪ್ಪು ಬ್ರಿಟೀಷರೊಂದಿಗೆ ಹೋರಾಡಿದ ಮೊದಲ ಭಾರತೀಯ ಸೇನಾನಿ. ಭಾರತದ ಮೊದಲ ವಿಜ್ಞಾನಿ. ಟಿಪ್ಪುವನ್ನು ಒಪ್ಪಿಕೊಳ್ಳಲು ತೆರೆದ ಮನಸ್ಸಿರಬೇಕು. ಆತನ ತ್ಯಾಗ, ಪರಾಕ್ರಮವನ್ನು ಮುಂದಿನ ಪೀಳಿಗೆಯವರಿಗೆ ತಿಳಿಸಲು ಪಠ್ಯಕ್ರಮದಲ್ಲಿ ಅಳವಡಿಸಬೇಕು. ಇತ್ತೀಚೆಗೆ ಹರಾಜಾದ ಆತನ ಉಂಗುರದಲ್ಲಿ ಶ್ರೀರಾಮ ಎಂದಿರುವುದರಿಂದ ಆತ ಜಾತ್ಯಾತೀತ ವ್ಯಕ್ತಿಯಾಗಿದ್ದ ಎಂಬುದನ್ನು ಪುರಾವೆ ಸಹಿತ ಸಾಕ್ಷಿಯಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಕೆಂಪೇಗೌಡನನ್ನು ನಾವು ಗುರುತಿಸುತ್ತಿದ್ದೇವೆ ವಿನಾ ಟಿಪ್ಪುವನ್ನಲ್ಲ. ಅಲ್ಲದೇ, ಟಿಪ್ಪುವನ್ನು ಕನ್ನಡ ವಿರೋಧಿ ಎಂದು ಕರೆಯುತ್ತಿರುವುದು ಅತ್ಯಂತ ಸೋಜಿಗದ ಸಂಗತಿಯಾಗಿದೆ. ಇಂದಿನ ಯಾವ ಕ್ಷೇತ್ರದ ಅಭಿವೃದ್ಧಿ ನೋಡಿದರೂ, ಅದು ಟಿಪ್ಪು ಹಾಕಿ ಕೊಟ್ಟ ತಳಪಾಯದ ಮೇಲೆ ನಿಲ್ಲುತ್ತವೆ".

ಪ್ರೊ. ಕೋಡಿರಂಗಪ್ಪ

"೧೭-೧೮ನೇ ಶತಮಾನದಲ್ಲಿ ಮೇರು ನಕ್ಷತ್ರವಾಗಿ ಗುರುತಿಸಲ್ಪಡುವ ವ್ಯಕ್ತಿ ಟಿಪ್ಪು ಸುಲ್ತಾನ್. ಟಿಪ್ಪು ಸುಲ್ತಾನ್ ದೊರೆಯಾಗಿದ್ದರೂ, ತೀಕ್ಷ್ಣ ಮತ್ತು ಮುಂದಾಲೋಚನೆ ಹೊಂದಿದ್ದ. ನೈತಿಕತೆ, ಮಾನವೀಯತೆ, ಮೌಲ್ಯಗಳ ಆಧಾರದ ಮೇಲೆ ಭಾರತವನ್ನು ಬ್ರಿಟೀಷರ ಕಪಿ ಮುಷ್ಠಿಯಿಂದ ಬಿಡಿಸಲು ಯತ್ನಿಸಿದ. ಆಪ್ತ ಸಲಹೆಗಾರರು ಹಿಂದುಗಳಾಗಿದ್ದರೆ, ಸೇನಾ ವ್ಯವಸ್ಥೆಯಲ್ಲಿ ಮುಸ್ಲಿಂ ಧರ್ಮದವರಿದ್ದರು. ಟಿಪ್ಪುವಿನ ಹಿರಿಮೆಗೆ ಅರಮನೆಗಳು, ಕೋಟೆ-ಕೊತ್ತಲಗಳು ಮೂಕ ಸಾಕ್ಷಿಯಾಗಿ ನಿಲ್ಲುತ್ತವೆ. ಸರ್ಕಾರ ಇವುಗಳನ್ನು ಹಂತ-ಹಂತವಾಗಿ ಸಂರಕ್ಷಿಸಿ, ಆತನ ವ್ಯಕ್ತಿತ್ವಕ್ಕೆ ಮೆರಗು ನೀಡಲಿ. ಆತನ ವಸ್ತುಗಳನ್ನು ಸರ್ಕಾರ ಲಂಡನ್‌ನಿಂದ ವಾಪಸ್ಸು ತಂದು ಆತನ ಶ್ರೇಯೋಅಭಿವೃದ್ಧಿಗೆ ಬಳಸಿಕೊಳ್ಳಲಿ".

೭.೫ ಟಿಪ್ಪು ಬಗ್ಗೆ ಜನಪದರ ಅಭಿಪ್ರಾಯಗಳು

'ಟಿಪ್ಪು ಜನಪದ ಕಥನ' ಮಹಾಪ್ರಬಂಧಕ್ಕೆ ಸಂಬಂಧಿಸಿದಂತೆ ನಾನು ಕ್ಷೇತ್ರಕಾರ್ಯಕ್ಕೆಂದು ಬೆಂಗಳೂರು, ಮೈಸೂರು, ಶ್ರೀರಂಗಪಟ್ಟಣ, ಶೃಂಗೇರಿ, ಶಿರಾ, ಕೋಲಾರ, ದೇವನಹಳ್ಳಿ, ಮಂಗಳೂರು, ಮಡಿಕೇರಿ ಮತ್ತು ನಂದಿಬೆಟ್ಟ ಸ್ಥಳಗಳಿಗೆ ಭೇಟಿ ನೀಡಿ, ಜನಪದರನ್ನು ಸಂದರ್ಶಿಸಿದಾಗ ಅವರು ಕೊಟ್ಟಂತಹ ಅಭಿಪ್ರಾಯಗಳು ಹೀಗಿವೆ.

೧. ಷಫಿವುಲ್ಲಾ (ಪಾತ್ರೆ ಮಾರುವುದು, ದೇವನಹಳ್ಳಿ)

"ಟಿಪ್ಪು ಹೈದರಾಲಿಯ ಎರಡನೆ ಹೆಂಡತಿಯ ಮಗ, ಹೈದರಾಲಿಯ ಮೊದಲನೇ ಹೆಂಡತಿಗೆ ಮಕ್ಕಳಿಲ್ಲದಿದ್ದರಿಂದ, ಎರಡನೆ ಹೆಂಡತಿಯಾದ ಫಕ್ರುನ್ನೀಸಾ ಮಸ್ತನ್-ಔಲಿಯ ಫಿರ್ (ಸಂತ) ನಿಗೆ ಹರಕೆ ಹೊತ್ತಾಗ, ಆ ಸಂತನ ಕೃಪೆಯಿಂದ ಟಿಪ್ಪು ಹುಟ್ಟಿದನಂತೆ".

೨. ದೊಡ್ಡಣ್ಣಾಚಾರಿ (ಕುಲುಮೆ ತಟ್ಟುವುದು, ದೇವನಹಳ್ಳಿ)

"ಟಿಪ್ಪು ಬೇಟೆಗಾಗಿ ಕಾಡಿಗೆ ಹೋಗಿದ್ದ. ಆಕಸ್ಮಿಕವಾಗಿ ಹುಲಿ ಎದುರಾದಾಗ ಹುಲಿಯೊಂದಿಗೆ ಹೋರಾಡಿ, ಹುಲಿಯನ್ನು ಕೊಂದನಂತೆ. ಅವನ ಈ ಧೈರ್ಯ, ಸಾಹಸಕ್ಕೆ ಮೆಚ್ಚಿ ಜನರು ಅವನನ್ನು ಟಿಪ್ಪು ಸುಲ್ತಾನ್ ಎಂದು ಕರೆದರಂತೆ".

೩. ಕುಮಾರ್ (ದರಿಯಾ ದೌಲತ್ ಗೈಡ್, ಶ್ರೀರಂಗಪಟ್ಟಣ)

"ನಮ್ಮ ತಾತಂದಿರು ನೂರಾರು ವರ್ಷಗಳ ಹಿಂದೆ ಬದುಕಿದ್ದಾಗ ಟಿಪ್ಪು ತುಂಬಾ ಕೋಪಿಷ್ಠ ವ್ಯಕ್ತಿ. ಅಷ್ಟೇ ಪರಾಕ್ರಮಿ. ದೇವಾಲಯಗಳಲ್ಲಿ 'ಟ್ರೆಸರಿ' ಪದ್ಧತಿ ತಂದ ಮೊದಲ ಅರಸ ಟಿಪ್ಪು. ಬ್ರಾಹ್ಮಣರು ಬಿಟ್ಟರೆ ಬೇರೆ-ಬೇರೆ ಯಾವುದೇ ಜನಾಂಗ ಟಿಪ್ಪುವನ್ನು ದ್ವೇಷಿಸುತ್ತಿರಲಿಲ್ಲವಂತೆ".

೪. ಅಹಮ್ಮದ್ (ಮೌಲ್ವಿ, ಬೆಂಗಳೂರು)

"ನಾವೆಲ್ಲರೂ ೭ನೇ ತರಗತಿಯಲ್ಲಿ ಓದುತ್ತಿದ್ದಾಗ ಇತಿಹಾಸ ಶಿಕ್ಷಕರು ಟಿಪ್ಪುವನ್ನು ಕುರಿತು ಸಾಕಷ್ಟು ಹೇಳುತ್ತಿದ್ದರು. ಅವರು ಟಿಪ್ಪು ಬಗ್ಗೆ ಪಾಠ ಮಾಡುತ್ತಿದ್ದ ರೀತಿಯಿಂದಲೇ ನಮ್ಮಲ್ಲೂ ಸಾಕಷ್ಟು ಧೈರ್ಯ ಬರುತ್ತಿತ್ತು".

೫. ಗೋವಿಂದ (ಗೈಡ್, ಬೆಂಗಳೂರು)

"ಟಿಪ್ಪು ಒಬ್ಬ ಮಹಾನ್ ವ್ಯಕ್ತಿ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ತರಲು ಹೋರಾಡಿದವರು. ನಮ್ಮ ದೇಶದ ಜನರು ಸುಭಿಕ್ಷವಾಗಿರಬೇಕೆಂದು ಟಿಪ್ಪು ಬಯಸಿದ್ದರು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಇಂತಹ ಮಹಾನ್ ವ್ಯಕ್ತಿ ಕ್ರಿ.ಶ.೧೭೯೯ರ ಮೇ ೪ ರಂದು ನಾಲ್ಕನೇ ಮೈಸೂರು ಯುದ್ಧದಲ್ಲಿ ವೀರ ಮರಣ ಹೊಂದಿದರು".

೬. ದಶರಥ (ಹೆಡ್ ಕಾನ್‌ಸ್ಟೇಬಲ್, ನಂಜನಗೂಡು)

"ಮೈಸೂರು ಹುಲಿ ಬಿರುದಿಗೆ ತಕ್ಕಂತೆ ವರ್ತಿಸಿ, ದೇವಾಲಯಕ್ಕೆ ಅಮೂಲ್ಯವಾದ ಬೆಲೆ ಕಟ್ಟಲಾಗದ ದಾನ-ದತ್ತಿಯನ್ನು ನೀಡಿ ಧರ್ಮ ಸಹಿಷ್ಣು ಎನಿಸಿಕೊಂಡಿದ್ದಾನೆ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಅಂಗದ ವಿಗ್ರಹ, ಕಂಠೀಹಾರ ಕಾಣಿಕೆಯನ್ನು ನೀಡಿ ಇತಿಹಾಸದಲ್ಲಿ ತನಗೊಂದು ಸ್ಥಾನವಿದೆ ಎಂಬುದನ್ನು ಜನತೆಯ ಮೂಲಕ ವ್ಯಕ್ತಪಡಿಸಿದ್ದಾನೆ".

೭. ಕೊಂದಂಡರಾಮ (ಗುಜರಿ ವ್ಯಾಪಾರಿ, ಶಿರಾ)

"ಟಿಪ್ಪು ಸುಲ್ತಾನ್ ಬಗ್ಗೆ ನಾನು ಪ್ರಾಥಮಿಕ ಶಾಲೆಯಲ್ಲಿ ಓದಿದ್ದೆ. ಅವರು ನಮ್ಮ ನಾಡಿನ ಹುಲಿ. ಇವರ ತಂದೆಯವರು ಹೈದರಾಲಿಯವರು. ಇವರ ಕೊಡುಗೆ ನಮ್ಮ ದೇಶಕ್ಕೆ ಮಹತ್ತರವಾದುದು. ಬ್ರಿಟಿಷರ ವಿರುದ್ಧ ಹೋರಾಡಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ವ್ಯಕ್ತಿ. ಅವರಿಂದ ನಾವು ಕಲಿಯಬೇಕಾಗಿರುವುದು ಬಹಳ ಇದೆ. ಆದರೆ ಅವರನ್ನು ಒಂದು ಜನಾಂಗಕ್ಕೆ ಮೀಸಲಾಗಿರಿಸಿರುವುದು ವಿಪರ್ಯಾಸ. ಆದರೆ ಅವರು ಒಂದು ಜನಾಂಗದ ಆಸ್ತಿಯಲ್ಲ, ನಮ್ಮೆಲ್ಲರ ಆಸ್ತಿ".

೮. ಶಿವಕುಮಾರ (ಗೈಡ್, ನಂದಿಬೆಟ್ಟ)

"ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯ ಹೇಗೆ ಪ್ರಸಿದ್ಧಿ ಪಡೆದಿತ್ತೋ ಹಾಗೆ ಟಿಪ್ಪು ಸುಲ್ತಾನ್ ಕೂಡ ಪ್ರಸಿದ್ಧಿ ಪಡಿದಿದ್ದ. ಆತ ನನಗೆ ತಿಳಿದಂತೆ ಯಾವ ದೇವಾಲಯಗಳನ್ನು ನಾಶಪಡಿಸಿಲ್ಲ. ಆದ್ದರಿಂದಲೇ ಜನರು ಟಿಪ್ಪುವನ್ನು ಟಿಪ್ಪು ಸುಲ್ತಾನ್ ಎಂದು ಕರೆಯುತ್ತಿದ್ದರು. ಅವನ ತಂದೆ ಹೈದರಾಲಿ ಖಾನ್. ಹಿಂದೆ ಟಿಪ್ಪು ಕುದುರೆ ಮೇಲೆ ಕುಳಿತು ತನ್ನ ಸೈನಿಕರೊಂದಿಗೆ ಈ ಮಣ್ಣಿನ ರಸ್ತೆಯಲ್ಲಿ (ಚಿಕ್ಕಬಳ್ಳಾಪುರ-ಬೆಂಗಳೂರು) ಬಂದು. ತನ್ನ ಕುದುರೆಗಳನ್ನು ಇಲ್ಲಿ ಕಟ್ಟಿ ಹಾಕುತ್ತಿದ್ದ. ಆದ್ದರಿಂದ ಈ ಬೀದಿಗೆ 'ಸುಲ್ತಾನ್ ಪೇಟೆ' ಎಂದು ಕರೆಯುತ್ತಿದ್ದರು. ಈಗಲೂ ಈ ಬೀದಿಯನ್ನು ಜನರು ಕರೆಯುವುದು 'ಸುಲ್ತಾನ್ ಪೇಟೆ'ಎಂದು".

೯. ಸತ್ತಾರ (ಮೀನು ವ್ಯಾಪಾರಿ, ಮಂಗಳೂರು)

"ಹಿಂದೂ ಮತ್ತು ಮುಸ್ಲಿಂರ ಸಾಮರಸ್ಯಕ್ಕೆ ಕಾರಣನಾದ ವ್ಯಕ್ತಿ ಟಿಪ್ಪು ಸುಲ್ತಾನ್. ಆತನಿಗೆ ಹಿಂದೂಗಳು ಬೆಂಬಲ ನೀಡಿದ್ದರೆ, ಬಿಟೀಷರು ಆಗಲೇ ಭಾರತದಿಂದ ಕಾಲ್ತೆಗೆಯುತ್ತಿದ್ದರು. ಆ ಕಾಲದಲ್ಲೇ ಬ್ರಿಟೀಷರ ಮುಂದಾಲೋಚನೆ ಅರಿತ ಚಾಣಾಕ್ಷ ಯೋಧ".

೧೦. ಉಮೇಶ್ ಭಟ್ (ಅಂಗಡಿ ವ್ಯಾಪಾರಿ, ಮಂಗಳೂರು)

"ಟಿಪ್ಪು ಒಬ್ಬ ಸ್ವಾತಂತ್ರ್ಯವೀರ. ಆ ಕಾಲದ ರಾಜಕೀಯ ಒತ್ತಡಕ್ಕೆ ಸಿಲುಕಿ, ಬ್ರಿಟೀಷರನ್ನು ಭಾರತದಿಂದಲೇ ಓಡಿಸಬೇಕೆಂಬ ಹಂಬಲದಿಂದ ಟಿಪ್ಪು ಮತಾಂಧತೆ ಪ್ರದರ್ಶಿಸಿರಬಹುದೇ ವಿನಾ ಉದ್ದೇಶಪೂರ್ವಕವಾಗಿ ಅಲ್ಲ. ಮಂಗಳೂರಿನ ಕೋಟೆಯ ಸಮುದ್ರ ತೀರದ ಮೂಲಕ ವ್ಯಾಪಾರವನ್ನು ಅಭಿವೃದ್ಧಿಪಡಿಸಿ, ಮಂಗಳೂರು ವಾಣಿಜ್ಯ ಕ್ಷೇತ್ರವಾಗಲೂ ಪ್ರಯತ್ನಿಸಿದ್ದಾನೆ. ಸ್ಥಳೀಯರಿಗೆ ವ್ಯಾಪಾರ, ವ್ಯವಹಾರದ ಕಲ್ಪನೆಯನ್ನು ಮೂಡಿಸಿದ ವ್ಯಕ್ತಿ ಟಿಪ್ಪು ಆಗಿದ್ದಾನೆ.

೧೧. ಯಜ್ಞೇಶ (ಪ್ರವಾಸಿ, ಶೃಂಗೇರಿ)

"ಟಿಪ್ಪುವನ್ನು ಮೈಸೂರು ಹುಲಿ ಎಂದು ಕರೆಯುವರು. ಟಿಪ್ಪು ಮೇಲ್ನೋಟಕ್ಕೆ ಮುಸ್ಲಿಂ ರಾಜನಾದರೂ, ಹಿಂದೂ ಧರ್ಮವನ್ನು ಗೌರವಿಸುತ್ತಿದ್ದ. ಅವನಿಗೆ ಸಲಹೆ, ಸೂಚನೆ, ಮಾರ್ಗದರ್ಶನ ನೀಡುತ್ತಿದ್ದ ಎಲ್ಲರೂ ಹಿಂದೂ ಧರ್ಮದವರೇ ಆಗಿದ್ದರು".

೧೨. ಡಾ.ವಿ.ಆರ್. ಗೌರಿಶಂಕರ್ (ಸಿ.ಇ.ಒ, ಶೃಂಗೇರಿ ಮಠ)

"ಟಿಪ್ಪು ಭಾರತವನ್ನು ಬ್ರಿಟೀಷರ ಸಂಕೋಲೆಗಳಿಂದ ಬಿಡಿಸಲು ಪ್ರಯತ್ನಿಸಿದ ಒಬ್ಬ ವೀರ. ಶೃಂಗೇರಿ ಮಠಕ್ಕೆ ದಾನ-ದತ್ತಿಯನ್ನು ನೀಡುತ್ತಿದ್ದ. ಅಲ್ಲದೇ ಅವನು ಶೃಂಗೇರಿ ಮಠಕ್ಕೆ ಕಿರೀಟವನ್ನು ಕಾಣಿಕೆಯಾಗಿ ನೀಡಿದ್ದ. ಈಗಲೂ ಪ್ರತಿ ನವರಾತ್ರಿಯಲ್ಲಿ ಈ ಕಿರೀಟವನ್ನು ಜಗದ್ಗುರುಗಳಿಗೆ ತೊಡಿಸಿ ದರ್ಬಾರ್ ನಡೆಸುವರು.

೧೩. ಶಿವಕುಮಾರ್, (ಸುಲ್ತಾನ್ ಪೇಟೆ, ನಂದಿ)

"ಹಿಂದೆ ಜನರು ತಪ್ಪು ಮಾಡಿದಾಗ ಶಿಕ್ಷಿಸಲು ಟಿಪ್ಪು ಅವರನ್ನು ಟಿಪ್ಪು ಡ್ರಾಪ್ ನಿಂದ ನೂಕುತ್ತಿದ್ದ. ಹಿಂದಿನಿಂದಲೂ ಜನರು ಟಿಪ್ಪು ತಾನು ಸಂಪಾದಿಸಿದ ನಿಧ್ಧಿಯನ್ನು ಬಚ್ಚಿಡಲು ಬೆಟ್ಟಗಳಿಂದ ಆವೃತವಾದ ಈ ಸ್ಥಳವನ್ನು ಆಯ್ಕೆ ಮಾಡಿಕೊಂಡಿದ್ದ ಎಂಬ ನಂಬಿಕೆ ಇದೆ. ಆದರೆ ಈ ನಿಧಿ ಯಾರಿಗೂ ಇಂದಿಗೂ ದೊರೆತಿಲ್ಲ. ಟಿಪ್ಪು ಕೂಡ ಸತ್ತು ವೀರಸ್ವರ್ಗ ಸೇರಿದ್ದಾನೆ".

೧೪. ಮುಸ್ತಫ (ಪೋಲೀಸ್, ನಂದಿಬೆಟ್ಟ)

"ಟಿಪ್ಪು ತನ್ನ ತಂದೆಯಂತೆ ಅವಿದ್ಯಾವಂತನಾಗಿರದೆ, ಭಾರತದ ಎಲ್ಲಾ ಭಾಷೆಗಳ ಜ್ಞಾನವು ಟಿಪ್ಪುವಿಗೆ ಇತ್ತು. ಆದರೆ ಆತ ಸೌಮ್ಯ ಸ್ವಭಾವದವನಾಗಿರದೆ, ಸದಾ ಆಕ್ರಮಣಶೀಲ ಮನೋಭಾವನೆಯನ್ನು ಹೊಂದಿದ್ದ. ಟಿಪ್ಪು ಆಂಗ್ಲರೊಂದಿಗೆ ಒಂಟಿಸಲಗದಂತೆ ಹೋರಾಡಿ ವೀರಮರಣವನ್ನಪ್ಪಿದ. ಸರ್ಕಾರ ಯಾವ ರೀತಿ ಎಲ್ಲಾ ಸ್ವಾತಂತ್ರ್ಯ ಹೋರಾಗಾರರ ಹೆಸರಿನಲ್ಲಿ ಜಯಂತಿ, ಸರ್ಕಾರಿ ರಜೆಯನ್ನು ಘೋಷಿಸಿದೆಯೋ, ಹಾಗೇ ಟಿಪ್ಪು ಜಯಂತಿ ಕೂಡ ಆಚರಿಸಿ, ಅಂದಿನ ದಿನವನ್ನು ಸರ್ಕಾರಿ ರಜೆಯನ್ನಾಗಿ ಘೋಷಿಸಬೇಕು. ಇದು ನಾವು ಟಿಪ್ಪುವಿಗೆ ಸಲ್ಲುವ ಕೃತಜ್ಞಭಾವವಾಗಿದೆ'.

೧೫. ಶಿವರಾಜ್‌ಕುಮಾರ್ (ಪ್ರವೇಶ ಶುಲ್ಕ ವಸೂಲಿಗಾರ,ನಂದಿಬೆಟ್ಟ)

"ಟಿಪ್ಪು ತಪ್ಪು ಮಾಡಿದ ಸೈನಿಕರನ್ನು, ದರೋಡೆಕೋರರನ್ನು, ಕಳ್ಳತನ ಮಾಡುವವರನ್ನು, ಸುಲಿಗೆ ಮಾಡುವವರನ್ನು ನಿರ್ದಾಕ್ಷಿಣ್ಯವಾಗಿ ಈ ಬೆಟ್ಟದ ತುದಿಯಿಂದ ನೂಕುತ್ತಿದ್ದ. ಆ ಕಾಲದಲ್ಲಿ ತಪ್ಪು ಮಾಡಿದವರನ್ನು ಶಿಕ್ಷಿಸಲು ಯಾವುದೇ ಕಾನೂನುಗಳಿರಲಿಲ್ಲ. ಟಿಪ್ಪು ಇದನ್ನು ಮಾಡುತ್ತಿದ್ದ. ನಾವು ಯಾವ ರೀತಿ ದೇವರು – ದಿಂಡ್ರಿಗೆ ಭಯ–ಭಕ್ತಿ ತೋರಿಸುತ್ತೇವೆಯೋ ಹಾಗೆ ಆ ಕಾಲದಲ್ಲಿ ಜನರು ಟಿಪ್ಪುವಿಗೆ ಹೆದರುತ್ತಿದ್ದರು. ಇದರಿಂದ ಜನರು ತಪ್ಪು ಮಾಡುವುದು ಪಾಪ ಎಂದು ಭಾವಿಸಿ ನೆಮ್ಮದಿ ಜೀವನ ನಡೆಸುತ್ತಿದ್ದರು".

೧೬. ಸಪ್ತಋಷಿ ಜೋಯಿಸರು (ಸ್ಥಳೀಯ ಅರ್ಚಕರು, ನಂಜನಗೂಡು)

"ಟಿಪ್ಪು ಸರ್ವಧರ್ಮ ಪ್ರೇಮಿ. ಅವನ ಆಳ್ವಿಕೆಯ ಕಾಲದಲ್ಲಿ ಅವನ ಪಟ್ಟದಾನೆಗೆ ಕಣ್ಣುಬೇನೆ ಬಂದಿದ್ದರಿಂದ ನಂಜನಗೂಡಿನ ನಂಜುಂಡೇಶ್ವರನ ಮಹಿಮೆ ತಿಳಿದು, ಅಲ್ಲಿನ ಅರ್ಚಕರ ಮಾತಿನಂತೆ ೪೦ ದಿನಗಳ ಕಾಲ ಕಾವೇರಿ ನದಿ ತೀರ್ಥವನ್ನು ಆನೆಗೆ ದಿನಾಲೂ ಹಾಕುತ್ತಾ ಬಂದಿದ್ದರಿಂದ, ಆ ಆನೆಗೆ ಕಣ್ಣು ಬಂದಿತು. ಇದರಿಂದ ಟಿಪ್ಪು ಪ್ರಸನ್ನನಾಗಿ ನಂಜನಗೂಡಿನ ದೇವಾಲಯಕ್ಕೆ 'ಹಕ್ಕಿಂ ನಂಜುಂಡ' ಎಂದು ಕರೆದು, ದೇವಾಲಯಕ್ಕೆ ಲಿಂಗದ ವಿಗ್ರಹ, ಕಂಠಿಹಾರವನ್ನು ಕಾಣಿಕೆಯಾಗಿ ನೀಡಿದ್ದ. ಈ ಕಾಣಿಕೆಯು ದಾನಿಗಳು ದೇವಾಲಯಕ್ಕೆ ನೀಡಿರುವ ಕಾಣಿಕೆಗಳಲ್ಲಿಯೇ ಅತ್ಯಂತ ದುಬಾರಿ ಬೆಲೆ ಬಾಳುವಂತದ್ದು".

ಅಡಿ ಟಿಪ್ಪಣಿ:

೧. ಮೊಹಿಬ್ಬುಲ್ ಹಸನ್, (ಕನ್ನಡಕ್ಕೆ: ಸಮೇತನಹಳ್ಳಿ ರಾಮರಾಯ), ಟಿಪ್ಪು ಸುಲ್ತಾನನ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ – ೧೯೮೮. ಪುಟ ಸಂಖ್ಯೆ. ೫೫೮

ಅಧ್ಯಾಯ – ೮

ಸಮಾರೋಪ

೮.೧ ಒಟ್ಟು ನೋಟ
೮.೨ ಅಧ್ಯಯನದ ಫಲಿತಗಳು
೮.೩ ಮುಂದಿನ ಅಧ್ಯಯನದ ಸಾಧ್ಯತೆಗಳು
೮.೪ ಅನುಬಂಧಗಳು

- ಪರಾಮರ್ಶನ ಗ್ರಂಥಗಳು
- ವಕ್ತೃಗಳ ವಿವರ
- ವಂಶವೃಕ್ಷ
- ಪಾರಿಭಾಷಿಕ ಪದಕೋಶ
- ಛಾಯಾಚಿತ್ರಗಳು

ಅಧ್ಯಾಯ-೮

ಸಮಾರೋಪ

೮.೧ ಒಟ್ಟು ನೋಟ:

"ಮೈಸೂರು ಅರಸರ ಖಡ್ಗ ದಾಸ್ಯದ ಸಂಕೇತವಾದರೆ ಟಿಪ್ಪುವಿನ ಖಡ್ಗ ಸ್ವಾತಂತ್ರ್ಯ ಹೋರಾಟದ ಸಂಕೇತ" ವಸಾಹತುಶಾಹಿಗಳ ಎದೆಯಾಳದಲ್ಲಿ ತನ್ನ ನೆನಪು ನಡುಕ ಹುಟ್ಟಿಸುವಂತೆ ಮಾಡಿ, ಅವರ ಅಸ್ತಿತ್ವಕ್ಕೆ ಸಂಚಕಾರ ತಂದ ಭಾರತದ ಏಕೈಕ ರಾಜ ಟಿಪ್ಪುಸುಲ್ತಾನ್.

ಟಿಪ್ಪು ತಂದೆಗಿಂತ ಭಿನ್ನವಾದ ವ್ಯಕ್ತಿಯಾದರೂ ಅವನು ನಾಡನ್ನು ಪರಕೀಯರ ದಾಸ್ಯಕ್ಕೆ ಕೊಡುವುದರ ಬದಲು ತನ್ನನ್ನೆ ಆತ್ಮಾರ್ಪಣೆ ಮಾಡಿಕೊಂಡ. ಅವನ ಧೀರತನ, ಅಸಾಮಾನ್ಯ ವ್ಯಕ್ತಿತ್ವವನ್ನು ಯಾರು ಮರೆಯುವಂತಿಲ್ಲ. ಅವನು ವಿದ್ಯಾವಂತನಾಗಿದ್ದು ಸರಳ ವ್ಯಕ್ತಿಯಾಗಿದ್ದ. ಮೈಸೂರಿನ ಹುಲಿ ಎನಿಸಿಕೊಂಡ. ಅವನು ಮರಣ ಹೊಂದುವವರೆಗೂ, ಆಂಗ್ಲರ ಪಾಲಿಗೆ ಹುಲಿಯಾಗಿಯೇ ಬಾಳಿದನು.

ಟಿಪ್ಪು ನಾಲ್ಕನೇ ಮೈಸೂರು ಯುದ್ಧದಲ್ಲಿ ಸಾಯುತ್ತೇನೆಂದು ಗೊತ್ತಿದ್ದರೂ ಕೂಡ ತನ್ನ ನಾಡನ್ನು ಬ್ರಿಟೀಷರಿಗೆ ಒಪ್ಪಿಸಿದರೆ ಸಾಮಂತನ ಸ್ಥಾನಮಾನ ನೀಡುತ್ತೇವೆಂದು ವೆಲ್ಲೆಸ್ಲಿ ಹೇಳಿದರೂ ಕೂಡ ಟಿಪ್ಪು ಆಯ್ಕೆ ಮಾಡಿಕೊಂಡಿದ್ದು ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಮಡಿಯುವ ದಾರಿಯನ್ನೇ ಹೊರತು ಶರಣಾಗತಿಯನ್ನಲ್ಲ.

ಇದು ಬ್ರಿಟೀಷ್ ವಸಾಹತುಶಾಹಿ ವಿರುದ್ಧ ಭಾರತದ ಪ್ರತಿರೋಧದ ಸೋಲಾಗಿತ್ತು. ಟಿಪ್ಪುವಿನ ಸಾವಿನ ನಂತರ ದೇಶದ ಇತರೆ ರಾಜರನ್ನು ಸೋಲಿಸುವುದಕ್ಕೆ ಬ್ರಿಟೀಷರಿಗೆ ಕಷ್ಟವೆನಿಸಲಿಲ್ಲ. ಟಿಪ್ಪುವನ್ನು ಬ್ರಿಟೀಷರ ಕಣ್ಣುಗಳಿಂದ ನೋಡದೇ ನಮ್ಮ ಕಣ್ಣುಗಳಿಂದಲೇ ನಾವು ಟಿಪ್ಪುವನ್ನು ನೋಡಿದಾಗ "ಇವನೆಂತಹ ಮಹಾವೀರ! ಇವನೆಂತಹದೇಶಭಕ್ತ!" ಎಂದೆನಿಸದೇ ಇರದು.

ಟಿಪ್ಪು ವೈಯಕ್ತಿಕ ಬೆಳವಣಿಗೆಗೆ ಆಸೆಪಟ್ಟಲ್ಲಿ ಬ್ರಿಟೀಷರಿಗೆ ಶರಣಾಗತನಾಗಿ, ಅವರ ಆಡಳಿತದಲ್ಲಿ ದೊಡ್ಡ ಹುದ್ದೆ ಅಲಂಕರಿಸಬಹುದಿತ್ತು. ಅವನು ಯಾವುದೇ ಆಸೆ-ಆಕಾಂಕ್ಷೆಗಳಿಗೆ ತಲೆಬಾಗಲಿಲ್ಲ ಎಂಬುದಕ್ಕೆ ಇಂದು ಕೂಡ ಟಿಪ್ಪುವಿನ ಸಂಬಂಧಿಕರು ಕಲ್ಕತ್ತ ಬೀದಿಗಳಲ್ಲಿ ಆಟೋ ಓಡಿಸಿ ಜೀವನ ನಡೆಸುತ್ತಿರುವ ಸತ್ಯಸಂಗತಿ ಅವನ ಪ್ರಾಮಾಣಿಕತೆಗೆ ಹಿಡಿದ ಕನ್ನಡಿಯಾಗಿದೆ. ಗುಲಾಮಗಿರಿಯಲ್ಲಿ ಪಡುವ ಅಪಮಾನಕ್ಕಿಂತ-ಸಾವಿನ ಬಾಹು ಲೇಸೆಂದು ನಿರ್ಧರಿಸಿದ ೧೮ನೇ ಶತಮಾನದ ಆಡಳಿತಗಾರರಲ್ಲಿ ಟಿಪ್ಪು ಏಕೈಕ ವ್ಯಕ್ತಿಯಾಗಿ ನಿಲ್ಲುತ್ತಾನೆ.

ಅಧ್ಯಾಯ ಒಂದರಲ್ಲಿ ಮೈಸೂರಿನ ಇತಿಹಾಸದಲ್ಲಿ ಹೈದರ್ ಮತ್ತು ಟಿಪ್ಪು ಅವರದೇ ಪ್ರತ್ಯೇಕ ಅಧ್ಯಾಯ. ಇತಿಹಾಸದ ಇನ್ನೊಂದು ಮುಖವು ವಾಕ್ ಪರಂಪರೆಗೆ ಸೇರಿದ ಜನಪದ ನಿರೂಪಣೆಯಲ್ಲಿದೆ. ಈ ನಿರೂಪಣೆ ಇಂದು ನಮ್ಮ ಇತಿಹಾಸ ಮತ್ತು ಸಂಸ್ಕೃತಿಗಳ ಮೂಲವನ್ನು ಅನ್ವೇಷಿಸುವುದರಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಇಂತಹ ಜನಪದ ನಿರೂಪಣೆ ಟಿಪ್ಪುವನ್ನು ಕಂಡ ರೀತಿ ಹೇಗಿದೆ ಎಂಬುದನ್ನು ಕೆಲವು ಆಧಾರ ಗ್ರಂಥಗಳಿಂದ ಮತ್ತು ಕ್ಷೇತ್ರ ಕಾರ್ಯದಿಂದ ಸಂಶೋಧನೆ ಮಾಡಿ ಈ ಪ್ರಬಂಧದಲ್ಲಿ ಮಂಡಿಸಿದ್ದೇನೆ.

ಅಧ್ಯಾಯ ಎರಡರಲ್ಲಿ ಟಿಪ್ಪು ಹುಲಿಯೊಡನೆ ಹೋರಾಡಿ ಹುಲಿಯನ್ನು ಕೊಂದನಂತೆ, ಅದಾದ ಮಾರನೆಯ ದಿನ ಹುಲಿಯ ಕಳೇಬರವನ್ನು ಎರಡೆತ್ತಿನ ಬಂಡಿಯ ಮೇಲೇರಿಸಿ ಶ್ರೀರಂಗಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಮಾಡಿದರಂತೆ. ಅಂದಿನಿಂದ ಜನ ಅವನನ್ನು ಮೈಸೂರಿನ ಹುಲಿ ಎಂಬ ಪ್ರತೀತಿಯಿದೆ.

ಅಧ್ಯಾಯ ಮೂರರಲ್ಲಿ ಟಿಪ್ಪು ಹೆಸರಿನ ಹಿನ್ನೆಲೆಯನ್ನು, ಅತನ ಕನ್ನಡ ಪ್ರೇಮವನ್ನು ಅವರ ಸೇನಾ ತುಕಡಿ ಜುಮ್ರವನ್ನು, ಟಿಪ್ಪು ತನ್ನ ಗ್ರಂಥಾಲಯದಲ್ಲಿ ಹೊಂದಿದ್ದ ಪುಸ್ತಕಗಳನ್ನು, ಬ್ರಿಟೀಷರು ವಶಪಡಿಸಿಕೊಂಡಿರುವ ವಸ್ತುಗಳನ್ನು ಕುರಿತು ಚರ್ಚಿಸಿದ್ದೇನೆ.

ಅಧ್ಯಾಯ ನಾಲ್ಕರಲ್ಲಿ ಟಿಪ್ಪು ಕುರಿತು ಈಗಾಗಲೇ ಹಲವಾರು ಗ್ರಂಥಗಳು) ಪ್ರಕಟವಾಗಿವೆ ಹಾಗೂ ಪ್ರಕಟವಾಗುತ್ತಲೇ ಇವೆ. ಪ್ರಕಟವಾಗಿರುವ ಕೃತಿಗಳಲ್ಲಿ ಟಿಪ್ಪುವಿನ ಬಗ್ಗೆ ಹೊಂದಿರುವ ಮಾಹಿತಿಯನ್ನು ತಿಳಿಸಲಾಗಿದೆ. ಉದಾಹರಣೆಗೆ: ಲಿಂಗಪ್ಪ ಟಿ.ಟಿ. ಅವರು ಬರೆದಿರುವ ಟಿಪ್ಪು ಸುಲ್ತಾನ್ ಎಂಬ ಕೃತಿಯಲ್ಲಿ ಟಿಪ್ಪುವಿನ ಜನನ ಮತ್ತು ಬಾಲ್ಯ, ಟಿಪ್ಪುವಿನ ಆಡಳಿತ, ಮೂರನೇ ಮೈಸೂರು ಯುದ್ಧ ಟಿಪ್ಪುವಿನ ವೀರ ಮರಣ ಕುರಿತಂತೆ ಮಾಹಿತಿಯನ್ನು ನೀಡಿದರೆ, ಬಿ.ಎಸ್.ಪಾಂಡೆಯವರು ಬರೆದಿರುವ ಟಿಪ್ಪು ಕೃತಿಯಲ್ಲಿ ಟಿಪ್ಪುವಿನ ಸ್ಥಳನಾಮಗಳ ಬದಲಾವಣೆ ಟಿಪ್ಪುವಿನ ಮತಾಂತರದ ಬಗ್ಗೆ ಮಾಹಿತಿ ಒದಗಿಸುತ್ತದೆ.

ಪ್ರತಾಪ ಸಿಂಹ ರವರು ರಚಿಸಿರುವ ಟಿಪ್ಪು ಸುಲ್ತಾನ್ ಸ್ವಾತಂತ್ರ್ಯ ವೀರನಾ? ಎಂಬ ಕೃತಿಯು ಟಿಪ್ಪುವಿನ ಕೊಡಗಿನ ದಂಗೆಗಳು, ಟಿಪ್ಪುವಿನ ಮತಾಂತರ, ಟಿಪ್ಪುವಿನ ಕಾರ್ಯದ ಬಗ್ಗೆ ಮಾಹಿತಿ ನೀಡುತ್ತದೆ. ಹೀಗೆ ಹಲವು ಕೃತಿಗಳ ಮಹತ್ವವನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಅಧ್ಯಾಯ ಐದರಲ್ಲಿ ಟಿಪ್ಪು ಕುರಿತು ಜನಪದರು ಹೇಳುವ ಹಾಡುಗಳು, ಕಥನಗಳು, ಲಾವಣಿಗಳು ಮತ್ತು ಐತಿಹ್ಯಗಳು ಸಂಗ್ರಹಿಸಿ ತಿಳಿಸಲಾಗಿದೆ. ಟಿಪ್ಪುವಿನ ವೀರತನ, ಸಾಹಸ ಧೈರ್ಯ, ಸ್ವಾತಂತ್ರ್ಯ ಹೋರಾಟತನವನ್ನು, ಕೆಚ್ಚೆದೆಯ ಗುಣವನ್ನು ಜನಪದರು ತಮ್ಮದೇ ಹಾಡಿನ ದಾಟಿಯಲ್ಲಿ ಹಾಡಿ ಹೊಗಳಿದ್ದಾರೆ.

ಡಾ.ದೊಡ್ಡರಂಗೇಗೌಡರು, ಡಾ.ಕೃಷ್ಣಮೂರ್ತಿ ಹನೂರು, ಮ.ನ.ಮೂರ್ತಿ, ಅಬ್ದುಲ್ ಸತ್ತಾರ್ ಅವರುಗಳು ರಚಿಸಿರುವ ಕೃತಿಗಳಲ್ಲಿ ಟಿಪ್ಪು ಕುರಿತ ಜನಪದರ ಹಾಡುಗಳನ್ನು ವಿವರಿಸಿದ್ದಾರೆ. ಈ ಅಧ್ಯಾಯದಲ್ಲಿ ಟಿಪ್ಪುವನ್ನು ಕುರಿತು ಇರುವ ಕಥನಗಳನ್ನು, ಲಾವಣಿಗಳನ್ನು ತಿಳಿಸಲಾಗಿದೆ.

ಅಧ್ಯಾಯ ಆರರಲ್ಲಿ ಟಿಪ್ಪು ಬಗೆಗಿನ ವರ್ತಮಾನದ ನವಮೌಖಿಕತೆಗಳ ಬಗ್ಗೆ ವಿವರಿಸಲಾಗಿದೆ. ಟಿಪ್ಪು ಸುಲ್ತಾನ್ ನಿಧನ ಹೊಂದಿ ಎಷ್ಟೋ ವರ್ಷಗಳಾದರೂ ಆತನ ಬಗ್ಗೆ ವರ್ತಮಾನದಲ್ಲಿ ನಡೆಯುವ ಸಭೆ ಸಮಾರಂಭಗಳು, ಟಿಪ್ಪು ಜಯಂತಿ, ಟಿಪ್ಪು ಸುಲ್ತಾನನದ ಹೆಸರಿನಲ್ಲಿ ವಿಶ್ವವಿದ್ಯಾಲಯದ ಸ್ಥಾಪನೆ ಮುಂತಾದ ಪರಿಕಲ್ಪನೆಗಳು ಟಿಪ್ಪು ಬಗೆಗೆ ನಡೆಯುತ್ತಿವೆ. ಅವುಗಳ ಬಗ್ಗೆ ಈ ಅಧ್ಯಾಯದಲ್ಲಿ ವಿವರಣೆ ನೀಡಲಾಗಿದೆ.

ಅಧ್ಯಾಯ ಏಳರಲ್ಲಿ ಟಿಪ್ಪು ಕುರಿತು ವಿದ್ವಾಂಸರ ದೃಷ್ಟಿಕೋನ ಹಾಗೂ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಈ ಅಧ್ಯಾಯದಲ್ಲಿ ೧೮ನೇ ಶತಮಾನದಲ್ಲಿ ಭಾರತದ ಸ್ಥಿತಿಗತಿ, ರಾಷ್ಟ್ರೀಯವಾದಿಯಾಗಿ ಮತ್ತು ಜಾತ್ಯಾತೀತ ಆಡಳಿತಗಾರನಾಗಿ ಟಿಪ್ಪುವಿನ ಬಗ್ಗೆ ವಿವರಿಸಲಾಗಿದೆ. ಟಿಪ್ಪು ಕುರಿತು ಮಾಹಿತಿ ನೀಡಿರುವ ಕೆಲವು ಲೇಖಕರ ಕೃತಿಗಳಿಂದ ಆಯ್ದ ಭಾಗಗಳನ್ನು, ಲೇಖಕರ ಹೆಸರುಗಳನ್ನು ಪಟ್ಟಿಮಾಡಿದ್ದೇನೆ. ಉದಾಹರಣೆಗೆ ಪ್ರೊ:ಬಿ.ಶೇಕ್ ಆಲಿ, ಡಾ॥ ಕೆ.ಕೆ.ಹುಸೇನ್ ಅಲಿಖಾನ್ ಕಿರ್ಮಾನಿ, ಡಾಡ್‌ವೆಲ್ ಮೊದಲಾದ ವಿದ್ವಾಂಸರು.

ಹಾಗೆಯೇ ಸಂಶೋಧನಾ ಕುರಿತು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ವಿದ್ವಾಂಸರಾದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಬಂಜಗೆರೆ ಜಯಪ್ರಕಾಶ್, ಫರೀದ್ ಅಹಮದ್ ಖಾನ್ ಅವರನ್ನು ಸಂದರ್ಶನ ಮಾಡಿ, ಟಿಪ್ಪು ಕುರಿತ ಜನಪದ ಕಥನಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಪ್ರಬಂಧದಲ್ಲಿ ಮಂಡಿಸಿದ್ದೇನೆ.

ಅಧ್ಯಾಯ ಎಂಟರ ಸಮರೋಪದಲ್ಲಿ ಅಧ್ಯಯನಗಳ ಫಲಿತಗಳನ್ನು ನೀಡಿದ್ದೇನೆ. ಈ ಅಧ್ಯಯನದ ಮಹತ್ವವು ಐತಿಹಾಸಿಕ ವ್ಯಕ್ತಿಯಾಗಿ ರೂಪುಗೊಂಡಿರುವ ಟಿಪ್ಪುವನ್ನು ಜಾನಪದ ದೃಷ್ಠಿಕೋನದಲ್ಲಿ ಅಭ್ಯಸಿಸಿ, ಆತನ ಬಗ್ಗೆ ಜಾನಪದರಿಂದ ಮಾಹಿತಿಯನ್ನು ಸಂಗ್ರಹಿಸಿ ಕಥನಗಳು, ಲಾವಣಿಗಳು ಹಾಗೂ ಐತಿಹ್ಯಗಳನ್ನು ಬೆಳಕಿಗೆ ತಂದು, ಮುಂದಿನ ತಲೆಮಾರುಗಳ ಅರಿವಿಗಾಗಿ ಕಾಯ್ದಿರಿಸಬೇಕು ಮತ್ತು ಸಂರಕ್ಷಿಸಬೇಕು ಎಂಬ ಉದ್ದೇಶದಿಂದ ಕೈಗೊಂಡ ನನ್ನ ಪ್ರಯತ್ನವು ಸಫಲತೆಗೊಂಡಿದೆ ಎಂದು ಭಾವಿಸುತ್ತೇನೆ.

ಟಿಪ್ಪು ಒಬ್ಬ ಪರಾಕ್ರಮಿ. ಬ್ರಿಟೀಷರ ವಿರುದ್ಧ ದಕ್ಷಿಣ ಭಾರತದಲ್ಲಿ ಮೊಟ್ಟಮೊದಲು ಸ್ವಾತಂತ್ರ್ಯದ ಕಹಳೆ ಊದಿದ ಪ್ರಥಮ ರಾಷ್ಟ್ರಭಕ್ತ. ವೀರ ಸೇನಾನಿಯಾದರೂ ಭಾರತದ ಹಲವು ಸಂಸ್ಥಾನಗಳನ್ನು ಆಳಹೋದ ರಾಜ ಮಹಾರಾಜರು ಇತಿಹಾಸ ಹಾಗೂ ಸಾಹಿತ್ಯದ ಪುಟಗಳಲ್ಲಿ ಅಜರಾಮರರಾಗಿದ್ದರು. ಟಿಪ್ಪು ದಕ್ಷಿಣ ಕರ್ನಾಟಕದ ಸಾಹಿತಿಗಳ ಕಣ್ಣಿಗಾಗಲೀ, ಉತ್ತರ ಕರ್ನಾಟಕದ ಸಾಹಿತಿಗಳ ಕಣ್ಣಿಗಾಗಲೀ ಗೋಚರಿಸದಿರುವುದು ಆತನ ಬಗ್ಗೆ ಸಾಹಿತ್ಯಾಸಕ್ತರು ಗಮನ ಹರಿಸದಿರುವುದು ದೌರ್ಭಾಗ್ಯದ ಸಂಗತಿಯಾಗಿದೆ. ಮತಿಘಟ್ಟ ಕೃಷ್ಣಮೂರ್ತಿ, ಜಿ.ಶಂ. ಪರಮಶಿವಯ್ಯ, ಡಾ॥ ಎಲ್.ಆರ್. ಹೆಗಡೆ, ಡಾ. ಎಂ. ಚಿದಾನಂದಮೂರ್ತಿ, ತಲಕಾಡು ಚಿಕ್ಕರಂಗೇಗೌಡ, ಲಿಂಗದೇವರು ಹಳೆಮನೆ, ಶರ್ಮರವರಂತಹ ಸಾಹಿತಿಗಳನ್ನು ಬಿಟ್ಟರೆ ಉಳಿದವರು ಟಿಪ್ಪು ಬಗ್ಗೆ ಆಸಕ್ತಿ ವಹಿಸಲಿಲ್ಲ. ಹಾಗಾಗಿ ಇಂತಹ ಒಬ್ಬ ವೀರ ಶೂರ, ಪರಾಕ್ರಮಿ, ದೇಶಭಕ್ತನ ಕುರಿತು ಕರ್ನಾಟಕ ರಾಜ್ಯದಲ್ಲಿ ಜನಪದರು ಮೌಖಿಕವಾಗಿ ಉಳಿಸಿಕೊಂಡು ಬಂದಿರುವ ಜನಪದ ಸಾಹಿತ್ಯವನ್ನು ಕುರಿತು ಅಧ್ಯಯನ ನಡೆಸಲು ನನಗೆ ಆಸಕ್ತಿಯಿದ್ದ ಕಾರಣ ಟಿಪ್ಪು ಕುರಿತು ಇದುವರೆವಿಗೂ ರಚನೆಯಾದ ಶಿಷ್ಟ ಸಾಹಿತ್ಯವನ್ನು ಮತ್ತು ಬರವಣಿಗೆಗಳನ್ನು, ಟಿಪ್ಪುವಿನ ಮೌಖಿಕ ವಿಚಾರಗಳನ್ನು, ಆತನು ಬರೆದಿರುವ ಕೆಲವು ಪತ್ರಗಳ ಬಗ್ಗೆ ಸಂಶೋಧನಾತ್ಮಕವಾಗಿ ಅಧ್ಯಯನ ಮಾಡುವುದು ನನ್ನ ಅಧ್ಯಯನದ ಉದ್ದೇಶ.

ಟಿಪ್ಪು ಬಗೆಗಿನ ಲಾವಣಿಗಳು, ಐತಿಹ್ಯಗಳು, ಜನಪದ ಗೀತೆಗಳು, ಕಥನಗಳು, ಸ್ಥಳನಾಮಗಳು, ಆತನ ಜೀವನ ಸಾಧನೆ, ಆಡಳಿತ, ಕೊಡುಗೆಗಳು, ಆಚರಣೆ ಆತನ ಬಗ್ಗೆ ಇರುವ ಜನಾಭಿಪ್ರಾಯಗಳ ಬಗ್ಗೆ ವಿಮರ್ಶಾತ್ಮಕವಾಗಿ ಜಾನಪದೀಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

ಭಾರತದ ಅಪ್ರತಿಮ ದೇಶಭಕ್ತ ಟಿಪ್ಪು ಕುರಿತು ಟಿಪ್ಪು ನಾಯಕನೇ? ಖಳ ನಾಯಕನೇ? ಈ ಪ್ರಶ್ನೆಗಳಿಗೆ ಒಮ್ಮತದ ಅಭಿಪ್ರಾಯವಿಲ್ಲ. ಟಿಪ್ಪುವನ್ನು ದುಷ್ಟನೆಂದೂ, ಮತಾಂಧನೆಂದೂ ಕೆಲವರು ಚಿತ್ರಿಸಿದ್ದರೆ, ಇನ್ನೂ ಕೆಲವರು ರಾಷ್ಟ್ರೀಯವಾದಿಯೆಂದೂ, ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟಗಾರ, ಬ್ರಿಟೀಷರ ಅಜನ್ಮ ವೈರಿಯಾಗಿ, ಬ್ರಿಟೀಷ್ ಸಾಮ್ರಾಜ್ಯ ಶಾಹಿಯನ್ನು ಭಾರತದಿಂದಲೇ ಕಿತ್ತೊಗೆಯಬೇಕೆಂದಿದ್ದ ಟಿಪ್ಪುವನ್ನು ಕುರಿತಷ್ಟು ಚರ್ಚೆ, ವಿವಾದ ಇತಿಹಾಸದ ಬೇರ್‍ಯಾವ ರಾಜನನ್ನು ಕುರಿತು ನಡೆದಿಲ್ಲ. ಆದರೂ ಆತನ ಬಗ್ಗೆ ಸಾಕಷ್ಟು ಅಪಾದನೆಗಳು ಇವೆ. ಅವನು ಹಿಂದೂ ವಿರೋಧಿಯಾಗಿದ್ದ, ಹಿಂದೂಗಳನ್ನು ಬಲತ್ಕಾರವಾಗಿ ಮತಾಂತರ ಮಾಡಿಸಿದ ಎಂಬುವು ಅದಕ್ಕೆ ಕುರುಹು ಆಗಿ ಎಲ್ಲಾ ಮುಸ್ಲಿಂ ಸ್ಮಾರಕಗಳೂ ಹಿಂದೂ ದೇವಾಲಯಗಳ ಅಡಿಪಾಯಂತಿದ್ದ ಅಪಾಯಗಳಾಗಿ ಗೋಚರಿಸುತ್ತವೆ. ಮೂಲಭೂತ ವಾದಿಗಳು ಆತನನ್ನು

ಆಪಾದನೆಗೆ ಪದೇ-ಪದೇ ಒಳಪಡಿಸುತ್ತಿದ್ದಾರೆ. ವಾಸ್ತವದ ಚಾರಿತ್ರಿಕ ಅಂಶಗಳನ್ನು ಮರೆಮಾಡಿ ಅವರುಗಳು ಆಡುವ ಈ ಮಾತುಗಳು ವರ್ತಮಾನದ ಹಿಂದೂ-ಮುಸ್ಲಿಂ ಐಕ್ಯತೆಯನ್ನು ಒಡೆಯಲು ಕಾರಣವಾಗುತ್ತದೆ.

ಇಂತಹ ಒಬ್ಬ ವೀರ ಸೇನಾನಿ, ರಾಜನನ್ನು ಕುರಿತು ಹಿಂದೂ ಜನಪದರಲ್ಲೇ ಸಾಕಷ್ಟು ಗೌರವವಿದೆ. ಅವರು ಮೌಖಿಕವಾಗಿ ರೂಢಿಸಿಕೊಂಡು ಬಂದಿರುವ ಲಾವಣಿ, ಗೀತೆ, ಕಥನಗಳಲ್ಲಿ ಅಪಾರವಾದ ಪ್ರೀತಿ, ವಿಧೇಯತೆ ವ್ಯಕ್ತವಾಗುತ್ತದೆ. ಆ ನಿಟ್ಟಿನಲ್ಲಿ ಜಾನಪದ ಹಿನ್ನೆಲೆಯಲ್ಲಿ ಈ ಮಹಾಪ್ರಬಂಧ ರೂಪ ತಾಳಿದೆ.

'ಟಿಪ್ಪು ಜನಪದ ಕಥನ' ಎಂಬ ಮಹಾಪ್ರಬಂಧವನ್ನು ಜಾನಪದದ ಬಹುಮುಖ ಅಧ್ಯಯನದ ತೆಕ್ಕೆಯಲ್ಲಿ ಅಭ್ಯಾಸಿಸಲಾಗಿದೆ. ಟಿಪ್ಪುವಿನ ಜನನ, ಬಾಲ್ಯ, ವೈವಾಹಿಕ ಜೀವನ, ಪಟ್ಟ, ಆಡಳಿತ, ರಾಜ್ಯ ವಿಸ್ತರಣೆ, ಯುದ್ಧ ಮತ್ತು ಸಾಹಸ ಪರಾಕ್ರಮಗಳು, ಬಿರುದು-ಬಾವಲಿಗಳು, ಆತನ ಆಡಳಿತ ಸ್ವರೂಪವನ್ನು, ಆತನ ಬಗ್ಗೆ ಇದ್ದ ಇತಿಹಾಸ ಕಾಗದ ಪತ್ರಗಳು, ಶಾಸನಗಳು ಜನಪದ ಮೌಖಿಕ ಸಾಹಿತ್ಯ, ಶಿಷ್ಟ ಸಾಹಿತ್ಯಗಳನ್ನು ಕುರಿತು ಕರಾರುವಕ್ಕಾಗಿ ಇಲ್ಲಿ ನಿರೂಪಿಸಲಾಗಿದೆ.

ಇತಿಹಾಸದ ಪುಟಗಳಲ್ಲಿ ಟಿಪ್ಪು ಕುರಿತ ಇದುವರೆಗಿನ ಅಧ್ಯಯನಗಳು ಆತನ ಬಾಲ್ಯ ಜೀವನ, ರಾಜ್ಯಾಡಳಿತ, ವಿಸ್ತರಣೆ ಹಾಗೂ ಆಂಗ್ಲೋ-ಮೈಸೂರು ಯುದ್ಧಗಳು, ಪರಿಣಾಮಗಳನ್ನು ತಿಳಿಸುತ್ತವೆ. ಇದರಿಂದ ಆತ ದೇಶಕ್ಕಾಗಿ ಈ ನೆಲದ ಮೇಲೆ ಎಂತಹ ದೇಶಭಕ್ತಿ ಇತ್ತು ಎಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಟಿಪ್ಪು ಸುಲ್ತಾನನು ತನ್ನ ಜೀವನದಲ್ಲಿ ಪ್ರಮುಖವಾಗಿ ಎರಡು ಗುರಿಗಳನ್ನು ಇರಿಸಿಕೊಂಡಿದ್ದನು. ಈ ನೆಲದಿಂದ ವಶಾಹತುಶಾಹಿಗಳನ್ನು ನಿರ್ಮೂಲನೆ ಮಾಡುವುದು ಹಾಗೂ ತನ್ನ ರಾಜ್ಯವು ಅಭಿವೃದ್ಧಿ ಹೊಂದಲು ಬೇಕಾದ ಆಧುನೀಕರಣಗೊಳಿಸುವುದು. ಮೊದಲ ಗುರಿ ವಿಫಲವಾದರೂ ಕೂಡ ರಾಜ್ಯವನ್ನು ಅತ್ಯಂತ ಉನ್ನತ ಮಟ್ಟದ ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುವ ಮೂಲಕ ಎರಡನೇ ಗುರಿಯನ್ನು ತನ್ನ ಪ್ರತಿಭಾ ಕೌಶಲದಿಂದ ಯಶಸ್ವಿಯಾಗಿ ಮುಟ್ಟಿದರು. ಇವರ ಜೀವನದ ಮಹತ್ವದ ಉದ್ದೇಶವೆಂದರೆ ದೇವರ ಮೇಲಿನ ಪ್ರೀತಿ, ಮನುಷ್ಯರ ಮೇಲಿನ ಪ್ರೀತಿ, ಸ್ವಾತಂತ್ರ್ಯ ಹಾಗೂ ತಾಯ್ನೆಲದ ಮೇಲಿನ ಪ್ರೀತಿ.

೧೮ನೇ ಶತಮಾನದಲ್ಲಿ ಆಡಳಿತ ರೂಢರಾದ ಟಿಪ್ಪು ರಾಜ್ಯದಲ್ಲಿ ಅನೇಕ ಬದಲಾವಣೆಗಳನ್ನು ಉಂಟುಮಾಡಿದ್ದರು. ಇವರ ಕೆಲವೊಂದು ಸುಧಾರಣೆಗಳು ಬಹಳ ಕ್ರಾಂತಿಕಾರಿಯಾಗಿದ್ದವು ಇವು ದೂರದೃಷ್ಟಿಯುಳ್ಳ ತಂತ್ರಜ್ಞಾನಿಯಾಗಿದ್ದ ಟಿಪ್ಪು ವಿದ್ವತ್ತನ್ನು

ತಿಳಿಸುತ್ತವೆ. ಈತನಿಗಿದ್ದ ರಾಜ್ಯ-ಬಂಡವಾಳದ ಕಲ್ಪನೆ, ರಾಷ್ಟ್ರ-ರಾಜ್ಯದ ಕಲ್ಪನೆ, ಜಹಗೀರ್ ದಾರಿಕೆಯ ನಿರ್ಮೂಲನಾ ಕಾರ್ಯ, ಕಾನೂನು-ಕಟ್ಟಲೆಗಳ ಜಾರಿ, ನೌಕಾದಳದ ರಚನೆ, ರಾಕೆಟ್ ತಂತ್ರಜ್ಞಾನದ ಇವರ ಆಲೋಚನೆ, ಕಾವೇರಿ ನದಿಗೆ ಅಣೆಕಟ್ಟು ಕಟ್ಟಬೇಕೆಂಬ ತೀರ್ಮಾನ, ಆಧುನಿಕ ಬೇಸಾಯ ಪದ್ಧತಿ, ಹೈನುಗಾರಿಕೆ, ರಾಜ್ಯದಲ್ಲಿ ರೇಷ್ಮೆ ಕೃಷಿ, ಕೈಗಾರಿಕೆಯನ್ನು ಪ್ರಾರಂಭಿಸಲು ತೋರಿದ ಆಸಕ್ತಿ, ಫ್ರೆಂಚ್‌ಕ್ರಾಂತಿಯ ಉದ್ದೇಶವನ್ನು ಅರ್ಥೈಸಿಕೊಂಡು ತನ್ನ ನೆಲದಲ್ಲಿ ತಂದ ಬದಲಾವಣೆ ಮೆಚ್ಚಬೇಕಾದುದ್ದು. ನಾಣ್ಯ, ಕ್ಯಾಲೆಂಡರ್, ತೂಕ ಮತ್ತು ಅಳತೆ, ಕಂದಾಯ, ಸೈನ್ಯ, ನೌಕಾದಳ, ಕಲೆ ಮತ್ತು ಕರಕುಶಲ, ವ್ಯಾಪಾರ ಮತ್ತು ವಾಣಿಜ್ಯ, ಕೈಗಾರಿಕೆ ಕ್ಷೇತ್ರದಲ್ಲಿ ಭಾರಿ ಬದಲಾವಣೆ ಉಂಟುಮಾಡಿದ ಆಡಳಿತ ಚತುರ, ದೂರದೃಷ್ಟಿಯುಳ್ಳ ಮೇಧಾವಿ ಟಿಪ್ಪು ಎಂದರೆ ತಪ್ಪಾಗಲಾರದು. ಅದಕ್ಕೆ ಸಾಕ್ಷಿಯಾಗಿ ಜನಪದರು ರಚಿಸಿರುವ ಜನಪದ ಸಾಹಿತ್ಯಗಳೇ ಅವರಿಗೆ ಸಲ್ಲುವ ಗೌರವ, ಬಿರುದು. ಬಹು ಹಿಂದಿನಿಂದಲೂ ಇತಿಹಾಸದ ಪುಟಗಳಲ್ಲಿ ಟಿಪ್ಪು ಸುಲ್ತಾನರಿಗೆ ನ್ಯಾಯಯುತವಾದ ಸ್ಥಾನಮಾನ ಸಿಕ್ಕಿಲ್ಲ. ಇತ್ತೀಚಿನವರೆಗೂ ಟಿಪ್ಪುವನ್ನು ಖಳನಾಯಕನಂತೆ ಚಿತ್ರಿಸಲಾಗಿದೆ. ಸಾಮ್ರಾಜ್ಯಶಾಹಿ ಬ್ರಿಟೀಷರು ತಮ್ಮದೇ ಕಾರಣಗಳಿಗಾಗಿ ಇವರನ್ನು ಅಸಹಿಷ್ಣು, ವಿಲಕ್ಷಣ ವ್ಯಕ್ತಿತ್ವ ಹಾಗೂ ಅನ್ಯಾಯದ ಆಡಳಿತಗಾರ, ಮತಾಂಧ ಎಂದು ಚಿತ್ರಿಸಿದ್ದರು. 'ಟಿಪ್ಪು ಜನಪದ ಕಥನ' ಎಂಬ ಮಹಾಪ್ರಬಂಧದಕ್ಕಾಗಿ ಕ್ಷೇತ್ರಕಾರ್ಯ ಕೈಗೊಂಡು, ಮಾಹಿತಿ ಸಂಗ್ರಹಿಸಿ, ಪ್ರಸಿದ್ಧ ಕೃತಿಗಳನ್ನು, ವಿದ್ವಾಂಸರನ್ನು ಭೇಟಿಯಾಗಿ ಚರ್ಚಿಸಿದ ಮೇಲೆ ಸತ್ಯ ಹೇಗೆ ಮರೆಮಾಚಿ, ತಪ್ಪು ತಿಳುವಳಿಕೆ, ಅಪಪ್ರಚಾರ ನಡೆದಿದೆ ಎಂಬ ವಾಸ್ತವಾಂಶ ಅರಿವಾಗಿದೆ. ಈ ಮಹಾಪ್ರಬಂಧದಲ್ಲಿ ಚರ್ಚಿಸಿರುವ ವಿಷಯವು ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಕಾಲದ ಹಲವು ಸಂಗತಿ, ಘಟನೆ, ಮೌಲ್ಯ ಮತ್ತು ಸಂಸ್ಕೃತಿಗಳ ಅಧ್ಯಯನವಾಗಿದ್ದು ಇವು ಈ ನೆಲದವು ಪಾಶ್ಚಿಮಾತ್ಯರಿಗಿಂತ ಹಾಗೂ ದೇಸಿ ರಾಜರಿಗಿಂತ ಭಿನ್ನವಾಗಿದೆ ಎಂಬುದನ್ನು ಅನಾವರಣಗೊಳಿಸುತ್ತದೆ.

೮.೨ ಅಧ್ಯಯನದ ಫಲಿತಗಳು :

೧. ಬ್ರಿಟೀಷರನ್ನು ಭಾರತದಿಂದಲೇ ಓಡಿಸಬೇಕೆಂಬ ಛಲದಿಂದ ವಿದೇಶಿಯರ ಸಹಾಯ ಪಡೆದ ಮೊದಲ ಭಾರತೀಯ.

೨. ಟಿಪ್ಪು ಪದವು ಪರ್ಷಿಯನ್ –ಅರೇಬಿಕ್ ಮೂಲದ್ದಾಗದೇ, ಅಚ್ಚ ಕನ್ನಡ ಪದವಾಗಿದೆ.

೩. ಬ್ರಿಟೀಷರು ಟಿಪ್ಪು ಎಂದರೆ ಘರ್ಜನೆ ಎಂದೇ ಭಾವಿಸಿದ್ದರು.

೪. ಟಿಪ್ಪುವಿನ ಸೈನಿಕರು ತೊಡುತ್ತಿದ್ದ ಹಳದಿ ಮತ್ತು ಕೆಂಪು ಬಣ್ಣದ ಸಮವಸ್ತ್ರ, ಮುಂದೆ ಕರ್ನಾಟಕದ ಬಾವುಟ ರಚನೆಯಾಗಲು ಮಾದರಿಯಾಯಿತು.

೫. ವಿದೇಶದಲ್ಲಿ ಮಗನಿಗೆ ಶಿಕ್ಷಣ ಕೊಡಿಸಲು ಯೋಚಿಸಿದ ಮೊದಲ ಭಾರತೀಯ ಟಿಪ್ಪು ಆಗಿದ್ದಾನೆ.

೬. ಟಿಪ್ಪು ಪಟ್ಟಾಭಿಷೇಕವಾದ ಮೇ ೪ ರಂದೇ ವೀರಮರಣವನ್ನಪ್ಪಿದ.

೭. ಟಿಪ್ಪು ಶೃಂಗೇರಿ ಮಠವನ್ನು ಅಮೃತ ಮಹಲ್ ಎತ್ತುಗಳಿಂದ ರಕ್ಷಿಸಿದ್ದನು.

೮. ಟಿಪ್ಪು ಜಾಕೋಬಿಕ್ ಕ್ಲಬ್ ಸಂಸ್ಥಾಪಕರಲ್ಲಿ ಒಬ್ಬನಾಗಿದ್ದ.

೯. ಟಿಪ್ಪು ಶೃಂಗೇರಿ ಮಠಕ್ಕೆ ಬರೆದ ಪತ್ರಗಳಲ್ಲಿ ಸೂರ್ಯಮುದ್ರೆ ಮತ್ತು ಟಿಪ್ಪು ಸಹಿ ಯನ್ನು ಕಾಣಬಹುದು.

೧೦. ಟಿಪ್ಪು ತನ್ನ ಕಂಟಕಗಳನ್ನು ನಿವಾರಿಸಿಕೊಳ್ಳಲು ಚಂಡಿಯಾಗ, ಸಹಸ್ರ ಚಂಡಿಯಾಗಗಳನ್ನು ಮಾಡಿಸುತ್ತಿದ್ದನು.

೧೧. ಟಿಪ್ಪುವಿನ ಕ್ಯಾಲೆಂಡರ್ ಪ್ರಕಾರ ಸಂಖ್ಯೆಗಳನ್ನು ಬಲದಿಂದ–ಎಡಕ್ಕೆ ಓದಬೇಕಾಗಿತ್ತು.

೧೨. ರೇಷ್ಮೆ ಉದ್ಯಮವನ್ನು ಪರಿಚಯಿಸಿದ ಕೀರ್ತಿ ಟಿಪ್ಪುವಿಗೆ ಸಲ್ಲುತ್ತದೆ.

೧೩. ಟಿಪ್ಪು ತನ್ನ ರಾಜ್ಯವನ್ನು ಖುದಾದತ್ ಸರ್ಕಾರ (ದೇವರ ರಾಜ್ಯ) ಎಂದೇ ಕರೆಯುತ್ತಿದ್ದ.

೧೪. ಟಿಪ್ಪುವಿನ ಲಾವಣಿಗಳನ್ನು ಯಥೇಚ್ಚವಾಗಿ ಶ್ರೀರಂಗಪಟ್ಟಣದ ಸುತ್ತ–ಮುತ್ತ ಹಾಡುತ್ತಿದ್ದರು. ಆದರೆ ಮಂಟೇಸ್ವಾಮಿ ಕಾವ್ಯ, ಮಲೆ ಮಾದೇಶ್ವರ ಕಾವ್ಯ ಪ್ರಸಿಧ್ಧವಾಗುತ್ತಿದ್ದಂತೆ ಮೌಖಿಕ ಹಾಡುವಿಕೆ ನಿಂತು ಹೋಯಿತು.

೧೫. ಬ್ರಿಟೀಷರಿಗೆ ಮಣಿಯಬಾರದೆಂದು ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಳಾಗಿ ಇಟ್ಟ ಮೊದಲ ಭಾರತೀಯ.

೧೬. ಟಿಪ್ಪು ಶ್ರೀಗಂಧದ ಮರಗಳನ್ನು ರಾಷ್ಟ್ರೀಯ ಸಂಪತ್ತು ಎಂದು ಘೋಷಿಸಿ, ಶ್ರೀರಂಗಪಟ್ಟಣದಲ್ಲಿ ಶ್ರೀಗಂಧದ ಕೋಠಿ ನಿರ್ಮಿಸಿದ್ದ.

೧೭. ಟಿಪ್ಪು ಹುಲಿಯನ್ನು ಲಾಂಛನವಾಗಿ ಬಳಸುವುದರ ಜೊತೆಗೆ ಹುಲಿಯ ಮಾದರಿಯ ಸಮವಸ್ತ್ರವನ್ನು ಇಷ್ಟಪಡುತ್ತಿದ್ದ.

೧೮.ಟಿಪ್ಪು ತನ್ನ ಜನಾನಾದಲ್ಲಿ ಬಹುಸ್ತ್ರೀಯರನ್ನು ಹೊಂದಿದ್ದನು.

೧೯.ಟಿಪ್ಪು ಏಕಕಾಲದಲ್ಲಿ ರುಕ್ಕಯ್ಯಾ ಬಾನು-ಸುಲ್ತಾನ್ ಬಾನುಗಳನ್ನು ಮದುವೆಯಾಗಿದ್ದ.

೨೦.ಟಿಪ್ಪು ತನ್ನ ಅನಿಸಿಕೆ, ಅಭಿಪ್ರಾಯಗಳನ್ನು ಟಿಪ್ಪುಸ್ ಡ್ರೀಮ್ ಬುಕ್‌ನಲ್ಲಿ ದಾಖಲಿಸುತ್ತಿದ್ದನು.

೨೧.ಅತ್ಯಾಧುನಿಕ ಶೈಲಿಯ ಫಿರಂಗಿ ಮತ್ತು ರಾಕೇಟ್‌ಗಳನ್ನು ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಟಿಪ್ಪುವಿಗೆ ಸಲ್ಲುತ್ತದೆ.

೨೨. ಟಿಪ್ಪುವು ಆಪ್ತರನ್ನು ಬಹುವಾಗಿ ನಂಬುತ್ತಿದ್ದ.

೨೩.ಟಿಪ್ಪು ತನ್ನ ಸಿಂಹಾಸನದ ಮೇಲ್ಭಾಗದಲ್ಲಿ ಹ್ಯೂಮ ಪಕ್ಷಿ ಚಿತ್ರವನ್ನು ವಜ್ರ, ವೈಢೂರ್ಯಗಳಿಂದ ರಚಿಸಿಕೊಂಡಿದ್ದ.

೨೪.ಟಿಪ್ಪು ಶೃಂಗೇರಿ ಮಠದ ಸಚ್ಚಿದಾನಂದ ಸ್ವಾಮಿಗಳನ್ನು ಗೌರವದಿಂದ ಆದರಿಸುತ್ತಿದ್ದನು.

೨೫.ಟಿಪ್ಪು ತನಗಾಗಿ ಸಿಂಹಾಸನ ಮಾಡಿಸಿಕೊಂಡರೂ, ಒಮ್ಮೆಯೂ ಅದರ ಮೇಲೆ ಕುಳಿತುಕೊಳ್ಳದೇ ಹೋದ.

೨೬.ಅಂಚೆ ರವಾನೆಗಾಗಿ ಟಿಪ್ಪು ಪಾರಿವಾಳವನ್ನು ಬಳಸುತ್ತಿದ್ದನು.

೨೭.ಟಿಪ್ಪು ತನ್ನ ಅರಮನೆಗಳನ್ನು ಲಾಲ್ ಮಹಲ್ ಎಂದೇ ಕರೆಯುತ್ತಿದ್ದ.

೨೮.ತಪ್ಪು ಮಾಡಿದವರನ್ನು ಶಿಕ್ಷಿಸಲು ಟಿಪ್ಪು ಡ್ರಾಫ್ ನಿಂದ ತಳುತ್ತಿದ್ದ.

೨೯.ಟಿಪ್ಪು ಜುಮ್ರಾ ಎಂಬ ಅಪ್ಪಟ ಕನ್ನಡ ಸೇನೆಯನ್ನು ಕಟ್ಟಿದನು.

೩೦.ಟಿಪ್ಪು ದಕ್ಷಿಣದ ಅಕ್ಬರ್-ಬಾದಷಹ ಎಂಬ ಬಿರುದಿನಿಂದ ಪ್ರಸಿದ್ಧಿ ಪಡೆದಿದ್ದನು.

೩೧.ಟಿಪ್ಪುವಿನ ತ್ಯಾಗ, ಬಲಿದಾನವನ್ನು ಸಾರಲು ಪ್ರಸ್ತುತ ಟಿಪ್ಪು ಸಂಯುಕ್ತ ಸಂಘಗಳು ಕಾರ್ಯೋನ್ಮುಖವಾಗಿವೆ.

೩೨.ಟಿಪ್ಪು ಶ್ರೀರಂಗಪಟ್ಟಣದಲ್ಲಿ ಜಮಿಯಲ್ ಉಮರ್ ಹೆಸರಿನ ವಿಶ್ವವಿದ್ಯಾಲಯ ಸ್ಥಾಪಿಸುವ ಬಯಕೆ ಹೊಂದಿದ್ದ.

೩೩.ಟಿಪ್ಪುವಿಗೆ ಸಂಬಂಧಿಸಿದ ಉರುಸ್‌ಗಳನ್ನು ಈಗಲೂ ಶ್ರೀರಂಗಪಟ್ಟಣ, ಕೋಲಾರ ಮತ್ತು ಬೆಂಗಳೂರಿನಲ್ಲಿ ವೈಭವದಿಂದ ಆಚರಿಸುವರು.

೩೪.ಟಿಪ್ಪು ತಾಯ್ನೆಲದ ಬಗ್ಗೆ ಅಪಾರ ಅಭಿಮಾನ ಹೊಂದಿದ್ದನು.

೮.೩ ಮುಂದಿನ ಅಧ್ಯಯನದ ಸಾಧ್ಯತೆಗಳು

೧. ಟಿಪ್ಪು ಕಟ್ಟಿರುವ ಕೋಟೆ- ಕೊತ್ತಲಗಳ ಕುರಿತು ಅಧ್ಯಯನ ಕೈಗೊಳ್ಳುವುದು.

೨. ಟಿಪ್ಪು ನಿರ್ಮಿಸಿರುವ ಬೇಸಿಗೆ ಅರಮನೆಗಳನ್ನು ಕುರಿತು ಅಧ್ಯಯನ ಕೈಗೊಳ್ಳುವುದು.

೩. ಟಿಪ್ಪು ತನ್ನ ಕಾಲದಲ್ಲಿ ಅಪರಾಧಿಗಳಿಗೆ ನೀಡುತ್ತಿದ್ದ ಶಿಕ್ಷೆಗಳನ್ನು ಕುರಿತು ಅಧ್ಯಯನ ಕೈಗೊಳ್ಳುವುದು.

೪. ಟಿಪ್ಪು ಕುರಿತು ರಚನೆಯಾಗಿರುವ ಕೃತಿ/ಕಾದಂಬರಿ/ನಾಟಕಗಳ ವಿಮರ್ಶೆಯನ್ನು ಕೈಗೊಳ್ಳಬಹುದು.

೫. ಟಿಪ್ಪುವಿಗೆ ಸಂಬಂಧಿಸಿದಂತೆ ಇರುವ ಸಂಘ-ಸಂಸ್ಥೆಗಳ ಕಾರ್ಯ ವೈಖರಿ ಕುರಿತು ಅಧ್ಯಯನ ಕೈಗೊಳ್ಳಬಹುದು.

೬. ಮೆಟ್ರೊ ಕಾಮಗಾರಿಯಲ್ಲಿ ದೊರೆತಿರುವ ಟಿಪ್ಪು ಫಿರಂಗಿಗಳ ಕುರಿತು ಅಧ್ಯಯನ ಕೈಗೊಳ್ಳಬಹುದು.

೭. ಟಿಪ್ಪು ವಂಶಸ್ಥರನ್ನು ಭೇಟಿ ಮಾಡಿ, ಟಿಪ್ಪು ಬಗ್ಗೆ ಅವರು ಹೊಂದಿರುವ ನಿಲುವುಗಳ ಬಗ್ಗೆ ಅಧ್ಯಯನ ಕೈಗೊಳ್ಳಬಹುದು.

೮. ಟಿಪ್ಪು ರಾಷ್ಟ್ರೀಯ ವಾದಿಯೆ? ಜಾತ್ಯಾತೀತವಾದಿಯೇ? ಎಂಬ ಕುರಿತು ವಿಸ್ತೃತ ಅಧ್ಯಯನ ಕೈಗೊಳ್ಳಬಹುದು.

೯. ಮೈಸೂರು ಯುದ್ಧಗಳಲ್ಲಿ ಟಿಪ್ಪುವಿನ ಪಾತ್ರದ ಬಗ್ಗೆ ಅಧ್ಯಯನ ಕೈಗೊಳ್ಳಬಹುದು.

೧೦. ಟಿಪ್ಪು ಪರ್ಷಿಯನ್ ಭಾಷೆಯಲ್ಲಿ ಬರೆದಿರುವ ಹಸ್ತಪ್ರತಿಗಳ ಭಾಷಾಂತರಗೊಳಿಸುವ ಅಧ್ಯಯನ ಕೈಗೊಳ್ಳಬಹುದು.

ಪರಾಮರ್ಶನ ಗ್ರಂಥಗಳು:

೧	ಅಬ್ದುಲ್ ಸತ್ತಾರ್	: ಟಿಪ್ಪು ಸುಲ್ತಾನ್ ಕಾವ್ಯಾಲಯ ಪ್ರಕಾಶಕರು, ಜಯನಗರ, ಮೈಸೂರು – ೨೦೦೯.
೨	ಅಂಬಳಿಕೆ ಹಿರಿಯಣ್ಣ	: ಜಾನಪದ ಪ್ರಕ್ರಿಯೆ ; ಹಾಂಕೋ–ದೃಷ್ಟಿ, ಪ್ರಸರಾಂಗ, ಕನ್ನಡ ವಿ.ವಿ. ಹಂಪಿ, ೨೦೦೦.
೩	ಉಮಾನಾಥ ಶಣೈ	: ಇತಿಹಾಸದಲ್ಲಿ ಮರೆತು ಹೋದ ಕನ್ನಡ ಪುಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು– ೨೦೧೦.
೪	ಕಲ್ಬುರ್ಗಿ ಎಂ.ಎಂ	: ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿ.ವಿ., ಪ್ರಸರಾಂಗ ೧೯೯೪.
೫	ಕರ್ನಾಟಕ ಸಂಸ್ಕೃತಿ ಇಲಾಖೆ	: ಕರ್ನಾಟಕ ಪರಂಪರೆ (ಸಂ.) ಕರ್ನಾಟಕ ಸರ್ಕಾರ.೧೯೯೨
೬	ಕುಶಾಲಪ್ಪ ಗೌಡ ಮತ್ತು ಚನ್ನಪ್ಪಗೌಡ	: ದಕ್ಷಿಣ ಕನ್ನಡದ ಕೈಫಿಯತ್ತುಗಳು ಉಜಿರೆ – ೧೯೯೫.
೭	ಕೃಷ್ಣಮೂರ್ತಿ ಹನೂರು	: ಅಜ್ಞಾತನೊಬ್ಬನ ಆತ್ಮಚರಿತ್ರೆ ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು– ೨೦೧೨.
೮	ಕೃಷ್ಣಮೂರ್ತಿ ಪಿ.ವಿ. ಮತ್ತು ಇತರರು	: ಇತಿಹಾಸ ದರ್ಶನ, ಸಂಪುಟ ೧–೧೭, ಬೆಂಗಳೂರು – ೧೯೮೩–೨೦೦೨.
೯	ಕೊರಟಿ ಶ್ರೀನಿವಾಸರಾವ್	: ಟಿಪ್ಪು ಸುಲ್ತಾನನ ಕಥೆಗಳು, ಕೊರಟಿ ಎಸ್, ಆನಂದ್ ಬೆಂಗಳೂರು – ೨೦೦೯.
೧೦	ಕೊರಟಿ ಶ್ರೀನಿವಾಸರಾವ್	: ಹೈದರಾಲಿಯ ಕಥೆಗಳು, ಕೊರಟಿ ಎಸ್.ಆನಂದ್, ಬೆಂಗಳೂರು – ೨೦೦೯.
೧೧	ಗಿರೀಶ್ ಕಾರ್ನಾಡ	: ಟಿಪ್ಪು ಸುಲ್ತಾನ್ ಕಂಡ ಕನಸು

ಮನೋಹರ ಗ್ರಂಥಮಾಲಾ, ಧಾರವಾಢ- ೨೦೧೨

೧೨ ಚನ್ನಬಸಪ್ಪ ಪಾಟೀಲ : ಕರ್ನಾಟಕ ಕೋಟೆಗಳು ಸಂಪುಟ-೧,
ಪ್ರಸರಾಂಗ,
ಹಂಪಿ – ೧೯೭೯.

೧೩ ಚಂದ್ರಶೇಖರ್ ಎಸ್. : ಕರ್ನಾಟಕ ಚರಿತ್ರೆ (ಸಂ.)
ಕನ್ನಡ ವಿ.ವಿ., ಪ್ರಸರಾಂಗ- ೧೯೯೭.

೧೪ ಚಿನ್ನಸ್ವಾಮಿ ಸೋಸಲೆ ಎನ್. : ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ,
ಕನ್ನಡ ವಿ.ವಿ. ಪ್ರಸರಾಂಗ – ೨೦೧೦.

೧೫ ಚಿನ್ನಸ್ವಾಮಿ ಸೋಸಲೆ ಎನ್. : ಸಾಮ್ರಾಜ್ಯ ಮತ್ತು ಸಂಸ್ಥಾನ,
ಕನ್ನಡ ವಿ.ವಿ. ಹಂಪಿ- ೨೦೦೪.

೧೬ ಚಿದಾನಂದ ಮೂರ್ತಿ ಎಂ : ಮೂಲ ದಾಖಲೆಗಳಲ್ಲಿ ಹುದುಗಿದ್ದ ಟಿಪ್ಪು, ಭಾರತ
ವಿಕಾಸ ಪರಿಷತ್
ಬೆಂಗಳೂರು.೨೦೧೩

೧೭ ಚೆನ್ನಬಸಪ್ಪ . ಕೋ : ಅಪ್ರತಿಮ ದೇಶಭಕ್ತ ಟಿಪ್ಪು ಸುಲ್ತಾನ್,
ನವಕರ್ನಾಟಕ ಪ್ರಕಾಶನ,
ಬೆಂಗಳೂರು-೨೦೧೩.

೧೮ ತಲಕಾಡು ಚಿಕ್ಕರಂಗೇಗೌಡ : ಟಿಪ್ಪು ಸುಲ್ತಾನ್ ಕಾಲದ ಪ್ರಸಂಗಗಳು, ಚಂದ್ರಗಿರಿ
ಪ್ರಕಾಶನ, ವಿದ್ಯಾನಗರ, ಬೆಂಗಳೂರು- ೨೦೧೩.

೧೯ ನರಿಕೇರಿಯಂಡ ಚೆಣ್ಣಪ್ಪ : ಪಟ್ಟೋಲೆ ಪಳಮೆ
ಪ್ರಸರಾಂಗ
ಮೈಸೂರು- ೧೯೭೫.

೨೦ ನಂಜರಾಜ ಅರಸು ಪಿ.ವಿ. : ಮೈಸೂರು ನೂರಿನ್ನೂರು ವರ್ಷಗಳ ಹಿಂದೆ,
ಅಭಿರುಚಿ ಪ್ರಕಾಶನ,
ಸರಸ್ವತಿಪುರ, ಮೈಸೂರು-೨೦೦೦

೨೧ ನಾಯಕ ಡಿ.ಬಿ. :
ಜಾನಪದ ಲೇಖನಗಳು
ಪ್ರಸರಾಂಗ, ಗುಲ್ಬರ್ಗಾ ವಿ.ವಿ.
ಗುಲ್ಬರ್ಗಾ – ೨೦೦೫.

೨೨ ನಾಗೇಗೌಡ ಹೆಚ್.ಎಲ್ : ಪ್ರವಾಸಿ ಕಂಡ ಇಂಡಿಯಾ, ಸಂಪುಟ-೮,

ಪ್ರಸರಾಂಗ, ಮೈಸೂರು ವಿಶ್ವ ವಿದ್ಯಾಲಯ
ಮೈಸೂರು–೨೦೦೮.

೧೩ ಪಾಟೀಲ ಎಚ್.ಎಸ್ : ಕೊಪ್ಪಳ ಜಿಲ್ಲೆಯ ಸಾಹಿತ್ಯ, ಸಂಸ್ಕೃತಿ, ಪರಂಪರೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ–೨೦೧೦.

೧೪ ಪ್ರತಾಪ್ ಸಿಂಹ : "ಟಿಪ್ಪು ಸುಲ್ತಾನ; ಸ್ವಾತಂತ್ರ್ಯ ವೀರನಾ?" ಸಾಹಿತ್ಯ ಪ್ರಕಾಶನ,
ಕೊಪ್ಪೀಕರ್ ಬೀದಿ,
ಹುಬ್ಬಳ್ಳಿ– ೨೦೧೩.

೧೫ ಪ್ರಶಾಂತ್ : ಶ್ರೀ ಶೃಂಗೇರಿ ಶಾರದಾ ಪೀಠ ಮತ್ತು ಮೈಸೂರು ಸಂಸ್ಥಾನ, ಚಾರಿತ್ರಿಕ ಅಧ್ಯಯನ, ದಕ್ಷಿಣಮಯ
ಶ್ರೀ ಶಾರದಾ ಪೀಠಂ, ಶೃಂಗೇರಿ – ೨೦೦೭.

೧೬ ಭಟ್ಟ ಜಿ.ಎಸ್ ಮತ್ತು ಜೀನಹಳ್ಳಿ ಸಿದ್ಧಲಿಂಗಪ್ಪ : ಮೈಸೂರು ದರ್ಶನ,
ಕನ್ನಡ ಸಾಹಿತ್ಯ ಪರಿಷತ್ತು,
ಮೈಸೂರು–೨೦೧೦.

೧೭ ಭೈರಪ್ಪ ಎಸ್.ಎಲ್ : ಆವರಣ
ಸಾಹಿತ್ಯ ಭಂಡಾರ,
ಬಳೇಪೇಟೆ, ಬೆಂಗಳೂರು–೨೦೦೭

೧೮ ಮಹಮತ್ ಸೌಕತ್ ಅಲಿ ಬಿ.ಎ : ಮೈಸೂರು ಹುಲಿ ಟಿಪ್ಪು ಸುಲ್ತಾನ್, ಟಿಪೂ ಇಕ್ಬಾಲ್ ಅಕಾಡೆಮಿ, ಉಮ್ಮರ್ ಖಯ್ಯಾಂ ರಸ್ತೆ,
ಮೈಸೂರು–೨೦೦೬

೧೯ ಮಹಮದ್ ಇಲ್ಯಾಸ್ ನದ್ವಿ ಭಟ್ಕಳ : ಸ್ವಾತಂತ್ರ್ಯದ ಹರಿಕಾರ ಟಿಪ್ಪು ಸುಲ್ತಾನ್ ಜೀವನ ಚರಿತ್ರೆ,
ಜಾಮಿ–ಉಲ್–ಉಲೂಮ್, ಜ್ಯೂಬಿಲಿ ಪಾರ್ಕ್ ರೋಡ್, ಬೆಂಗಳೂರು–೨೦೦೮

೨೦ ಮುತ್ತಣ್ಣ ಕೆ.ಪಿ. : ಜಗತ್ತಿಗೊಂದೇ ಕೊಡುಗು,
ಮೈಸೂರು ವಿಶ್ವವಿದ್ಯಾಲಯ, ಮೈಸೂರು–೧೯೬೬.

೨೧ ಮೂರ್ತಿ ಮ.ನ. : ಹೈದರಾಲಿ, ಕಾಮಧೇನು
ಪುಸ್ತಕ ಪ್ರಕಾಶನ,
ಬೆಂಗಳೂರು–೨೦೧೨.

೨೨ ಮೊಹಿಬ್ಬುಲ್ ಹಸನ್, ಕನ್ನಡಕ್ಕೆ: : ಟಿಪ್ಪು ಸುಲ್ತಾನನ ಇತಿಹಾಸ

	ಸಮೇತನಹಳ್ಳಿ ರಾಮರಾಯ		ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ – ೧೯೮೮.
೩೩	ಮೋಹನ ಕೃಷ್ಣ ರೈ	:	ಪ್ರಭುತ್ವ ಮತ್ತು ಜನತೆ ಕರ್ನಾಟಕ ಚರಿತ್ರೆ, ಕನ್ನಡ ವಿ.ವಿ., ಪ್ರಸಾರಂಗ – ೧೯೯೪.
೩೪	ರಾಮಕೃಷ್ಣರಾವ್.ಬಿ.ಎಸ್.	:	ಶೃಂಗೇರಿ ಮಹಿಮೆ, ಶ್ರೀ.ಶ್ರೀ.ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ, ಶೃಂಗೇರಿ– ೨೦೧೩.
೩೫	ರಾಮಾನುಜಂ ಪಿ.ಎಸ್.	:	ಕೊಡವರು, ಪ್ರಸರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು– ೧೯೭೫.
೩೬	ಲಕ್ಷ್ಮಣ ತೆಲಗಾವಿ	:	ಹರತಿ ಸಿರಿ, ಕ.ವಿ.ವಿ. ಹಂಪಿ– ೧೯೮೭.
೩೭	ಲಿಂಗದೇವರು ಹಳೆಮನೆ, ಸಂಪಾದಕರು	:	ಧೀರ ಟಿಪ್ಪುವಿನ ಲಾವಣಿಗಳು ವಿಸ್ಮಯ ಪ್ರಕಾಶನ, ಮೈಸೂರು –೨೦೦೩.
೩೮	ಲಿಂಗದೇವರು ಹಳೆಮನೆ	:	ಮೈಸೂರು ಅರಮನೆಯಲ್ಲಿ ಧ್ವನಿ ಮತ್ತು ಬೆಳಕು ವಿಸ್ಮಯ ಪ್ರಕಾಶನ, ಮೈಸೂರು–೨೦೦೩.
೩೯	ಲಿಂಗಯ್ಯ.ಎಂ.ಕೆ.	:	ಮೈಸೂರು ಒಂದು ಅಧ್ಯಯನ, ಪ್ರಸರಾಂಗ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು – ೧೯೮೨.
೪೦	ವಸು.ಎಂ.ವಿ	:	ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸರಾಂಗ, ಕ.ವಿ.ವಿ. ಹಂಪಿ – ೨೦೦೧.
೪೧	ಶರ್ಮ ತಿ.ತಾ	:	ಚಾರಿತ್ರಿಕ ದಾಖಲೆಗಳು, ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೯೯.
೪೨	ಶರ್ಮ ಹೆಚ್.ಡಿ.	:	ಟಿಪ್ಪು ನಿಜ ಸ್ವರೂಪ, ಸಾಹಿತ್ಯ ಸಿಂಧೂ ಪ್ರಕಾಶನ, ಬೆಂಗಳೂರು– ೨೦೧೨.

೪೩ ಶಾಸ್ತ್ರೀ ಎ.ಕೆ. : ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು ಸಂಪುಟ-೧,೨, ಮನೋಹರ ಗ್ರಂಥಮಾಲಾ, ಧಾರವಾಡ-೨೦೦೬

೪೪ ಶ್ರೀನಿವಾಸಮೂರ್ತಿ ಎಸ್.ಎಲ್ ವಸಂತ ವಿ. : ಜಂಗ್ ನಾಮಾ, ಶ್ರೀ.ಮಾಸ್ತಿವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ (ರಿ), ಮಾಸ್ತಿ ಮನೆ, ಬೆಂಗಳೂರು-೨೦೧೧.

೪೫ ಷೇಕ್ ಅಲಿ : ಕರ್ನಾಟಕ ಚರಿತ್ರೆ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ- ೧೯೯೭.

೪೬ ಸದಾಶಿವಪ್ಪ ಕುಂ.ಬಾ. : ಹರಪ್ಪನ ಹಳ್ಳಿಯ ಪಾಳೆಯಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೯೬.

೪೭ ಸಬಾಸ್ಟಿಯನ್ ಜೋಸೆಫ್ : ಕರ್ನಾಟಕ ಚರಿತ್ರೆ (ಸಂ.) ಕನ್ನಡ ವಿ.ವಿ. ಪ್ರಸರಾಂಗ – ೧೯೯೭.

ಇಂಗ್ಲೀಷ್ ಗ್ರಂಥಗಳು

1. Gravely F.H – An Outline of Indian Temple Architecture, The Principal Commissioner of Museums, Chennai-1999.
2. Honnalingaiah S.R. (Chief ed.,) A Handbook of Karntaka, Bangalore, 2001.
3. Hukkerikar R.S. (Ed. Chairman) – Karnataka Darshani, Dept. of Karnataka Culture, 2007
4. Irfan Habib – State and Diplomacy Under Tippu Sultan, Indian History Congress, 2001
5. Kabir Kausar – Sacret Correspondence of Tippu Sultan, The Karnataka State Archives, Bangalore, 1998.
6. Map My India – Karnataka, CE Info System Pvt. Ltd, New Delhi, India 2012.
7. Majumdar R.K. and. Srivasta A.N – History south India, SBD Publishers, Delhi, 1997.
8. Mugali R.S -The Heritage of Karnataka, Geetha Book House, Mysore, 1990.
9. Nilakanta Shastri – A History of South India, Oxford University Press, Madras, 1987.
10. Phalaksha – Political and Cultural History of Karnataka, Vol. 1 and 2, Shashi Publication, Tiptur-2012.
11. Sheik Ali.B - Tippu Sultan, National Book Trust, India, 1972.
12. Shivappa Arivu G. – Military Organisation under Haider ali and Tipu Sultan, Department of History, Mysore University,2004
13. Shivappa Arivu – History and Tourism in India, Arivu Prakashana, Mulbagal, 2009.
14. Suryanath U Kamath – KarnatakaState Gazetter (3 Vols), Govt. of Karnataka Publication, Bangalore, 1982.

ಕನ್ನಡ ಪತ್ರಿಕೆಗಳು

೧	ಕನ್ನಡ ಪ್ರಭ, ಮಾರ್ಚ್ ೯,೨೦೧೩	ಟಿಪ್ಪುವನ್ನು ದ್ವೇಷಿಸಬೇಕೆಂದಲ್ಲ, ಸತ್ಯ ತಿಳಿಯಲಿ ಎಂದು!
೨	ಪ್ರಜಾವಾಣಿ, ನವೆಂಬರ್ ೧೭, ೨೦೧೩	ಕನ್ನಡ ಕಥನದ ಕಾಸರಗೋಡು
೩	ಸಂಯುಕ್ತ ಕರ್ನಾಟಕ, ನವೆಂಬರ್ ೧೧, ೨೦೧೩	ಟಿಪ್ಪು ಸರ್ವಧರ್ಮ ಪ್ರೇಮಿ
೪	ಪ್ರಜಾವಾಣಿ, ನವೆಂಬರ್ ೧೮, ೨೦೧೩	ಹೈದರ್ ಆಲಿ ವಂಶಸ್ಥರ ಸಮಾಧಿ ದುಃಸ್ಥಿತಿಯಲ್ಲಿ
೫	ವಾರ್ತಾಭಾರತಿ, ಜನವರಿ ೬, ೨೦೧೪	ಟಿಪ್ಪು ಪುಸ್ತಕ ವಿವಾದ : ಇದು ಕೋಮುವಾದಿಗಳ ಕುಚೇಷ್ಟೆ
೬	ಪ್ರಜಾವಾಣಿ, ಜನವರಿ ೧೨, ೨೦೧೪	ಅಪ್ರತಿಮ ದೇಶಭಕ್ತ ಟಿಪ್ಪುಸುಲ್ತಾನ್


೮.೨ ವಕ್ತೃಗಳ ವಿವರ:

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಜಾತಿ	ಸ್ಥಳ
೧	ಬೀಬಿ ಜಾನ್	೬೫	ಗೃಹಿಣಿ	ಮುಸ್ಲಿಂ	ದೇವನಹಳ್ಳಿ
೨	ಶಾಬೀನ	೪೦	ಬೀಡಿ ಕಟ್ಟುವುದು	ಮುಸ್ಲಿಂ	ದೇವನಹಳ್ಳಿ
೩	ಷಫೀವುಲ್ಲಾ	೫೫	ಪಾತ್ರೆ ಮಾರುವುದು	ಮುಸ್ಲಿಂ	ದೇವನಹಳ್ಳಿ
೪	ಮಮ್ತಾಜ್	೫೦	ಗೃಹಿಣಿ	ಮುಸ್ಲಿಂ	ದೇವನಹಳ್ಳಿ
೫	ಸಲೀಂ	೩೦	ಮೆಕಾನಿಕ್	ಮುಸ್ಲಿಂ	ದೇವನಹಳ್ಳಿ
೬	ದೊಡ್ಡಣ್ಣಚಾರಿ	೫೫	ವ್ಯಾಪಾರಿ	ವಿಶ್ವಕರ್ಮ	ದೇವನಹಳ್ಳಿ
೭	ದೇವರಾಜ್.ಎಲ್	೫೦	ಪುರಸಭೆ ಸದಸ್ಯ	ಕುರುಬ	ದೇವನಹಳ್ಳಿ
೮	ಮಮತ.ಎಂ.	೨೫	ಶಿಕ್ಷಕಿ	ಕೊರಮ	ದೇವನಹಳ್ಳಿ
೯	ನಾರಾಯಣ	೪೫	ವ್ಯಾಪಾರಿ	ಬಲಜಿಗ	ದೇವನಹಳ್ಳಿ
೧೦	ಮೂರ್ತಿ.ಕೆ	೫೫	ವ್ಯಾಪಾರಿ	ಲಿಂಗಾಯಿತ	ದೇವನಹಳ್ಳಿ
೧೧	ಡಿಸೋಜಾ	೩೫	ಸಂದರ್ಶಕ	ಕ್ರಿಶ್ಚಿಯನ್	ಶ್ರೀರಂಗಪಟ್ಟಣ
೧೨	ಕುಮಾರ	೩೭	ಗೈಡ್	ಗೌಡ್ರು	ಶ್ರೀರಂಗಪಟ್ಟಣ
೧೩	ಆನಂದ.ಸಿ	೩೮	ಪದವೀದರ	ಬಳಜಿಗ	ಶ್ರೀರಂಗಪಟ್ಟಣ
೧೪	ಅಲ್ಲಾ ಬಕಷ್	೫೦	ಶಿಕ್ಷಕ	ಮುಸ್ಲಿಂ	ಶ್ರೀರಂಗಪಟ್ಟಣ
೧೫	ಅಹಮದ್	೫೦	ಮೌಲ್ವಿ	ಮುಸ್ಲಿಂ	ಶ್ರೀರಂಗಪಟ್ಟಣ
೧೬	ಕಮಲಮ್ಮ	೫೦	ಗೃಹಿಣಿ	ಅಗಸರು	ಶ್ರೀರಂಗಪಟ್ಟಣ
೧೭	ಗೋವಿಂದ	೫೫	ಗೈಡ್	ಬಲಜಿಗ	ಬೆಂಗಳೂರು
೧೮	ಸಿದ್ದರಾಮ್	೩೦	ಸಂದರ್ಶಕ	ಲಿಂಗಾಯಿತ	ಬೆಂಗಳೂರು
೧೯	ಮಂಜು	೩೫	ಪದವೀಧರ	ರೆಡ್ಡಿ	ಬೆಂಗಳೂರು
೨೦	ಬಾಲು ತಗಾಡ	೫೦	ಭದ್ರತಾ ಸಿಬ್ಬಂದಿ	ಸಿಖ್ಖ	ಬೆಂಗಳೂರು
೨೧	ರಾಜೇಶ್ ತಿಕ್ರಿ	೩೫	ಭದ್ರತಾ ಸಿಬ್ಬಂದಿ	ಮುಂಡ	ಬೆಂಗಳೂರು
೨೨	ವಾಯೀದ್	೫೦	ವ್ಯಾಪಾರಿ	ಮುಸ್ಲಿಂ	ಬೆಂಗಳೂರು
೨೩	ಎಡ್ವಿನ್	೪೫	ಗೈಡ್	ಕ್ರಿಶ್ಚಿಯನ್	ನಂದಿಬೆಟ್ಟ
೨೪	ಶಿವಕುಮಾರ್	೩೫	ಗೈಡ್	ಒಕ್ಕಲಿಗರು	ನಂದಿಬೆಟ್ಟ

೨೫	ರಾಮಾಂಜಿ	೪೦	ಗೈಡ್	ಪರಿಶಿಷ್ಟ ಜಾತಿ	ನಂದಿಬೆಟ್ಟ
೨೬	ಶಿವಕುಮಾರ್	೫೦	ದ್ವಿತೀಯ ದರ್ಜೆ ಸಹಾಯಕರು	ಒಕ್ಕಲಿಗರು	ನಂದಿಬೆಟ್ಟ
೨೭	ಮುಸ್ತಫ	೪೫	ಪೋಲೀಸ್	ಮುಸ್ಲಿಂ	ನಂದಿಬೆಟ್ಟ
೨೮	ಶಿವರಾಜ್ ಕುಮಾರ್	೪೫	ಪ್ರವೇಶ ಶುಲ್ಕ ವಸೂಲಿ	ಗೌಡ	ನಂದಿಬೆಟ್ಟ
೨೯	ಖಲೀಜ	೬೦	ವ್ಯಾಪಾರಿ	ಮುಸ್ಲಿಂ	ನಂದಿಬೆಟ್ಟ
೩೦	ನಂದೀಶ	೪೦	ಶಿಕ್ಷಕ	ಬಲಜಿಗ	ನಂದಿಬೆಟ್ಟ
೩೧	ವೆಂಕಟೇಶ್	೫೦	ಮೇಟಿ	ಬ್ರಾಹ್ಮಣ	ಶೃಂಗೇರಿ
೩೨	ವಿಷ್ಣುಪ್ರಸಾದ್	೪೦	ಪುಸ್ತಕ ವ್ಯಾಪಾರಿ	ಬ್ರಾಹ್ಮಣ	ಶೃಂಗೇರಿ
೩೩	ಯಜ್ಞೇಶ	೪೦	ಸಂವರ್ಧಕ	ಬ್ರಾಹ್ಮಣ	ಶೃಂಗೇರಿ
೩೪	ವಿ.ಆರ್.ಗೌರಿಶಂಕರ್	೪೦	ಸಿಇಓ	ಬ್ರಾಹ್ಮಣ	ಶೃಂಗೇರಿ
೩೫	ಕೇಶವ್	೫೦	ಸ್ಥಳೀಯ	ವೈಷ್ಣವ	ಮಂಗಳೂರು
೩೬	ಉಮೇಶ್ ಭಟ್	೪೫	ವ್ಯಾಪಾರಿ	ಬ್ರಾಹ್ಮಣ	ಮಂಗಳೂರು
೩೭	ಕಾಮತ್	೩೫	ಸ್ಥಳೀಯ	ಬ್ರಾಹ್ಮಣ	ಮಂಗಳೂರು
೩೮	ಸತ್ತಾರ್	೪೫	ಮೀನು ವ್ಯಾಪಾರಿ	ಮುಸ್ಲಿಂ	ಮಂಗಳೂರು
೩೯	ಮಣಿ	೩೦	ಟೀ ವ್ಯಾಪಾರಿ	ಬಲಜಿಗ	ಕಾಸರಗೋಡ
೪೦	ಅಬ್ದುಲ್ ಬಷೀರ್	೫೦	ಸ್ಥಳೀಯ	ಮುಸ್ಲಿಂ	ಕಾಸರಗೋಡ
೪೧	ಜಾರ್ಜ ಜೋಸೆಫ್	೪೮	ಸ್ಥಳೀಯ	ಕ್ರಿಶ್ಚಿಯನ್	ಮಡಿಕೇರಿ
೪೨	ಪ್ರಕಾಶ್	೪೦	ಕಾಫಿ ಎಸ್ಟೇಟ್ ಮಾಲೀಕ	–	ಮಡಿಕೇರಿ
೪೩	ಫೌಜುಲ್ಸ್ ಎಸ್.ಜೈನ್	೪೦	ಗುಮಾಸ್ತ	ಕ್ರಿಶ್ಚಿಯನ್	ಮಡಿಕೇರಿ
೪೪	ಸರಳ	೩೫	ಶಿಕ್ಷಕಿ	–	ಮಡಿಕೇರಿ
೪೫	ಸಪ್ತೆ ಋಷಿ ಜೋಯಿಸರು	೪೮	ಅರ್ಚಕರು	ಬ್ರಾಹ್ಮಣ	ನಂಜನಗೂಡು
೪೬	ಎಮ್.ಎನ್.ನರಸಿಂಹನ್	೫೦	ಅರ್ಚಕರು	ಬ್ರಾಹ್ಮಣ	ನಂಜನಗೂಡು
೪೭	ಮೂರ್ತಿ	೩೫	ಸ್ಥಳೀಯ ನಿವಾಸಿ	ಗೌಡ	ನಂಜನಗೂಡು
೪೮	ದಶರಥ	೪೫	ಕಾನ್ಸ್‌ಟೇಬಲ್	ಬಲಜಿಗ	ನಂಜನಗೂಡು
೪೯	ಸುಂದರ ರಂಗಾಚಾರ್	೫೦	ಅರ್ಚಕರು	ಬ್ರಾಹ್ಮಣ	ನಂಜನಗೂಡು
೫೦	ಗೋವಿಂದಪ್ಪ	೫೦	ಕಾರ್ಯದರ್ಶಿ	ಗೌಡ	ನಂಜನಗೂಡು

೫೧	ಕೆ.ಎಲ್.ಶಾಸ್ತ್ರಿ	೫೦	ಗೈಡ್	ಬ್ರಾಹ್ಮಣ	ಬೂದಿಕೋಟೆ
೫೨	ಜಾವೇದ್	೩೫	ಸ್ಥಳೀಯ	ಮುಸ್ಲಿಂ	ಕೋಲಾರ
೫೩	ಮಹ್ಮದ್ ಆಸೀಫ್	೪೦	ಸ್ಥಳೀಯ	ಮುಸ್ಲಿಂ	ಕೋಲಾರ
೫೪	ಮುನಿಯಪ್ಪ	೪೦	ಸ್ಥಳೀಯ	ಒಕ್ಕಲಿಗ	ಶಿರಾ
೫೫	ರಾಜೇಶ್	೫೦	ಸ್ಥಳೀಯ	ಒಕ್ಕಲಿಗ	ಶಿರಾ
೫೬	ಮನ್ಸೂರ್	೪೫	ಟಿಪ್ಪು ಸಂಘದ ಸದಸ್ಯರು	ಮುಸ್ಲಿಂ	ಶಿರಾ
೫೭	ಅಬೀದಾ	೩೬	ಟಿಪ್ಪು ಸಂಘದ ಸದಸ್ಯರು	ಮುಸ್ಲಿಂ	ಶಿರಾ
೫೮	ಇಕ್ಬಾಲ್	೪೫	ಟಿಪ್ಪು ಸಂಘದ ಸದಸ್ಯರು	ಮುಸ್ಲಿಂ	ಶಿರಾ

೮.೩ ವಂಶವೃಕ್ಷ:



(ಆಧಾರ : ಶ್ರೀರಂಗಪಟ್ಟಣ ಕ್ಷೇತ್ರ ಕಾರ್ಯ)

೮.೪ ಪಾರಿಭಾಷಿಕ ಪದಕೋಶ:

ಅಲ್ಲಾಹು	:	ದೇವರೇ
ಅಖೈರು	:	ಅಂತಿಮ
ಅದಬ್	:	ನಮಸ್ಕಾರ
ಅಬ್ಬಾಜಾನ್	:	ಅಪ್ಪಾಜಿ
ಅಮ್ಮಿಜಾನ್	:	ಅಮ್ಮಾಜಿ
ಅಟ್ಯಾಕ್	:	ಆಕ್ರಮಣ
ಅಮೀರ್	:	ಶ್ರೀಮಂತ
ಆಬಾದ್	:	ಅಭಿವೃದ್ಧಿ ಹೊಂದಿದ
ಆಸರ್ರು	:	ಬೆಂಬಲ
ಆಹವಾಲ್	:	ಮನವಿ
ಆಣತಿ	:	ಆಜ್ಞೆ
ಆಸಫ್	:	ಪ್ರಾಂತ್ಯ
ಇಂಗ್ಲಿಸ್ತಾನ	:	ಇಂಗ್ಲೆಂಡ್
ಕುಂಮಕ್ಕು	:	ಉತ್ತೇಜನ
ಕಾರ್‌ಬಾರ್	:	ಆಡಳಿತ
ಕವಾಯಿತು	:	ವ್ಯಾಯಾಮ
ಕೀಲಿ	:	ಬೀಗದ ಕೈ
ಕಾಸ್ತಾರ	:	ಕುದುರೆ ಪಾಲಕ
ಕಾಫಿರರು	:	ಮುಸ್ಲಿಂರಲ್ಲದವರು
ಕೊರಡ	:	ಚಾಟಿ
ಘೋಷಾ	:	ಮುಸುಕು
ಖಬೂಲ್	:	ಒಪ್ಪಿಗೆ
ಖಬದಾರಿ	:	ಎಚ್ಚರಿಕೆ
ಖಾಜಿ	:	ಭಂಡಾರಿ
ಖರೀಬ್	:	ಸದ್ಯದಲ್ಲೇ
ಖಜಾನೆ	:	ಭಂಡಾರ

ಖಾಮೂಷ್ : ಬಾಯಿಮುಚ್ಚು

ಖಾವಂದರ : ಒಡೆಯ

ಖಾಸ : ಆಪ್ತ

ಖಿಲ್ಲೇದಾರ : ಕೋಟೆಯಾಧಿಕಾರಿ

ಖಿಲ್ಲತ್ತು : ಉಡುಗೊರೆ

ಖುಲ್ : ತೆರೆದ

ಖುದ್ದು : ಸ್ವತಃ

ಖೂನಿ : ಕೊಲೆಗಾರ

ಖೋಜಾ : ನಪುಂಸಕ

ಗರೀಬ್ : ಬಡವ

ಗುಡ್‌ನ್ಯೂಸ್ : ಸಿಹಿಸುದ್ದಿ

ಗುಲಾಮ : ಸೇವಕ

ಗುಲಾಬ್ : ರೋಜ ಹೂ

ಗಿನ್ತಿ : ಗಣತಿ

ಚಾಕರಿ : ಸೇವಕತನ

ಛಿದ್ತಿ : ಚಿತ್ತ

ಜಂಗಲ : ಕಾಡು

ಜಂಗ್ : ಯುದ್ಧ

ಜವಾಮರ್ದ : ಯೌವ್ವನವಂತ

ಜಹಪನಾ : ಒಡೆಯ

ಜನಾನಾ : ಅಂತಃಪುರ

ಜಾನಶಾಲೆ : ಶಸ್ತ್ರಾಗಾರ

ಜಮಾವಣೆ : ವರ್ಗಾವಣೆ

ಜಿಂದಾಬಾದ್ : ಜಯವಾಗಲಿ

ಜೀಕತಾ : ಜಿಗಿತ

ಜುಮ್ರಾ : ಪಡೆ

ತಸ್ತೀಕ್ : ಸರ್ಕಾರದಿಂದ ನೀಡುವ ಹಣ

ತಲಾಶ್ : ತನಿಖೆ

ತಮಾಷ : ಹಾಸ್ಯ

ತರಂಗ : ವೇಗ

ತರ್ಜುಮೆ : ಭಾಷಾಂತರ

ತಾಬೇದಾರಿ : ಕೈ ಕೆಳಗಿನಕೆಲಸ

ತಾರೀಖು : ದಿನಾಂಕ

ತುಕ್ಕಡಿ : ಸೈನ್ಯದ ಒಂದು ಭಾಗ

ತುಪಾಕಿ : ಗುಂಡು

ತೋಬಾ : ಕ್ಷಮಿಸು

ಥೈಲಿ : ಚೀಲ

ದಗಾ : ಮೋಸ

ದರವಾಜ : ಬಾಗಿಲು

ದಸ್ತವೇಜು : ದಾಖಲೆ

ದೀವಟಿಗೆ : ದೀಪ

ದಿವಾನ್ : ಮಂತ್ರಿ

ದುಷ್ಮಾನ್ : ಶತ್ರು

ನಸೀಬ್ : ಅದೃಷ್ಟ

ನವಾಬ : ಒಡೆಯ

ನಜರಾನಾ : ಕಾಣಿಕೆ

ನಾಲಾಯಕ್ : ಅಯೋಗ್ಯ

ನಿಸಾನೆ : ಚಿಹ್ನೆ

ಪರಕೀಯ : ಪರದೇಶಿ

ಪರವರದಿಗಾರ : ಜನ್ಮದಾತ

ಪರವಾನೆ : ಅನುಮತಿ

ಪಠಣ : ಕಂಠಪಾಠ

ಪರ್ವರಿಷ್ : ಸಂರಕ್ಷಣೆ

ಪಾನಿ : ನೀರು

ಪಿತೂರಿ : ಸಂಚು

ಫಕ್ತು : ಕೇವಲ

ಫರಾಂಸೀ	:	ಫ್ರೆಂಚ್
ಫರ್ಮಾಶ	:	ಕೋರಿಕೆ
ಫಾಸಲೆ	:	ಸುತ್ತ-ಮುತ್ತಲ ಪ್ರದೇಶ
ಪ್ಯಾದೆ	:	ಲಾಭೆ
ಫೌಜು	:	ಸೈನ್ಯ
ಫೌಜಿ	:	ಸಿಪಾಯಿ
ಬಬಿರ	:	ಕಷ್ಟ
ಬಟವಾಡೆ	:	ವಿತರಣೆ
ಬಹೈಯರಾಗಿಯು	:	ಸೊಸೆ
ಬದ್ಮಾಷ್	:	ದ್ರೋಹಿ
ಬಾರ್	:	ಬಂದೂಕು
ಬಾಹುಷ್	:	ಮೂರ್ಛೆ
ಬಾದ್‌ಷಹ	:	ಚಕ್ರವರ್ತಿ
ಬಿಖಿರಿ	:	ಮಾರಾಟ
ಬಿಲ್ಕುಲ್	:	ಖಂಡಿತ
ಬುಬ್ರಿ	:	ಹುಲಿಪಟ್ಟಿ
ಬುರುಜು	:	ಕೋಟೆಯ ಮೇಲಿರುವ ವರ್ತುಲಾಕಾರದ ಕಟ್ಟಡ
ಬೇದಿಲ್	:	ಹೃದಯಹೀನ
ಬೇಕೂಫ್	:	ಮೂರ್ಖ
ಬೇಷಕ್	:	ನಿರ್ಬಂಧವಿಲ್ಲದ
ಮದತ್	:	ಸಹಾಯ
ಮಜಲ್	:	ಶ್ರೇಣಿ
ಮಹಜರ್	:	ಪರಿಶೀಲನೆ
ಮಂಜ್ರಾಬಾದ್	:	ಅಪೂರ್ವ ನಗರ
ಮರಾಠೆ	:	ಮರಾಠರು
ಮಹಲ್	:	ಅರಮನೆ
ಮಗರಿಬ್	:	ಸಾಯಂಕಾಲ
ಮಸಲತ್ತು	:	ಕರಾಮತ್ತು

ಮಾಫ್	:	ಕ್ಷಮಿಸು
ಮಿಲಾಖತ್	:	ಭೇಟಿ
ಮೀರ್‌ಸಾದಕ್	:	ದೇಶದ್ರೋಹಿ
ಮೀರ್	:	ಅಧಿಕಾರಿ
ಮೆಹನತ್	:	ದುಡಿಮೆ
ಮುನಾಸಾಬ	:	ಯೋಗ್ಯ
ಮುಷ್ಕಿಲ್	:	ಕಷ್ಟ
ಮೊಖಾಬಿಲೆ	:	ಭೇಟಿ/ಹೋರಾಟ
ಯಿಂಗ್ರಿಜ	:	ಆಂಗ್ಲ
ರಕಾಮು	:	ಅವತಾರ/ಬೆಲೆ
ರಮಝಾನ	:	ರಂಜಾನ್ ತಿಂಗಳು
ರಾಜಿ	:	ಒಪ್ಪಿಗೆ
ರಾಯಸ	:	ಪತ್ರ
ರುಷುವತ್ತು	:	ಲಂಚ
ರೂಬುರೂಬು	:	ಸಮ್ಮುಖ
ರೇಶಿಮೆ	:	ರೇಷ್ಮೆ
ಲಡಾಯ್	:	ಹೋರಾಟ
ಲಷ್ಕರು	:	ಸೈನ್ಯ
ಲಾಯಖ್	:	ಯೋಗ್ಯ
ಲಾಗಾಯತ್ತು	:	ಪರ್ಯಂತ
ಲಿಲಾ	:	ನಟನೆ
ಲುಕ್ಸಾನ್	:	ನಷ್ಟ
ಲೂಟಿ	:	ಕೊಳ್ಳೆ
ವರಸಾಯ್	:	ವೈಸರಾಯ್
ವಯೆರಾನು	:	ಸ್ಮಶಾನ ಮೌನ
ವಧಸ್ಥಳ	:	ಹತ್ಯೆಸ್ಥಳ
ವ್ಹಾಜೂರು	:	ಕ್ಷಮೆ
ಶರಾರತ್	:	ತಂಟೆ

ಶಹೀದ್	:	ಹುತಾತ್ಮ
ಶೆಹರ್	:	ಪಟ್ಟಣ
ಷಹಜಾದಿ	:	ಹೆಂಡತಿ
ಸವಾಲ್-ಜವಾಬ್	:	ಪ್ರಶ್ನೋತ್ತರ
ಸರ್ಫರಾಜ	:	ಪ್ರಶಂಸೆ
ಸಲಾಮು	:	ನಮಸ್ಕಾರ
ಸರಂಜಾಮು	:	ಸಾಮಗ್ರಿ
ಸರಬರಾಯಿ	:	ಹಂಚಿಕೆ
ಸರ್ಕಾರ್	:	ಸರ್ಕಾರ
ಸಿಫಾರ್ಸು	:	ಶಿಫಾರಸ್ಸು
ಹತ್ಯಾರ್	:	ಆಯುಧ
ಹರ್‌ಸಾಲ್	:	ಪ್ರತಿವರ್ಷ
ಹಫ್ತೆ	:	ಒಂದು ವಾರ
ಹಕೀಂ	:	ವೈದ್ಯ
ಹಾಜರ್	:	ಉಪಸ್ಥಿತಿ
ಹಿಕ್ಮತ್ತು	:	ಉಪಾಯ

ಛಾಯಾಚಿತ್ರಗಳು



ಟಿಪ್ಪುವಿನ ಜನ್ಮ ಸ್ಥಳ ದೇವನಹಳ್ಳಿ



ಟಿಪ್ಪುವಿನ ಜನ್ಮ ಸ್ಥಳದ ನಾಮಫಲಕ




ಶಿಥಿಲ ಅವಸ್ಥೆಯಲ್ಲಿರುವ ಟಿಪ್ಪುವಿನ ಅರಮನೆ
ನಂದಿಬೆಟ್ಟ



ಟಿಪ್ಪುವಿನ ರಹಸ್ಯತಾಣ, ನಂದಿಬೆಟ್ಟ



ಟಿಪ್ಪುವಿನ ಬೇಸಿಗೆ ಅರಮನೆಯ ನಾಮಫಲಕ,
ಬೆಂಗಳೂರು




ಬೆಂಗಳೂರಿನ ಬೇಸಿಗೆ ಅರಮನೆಯ ಪ್ರಾಂಗಣ



ಹಕೀಂ ನಂಜುಂಡ ನಾಮಫಲಕ

ನಂಜನಗೂಡು ದೇವಾಲಯಕ್ಕೆ
ಟಿಪ್ಪುವಿನ ಪಚ್ಚೆ ಲಿಂಗದ
ಕಾಣಿಕೆ





ಮಂಗಳೂರು ಕೋಟೆಯ ನಾಮಫಲಕ



ಮಂಗಳೂರು ಕೋಟೆಯ ಹೊರನೋಟ



ದರಿಯಾ ದೌಲತ್ : ಟಿಪ್ಪು ಬ್ರಿಟೀಷರೊಡನೆ
ಹೋರಾಟದ ದೃಶ್ಯ



ದರಿಯಾ ದೌಲತ್ : ಟಿಪ್ಪು ತನ್ನ ಮಕ್ಕಳನ್ನು
ಬ್ರಿಟೀಷರಿಗೆ ಒತ್ತೆಯಾಳಾಗಿ ಇಟ್ಟಿದ್ದು



ಗುಂಬಜ್‌ನಲ್ಲಿರುವ ಟಿಪ್ಪು ಸಮಾಧಿ



ಗುಂಬಜ್‌ನಲ್ಲಿರುವ ಟಿಪ್ಪು ಸಮಾಧಿ

ದರಿಯಾ ದೌಲತ್ : ಟಿಪ್ಪುವಿನ ತೈಲ ಚಿತ್ರ





ದರಿಯಾ ದೌಲತ್ : ಟಿಪ್ಪುವಿನ ತೈಲ ಚಿತ್ರ



ದರಿಯಾ ದೌಲತ್ : ಹೋರಾಟದ ತೈಲಚಿತ್ರ



ದರಿಯಾ ದೌಲತ್ : ಟಿಪ್ಪುವಿನ ರೇಷ್ಮೆ ಬಟ್ಟೆ ಮತ್ತು ಟೋಪಿ



ಟಿಪ್ಪು ಮಡಿದ ಸ್ಥಳ



ಟಿಪ್ಪು ಮಡಿದ ಸ್ಥಳ







ಟಿಪ್ಪುವಿನ ೨೬೫ ನೇ ಜನ್ಮ ದಿನಾಚರಣೆ, ದೇವನಹಳ್ಳಿ


THE BODY OF
TIPPU
SULTAN
WAS
FOUND HERE

